ಪ್ರತಿತಿಂಗಳ ಮೊದಲನೆಯ ತಾರೀಖಿಗೆ ಪ್ರಕಟವಾಗುವುದು.

ವಾ. ವರ್ಗಣಿ ಅಂಚೆಯಚ್ಚು ಸೇರಿ ೩—೦—೦ ..... ವ್ಹಿ. ಪಿ. ಯಿಂದ ೩–೫–೦ ..... ಬಿಡಿಸಂಚಿಕೆಗೆ ೪ ೧೫

ಸಂಪಾದಕರು :

ಪಾಟೀಲ ಮಾಧವರಾಯರು ಬೆಟಗೇರಿ ಕೃಷ್ಣಶರ್ಮರು

೩ನೆಯ ವರ್ಷ	ಜನವರಿ ೧೯೪೦	೯ನೆಯ ಸಂಚಿಕೆ

ಮುಖ್ಯವಿಷಯಗಳ ಪರಿವಿಡಿ

ಏಕನಾದ (ಕವನ)	ಶ್ರೀ. ಶ್ರೀಧರಶರ್ಮ, ಮೈಸೂರು	೪೮೩
ಸಂಪಾದಕೀಯ	ಸಂಪಾದಕರು	೪೪೮
ಮಂಗನ ಮಲ್ಲಿನಾಥತನ	ಶ್ರೀ. 'ಮಲ್ಲಿನಾಥ'	೪೪೯
ಜರ್ಮನಿಯ ಸ್ಥಿತಿಗತಿ ಏನೇನು? (ಪರಿಸ್ಥಿತಿ ವಿಮರ್ಶೆ) ..	ಶ್ರೀ. ಜಾರ್‌ಮನಿಯ 'ನೆರಂಗ್'	೪೪೯
ಚದುರಿ (ಕವನ)	ಶ್ರೀ. ಕೃಷ್ಣಮೂರ್ತಿ ಪುರಾಣಿಕ, ಬಿ. ಎ., ಬಿ. ಟಿ.	೪೪೯
'ಬಿಗ್ ಬೆನ್' (ಗಡಿಯಾರದ ಪರಿಚಯ)	ಬಯಂತಿಯ ಜೇನ್ನೊಣ	೪೪೯
ದೇವಸ್ಥಾನದ ದರೋಡೆ (ಚಿಕ್ಕ ನಾಟಕ)	ಶ್ರೀ. ಕೆ. ಕೆ. ಶೆಟ್ಟಿ, ನವಯುಗದ ಸಂಪಾದಕರು	೪೪೯
ರಾಮಣ್ಣನ ಋಣಮುಕ್ತತೆ (ಕಥನ ಕವನ)	ಶ್ರೀ. ಬಳ್ಳಾರಿಯ 'ಬೀಚಿ'	೪೫೧
ಆತ್ಮೋನ್ನತಿಗೆ ತಡೆಯಾವುದು? (ಜೀವನ ಕಲಾವಿಚಾರ) ..	ಶ್ರೀ. ವಿಶ್ವನಾಥ ಹೆಗಡೆ. ಮುಂಬಯಿ	೪೫೨
ಸ್ಮಶಾನದ ಉಡುಗೊರೆ (ನೀಳ್ಗತೆ)	ಶ್ರೀ. ಶಾಮಪ್ರಸಾದ ಮೌದ್ಗಲ್ಯ ಬೆಂಗಳೂರು	೪೫೩
ಕಾಳಿದಾಸ ಮತ್ತು ಭವಭೂತಿ (ಕವಿ-ಕಾವ್ಯವಿಚಾರ) ..	ಶ್ರೀ. ಉಪಾಧ್ಯಾಯ ನಾರಾಯಣ, ಶಿರೋಮಣಿ	೪೫೫
ಅಹಿಂಸೆಯ ಅವಾಂತರ (ಒಂದು ಹರಟೆ)	ಶ್ರೀ. ಎಂ. ವಿ. ವೆಂಕಟರಾಮಯ್ಯ ಬಿ. ಎ. ಮಂಡ್ಯ	೪೫೭
ಸ್ತ್ರೀಯರು ಮತ್ತು ಆರ್ಥಿಕ ಸ್ವಾತಂತ್ರ್ಯ (ಚರ್ಚಾತ್ಮಕ) ..	ಶ್ರೀಮತಿ ಪಣಜೀಕರ್ ಕೃಷ್ಣಾಬಾಯಿ, ಧಾರವಾಡ	೪೫೮
ಕುರೂಪಿ (ಲಘುಪ್ರಬಂಧ)	ಶ್ರೀ. ಎನ್. ಕೃಷ್ಣಸ್ವಾಮಿ ಬಿ.ಎಸ್‌ಸಿ. ಬೆಂಗಳೂರು	೪೫೯
ನನ್ನ ದಕ್ಷಿಣ ಹೈದರಾಬಾದಿನ ಯಾತ್ರೆ (ಪ್ರವಾಸವೃತ್ತ) ..	ಶ್ರೀ. ಎಚ್. ಎಸ್. ಪಾಟೀಲ ಎಂ ಎ., ಬಿ.ಕಾಮ್	೪೬೨
ಪ್ರಣಯನಿವೇದನವಿಧಿ (ಕಿರುಗತೆ)	ಶ್ರೀ. 'ಇಂದುತನಯ' ನೇಡಬಾಳ	೪೬೫
ವಿಮೋದಾರರ ಸಂಘದ ಅವಶ್ಯಕತೆಯು	ಶ್ರೀ. ಎಂ. ಪಿ. ಭಾಗವತ ಮುಂಬೈ	೪೬೬
ಪುಸ್ತಕ ವಿಮರ್ಶೆ	ಬೇರೆ ಬೇರೆಯ ವಿಮರ್ಶಕರು	೪೬೮
ಸಾದರಸ್ವೀಕಾರ	.. ..	೪೭೦
ನಗೀಗೆ ನೇವಿದ್ಯ	ಶ್ರೀ. 'ಸಕಲೇ ನಾರಾಯಣಾಚಾರ್ಯ'	೪೭೦
ನಾಲ್ಕಾ ನಿಟ್ಟಿನ ನೋಟ	'ನಿರೀಕ್ಷಕರು'	೪೭೧



೩ನೆಯ ವರ್ಷ | ಜನವರಿ ೧೯೪೧ | ೯ನೆಯ ಸಂಚಿಕೆ

ಏಕನಾದವೆ ಬರಲಿ!

ಡಿ. ಡಿ. ಈಶ್ವರಶರ್ಮ, ಮೈಸೂರು

★

ಅಪ್ಪದಿಕ್ಕುಗಳಿಂದೆ ಕಂದರಿವ ಮೆಯ್ಯೊಂಡ
ಬುರುಡೆಯೊಳನಿಟ್ಟಿಂದ, ಕಂತಿಯಿಂದ
ನೆಟ್ಟಕೋಲ್ ಕಟ್ಟು ಸಮ್ಮಂಗಳಂಗಾಂಗದಿಂ-
ದೇಕನಾದವೆ ಬರಲಿ ಏಕನಾದ!

ಗಿರಿ-ಗಿರಿಗಳನು ಸುತ್ತಿ, ವನ-ವನಗಳನು ಬಳಸಿ,
ನದಿ-ನದಿಗಳೆಡೆನಿಂದು, ದಾರಿಯಲ್ಲಿ
ತರತರದ ಹಳ್ಳಿಗಳನಲೆದ ಕಿಂದರಿಯಿಂದ
ಏಕನಾದವೆ ಬರಲಿ ಏಕನಾದ!

'ಕರುನಾಡಿನಲಿ ಮಣ್ಣು ಕರಿದು ಕೆಲವೆಡೆ, ಮನವು
ಕರಿದಲ್ಲ, ಸಿರಿ-ಬಾಣಿಯರಿಗೆ ಕವರು
ಕರುನಾಡು' ಎಂದು ಗೋಸಣೆಗರೆವ ಕಸುವುಳ್ಳ
ಏಕನಾದವೆ ಬರಲಿ ಏಕನಾದ!

ಭಾಷೆಯಿಂದೊದಗಿಸಿದ, ಭಾಷಣದೊಳೇರಿದಾ-
ವೇಶದಿಂದುಸುರಿದೇಕತೆಯ ನುಡಿಯ
ತಾಸು ತಾಸಿಂಗೊಂದು ಮನೆಗೆ ಸಾರುವ ಜೋಗಿ-
ಯೇಕನಾದವೆ ಬರಲಿ ಏಕನಾದ!

ವೀರರಿಗೆ ವೀರರಹ 'ನಾಡವರ' ನಾಡಿದೆಂ-
ಬೈತಿಹಾಸಿಕ ತತ್ತ್ವವೆರೆದು ನಮ್ಮ
ವೀರತರುಣರ ಕೆಚ್ಚ ಕೆರಳಿಸುವ ಪಣತೊಟ್ಟ
ಏಕನಾದವೆ ಬರಲಿ ಏಕನಾದ!

ಕನ್ನಡದ ತಾಯಿಂದಿರೊಲಿದಿತ್ತ ಜವಸಕ್ಕೆ
'ಹೊನ್ನಾಗಲವ್ವ ನಿನ್ನಿಂದ ಬಂದ
ಚೆನ್ನಿಗನು ನಾಡ ಬಂಟರೊಳೆ' ಎಂದು ಹರಸುವಾ
ಏಕನಾದವೆ ಬರಲಿ ಏಕನಾದ!

ಗಾಯದಲಿ ಬರೆವಡೆದರಂತೆವೊಲು ದಾಸ್ಯದಲಿ
ಹೋಳಾಗಿ ಬಾಳುತಿಹ ಕನ್ನಡಿಗರ
ಎಳರಿಂದನವರ ಕವಿಗಳಿವಂತೆ ದನಿಗೊಡುವ
ಏಕನಾದವೆ ಬರಲಿ ಏಕನಾದ!

ನಡೆ-ನುಡಿಗಳಲಿ ಓದು-ಬರೆಹದಲಿ ಮೇಣ್ ನಮ್ಮ
'ಕೊಡು-ಕರು' ಗಳಲಿ ಚಿತ್ತವೃತ್ತಿಗಳನು
ಹಿಡಿದೊಂದುಗೂಡಿಸುವ ದೇವಮಾಯೆಯ ಬಲ್ಲ
ಏಕನಾದವೆ ಬರಲಿ ಏಕನಾದ!

ಚಲಚ್ಚಿತ್ರ ಮತ್ತು ಕನ್ನಡಿಗರು

ಸಮಾಜಕ್ಕೆ ಸಾಹಿತ್ಯದ ಸಂಸ್ಕಾರವನ್ನುಂಟುಮಾಡಲು ನಿರ್ಮಿತವಾದ ಹಳೆಯಕಾಲದ ಪ್ರಚಾರಕಸಂಸ್ಥೆಗಳೆಲ್ಲ, ಹೊಸಕಾಲದ ಜನರ ಬೇಳುಗಳೆತಕ್ಕೆ ಗುರಿಯಾಗಿ, ಒಂದೊಂದಾಗಿಯೆ ಅಡಗಿ ಹೋಗುತ್ತಲಿವೆ. ಗೊಂದಲಿಗರು, ಜೋಗಿಗಳು, ಕಿಂದರಿಜೋಗಿಗಳು ಇವರೆಲ್ಲ ಭಿಕ್ಷುಕರಾದರೂ, ತಾವು ಪಡೆದ ಭಿಕ್ಷೆಗೆ ಪ್ರತಿಫಲವಾಗಿ ಸಮಾಜದಲ್ಲಿ ಸಾಹಿತ್ಯದ ಪ್ರಚಾರವನ್ನು ಮಾಡುತ್ತಲಿದ್ದರು. ಹಳ್ಳಿಗಳಲ್ಲಿಯ ಕಲಿಗಿ-ತುರಾಯಿ ಲಾವಣೀಕಾರರು, ಬಯಲಾಟದವರು, ಭಾಗವತರು, ಯಕ್ಷಗಾನದವರು ಇವರೆಲ್ಲ ಜನಸಾಮಾನ್ಯರ ಮುಖವನ್ನು ಸಾಹಿತ್ಯದ ಕಡೆಗೆ ತಿರುಗಿಸುವ ಕೆಲಸವನ್ನೇನು ಕಡಿಮೆ ಮಾಡಲಿಲ್ಲ. ಹಳ್ಳಿಯ ಹಿರಿಯ ಮಠದ ಆಯ್ಯನವರು ಭಾರತ, ರಾಮಾಯಣ, ಹರಿಶ್ಚಂದ್ರ-ಕಾವ್ಯ ಮೊದಲಾದುವುಗಳನ್ನು ಓದಿ, ಅರ್ಥಹೇಳಿ, ಹಳ್ಳಿಗರಿಗೆ ಪ್ರೌಢ-ಸಾಹಿತ್ಯದ ಪರಿಚಯವನ್ನೂ ಮಾಡಿಕೊಡುತ್ತಿದ್ದರು. ಕೀರ್ತನಕಾರರು ಪುರಾಣಿಕರಂತೂ ಸಾಹಿತ್ಯಪ್ರಸಾರಕಾರ್ಯಕ್ಕಾಗಿ ಸೊಂಟಕಟ್ಟಿಯೆ ಹೊರಟವರು. ಆದರೆ ಭಕ್ತಿಭಾವ-ಸಾಂಪ್ರದಾಯಿಕನೀತಿಗಳ ಪ್ರಚಾರವೇ ಪ್ರಧಾನವಾಗಿದ್ದ ಹಳೆಯಕಾಲದ ಸಾಹಿತ್ಯಪ್ರಚಾರಕ ಸಂಸ್ಥೆಗಳು, ಇಂದಿನ ವಿಜ್ಞಾನಯುಗದಲ್ಲಿ ಕಣ್ಮರೆಯಾಗಿ ಬಿಟ್ಟಿದ್ದು ಆಶ್ಚರ್ಯವೆಂದು ಅಸ್ವಾಭಾವಿಕವೇನೂ ಅಲ್ಲ. ಆದರೆ ಕೊನೆಯ ಸತ್ಯ ವೈಜ್ಞಾನಿಕವೇ ಇರಲಿ, ಆಧ್ಯಾತ್ಮಿಕವೇ ಇರಲಿ; ಸಮಾಜದಲ್ಲಿ ಬದುಕಿ ಬಾಳಬೇಕಾಗಿರುವ ಜನಸಾಮಾನ್ಯರಲ್ಲಿ, ಸಮಾಜದ ಧಾರಣೆಗೆ ಮೂಲಾಧಾರವಾದ ಕೆಲವೊಂದು ಗುಣಗಳು ನೆಲೆಗೊಳ್ಳಲೇ ಬೇಕಾಗುವುದು. ಅಂತಹ ಗುಣವನ್ನು ನೆಲೆಗೊಳಿಸುವುದಕ್ಕೆ ಇರುವ ಮುಖ್ಯ ಸಾಧನವೆಂದರೆ ಸಾಹಿತ್ಯ. ಎಂತಲೆ ನಮ್ಮ ಹೊದಲಿಗರು, ಅದರ ಪ್ರಚಾರವು ಹಳ್ಳಿಗರಲ್ಲಿಯೂ ನಾಗರಿಕರಲ್ಲಿಯೂ ವಿವಿಧಮುಖವಾಗಿ ನಡೆಯುವಂತೆ ತಮ್ಮ ಪರಿಯಲ್ಲಿ ಹಲವು ಸಂಸ್ಥೆಗಳನ್ನು ನಿರ್ಮಿಸಿಕೊಂಡಿದ್ದರು. ಕಾಲನು ಅವುಗಳನ್ನು ಕೆಡೆಮೆಟ್ಟಿ ನಿಂತಿದ್ದಾನೆ ಇಂದು. ಇತ್ತೀಚೆಗೆ ಬಂದ ಹೊಸರೀತಿಯ ನಾಟಕಸಂಸ್ಥೆಯೂ ಸಾಹಿತ್ಯಪ್ರಚಾರಕ್ಕೆ ಸಾಹಾಯ್ಯಕವಾಗಿದ್ದಿತು; ಆದರೆ ಚಲಚ್ಚಿತ್ರಗಳು ಬಂದು, ನಾಟಕಗಳನ್ನೂ ನುಂಗಿ ನೀರು ಕುಡಿಯತೊಡಗಿವೆ.

ಸದ್ಯದ ಸಾಹಿತ್ಯಪ್ರಸಾರಕ ಸಾಧನಗಳಲ್ಲಿ ಪ್ರಮುಖವಾದುವುಗಳಿಂದರೆ ವೃತ್ತಪತ್ರಿಕೆ-ಮಾಸಿಕಪತ್ರಿಕೆಗಳು, ವಾಚನಾಲಯಗಳು, ಉಪನ್ಯಾಸ-ಪ್ರವಚನಗಳು, ಚಲಚ್ಚಿತ್ರಗಳು ಇವು ನಾಲ್ಕೇ ನಾಲ್ಕು. ಇವುಗಳಲ್ಲಿಯ ಹೊದಲಿನ ಮೂರು ಸಾಧನಗಳು ಕೇವಲ ಸಾಕ್ಷರರ ಸಲುವಾಗಿ ಇರುವುದು. [illegible] ೧೦೦ ಕ್ಕೆ ೧೦ ರಂತೆ ಕೂಡ ಅಕ್ಷರ ಕಲಿತ ಜನರು ನಮ್ಮಲ್ಲಿ ನಿಜವಾಗಿ ಇರುವ ಸಂದರ್ಭವಿರುವಾಗ, ಈ ಪತ್ರಿಕೆ ವಾಚನಾಲಯ-ಉಪನ್ಯಾಸ-ಪ್ರವಚನಗಳಿಂದ ವಿಶೇಷ ಪ್ರಯೋಜನವಾಗುವ ಬಗೆಯೆಲ್ಲಿ? ಜನಸಾಮಾನ್ಯರಿಗೆ ಸಾಹಿತ್ಯದ ಸಂಸ್ಕಾರವನ್ನು ಕೊಡಬಲ್ಲ ಇಂದಿನ ಮುಖ್ಯಸಾಧನವೆಂದರೆ ಚಲಚ್ಚಿತ್ರಪ್ರದರ್ಶನ.

ಪಶ್ಚಿಮದೇಶದಲ್ಲಿ ಚಲಚ್ಚಿತ್ರಗಳು ಮಾಡುತ್ತಿರುವ ಸಂಸ್ಕೃತಿ-ಪ್ರಚಾರಕಾರ್ಯ ಅಷ್ಟಿಷ್ಟೆಂದು ಹೇಳಲಿಕ್ಕೆ ಬರುವಂತಿಲ್ಲ. ನಮ್ಮ ಭಾರತದಲ್ಲಿ ಕೂಡ ಹಿಂದಿ, ಬಂಗಾಲಿ, ಗುಜರಾತಿ, ಮರಾಟಿ, ತೆಲುಗು, ತಮಿಳು ಭಾಷೆಯನ್ನಾಡುವ ಜನರು, ಚಲಚ್ಚಿತ್ರದ ಸಾಧನದಿಂದ ನಾಡಿನಲ್ಲಿ ಜ್ಞಾನಪ್ರಸಾರಮಾಡುತ್ತಿರುವರಲ್ಲದೆ, ನಾಡಿಗರ ಹೊಟ್ಟೆಗೆ ಹಿಟ್ಟು-ಬಟ್ಟೆಗಳನ್ನೂ ಒದಗಿಸಿಕೊಡುತ್ತಲಿರುವರು. ಕನ್ನಡಿಗರಾದ ನಾವು ಏನು ಮಾಡುತ್ತಿದ್ದೇವೆ ಈಗ?

ಕನ್ನಡನಾಡು ಒಂದುವರೆ ಕೋಟಿ ಜನರಿಂದ ಒಳಗೊಂಡುದಾಗಿದೆ; ಅಲ್ಲದೆ ಹಲವು ನಗರ-ಪಟ್ಟಣಗಳಿಂದ ಕೂಡಿದುದೂ ಆಗಿದೆ. ಪ್ರತಿಯೊಂದು ನಗರ-ಪಟ್ಟಣಗಳಲ್ಲಿಯೂ ಒಂದೋ, ಎರಡೋ, ನಾಲ್ಕೋ, ಎಂಟೋ—ಅವುಗಳ ಜನಸಂಖ್ಯೆ ನೈಶಾಲ್ಯಕ್ಕನುಗುಣವಾಗಿ—ಚಲಚ್ಚಿತ್ರ ಪ್ರದರ್ಶನಮಂದಿರಗಳಿವೆ. ಮನೋರಂಜನವನ್ನು ಬಯಸುವ ಕನ್ನಡಿಗರು, ಹಿಂದು-ಹಿಂದಾಗಿ ನಿತ್ಯವೂ ಚಲಚ್ಚಿತ್ರನೋಡಲು ಹೋಗಿಯೆ ಹೋಗುವರು. ಚಲಚ್ಚಿತ್ರ ತೋರಿಸುವವರು ಕನ್ನಡಿಗರು, ನೋಡುವವರು ಕನ್ನಡಿಗರು: ಆದರೆ ತೋರಿಸುವ—ನೋಡುವ ಒಂದೂ ಚಿತ್ರಪಟಗಳು ಕನ್ನಡಭಾಷೆಯವಿರುವುದಿಲ್ಲ. ಭಾಷೆ ತಿಳಿಯಲಿ, ತಿಳಿಯದಿರಲಿ; ಬರೀ ಕಣ್ಣಿಂದ ನೋಡಿದಷ್ಟರಿಂದಲೆ ನಮ್ಮ ಜನ ರಸಾನುಭೂತಿಯ ಹಸಿವನ್ನು ಹಿಂಗಿಸಿಕೊಳ್ಳಬೇಕಾಗಿದೆ.

ಕನ್ನಡಿಗರು ನೋಡುವ ಚಲನಚಿತ್ರಗಳಲ್ಲಿ ನಡೆದ ಕತೆ ಬೇರೆ ದೇಶಗಳಲ್ಲಿಯದು. ಬರುವ ಜನರು ನಮ್ಮ ಆಚಾರ-ವಿಚಾರದಿಂದ ದೂರಕ್ಕಿದ್ದವರು. ಆಡುವ ಮಾತು ಬೇರೆ ಭಾಷೆಯಲ್ಲಿ; ಹಾಡುವ ಹಾಡು ಬೇರೆ ದೇಶಿಯಲ್ಲಿ. ಅದರೂ ಆ ಚಿತ್ರಗಳನ್ನು ಕನ್ನಡಿಗರಾದ ನಾವು ನೋಡುವೆವು; ನಿತ್ಯವೂ ಒಂದು ದುಡ್ಡಿನ ಬೆಟ್ಟವನ್ನು ನಾಡಿನ ಹೊರಕ್ಕೆ ಕಳುಹುವೆವು. ಇನ್ನು ದುಡ್ಡಿನ ಬೆಟ್ಟ ಹೋದರೂ ಹೋಗಲಿ, ನಮಗೆ ಸಂಸ್ಕೃತಿಯಾದರೂ ಸರಿಯಾದುದು ಸಿಕ್ಕುವುದೆಂದು ಸಮಾಧಾನ ಪಡಬೇಕೇ? ಅದೂ ಕನಸಿನ ಮಾತು. ಸಂಸ್ಕೃತಿ ಹೊರೆಯುವುದು ದೂರಕ್ಕಿರಲಿ, ಚಲಚ್ಚಿತ್ರಗಳಿಂದ ಇಂದು ನಾವು ಕನ್ನಡತನದಿಂದ ದೂರವಾಗುತ್ತಲಿರುವೆವು. ಇಂದು ನಾವು ನೋಡುತ್ತಿರುವ ಚಲಚ್ಚಿತ್ರಗಳು, ಅನಿವಾರ್ಯವೆನುವಂತೆಯೆ ತಮ್ಮ ಭಾಷೆಯನ್ನು ನಮ್ಮ ಕಿವಿ-ಮನಗಳಲ್ಲಿ ತುಂಬಿ, ನಮ್ಮ ಬಾಯಲ್ಲಿಯ ಕನ್ನಡ ನುಡಿಗೆ ಉಚ್ಚಾಟನೆ ಕೊಡುತ್ತಲಿವೆ. ಆಕರ್ಷಕವಾದ ಸ್ವರಮಾಲೆಯಿಂದೊಡಗೂಡಿದ ವಿವಿಧರಾಗಗಳ ಸಿನೇಮಾ ಸಂಗೀತವು, ಬೇಡ ಬೇಡವೆಂದರೂ ನಮ್ಮ ಜನರ ಮನಸ್ಸನ್ನು ಹತ್ತಿ ಸವಾರಿಮಾಡತೊಡಗಿದೆ. [illegible] ಸುಂದರ ನಾರೀ ಪ್ರೀತನ ಪ್ರಸಾದ [illegible] ಕವಿಗೆ ಬೀಳುವುದು. ದೇಶಾಭಿಮಾನ [illegible] ಕಲ್ಪನೆಯಿದ್ದ ಕಾಲೇಜಿನ ವಿದ್ಯಾರ್ಥಿಗಳೂ 'ಯಮುನಾ ಜಲ ಬೇಕೂ ಬೇಕ ಕನ್ನಯ್ಯಾ' ಎಂದು ಹೇಳುವುದರಲ್ಲಿ ನೈಮರೆತಿರುವರು. 'ಮಜ ಫಿರಫಿರುನೀ ಭಳಿಸಿ ಕಾ' ಎಂದು

(ಖಳನೆಯ ಪುಟ ನೋಡಿರಿ)

೧. 'ಭಾಯಿ ಮಾನ-ವಿಲ್ಲೇಂ-ದ್ರ'

ಇತ್ತಿತ್ತಲಾಗಿ ಮಂಗರಾಯನ ಪತ್ರವ್ಯವಹಾರ ಬೆಳೆಯುತ್ತಲಿದೆ. ಹೊಗಳುವವರ ಪತ್ರಗಳಿಗಿಂತ ತೆಗಳುವವರ ಪತ್ರಗಳಲ್ಲಿಯ ಚಮತ್ಕೃತಿ ಬೆರಗು-ಗೊಳಿಸುವಂತಹದಾಗಿರುತ್ತದೆ. ಮಾದರಿಗಾಗಿ ಈ ಪತ್ರವನ್ನು ನೋಡಬಹುದು: 'ಕೊಂಬಿಯ ಆರಸನೆ, ಭಾಯಿ ಮಾನವೇಂದ್ರರಾಯ ಅವರು ಕಾಂಗ್ರೆಸಿನ ವಿರುದ್ಧವಾಗಿ ನಿಂತು ಸರಕಾರಕ್ಕೆ ಯುದ್ಧ ಸಹಾಯ ಮಾಡಬೇಕೆನ್ನುವುದೂ, ಪ್ರಾಂತಗಳಲ್ಲಿ ಮಂತ್ರಿಮಂಡಳಗಳನ್ನು ರಚಿಸಬೇಕೆಂಬುದೂ ನಿನ್ನಂತಹ ಕಾಂಗ್ರೆಸಿನ ಜನ್ಮವೈರಿಗೆ ಸಂತೋಷವನ್ನುಂಟು ಮಾಡಿರಬಹುದಲ್ಲವೇ?' ಪಾಚಕ ಮಹಾಶಯನೆ, ಇಷ್ಟನ್ನು ಬರೆದು ನೀನು ಹಲ್ಲು ಕಿರಿದಿದ್ದರೆ ಇನ್ನು ಉಗುಳ್ನುಂಗಲು ಸಿದ್ಧನಾಗುವಂಥಾತ್ತನಾಗು. ಯಾಕೆಂದರೆ, ಮಂಗ-ರಾಯನು ಕಾಂಗ್ರೆಸಿನ ಜನ್ಮವೈರಿ ಎಂಬ ನಿನ್ನ ಭ್ರಮೆಗೆ ಇಲ್ಲಿದೆ ಮದ್ದು. ಮಂಗರಾಯನು ವೈರಿ ಇದ್ದುದಾದರೆ ಅದು ಕಾಂಗ್ರೆಸಿಗಲ್ಲ. 'ಭಾಯಿ ಮಾನವೇಂದ್ರ' ರಂತಹ ನೂರಾರು ಕಾಂಗ್ರೆಸ್ ಸಾಧಕರಿಗಾಗಿ. ಅಥವಾ ನಿನಗಾದರೂ ಹೆಚ್ಚಿಗೆ ಹೇಳುವುದೇನು? ಗೌರವಕ್ಕಾಗಿ, ಸ್ವಾರ್ಥಕ್ಕಾಗಿ ಗಾಂಧಿಗೆ ಕೂಡ 'ಟೊಪ್ಪಿಗೆ ಹಾಕಿದ' ಜನರು ಕರ್ನಾಟಕದಲ್ಲಿರುವಾಗ—ಹೋಗಲಿ. ಆಚ್ಚ ಅಭಿಮಾನ, 'ಸಂಯುಕ್ತ' ಅಭಿಮಾನ ಎಂದು ಎರಡು ತರದ ಅಭಿಮಾನ. ಬಾಯಿಗೆ ಮಾನವಿಲ್ಲದೆ ಇಂದ್ರಪದವಿ ಬಯಸುವ ರಾಯರು 'ಸಂಯುಕ್ತ' ವರ್ಗಕ್ಕೆ ಸೇರಿದವರು, ಮಂಗರಾಯನ ಶಸ್ತ್ರ-ಕ್ರಿಯೆಗೆ ಒಳಗಾದವರು.

* * *

ಮರಾಟಿಗರ ಮುನ್ನಡೆ

ಇನ್ನೊಬ್ಬ ವಾಚಕನು ತನ್ನ ಸ್ಥಳಿಕ ಪ್ರಶ್ನೆ-ಯೊಂದನ್ನು ಕುರಿತು ಮಂಗರಾಯನಿಗೆ ಬರೆದಿದ್ದಾನೆ. ಧಾರವಾಡದ ಜಲಚ್ಚಿತ್ರ ಗೃಹವಲ್ಲಿ ಒಂದರ 'ಮಾಲೀಕ' ರು ಸ್ಟೇಶನ್ನಿಂದ ನಗರದ ವರೆಗೆ-ಆರ್ಧಾತ್ ಇಡಿಯ ಮಾಳಮರಡಿಯಲ್ಲಿ-ತಮ್ಮ ಸಿನೆಮಾದ ಮರಾಠೀ ಜಾಹೀರಾತುಗಳ ನಷ್ಟೆಗೋಡೆಗೆ ಅಂಟಿಸುತ್ತಿದ್ದಾರಂತೆ. ಮಾಳ-ಮರಡಿಯು ಮರಾಟಿಗರ ವಸಾಹತೇ?- ಎಂದು ಪಾಚಕನ ಪ್ರಶ್ನೆ. ಅಹುದು- ಎಂದು ಉತ್ತರ. ಯಾಕೆಂದರೆ ಮಾಳಮರಡಿಯು ಸ್ಟೇಶನಿಗೆ ಹತ್ತಿರವಾಗಿದೆ. 'ಪ್ರಸಂಗ ಪ್ಯೆಸೇಲೆ ಬಂದರೆ ರೈಲು ಹತ್ತಿರವಿರಲಿ' ಎಂದು ಚಾಣಾಕ್ಷರಾದ ಮರಾಟಿ-ಗರು ತಿಳಿದಿರಬಾರದೇಕೆ? ಇಲ್ಲವೆ--ಇನ್ನೂ ಒಂದು ಸಮಾಧಾನವನ್ನು ಹೇಳಬಹುದು: ಲಕ್ಷ್ಮಿ-ಸರ-ಸ್ವತಿಯರಲ್ಲಿ ಅತ್ಯಂತ ವಿರೋಧವಿದೆ ಎನ್ನುವರಲ್ಲವೇ? ಯಾಕೆ ಗೊತ್ತುಂಟೋ? ಸರಸ್ವತಿ ಕನ್ನಡ, ಲಕ್ಷ್ಮಿ ಮರಾಠಿ! ಹ ಹ! ಆದಕಾಗಿ ಲಕ್ಷ್ಮಿಗೆ 'ಆಕ್ಟಲ್' ಸಾಧಿಸುವುದು ಹೇಗೆ? ಹ ಹ!

* * *

ಮುಕ್ತಿಸ್ಸಿದ್ದಿ ಯಾರು?

ಇದೀಗ ನಡೆದ ಸತ್ಯಾಗ್ರಹದಲ್ಲಿ ಒಂದು ವೈಶಿಷ್ಟ್ಯವಿದೆ. ಅದೆಂದರೆ, 'ಯಾದೀ' (ಯಾದವೀ-ಆಲ್ಲ) ಯುದ್ಧ. ಮಹಾತ್ಮರು ಯಾರಾರು ಕಾರಾಗೃಹ ಸೇರಬೇಕೆಂದು ಅಂತಸರದೊಂದು ಯಾದಿ (ಪಟ್ಟಿ) ಯನ್ನು ಸಿದ್ಧಪಡಿಸುವರು. ಇದರಲ್ಲಿ ಪ್ರಥಮಾಯಾದಿಯು ಮಾನವು ಕೆಲವರಿಗೇ ಇದೆ. ವರ್ಕಿಂಗ್ ಕಮಿಟಿಯ ಸದಸ್ಯರು, ಎ. ಆಯ್. ಸಿ. ಸಿ. ಯ ಸದಸ್ಯರು ಮತ್ತು ಶಾಸನ ಸಭೆಗಳ ಸದಸ್ಯರು—ಇವರೇ ಮೊದಲು ಸತ್ಯಾಗ್ರಹ ಹೂಡತಕ್ಕದ್ದಂತೆ. ಈ ಗೂಢವೇನು—ಎಂದು ಅನೇಕರು ಮಂಗರಾಯನಿಗೆ ಕೇಳಿದ್ದಾರೆ. ಮಂಗರಾಯನಾದರೂ ಏನು ಹೇಳಬಲ್ಲನು? ಟೋಕೋತ್ತರಾಷಾಂ ಚೇತಾಂಸಿ ಕೋನು ವಿಜ್ಞಾತುಮರ್ಹತಿ? ಅದರೂ ಹೀಗಿರ ಬಹುದೇ? ಅನೇಕರು ಅಧಿಕಾರಕ್ಕಾಗಿ ಟೊಪ್ಪಿಗೆ ಹಾಕಿದರು. ಈಗ ಅಧಿಕಾರವೆ ಅವರನ್ನು ಟೊಪ್ಪಿಗೆ ಹಾಕುವ ಯುಕ್ತಿ ಇರಬಹುದೆ? ಏನೋ ಒಂದು ಸಂತಯ; ಅದಕಾಗಿಯೆ ಮಂಗ-ರಾಯನು ಬಹುಜನರ ಆನುಕರಣವನ್ನು ಕೂಡ ಮಾಡದೆ, ಚುನಾವಣೆಯ ಕಾಲದಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಲಿಲ್ಲ. ಗೊತ್ತು ಮಂಗರಾಯನಿಗೆ— ಆಗ ಅಧಿಕಾರಕ್ಕಾಗಿ ಬಾಯಿಬಿಟ್ಟವರು ಈಗ ಜೇಲಿಗಾಗಿ ಹಲ್ಲುಕಿರಿಯುವರೆಂದು, ಪಾಪ! ಆಗ ಮಹಾತ್ಮರು ಮುತ್ಸದ್ದಿ ಎಂದು ಹೊಗಳಿದವರೇ, ಈಗ ಮಹಾತ್ಮರು 'ಮುದಿಸದ್ದಿ' ಎಂದು ಹಲ್ಲು ಕಿರಿಯುತ್ತಿದ್ದಾರೆ! ಇದನ್ನೆಲ್ಲ ಅರಿತ ಮಂಗರಾಯನು ಮಾತ್ರ ತ್ರಿಕಾಲಗಳಲ್ಲಿ ಮುತ್ಸದ್ದಿ ಎನಿಸುವನು.

* * *

ಪರಿಷತ್ತಿನ ಘಟನಾಘಾತ

ವರ್ಷಕ್ಕೊಮ್ಮೆ ಅಧಿಕಾರಿಗಳ ಚುನಾವಣೆ ಮಾಡಬೇಕಾದ ಘಟನೆಗಿಂತ ಆಜೀವ-ಅಧಿಕಾರಿ ನರ್ಗದ ಘಟನೆಯೆ ಇಂದಿನ ಕಾಲದಲ್ಲಿ ಶ್ರೇಷ್ಠವಾದದ್ದು ಎಂದು ತೋರಿಸುವ ನನ್ನ ಸಾಹಿತ್ಯ ಪರಿಷತ್ತಿಗೆ ಜಗತ್ತೇ ಋಣಿಯಾಗಬೇಕಾಗಿದೆ. ವರ್ಷಕ್ಕೊಮ್ಮೆ ಚುನಾಯಿಸಬೇಕೆಂದರೆ ಅಷ್ಟೊಂದು ಜನರಿಗೆ ಯೋಗ್ಯತೆ ಇರುವುದು ಅಸಂಭವ. ಆದಕಾಗಿ ಆಜೀವ ಸದಸ್ಯರಂತೆ ಆಜೀವ ಅಧಿಕಾರಿಗಳಿರಬೇಕು— ಸದಸ್ಯರು ಆಜೀವರಾದರೆ ಅಧಿಕಾರಿಗಳೂ ಆಜೀವರಾಗ ಬಹುದಲ್ಲ?— ಎಂಬ ಹೊಸ ತತ್ತ್ವ ಹೂಡಿದ ಪರಿಷತ್ತಿಗೆ ಹಿಟ್ಲರನು ವಂದನೆಗಳನ್ನು ಕಳುಹಿಸಿರುವನಂತೆ. ಈ ಸುದ್ದಿ ಮಾತ್ರ ಇನ್ನೂ ಅಧಿಕೃತ-ವಾಗಿ ಪ್ರಕಟವಾಗಿಲ್ಲ; ಎಂದರೆ ಜರ್ಮನ್ ನುಡಿ-ಯಲ್ಲಿ ಪ್ರಕಟವಾಗಿದೆ. ಕನ್ನಡನುಡಿಯಲ್ಲಿ ಅಲ್ಲ.

* * *

ಸಾಹಿತ್ಯ ಬೆಳೆಯಬೇಕಾದರೆ ಏನು ಮಾಡಬೇಕು?

ಈ ಪ್ರಶ್ನೆಯನ್ನು ಮಂಗರಾಯನಿಗೆ ಕೇಳುವ ಕುತೂಹಲಿಗಳ ಸಂಖ್ಯೆ ಬಹಳವಾಗಿದೆ ಎಲ್ಲರನ್ನೂ ಒಂದೇ ಮಾತಿನಿಂದ ಸಮಾಧಾನಗೊಳಿಸಬೇಕೆಂಬ ಉದ್ದೇಶದಿಂದ ಮಂಗರಾಯನು, ಅಖಿಲ ಕನ್ನಡ ನಾಡಿಗೂ—ಬೇಡ ಹೀಗೆ, ಅರಿಸಮಾಸ ದೋಷ ವಾಗುವುದು—ಅಖಿಲ ಕರ್ನಾಟಕಕ್ಕೂ ಹೀಗೆಂದು ಒಂದು 'ಕ್ರಿಸ್‌ಮಸ್ ಸಂದೇಶ'ವನ್ನು ಕೊಡುತ್ತಲಿದ್ದಾನೆ.

"ನನ್ನ ಕನ್ನಡನಾಡಿನ ಅಣ್ಣ-ತಮ್ಮಂದಿರೆ, ಅಕ್ಕ-ತಂಗೆಂದಿರೆ, ನನ್ನೆಡ ಸಾಹಿತ್ಯದ ಬೆಳವಣಿಗೆ ಸಾಕಷ್ಟು ರೀತಿಯಿಂದಾಗಬೇಕಾದರೆ ವಿಚಾರ-



ಪರ್ಲಕಾಢೆ ತೆಗೆದುಕೊಳ್ಳಿರಿ. ಮೈಯಲ್ಲಿ ಉಷ್ಣತೆ ಹೆಚ್ಚಾಗಿದ್ದುದರಿಂದ ಆಂಗ್ಸೈ, ಆಂಗಾಲು, ಕಣ್ಣು, ಮೂತ್ರ ಮುಂತಾದುವು ಉರಿಯುವುದು ಪರ್ಲಕಾಢೆಯಿಂದ ನಿಂತುಹೋಗುವುದು. ಪರ್ಲಕಾಢೆಯಿಂದ ಹಸಿವೆ ಹೆಚ್ಚಾಗುವುದು, ಕೆಟ್ಟುಹೋದ ಪಚನಕ್ರಿಯೆಯು ನೆಟ್ಟಗಾಗುವುದು, ಊಟದ ತರುವಾಯ ಹೊಟ್ಟೆಯಲ್ಲಿ ಜಡವೆನಿಸುವುದು, ಹುಳಿ ಢೇಕರಿಕೆ, ಎದೆ ಸುಡುವುದು ಮುಂತಾದ ತೊಂದರೆಗಳಿಗೆ ಪರ್ಲಕಾಢೆಯಿಂದ ಗುಣವಾಗುವುದು. ಪರ್ಲಕಾಢೆಯಿಂದ ಶೌಚಕ್ರಿಯಾಗುವುದರಿಂದ, ಮೇಲಿಂದ ಮೇಲೆ ಹೊಟ್ಟೆ ಹರಿಯುವಂಥ ರೇಚಕ ಔಷಧ ತೆಗೆದುಕೊಳ್ಳುವ ಅವಶ್ಯಕತೆಯೇ ಉಳಿಯುವುದಿಲ್ಲ. ಪರ್ಲಕಾಢೆಯು ಮೈಯಲ್ಲಿಯ ಆಲಸ್ಯ, ನಿರುತ್ಸಾಹಗಳನ್ನು ಹೊಡೆದೋಡಿಸಿ, ಹೊಸಉತ್ಸಾಹ, ಹೊಸಶಕ್ತಿ, ಚಾರುಕುತನಗಳನ್ನು ಹುಟ್ಟಿಸುತ್ತದೆ ಪ್ರತಿ ಆರು ತಿಂಗಳಲ್ಲಿ ಒಂದು ತಿಂಗಳು ಪರ್ಲಕಾಢೆ ತೆಗೆದುಕೊಳ್ಳುವ ಚಟವೇ ಹತ್ತಲಿ ಎಂದರೆ ಉಷ್ಣತೆಯಿಂದ ಆಗುವ ಅಪಚನ, ಮಲಬಂಧನ ಮೊದಲಾದ ತೊಂದರೆಗಳೇ ನಿಮಗೆ ಬಡಿಯುವು. ಪರ್ಲಕಾಢೆಯು ನಿಮ್ಮ ನೆರೆಯ ಔಷಧದ ಅಂಗಡಿಗಳಲ್ಲಿ ಸಿಗುವುದು. ಸ್ವತಃ ಉಪಯೋಗಿಸಿ ಮನವರಿಕೆಮಾಡಿಕೊಳ್ಳಿರಿ.

ಪರ್ಲಕಾಢೆ ತೆಗೆದುಕೊಳ್ಳಿರಿ

ಮಂಡನೆ ಹೆಚ್ಚಾಗಬೇಕು; ಬುದ್ಧಿಯ ಬಡಿದಾಟ ವೃದ್ಧಿಂಗತವಾಗಬೇಕು. ಹಾಗಾದುದರಿಂದಲೇ ಆಲ್ಲವೆ ಸಮ್ಮ ಪರಸ್ಪರ ಸಾಹಿತ್ಯ ಹಲವು ಮುಖಗಳಿಂದ ಬೆಳೆದು ನಿಂತುದು? ವೈಸರು, ವೀರಶೈವರು, ವೈಷ್ಣವರು, ಆಪ್ಯೈತರು, ವಿಶಿಷ್ಟಾದ್ವೈತರು ಇವರೆಲ್ಲರ್ಲಿ ವಿಚಾರಮಂಥನ ನಡೆಯಿತು; ಬುದ್ಧಿಗಳು ಬಡಿದಾಡತೊಡಗಿದುವು. ಎಂತಲೇ ಅಂದು ಸಾಹಿತ್ಯದ ಸಮೃದ್ಧಿ ಕನ್ನಡನಾಡಿಗೆ ಸಿಕ್ಕಿತು ಇಂದೋ, ಜಾತಿ-ಮತ-ಪಂಥಗಳು ಜೀವಹೀನವಾದುದರಿಂದ ಮೊದಲಿನ ಕಡಿದಾಟ ವಿಲ್ಲ; ಬಡಿದಾಟವಿಲ್ಲ. ಎಂತಲೆ ತಂತಮ್ಮ ಸಾಹಿತ್ಯದ ಸಮೃದ್ಧಿಯೂ ಇಲ್ಲ. ಆದುದರಿಂದಲೆ ಸೋದರ-ಸೋದರಿಯರೆ, ನಿಮ್ಮ ಸಾಹಿತ್ಯ ಬೆಳೆಯಬೇಕಾದರೆ ಕನ್ನಡನಾಡಿನಲ್ಲಿ ಹುಟ್ಟು ನಡೆದುಬಂದ ಸಂಪ್ರದಾಯ, ಮತ, ಧರ್ಮ, ಜಾತಿ, ಪಂಗಡಗಳನ್ನು ಅಖಂಡವಾಗಿ—ಅವಿಚ್ಛಿನ್ನವಾಗಿ ಜೀವದಿಂದಿರಿಸಬೇಕಾಗಿದೆ, ಜೀವಂತವಾಗಿರಿಸಬೇಕಾಗಿದೆ. ಇನ್ನೂ ಹೊಸ ಹೊಸ ಮತಾಚಾರ್ಯರು ಹುಟ್ಟಿ ತಮ್ಮ ಮತಗಳನ್ನು ಪ್ರಸ್ತಾಪಿಸಿ ಹೊಸ ಹೊಸ ಪಂಗಡಗಳನ್ನು ಹುಟ್ಟಿಸಬೇಕಾಗಿದೆ. ರಾಜಕೀಯ ವಿಚಾರದಲ್ಲಿ ಬೇರೆ ಬೇರೆ ಪಕ್ಷ-ಪಂಗಡಗಳು ತಲೆದೋರಿ ಕಾದಾಟಗಳು ನಡೆಯಬೇಕಾಗಿದೆ. ಸಾಹಿತ್ಯದಲ್ಲಿಯ ಹೊಸಮಾರ್ಗದವರೂ ಹಳೆಯಮಾರ್ಗದವರೂ ಸಾಹಿತ್ಯ ನಿರ್ಮಾಣಕಾರ್ಯವನ್ನು ಬದಿಗಿರಿಸಿ, ತಮ್ಮ ತಮ್ಮ ಮಾರ್ಗಗಳ ಪ್ರತಿಷ್ಠೆಗಾಗಿ ತಮ್ಮತಮ್ಮಲ್ಲಿ ಕಾಳೆಗ ನಡೆಯಿಸಬೇಕಾಗಿದೆ. ವ್ಯಕ್ತಿ ವ್ಯಕ್ತಿಗೊಂದು ಮನವರಿಕೆ-ನೆನವರಿಕೆ-ಕನವರಿಕೆಗಳು ಉಂಟಾದಾಗಲೆ ಸಾಹಿತ್ಯದ ಬೆಳೆಗೆ ಹುಲುಸು ಹೆಚ್ಚುವುದು. ಆದುದರಿಂದ ಕನ್ನಡಿಗರೆ, ಕನ್ನಡನಾಡಿನಲ್ಲಿ ಕಲಹಗಳನ್ನು ಹೆಚ್ಚಿಸಿರಿ, ಕಲಹಕ್ಕಾಗಿ ಜಾತಿ-ಕುಲಗಳನ್ನು ಹೆಚ್ಚಿಸಿರಿ. ಜಾತಿ-ಕುಲಕ್ಕಾಗಿ ಪಂಗಡಗಳನ್ನು ಹೆಚ್ಚಿಸಿರಿ! ಕಾದಾಡಿರಿ, ಕಾಳೆಗ ಮಾಡಿರಿ, ನಿಮ್ಮ ಸಾಹಿತ್ಯವನ್ನು ಹೆಚ್ಚಿಸಿಕೊಳ್ಳಿರಿ!"

ಜಗಳವೇ ತಳಹದಿಯು ಸಾಹಿತ್ಯಕಯ್ಯಾ!
ಅದಕಾಗಿ ಹಗಲಿರುಳು ಹೋರಾಡಿರಯ್ಯಾ!

* * *

ಸುದ್ದಿಗಾರನಿಗೆ ಹೇಳಿದ ಸರ್ವಜ್ಞ

"ಉತ್ತರ ಹಿಂದುಸ್ತಾನದಲ್ಲಿಯ ಅರಸರೆನಿಸಿಕೊಳ್ಳುವವರೊಬ್ಬರು, ಅಹಿಂಸೆಯ ವಿಷಯಕ್ಕನಾಗಿರುವ ಅತ್ಯುತ್ಕಟವಾದ ವಿಶ್ವಾಸದ ಮೂಲಕ ತಮ್ಮ ಬಳಿಯಲ್ಲಿರುವ ಎಪ್ಪೈತ್ತೋ ರೈಫಲ್, ರಿವಾಲ್ವರುಗಳನ್ನು ಸಂಸ್ಥಾನಸರಕಾರಕ್ಕೆ ಒಪ್ಪಿಸಿದರಂತೆ; ಅಲ್ಲದೆ ತಮ್ಮ ಬಳಿಯಲ್ಲಿರುವ ೩೫೦೦೦ ರೂಪಾಯಿಗಳ ಬೆಲೆಯ ಗಿರಣಿಯ ಬಟ್ಟೆಗಳನ್ನು ಹೋಳಿಮಾಡಿಬಿಟ್ಟರಂತೆ" ಎಂಬ ಸುದ್ದಿಯನ್ನು ನೊನ್ನೆ ಮೊನ್ನೆಯಿ ಒಬ್ಬ ತರುಣ ಭಾವಪರವಶನಾಗಿ ಮಂಗರಾಯನ ಕವಿಗೆ ಹಾಕಿದ ಮಂಗರಾಯನು ಈ ಸುದ್ದಿಯನ್ನು ಕೇಳಿ ಯಾವ ವಿಸ್ಮಯಭಾವವನ್ನೂ ತೋರಿಸದೆ ಕುಳಿತುದರಿಂದ, ಸುದ್ದಿಗಾರತರುಣ ಅದೇಕೋ ಗಾಬರಿನಿರಾಶೆಗೊಂಡ ದನಿಯಲ್ಲಿ ಕೇಳಿದ:

"ಇದರ ಬಗ್ಗೆ ನಿನ್ನ ಅಭಿಪ್ರಾಯವೇನು ಮಂಗಣ್ಣಾ?"

ಮಂಗರಾಯನು ಸಹಜಸ್ವರದಲ್ಲಿಯೆ ಹೇಳತೊಡಗಿದ.

"ಏನು ನಿನ್ನ ಸುದ್ದಿ? 'ಕ್ಷತ್ರಿಯರಾಜನೊಬ್ಬ ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟ; ೩೫ ಸಾವಿರ ರೂಪಾಯಿ ಬೆಲೆಯ ಬಟ್ಟೆಗಳನ್ನು ಯಾತಕ್ಕೂ ಬಾರದಂತೆ ಸುಟ್ಟುಬಿಟ್ಟ' ಎಂದಲ್ಲವೆ? ಇದರ ಬಗ್ಗೆ ಮರ ಮರ ಹಾರಾಡುವವನಾದ ನನ್ನ ಅಭಿಪ್ರಾಯದಿಂದ ನಿನಗೇನಾಗಬೇಕಾಗಿದೆ? ಕನ್ನಡದಲ್ಲಿ ಜಾನಪದವೇದ ಎಂದರೆ ಗಾದೆಯ ಮಾತು ಏನು ಹೇಳುತ್ತದೆಯೆಂಬುದು ನಿನಗೆ ಗೊತ್ತಿರಬಹುದು: 'ಶಸ್ತ್ರಬಿಟ್ಟ, ಕ್ಷತ್ರಿಯ ಕೆಟ್ಟ' ಅಂತೆ; 'ಅರಸರಿಗೆ ಬರಬುದ್ಧಿ ಅಂತೆ. ನಮ್ಮ ಮನುಷ್ಯರಲ್ಲಿ ಒಳ್ಳೆಯ ಕವಿಯೆಂದು ಮೆರೆಯುತ್ತಿರುವ 'ಸರ್ವಜ್ಞ' ಎಂಬವನು ಅನುಭವೋಕ್ತಿಯೊಂದನ್ನು ಹೇಳಿದುದು ನಿಮಗೆ ಗೊತ್ತಿರಬಹುದು. ಗೊತ್ತಿರಲಿಲ್ಲವಾದರೆ ಕೇಳಿ:

ಹರಿವನೀರೆಳೆವಳ್ಳಿ ತುರಗ ಭೈತ್ರವು ಬಂಡಿ
ಅರಸನಾ ಮನವು ಬೆಲೆವೆಣ್ಣು ಇವು ಏಳು
ತಿರುಹುವವರಿಚ್ಛೆ ಸರ್ವಜ್ಞ!"

ಇದನ್ನು ಕೇಳಿದ ಸುದ್ದಿಗಾರನ ಮುಖದಿಂದ ನಟ್ಟುಸಿರು ಏತಕ್ಕಾಗಿ ಹೊರಟಿತೆಂಬುದು ಮಾತ್ರ ಗೊತ್ತಾಗಲಿಲ್ಲ.

ಜರ್ಮನಿಯ ಸ್ಥಿತಿಗತಿ ಏನೇನು?

ಚಾರ್‌ಮನಿಯ 'ನೆರಂಗ್'

★

ಒಂದರ ಹಿಂದೊಂದು ವಿಜಯಗಳನ್ನು ಸಂಪಾದಿಸುತ್ತ ಹೊರಟ ಜರ್ಮನಿಯ ಮಿಂಚಿನ ರಭಸವಿಂದು, ಬ್ರಿಟಿಷರ ಯುದ್ಧನೀತಿಯ ಮುಂದೆ ಹಂಚಾಗುತ್ತ ನಡೆದಿದೆಯಲ್ಲ! ಜರ್ಮನ್ ಸೈನ್ಯವು ದೀರ್ಘಕಾಲದ ಯುದ್ಧವನ್ನು ಎಂದೂ ಮಾಡಲಾರದು. ಇದರಿಂದ ಸದ್ಯದ ಯುದ್ಧದ ಭವಿಷ್ಯವನ್ನು ಯಾರೂ ಅರಿತುಕೊಳ್ಳಬಹುದಾಗಿದೆಯಲ್ಲವೆ?

★

ಯುದ್ಧ ಪ್ರಾರಂಭವಾದಾಗ ಇದ್ದ ಜರ್ಮನಿಯ ಆಧಿಪತ್ಯೋಗದ ರಭಸವನ್ನು ತಿಳಿದವರು, ಇಂದಿನ ಅದರ ಮುಂದಗತಿಗೆ ಆಶ್ಚರ್ಯಗೊಳ್ಳಬಹುದು. ನಿಜವಾಗಿ ನೋಡಿದರೆ, ೧೯೧೪ ರಲ್ಲಿದ್ದ ಜರ್ಮನಿಯ ಸೈನ್ಯಕ್ಕಿಂತ ಇಂದಿನ ಸೈನ್ಯವು ಹೆಚ್ಚು ಗಟ್ಟಿಯಾದುದಿದೆ. ಕಳೆದ ಮಹಾಯುದ್ಧದ ಮುನ್ನ ಜರ್ಮನಿಯ ಸೈನಿಕರ ಸಂಖ್ಯೆಯು ೭೫೦,೦೦೦ ಇದ್ದರೆ, ಈ ಸಲದ ಯುದ್ಧಕ್ಕೆ ಮೊದಲಿನ ಶಾಂತತೆಯ ಕಾಲದಲ್ಲಿಯ ಜರ್ಮನ್ ಸೈನಿಕರ ಸಂಖ್ಯೆಯೆ ೯೫೦,೦೦೦ ಕ್ಕೆ ವಿಾರಿದೆ. ಫ್ರಾನ್ಸ್‌ದೇಶದ ಪಡೆಗಿಂತ ೭೫೦,೦೦೦ ಸಂಖ್ಯೆಯೇ ಎಷ್ಟೋ ಹೆಚ್ಚು; ಆದರೆ ನಾಜಿಗಳು ಅಧಿಕಾರಾರೂಢರಾದುದಿನಿಂದ, ಸೈನಿಕರನ್ನು ಕಲೆಹಾಕುವ ಕೆಲಸವು ತುಂಬ ಒತ್ತರದಿಂದ ಸಾಗಿತು. ಕೇವಲ ಸೈನಿಕರ ಸಂಖ್ಯೆಯ ಬಲದ ಕಡೆಗೆ ಮಾತ್ರ ಲಕ್ಷ್ಯಹಾಕದೆ, ಅವರ ಸಿದ್ಧತೆಯ ಕಡೆಗೂ, ಎಂತಹ ಪ್ರಸಂಗ ಬಂದರೂ ಎದುರಿಸಲು ಬೇಕಾಗಿರುವ ಹಿಡಿತಗಳನ್ನು ತಿಳಿಸುವುದರ ಕಡೆಗೂ ಲಕ್ಷ್ಯಗೊಟ್ಟರು. ಅವಶ್ಯಬಿದ್ದರೆ ಜರ್ಮನಿಯು ೬,೦೦೦,೦೦೦ ದಷ್ಟು ಸೈನಿಕರನ್ನು ಕಾರ್ಯಸ್ಪವ್ಯತರನ್ನಾಗಿಯೂ ಮಾಡಬಹುದಾಗಿದೆಯಂತೆ.

ಜರ್ಮನ್ ಪಡೆಯಲ್ಲಿಯ ಮುಖ್ಯಸ್ಥಾನವು ಕಾಲಾಳುಗಳದೆ, ಏಕೆಂದರೆ ಇಡಿಯ ಸೈನಿಕರ ಸಂಖ್ಯೆಯಲ್ಲಿ ೨ ಪಾಲು. ನಾಜೀ ಮುಂದಾಳುಗಳು, ಈ ಕಾಲದ ಯುದ್ಧವು ಯಾಂತ್ರಿಕಸಾಮರ್ಥ್ಯದಿಂದ ನಡೆಯುವುದೆಂದು ಮನಗಂಡವರಾಗಿದ್ದರೂ, ಯುದ್ಧದ ವಿಜಯವು ಮಾತ್ರ ಕಾಲಾಳುಗಳು ಶತ್ರುಪಕ್ಷದವನನ್ನು ಕೈ ಕೈಯುದ್ದದಲ್ಲಿ ಸೋಲಿಸಿದಾಗಲೆ ಎಂಬುದನ್ನು ಅರಿತಿರಬಹುದು. ಎಂತಲೇ ೨ ದೃಷ್ಟಿಯಿಂದಲೆ ಜರ್ಮನ್ ಸೈನ್ಯವು ಸಿದ್ಧವಾಗಿದೆ. ಸೈನಿಕರಿಗೆ ಅಗತ್ಯವೆನಿಸುವ ಎಲ್ಲಬಗೆಯ ಆಯುಧ-ಉಪಕರಣಗಳು ಇವೆ. 'ಸೈನ್ಯದ ಉಳಿದ ಯಾಂತ್ರಿಕ ಭಾಗದ ಸಹಕಾರ ಯೋಜನೆಯಿಂದ ಸೈನಿಕರು ಮುನ್ನುಗ್ಗಬೇಕು— ತಮ್ಮ ಶತ್ರುಗಳ ಶಕ್ತಿಯನ್ನು ಕುಗ್ಗಿಸಬೇಕು' ಇದೇ ಅವರ ತಂತ್ರ. ಪ್ರತಿಯೊಂದು ಸೈನ್ಯದ ಪಡೆಗೆ, ಅನೇಕ ಯಂತ್ರತೋಪ್ಪಗಳೂ ಬಂದೂಕಗಳೂ ಟ್ಯಾಂಕ್‌ವಿರೋಧಕ ತೋಪ್ಪಗಳೂ ಇವೆ. ಈ ತೋಪ್ಪಗಳಲ್ಲಿಯ ಕೆಲವು, ಮೋಟರಿನಿಂದ ಸಾಗಿಸಲ್ಪಡುತ್ತಲಿವೆ. ಹೆಚ್ಚಾಗಿ ಕುದುರೆಗಳೇ ಅವುಗಳನ್ನು ಎಳೆದೊಯ್ಯುವವು. ಕುದುರೆಗಳ ಉಪಯೋಗವು ಆಗುವುದು ಯುದ್ಧಕಾಲದಲ್ಲಿ ಈ ಕಾರ್ಯಕ್ಕಾಗಿಯೆ.

ಸೈನಿಕರನ್ನು ಸಿದ್ಧಮಾಡುವುದರಲ್ಲಾದರೂ ಜರ್ಮನರದೊಂದು ವಿಶಿಷ್ಟ ಬಗೆಯಿದೆ. ಯಾಂತ್ರಿಕ ಸಾಮರ್ಥ್ಯವಿದ್ದರೂ ಸೈನಿಕರು ಹೆಚ್ಚಾಗಿ ಕೈ ಕೈ ಯುದ್ಧಕ್ಕೆಂದೇ ಸಜ್ಜುಗೊಳಿಸಲ್ಪಟ್ಟಿರುತ್ತಾರೆ. ಬಂದೂಕನ್ನು ಟೊಂಕದಿಂದ ಹೆಗಲಿಗೆ ಎತ್ತಲು ವೇಳೆಯ ಹಾನಿಯಾಗುವುದೆಂದು ಟೊಂಕದಿಂದಲೆ ಗುರಿಹೊಡೆಯುವುದನ್ನು ಕಲಿಸಿದ್ದಾರೆ. ಸವಿಾಪದಲ್ಲಿಯೆ ಸಿಡಿಗುಂಡು ಬೀಳುವ ಯೋಗ ಕಂಡು ಬಂದರೆ, ಹಿಂದಿನ ತಗ್ಗಿಗೆ ಹೋಗಿ ನಿಲ್ಲುವಂತೆ ಲಾಗ ಹೊಡೆಯಲಿಕ್ಕೂ ಕಲಿಸಿದ್ದಾರೆ. ಯುದ್ಧದಲ್ಲಿ ತಮ್ಮ ಆಯುಧಗಳನ್ನು ಕಳೆದುಕೊಳ್ಳುವ ದುರ್ದೈವ ಬಂದರೆ, ಬರಿಗೈಯಿಂದಲೂ ಹೊಡೆದಾಡುವ ಯುಕ್ತಿಗಳನ್ನು ಹೇಳಿಕೊಟ್ಟಿದ್ದಾರೆ. ೨ಳ ತಾಸುಗಳಲ್ಲಿ ಸೈನಿಕರು ತಮ್ಮ ಭಾರವಾದ ಸಾಧನಗಳ ಸಹಿತ, ಏನಿಲ್ಲೆಂದರೂ ೪೦-೫೦ ಮೈಲು ಮುಂದೆ ಸಾಗುವಷ್ಟು ಶಕ್ತಿಯನ್ನೂ ರೂಢಿಯನ್ನೂ ಹೊಂದಲು ಅವರನ್ನು ಯೋಗ್ಯರನ್ನಾಗಿ ಮಾಡಿದ್ದಾರೆ.

ಕಳೆದ ಮಹಾಯುದ್ಧಕ್ಕಿಂತಲೂ ಹೆಚ್ಚಾಗಿ ಇಂದಿನ ಸೈನ್ಯವು ಯಂತ್ರಸಾಧನಗಳಿಂದ ಸಹಾಯ ಪಡೆಯುತ್ತಿದೆ. ಇಂದು ಜರ್ಮನ್ ಸೈನಿಕರು ಬಳಸುತ್ತಿರುವುದು ಹಿಂದಿನ ಕಾಲದಂತಹ ಬಂದೂಕುಗಳನ್ನಲ್ಲ. 'ಹೊವಿಜಾರ್' ಎಂಬ ವಿಶಿಷ್ಟಸಾಧನ. ಅದು ಬಂದೂಕಿಗಿಂತ ಹೆಚ್ಚು ಪರಿಣಾಮಕಾರಿಯೆಂದು ಜರ್ಮನರು ಹೇಳುವರು. ಉಳಿದ ಯಂತ್ರಸಾಧನಗಳು ಅಚ್ಚುಕಟ್ಟಾಗಿಯೂ, ಅವುಗಳ ಉಪಯೋಗದ ರೀತಿಯು ಚಾಣಾಕ್ಷತನದ್ದಾಗಿಯೂ ಇವೆ.

ಬೇರೆ ಬೇರೆ ಸ್ವರೂಪದ ಲಾಕ್ಷಣಿಕಸಿದ್ಧತೆಯೂ ಇದೆ. ಯುಂತ್ರವಿಶಾರದರೂ ಸಂಜ್ಞಾವಾಹಕರೂ ಇದ್ದಾರೆ. ಕುದುರೆಯ ರಾವುತರೊಂದಿಗೆ ಸಾಯಿಕಲ್, ಮೋಟರ್ ಸಾಯಿಕಲ್ ಸವಾರರೂ ಇದ್ದಾರೆ. ಕವಚಧಾರಿ ಮೋಟರುಗಳು ಪ್ರತಿಯೊಂದು ಪಡೆಯಲ್ಲಿಯೂ ಇವೆ. ಟ್ಯಾಂಕುಗಳ ಉಪಯೋಗವು ಸೈನಿಕರ ಸಹಾಯಕ್ಕೆಂದಿಲ್ಲ, ಅಭಿಯೋಗಕ್ಕಾಗಿವೆ. ಅಭಿಯೋಗದಲ್ಲಿ ಎತಹು ರೀತಿ: ದೊಡ್ಡ ಟ್ಯಾಂಕುಗಳು ಮುಂದುವರಿದು ಹೋಗಿ, ಶತ್ರುಗಳ ಸಾಲುಗಳನ್ನು ಭೇದಿಸಿ ಓಡಿಸುವುದು; ಅವುಗಳನ್ನು ಸೈನಿಕರು ಹಿಂಬಾಲಿಸುವುದು! ಸೈನಿಕರ ಸಾಲಿನ ಹಿಂದೆ ಸಣ್ಣ ಟ್ಯಾಂಕುಗಳು. ಸಣ್ಣ ಟ್ಯಾಂಕುಗಳ ವೇಗವು ಹೆಚ್ಚು. ಈ ಯುದ್ಧದಲ್ಲಿ ಮುಖ್ಯವಾಗಿರುವುದು ವೇಗ. ಸ್ವಲ್ಪ ವೇಳೆಯಲ್ಲಿಯೆ ಹೆಚ್ಚು ಕಾರ್ಯವಾಗಬೇಕು. ವೇಳೆಯ ಮಹತ್ತ್ವ ಹೆಚ್ಚು. ಅದರಲ್ಲಿಯೂ ಸೈನ್ಯಕ್ಕೆ ಸೈನ್ಯವೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಬೇಕು. ಹೋಗಬೇಕೆಂದರೆ ಬರಿಯೆ ಹುಂಬತನದಿಂದ ಸಾಗುವುದಲ್ಲ; ಶತ್ರುಪಕ್ಷದವರ ಚಲನ-ವಲನಗಳನ್ನು ಅನುಲಕ್ಷಿಸಿ, ಹಿಂದೆ ಬರುವವರ ಸಂಬಂಧ ಕಡಿಯದಂತೆ ಮುಂದೆ ಸಾಗುವುದು. ಅದಕ್ಕೆ ಇಂದು ಜರ್ಮನ್ ಸೈನ್ಯವು 'ಬೇಗ' ಸಾಗುವ ಶಿಕ್ಷಣವನ್ನು ಪಡೆದಿದೆ. ಫ್ರೆಂಚ್ ಸೈನ್ಯವು ಹಾಗಿರಲಿ; ಅವರ ಗುರಿ ನಾಂಪ್ರದಾಯಿಕ ಶಿಸ್ತು, ಸಂರಕ್ಷಣೆ. ರಭಸ-ಕಾರ್ಯವೇಗವೇ ಜರ್ಮನ್ ಸೈನ್ಯಾಧಿಕಾರಿಗಳ ಮುಂದಿನ ಗುರಿ. ಹೊಂಚುಹಾಕಿಕೊಂಡು ವಿಂಚಿನಂತೆ ಬಂದು, ವಿಂಚಿನಂತೆ ವಿಜಯ ಸಂವಾದಿಸಬೇಕೆಂಬುದೇ ಅವರ ಮನೀಷೆ. ಸೈನ್ಯದ ಸಿದ್ಧತೆಯಾದರೂ ಅದರ ಸಾಧನಕ್ಕಾಗಿಯೆ ಇರುವುದು.

ಈ ಯುಕ್ತಿಯಿಂದಲೆ ಜರ್ಮನರು ಮೊದಲು ಮೊದಲು ಎಲ್ಲ ಯುದ್ಧಗಳಲ್ಲಿ ಜಯಶಾಲಿಗಳಾದರು. ಅವರು ಶತ್ರುಗಳಿಗೆ ಜರ್ಮನರ ವೇಗದ ಕಲ್ಪನೆಯು ಆಗುತ್ತಿದ್ದಿಲ್ಲ. ಹಾ ಹಾ ಎನ್ನುವುದರಲ್ಲಿ ಹಾಪಾಕಾರ ಎಬ್ಬಿಸುವಷ್ಟು ಕಾರ್ಯಕುಶಲತೆ, ವೇಗ; ರಭಸಗಳವೆ ಜರ್ಮನ್ ಸೈನ್ಯದಲ್ಲಿ. ಜರ್ಮನರು ದುಡುಕಿನಿಂದ ಬಂದಾಗ ಸಿಡಿದು ಹೋಗದೆ, ಸ್ವಾಧೀನ ಪಡಿದುಕೊಂಡು ಹೆಣಗಿದ್ದರೆ, ಜರ್ಮನರ ಜೋರು ಕಡಿಮೆಯಾಗಲಹುದಾಗಿತ್ತು. ವಿಂಚು ಬಹಳ ಹೊತ್ತು ತಡೆಯುವುದಲ್ಲವೆಂಬ ಅರಿವು ಜರ್ಮನರ ಶತ್ರುಗಳಿಗಿರಬೇಕು. ಕೇವಲ ವಿಂಚಿನ ಹೊಳಪಿಗೆ—ಬೆಳಕಿಗೆ—ಬೆದರಿ ಕೈ-ಕಾಲುಗೆಟ್ಟರೆ, ಮತ್ತೊಮ್ಮೆ ವಿಂಚದೆ ಹೋದೀತೆ? ಆದಕ್ಕೆಂತಲೆ ಯುದ್ಧದ ಮೊದಲಿನದಿವಸಗಳಲ್ಲಿ ಜರ್ಮನರಿಗೆ ವಿಂಚಿನಂತೆ ಜಯವಾಯಿತು. ಈ ವಿಂಚಿನ ರೀತಿಗೇ ಅವರು 'ಬ್ಲಿಜ್ (Blitz)' ಎನ್ನುತ್ತಿರುವರು.

ಜರ್ಮನ್ ಸೈನ್ಯದಲ್ಲಿ ಇಷ್ಟು ವೇಗ, ಆವೇಗ, ರಭಸ, ವಿಂಚು ಇದ್ದರೂ, ಮೊದಲಿನ ವಿಜಯದ ವೇಗ ಕುಂದಿತಲ್ಲ. ಇಂದು ಮುಖ ಕಂದಿರುವುದೇಕೆ. ಇಂಗ್ಲೆಂಡಿನ ಮೇಲೆ ಅಭಿಯೋಗ ಮಾಡಬೇಕೆಂದು ಹೊಂಚುಹಾಕಿ, ತಿಂಗಳುಗಳು ಕಳೆದಂತೆ ಅವರ ಉತ್ಸಾಹವು ತಂಗುಳಾಗತೊಡಗಿದುದರ ಕಾರಣವೇನು! ಅದಕ್ಕೆ ಕಾರಣ ಎರಡು: ಒಂದು ಬಹಿರಂಗ ಕಾಣ. ಶತ್ರುಗಳಾದ ಬ್ರಿಟಿಶರು ತಮ್ಮ ಹಳೆಯ ಗೆಣೆಯನ ಹಿಡಿತ-ಸಿಡಿತಗಳನ್ನು ತಿಳಿದವರಿರುವರು. ಇನ್ನೊಂದು ಅಂತರಂಗದ ಕಾರಣ; ಜರ್ಮನರ ಸೈನ್ಯದ ಮನೋದಾರ್ಢ್ಯ. ಅಂತರಂಗವನ್ನು ನೋಡಿ ಬಹಿರಂಗಕ್ಕೆ ಬರುವುದು ಒಳ್ಳೆಯದು.

ಜರ್ಮನಿಯ ಸೈನಿಕರಲ್ಲಿ ಯುದ್ಧಕುಶಲತೆ ಇರಬಹುದು—ಇದೆ. ಆದರೆ ಮನೋದಾರ್ಢ್ಯ ಕಡಿಮೆ. ಯಾವುದೇ ಸರ್ವಾಧಿಕಾರಿಯ ಆಡಳಿತದಲ್ಲಿಯೂ ಕಾಣಬಹುದಾದ ಡೊಗರು ಇದು. ನಾಜೀತತ್ತ್ವವನ್ನು ಮಾನ್ಯಮಾಡದವರನೇಕರು ಸೈನ್ಯದಲ್ಲಿದ್ದರೆ, ಅಂತಹರು ಸಿಕ್ಕಾಗ ಅವರನ್ನು ಗುಂಡುಹಾಕಿದ್ದುಂಟು. ಇದುವೆ ತಿಳಿಸುವುದು, ಸೈನ್ಯದಲ್ಲಿ ನಾಜೀತತ್ತ್ವವನ್ನು ಮಾನ್ಯಮಾಡದ ಜನರೂ ಇರುವರೆಂಬುದನ್ನು. ಇದೇ ಸಾಕು ಜರ್ಮನರ ಮೂಗು ಮುರಿಯಲು. ಇದರ ಅರಿವು ನಾಜಿಗಳಿಗಿಲ್ಲವೆಂದಲ್ಲ; ಸೈನಿಕರಲ್ಲಿ ಬಹುಜನರು ತರುಣರೇ ಇದ್ದಾರೆ. ಹಿರಿಯರಿಗೆ ನಾಜೀ ರಾಜ್ಯವಲ್ಲದೆ ಬೇರೆ ರಾಜ್ಯದಾಡಳಿತವನ್ನು ನೋಡಿದ ಅನುಭವವಿರುವುದು; ಆದರೆ ತರುಣರು ಹಾಗಲ್ಲ. ಅವರ ವಯಸ್ಸು ಚಿಕ್ಕದಿರುವುದರಿಂದ, ಅವರ ಮುಂದೆ ಬೆಳೆದುದು ಒಂದೇ—ಅದು ನಾಜೀರಾಜ್ಯ. ಎಂತಲೆ ಹಿಟ್ಲರನೆ ಅವರ ಅಧಿದೈವತ. ಅವರ ಉತ್ಸಾಹವೆಲ್ಲವೂ ಅವನ ಸ್ವಾಧೀನ. ತರುಣರ ಸುತ್ತುಮುತ್ತಲಿನ ವಾತಾವರಣವು ಸೈನ್ಯಮಯ, ಅವರ ವಾಸಸ್ಥಳಗಳು ಒಳ್ಳೊಳ್ಳೆಯ ಸೇನಾಪತಿಗಳ ಚಿತ್ರಗಳಿಂದ ತುಂಬಿರುವುವು. ಅಲ್ಲದೆ ಆಗಾಗ ಯೋಜಿಸುತ್ತಿರುವ ನಾಜೀ ನಾಟಕಗಳಿಂದ ತರುಣರು ನಾಜಿತ್ವವನ್ನು ಕಾವಾಡಿಕೊಂಡಿದ್ದಾರೆ. ಇದೆಲ್ಲ ಸರಿಯಾಗಿದೆ. ಆದರೆ ಡೊಳ್ಳುಬೀಳುತ್ತಿದೆ ಜುಕ್ಕಾಣಿ ಹಿಡಿಯುವುದರಲ್ಲಿ. ಸೈನಿಕರು ಸಜ್ಜಾಗಿರಬಹುದು, ಅವರನ್ನು ಸಾಗಿಸಲು ಬೇಕು ಸೇನಾಪತಿಗಳು. ಎಷ್ಟೇ ಲಾಕ್ಷಣಿಕ ವಿದ್ಯೆಯನ್ನು ಕೊಟ್ಟರೂ ಅನುಭವ, ವಯಸ್ಸು ಇವುಗಳಿಂದ ಬರುವ ಜ್ಞಾನವು ಅವರಿಗೆ—ತರುಣರಿಗೆ—ಬಾರದು. ಹಿರಿಯರು, ಅನುಭವಿಕರಾದ ಸೇನಾಪತಿಗಳು ಹದಿನಾರು ಆಣೆಯ ನಾಜಿಗಳಲ್ಲ. ಇಲ್ಲಿದೆ ತೊಂದರೆ. ಜರ್ಮನ್ ಸೈನ್ಯವು ಬಹಳ ಹೊತ್ತಿನ ತನಕ ತಡೆಯದು; ಅದರ ಶಿಕ್ಷಣವೇ ಹಾಗಿದೆ. ಬರುವ ವಿಂಚನ್ನೊಮ್ಮೆ ತಡೆದುಕೊಂಡರೆ ಸರಿ; ಮುಂದೆ ನೀವೇ ಗುಡುಗಬಹುದು.

ಜರ್ಮನಿಯು ಇಂಗ್ಲೆಂಡಿನ ಮೇಲೆ ಅಭಿಯೋಗ ಮಾಡಲು ಅವಶ್ಯವಾಗಿ ಬೇಕು ಹಡಗುಪಡೆ. ಸೈನ್ಯಶಿಕ್ಷಣದಲ್ಲಿ ತೋರಿದ ಮನಸ್ಸು-ಚಾಣಾಕ್ಷತೆಗಳನ್ನು ಅವರು ಹಡಗುಪಡೆಯಲ್ಲಿ ತೋರಿಲ್ಲ. ಬ್ರಿಟಿಶರು ದ್ವೀಪದಲ್ಲಿರುವುದರಿಂದ ಹಡಗುಪಡೆ ಅವರ ಜೀವಿತದ ಮುಖ್ಯ ಸಾಧನವಾಗಿದೆ. ಆದಕ್ಕೆ ಅವರು ನೆಲಕ್ಕಿಂತ ಜಲದಲ್ಲಿಯೆ ಹೆಚ್ಚು ತನ್ಮಯರು—ಕುಶಲರು. ಹಡಗುಪಡೆಯ ಸಹಾಯ ಸಿಕ್ಕಬಹುದೆಂದು, ಜರ್ಮನಿಯು ಇಟಲಿಯನ್ನು ಸಾಹಾಯ್ಯಕವೆಂದು ಸೇರಿಸಿಕೊಂಡಿತು; ಆದರೆ, ಇಟಲಿಯ ಹಡಗುಪಡೆ ಬ್ರಿಟಿಶ್ ಹಡಗುಪಡೆಯ ಮುಂದೆ ತನ್ನ 'ಟ' ಕಳೆದುಕೊಳ್ಳುವಂತೆ (ಇಲಿ) ಇಂಗ್ಲೆಂಡಿನ ಮೇಲೆ ಅಭಿಯೋಗಮಾಡುವ ಪ್ರಯತ್ನಗಳು ಈ ಹಿಂದೆ ಆಗಿವೆ. ಇಂಗ್ಲೆಂಡಿನ ಮೇಲೆ ಅಭಿಯೋಗಮಾಡಲು ಶಕ್ಯ

ಹಾಗಬೇಕಾದರೆ ಅವರಿಗಿಂತ ಹೆಚ್ಚಿನ ಹಡಗುಪಡೆ ಇದ್ದವರಿಗೆ ಮಾತ್ರ ಸಾಧ್ಯವು. ಸ್ಪೇನ್ ದೇಶದವರು 'ಆರ್ಮಾಡಾ' ದ ಜೋರಿನಿಂದ ಇಂಗ್ಲೆಂಡಿನ ಮೇಲೆ ಬೀಳಬೇಕೆಂದಾಗ 'ಆರ್ಮಾಡಾ' ಇದು ಕಾರ್ನೋರ್ಡದಲ್ಲಿ ಮರೆಯಾಯಿತು. ನೆಪೋಲಿಯನ್ನನು ನೆಲದ ಮೇಲೆ ಜಯ ಸಂಪಾದಿಸಿ, ಸಮ್ರಾಟನಾದ ಮೇಲೆ ಇಂಗ್ಲೆಂಡಿನ ಮೇಲೆ ಅಭಿಯೋಗಮಾಡುವುದಕ್ಕೆ ಹೊಂಚುಹಾಕ ತೊಡಗಿದನು. ಆಗ ಅವನಿಗೆ ನೀರಿನ ಮೇಲೆ ಸಾಗಬೇಕಾಗುವುದರ ಅರಿವು ಬಂದಿತು. ಹಡಗುಪಡೆಯ ಸಿದ್ಧತೆಯನ್ನು ಮಾಡತೊಡ ಗಿದನು. ಅಲ್ಲದೆ ಫ್ರಾನ್ಸ್‌ನಿಂದ ಇಂಗ್ಲೆಂಡಿಗೆ ಸುರಂಗಮಾರ್ಗ ದಿಂದ ಸೈನ್ಯವನ್ನು ಸಾಗಿಸಬೇಕೆಂದೂ ಮಾಡಿದನು. ಆದರೆ ನೆಲದ ಮೇಲೆ ಹಿರಿಯನಾದವನು ಜಲದ ಮೇಲೆ ಕಿರಿಯನೇ. ಅಂತೆಯೆ 'ಜಲ' ದ ಮೇಲೆ ಸ್ವಾಮಿತ್ವವನ್ನು ಇಟ್ಟುಕೊಂಡವರು ನೆಲದ ಮೇಲೆ ಹಾಗೆಹಾಗೆಯೆ. ಎರಡೂ ಸಿದ್ಧತೆಯನ್ನು ಮಾಡಿಕೊಂಡಾ ಗಲೆ ಯಾವುದೇ ದೇಶವು ದುರ್ಭೇದ್ಯವಾಗುವುದು.

ಇಂದು ಜರ್ಮನರು, ನೆಪೋಲಿಯನ್ನನಂತೆ ನೆಲದ ಸ್ವಾಮಿತ್ವ ವನ್ನು ಪಡೆದಿದ್ದಾರೆ; ಆದರೆ ಜಲಮಾರ್ಗದ ಜಾಣ್ಮೆ ಇಲ್ಲದ ಮೂಲಕ, ಜಲಮಾರ್ಗಗಳಿಗಿದ್ದ ತಾಳ್ಮೆ ಇರದ ಮೂಲಕ, ಇಂಗ್ಲೆಂ ಡನ್ನು ಸೇರಲು ಅಸಾಧ್ಯವಾಗ ತೊ ಡ ಗಿ ದೆ. ವಿಮಾನದಿಂದ ಸಿಡಿಗುಂಡುಗಳನ್ನು ಒಗೆದು ಜನತೆಯಲ್ಲಿ ಆವರು ಹಾಹಾಕಾರ ವನ್ನುಂಟು ಮಾಡಬಹುದು; ಆದರೆ ಬಿಗುಟು ಇದ್ದ ಜನತೆಗೆ ಅದು ಏನನ್ನೂ ಮಾಡಲರಿಯದು.

ಜರ್ಮನರ ಸ್ಥಿತಿಯೇನು? ಬ್ರಿಟಿಶರ ಗತಿಯೇನು? ಎರಡನ್ನೂ ವಿಚಾರಿಸುವಾಗ, ಜರ್ಮನರ ದುಸ್ಥಿತಿಯು ಬ್ರಿಟಿಶರ ಸದ್ಗತಿಯು ಎಂದು ತಿಳಿದುಬರುವುದು. ಜರ್ಮನರ ಸ್ಥಿತಿಯೇನಿದೆ ಈಗ?



ಚದುರಿ!

ಶ್ರೀ. ಕೃಷ್ಣಮೂರ್ತಿ ಪುರಾಣಿಕ ಬಿ. ಎ., ಬಿ. ಟಿ.

ನಗನಗತ ಕವಿಯ ರಸಗಯ್ಯ ಹಿಡಿದ ಚದುರೀ ।
ನಗೆಯ ನಿಲ್ಲಿಸಬೇಡ,
ಬಗೆಯ ಹುಲ್ಲಿಸಬೇಡ,
ನೆಗೆತ ತಪ್ಪಿದ ಹೆಜ್ಜೆ ಹಾಕಬೇಡ ।
ನನ್ನ ತಗುಬಗೆಯಲ್ಲಿ
ನಿನ್ನ ನಗೆಮೊಗವಲ್ಲಿ
ಹೊನ್ಸರಳನರಳಿಪುದನೆನೆಯ ಬೇಡ ॥ ನಗನಗತ ॥

ಕುಣಿ ಕುಣಿದು ಕವಿಯ ಮನಸೆಳೆದು ನಿಂತ ಚದುರೀ ।
ಧಣಿವ ಲೆಕ್ಕಿಸಬೇಡ,
ಮಣಿತ ಮುಗ್ಗಿಸಬೇಡ,
ಕುಣಿತಕ್ಕೆ ಮುಗಿತಾಯವೆನ್ನಬೇಡ ।
ಬಾಳುಗೀಳಿನ ಲೆಕ್ಕ-
ವೇಳು ಬೀಳಿನ ದುಕ್ಕ
ಕುಣಿತಕ್ಕೆ ಕಾಲ್ತೊಡಕು ಎನ್ನಬೇಡ ॥ ಕುಣಿಕುಣಿದು॥

ಸುಖದಲ್ಲಿ ದುಃಖದಲಿ ನನ್ನವಳು ನೀನು ಚದುರೀ ।
ನಕ್ಕವರ ಜತೆಯಲ್ಲಿ
ನಕ್ಕಷ್ಟೆ ಉಳಿತಾಯ;
ಮಿಕ್ಕ ಕಾಲಿನ ಚಿಂತೆ ಸಂತೆಗಿರಲಿ ।
ನಕ್ಕು ನಲಿವುಯುದೆಲ್ಲ
ಸಿಕ್ಕವರ ಸೊತ್ತಲ್ಲ;
ನಕ್ಕಷ್ಟೆ ನಮ್ಮದಿದೆ ಜೀವದುಸಿರ ॥ ಸುಖದಲ್ಲಿ ॥

"ದಿ ಬಿಗ್ ಬೆನ್"

★

ಜಯಂತಿಯ ಜೇನ್ನೊಣದ ಸಂಗ್ರಹ

ಯಾವುದಾದರೊಂದು ದೇಶದ ಹೆಸರನ್ನು ಸುರಿದರೆ, ಆ ದೇಶದ ಬಗೆಗೆ ವಿಚಿತ್ರವಾದೊಂದು ವಿಕಾರವು ಮನದಲ್ಲಿ ಮೂಡುವುದು. ನಾವು ಆ ದೇಶವನ್ನು ನೋಡಿದ್ದರೆ, ಆ ಜನತೆ, ಅಲ್ಲಿಯ ಕಟ್ಟಡಗಳು, ಆಟ-ಪಾಟ-ನೋಟಗಳು ಕಣ್ಣಮುಂದೆ ಬರುವವು. ಆ ದೇಶದ ಪ್ರತಿನಿಧಿ ಎಂದು ಸಾರುತ್ತ, ಯಾವುದಾದರೊಂದು ವಸ್ತುವು ಮುಂಬರುವುದು ಖಂಡಿತ. ಅಫ್ರಿಕಾ ಎಂದೊಡನೆ ನಿಗ್ರೋ ಜನರು, ಅಮೇರಿಕಾ ಎಂದೊಡನೆ ಎತ್ತರ ಕಟ್ಟಡಗಳು (sky serapers), ಬ್ರಹ್ಮದೇಶವೆಂದೊಡನೆ ಪಗೋಡಾಗಳು ಕಣ್ಣಮುಂದೆ ಬರುವಂತೆ, ಇಂಗ್ಲಂಡಿನ ಹೆಸರೆತ್ತಿದಕೂಡಲೆ ವೆಸ್ಟ್‌ಮಿನಿಸ್ಟರ್ ಕಾನೂನು ಸಭೆಯ ಕಟ್ಟಡವು ನೆನಪಿಗೆ ಬರುವುದು. ಮುಖ್ಯವಾಗಿ ಆ ಕಟ್ಟಡದ ಒಂದು ಭಾಗ ಎಲ್ಲರ ಸ್ಮೃತಿಪಟದಮೇಲೆ ಮೂಡುವುದು; ಅದುವೆ ಆ ಕಟ್ಟಡದ ಗೋಪುರ— ಗಡಿಯಾಳ "ಬಿಗ್ ಬೆನ್."

ಅದು ಕೇವಲ ಗಡಿಯಾಳವಷ್ಟೆ ಅಲ್ಲ; ಬ್ರಿಟನ್ನಿನ ದನಿಯಂತಿದೆ. ಬ್ರಿಟಿಶ್ ಬ್ರಾಡ್‌ಕಾಸ್ಟಿಂಗ್ ಸಂಸ್ಥೆಯವರು ವೇಳೆಯನ್ನು ಆ ಗಡಿಯಾಳದ ಮೂಲಕ ಹೇಳುವುದರಿಂದ, ಇಡಿಯೆ ಜಗತ್ತಿಗೆ ಆ ಗಿಟನ್ನುಗಳ ಗಂಟೆ ಬಾರಿಸುವುದು ಕೇಳಬರುತ್ತದೆ. ಲಕ್ಷಾವಧಿ ಆಕಾಶವಾಣಿ ಕೇಂದ್ರಗಳಿಗೆ, ಬ್ರಿಟನ್ನು "ಬಿಗ್‌ಬೆನ್" ಮೂಲಕ ಸಂದೇಶವನ್ನು ಹರಡುತ್ತಲಿದೆ.

ಬಿಗ್‌ಬೆನ್ನಿನ ಹೆಸರಿನೊಂದಿಗೆ ಬರುವುದು ಸರ್ ಬೆಂಜಾಮಿನ್ ಹಾಲ್ ಅವರ ಹೆಸರು. ಈಗಿನ ಕಾನೂನುಮಂಡಲಗಳ ಕಟ್ಟಡವನ್ನು ಕಟ್ಟಿಸುವ ಕಾರ್ಯದಲ್ಲಿ ಪ್ರಥಮ ಕಮಿಶನರರಾಗಿ ಕೆಲಸ ಮಾಡಿದರಿವರು; ಮೊದಲಿನ ವೆಸ್ಟ್‌ಮಿನಿಸ್ಟರ್ ಅರಮನೆಯು ಗಿಲಖಿಳರಲ್ಲಿ ಬೆಂಕಿಗೆ ಆಹುತಿಯಾಯಿತು. ಮುಂದಿನ ೬ ವರುಷಗಳ ವರೆಗೆ ಆ ಸ್ಥಳವು ಬಯಲಾಗಿಯೆ ಇತ್ತು. ಈಗಿನ ಕಟ್ಟಡದ ಹಂಚಿಕೆಯು ಸಿದ್ಧವಾಯಲ್ಲಿತ್ತು. ಅನೇಕ ಕಟ್ಟಡಗಳನ್ನು ಕಟ್ಟಿಸಿ ಪ್ರಖ್ಯಾತಿಯನ್ನು ಪಡೆದ ಸರ್ ಚಾರ್ಲ್ಸ್ ಬಾರಿ ಅವರ ಹಂಚಿಕೆಯು ಸ್ವೀಕೃತವಾಗಿ, ಈಗಿನ ಕಟ್ಟಡದ ಶಂಕುಸ್ಥಾಪನೆಯು ಗಿಲಳಂ ರಲ್ಲಿ ಆಗಿ, ಕಟ್ಟಡ ಮುಗಿಯಬೇಕಾದರೆ ೧೭ವರುಷಗಳು ಬೇಕಾದುವು.

ಆ ಭಯಂಕರ ಬೆಂಕಿಯ ಆನಾಹುತದಿಂದ ಪಾರಾಗಿ ಉಳಿದುದು ವೆಸ್ಟ್‌ಮಿನಿಸ್ಟರ್ ಸಭಾಗೃಹವು. ಅದನ್ನು ೧೦೯೭ರಲ್ಲಿ ಎರಡನೆಯ ವಿಲಿಯೆಮ್ ಕಟ್ಟಿಸಿದನು. ಈ ೮೦೦ ವರುಷಗಳ ಅವಧಿಯಲ್ಲಿ ಆ ಸಭಾಗೃಹವು, ಬ್ರಿಟನಿನ ಇತಿಹಾಸದ ಅನೇಕ ನೋಟಗಳನ್ನು ಕಂಡಿದೆ: ಇದೇ ಸಭಾಮಂದಿರದಲ್ಲಿಯೆ ಎರಡನೆಯ ರಿಚರ್ಡನು ೧೦,೦೦೦ ಪ್ರಜೆಗಳಿಗೆ ಸವಿಯೂಟ ಮಾಡಿಸಿದನು. ಮೊದಲನೆಯ ಚಾರ್ಲ್ಸನು ತನ್ನ ಮರಣದಂಡನೆಯ ತೀರ್ಪನ್ನು ಇಲ್ಲಿಯೆ ಕೇಳಿದನು. ಮೊದಲನೆಯ ಚಾರ್ಲ್ಸನ ಕಡುವೈರಿಯಾದ ಆಲಿವ್ಹರ ಕ್ರಾಮ್‌ವೆಲನು "ಇಂಗ್ಲೆಂಡಿನ ಸಂರಕ್ಷಕ"ಎಂಬ ಪದವಿಯನ್ನು ಇಲ್ಲಿಯೆ ಪಡೆದುದು ಅಲ್ಲದೆ, ಎರಡನೆಯ ಚಾರ್ಲ್ಸನು ಅಧಿಕಾರಾರೂಢನಾದ ಮೇಲೆ, ಇದೇ ಸಭಾಮಂದಿರದಲ್ಲಿ ಅಂದು ಕ್ರಾಮ್‌ವೆಲ್ಲನ ಸಂಡವು ಪ್ರದರ್ಶಿತವಾಯಿತು.

ಈ ಸಭಾಮಂದಿರ ೧೦೦ ಅಡಿ ಎತ್ತರ ಗೋಪುರದ ಮೇಲೆ ಇರುವುದು "ಬಿಗ್ ಬೆನ್". ಇಡಿ ಜಗತ್ತಿನಲ್ಲಿಯೆ ವೇಳೆಯನ್ನು ತೋರಿಸುವ—ಗಂಟೆಬಾರಿಸುವ—ಗಡಿಯಾಳವೆಂದು ಪ್ರಸಿದ್ಧಿ ಪಡೆದಿದೆ. ದಿನಕ್ಕೆ ಎರಡುಸಲ ಗ್ರೀನಿಚ್‌ದ ರಾಯರ ವೇಧಶಾಲೆಯಿಂದ ವೇಳೆಯು ಬರುತ್ತಿದ್ದರೂ, ಬದಲುಮಾಡುವ ಪ್ರಸಂಗವೇ ಬಂದಿಲ್ಲ. ಬೇಸಿಗೆ ಕಾಲದಲ್ಲಿಮಾತ್ರ ಹವಾಮಾನಕ್ಕೆ ಅನುಕೂಲವಾಗುವಂತೆ ಅದನ್ನು ಸ್ವಲ್ಪ ಸರಿಪಡಿಸಬೇಕಾಗುತ್ತದಂತೆ. ವಾರದಲ್ಲಿ ಮೂರುಸಲ ವಿದ್ಯುತ್‌ಶಕ್ತಿಯ ಸಹಾಯದಿಂದ ಅದಕ್ಕೆ ಕೀಲಿಕೊಡುವರು. ಒಂದುದಿನ ಆ ಗಡಿಯಾಳ ನಿಂತುಬಿಟ್ಟರೆ, ಲಂಡನಿನಲ್ಲಿ ನಡೆಯುವ ಅಲ್ಲೋಲಕಲ್ಲೋಲವು ಕಲ್ಪನೆಗೆ ಕೂಡ ಬಾರದು.

ಚತುರ್ಮುಖ ಬ್ರಹ್ಮನಂತೆ ಇದಕ್ಕೂ ನಾಲ್ಕು ಮುಖಗಳಿವೆ. ಪ್ರತಿಯೊಂದು ಮುಖದ ವ್ಯಾಸವು ೭೩ ಫೂಟು ಇದೆ. ತಾಸುಗಳನ್ನು ತಿಳಿಸುವ ಅಂಕೆಗಳು ಎಂಟು ಫೂಟು ಎತ್ತರವಿವೆ. ಮಿನೀಟಿನ ಮುಳ್ಳು ೧೪ ಫೂಟು ಇದೆ. ಅದರ ತುದಿಯು ವರುಷಕ್ಕೆ ೧೦೦ ಮೈಲು ಪ್ರವಾಸ ಮಾಡಿದಂತಾಗುವುದಂತೆ. ಅದರ ಗಂಟೆಯು ೧೩ ಟನ್ನುಗಳಷ್ಟು ಭಾರವಾಗಿದೆಯಂತೆ. ಅದರ ಬೆಲೆ ಸುಮಾರಾಗಿ ೭೦೦೦ ಪೌಂಡುಗಳೆಂದು ಎಣಿಸಲಾಗಿದೆ.

ಆ ದೊಡ್ಡ ಗಡಿಯಾರವನ್ನು ಅಲ್ಲಿ ಸ್ಥಾಪಿಸಿ ನೂರುವರುಷಗಳಾಗುತ್ತ ಒಂದುವು, ಅಂದು ಹೇಗಿತ್ತೋ ಇಂದಿಗೂ ಹಾಗೆಯೆ ಇದೆ. ಆ ಸಭಾಗೃಹಕ್ಕೆ ಅನೇಕರು ಬಂದು ಹೋಗಿರಬಹುದು. ಆ ಸಭಾಗೃಹವು ಬದಲಾಗಿಲ್ಲ— ಆ ಗಡಿಯಾರವು ಬದಲಾಗಿಲ್ಲ. ಎರಡೂ "ಸ್ವಾತಂತ್ರ್ಯ"ವನ್ನೆ ಮುಂದುವರಿಸಿವೆ.

ದೇವಸ್ಥಾನದ ದರೋಡೆ

(ಚಿಕ್ಕ ನಾಟಕ)

ಶ್ರೀ. ಕೆ. ಕೆ. ಶೆಟ್ಟಿ,
ಸಂಪಾದಕ, 'ನವಯುಗ'

★

(ಶಿವಪುರ ಎಂಬುದೊಂದು ದೊಡ್ಡ ಹಳ್ಳಿ. ರಾಯರ ಮನೆಯೆಂಬುದು ಆ ಊರಲ್ಲಿ ದೊಡ್ಡದು, ಪ್ರಸಿದ್ಧವಾದುದು. ಮನೆಯ ಮಾಳಿಗೆಯ ಚಿಪ್ಪರಮಂಜವೊಂದರ ಮೇಲೆ, ಪ್ರಕಾಶನು ಮಲಗಿರುವನು. ಅತನ ಹೆಂಡತಿ ಸುಲೋಚನೆಯು, ಪ್ರಕಾಶನ ತಲೆಗೆ ಕಟ್ಟಲ್ಪಟ್ಟಿದ್ದ ಬ್ಯಾಂಡೇಜನ್ನು ಮೆಲ್ಲಗೆ ಬಿಡಿಸಿ, ಆತನನ್ನೆಬ್ಬಿಸಿ ದೊಡ್ಡ ತಲೆದಿಂಬೊಂದರ ಮೇಲೆ ಒರಗಿಸಿ, ಬೀಸಣಿಕೆಯಿಂದ ಗಾಳಿ ಹಾಕುತ್ತಿರುವಳು. ಪ್ರಕಾಶನು ಆಲೋಚನಾಮಗ್ನನಾಗಿರುವನು.)

★

ಸುಲೋಚನಾ:— ಸರಿ, ಇಷ್ಟಾದುದಕ್ಕಾಯಿತು ದೇವರ ದಯೆಯಿಂದ! ಇದಕ್ಕಿಂತ ಹೆಚ್ಚಾಗುತ್ತಿದ್ದರೆ ಏನು ಮಾಡಲೇಕಿತ್ತು?

ಪ್ರಕಾಶ:— ಸುಡುಗಾಡಿಗೊಯ್ದು ಸುಡಬೇಕಿತ್ತು! ಸುತ್ತೇನು ಮಹಾಡುವುದು?

ಸುಲೋಚನಾ:— (ಒಮ್ಮೆಯೇ ಹರಿದು ಬಂದ ಕಣ್ಣೀರನ್ನು ಸೆರಗಿಂದೊರಸಿ, ಗದ್ಗದಕಂರಳಾಗಿ) ಹಾಗಾದರೆ ಸಾವನ್ನೇ ನೀವು ಹಾರಯಿಸುತ್ತಿರುವಿರಾ?

ಪ್ರಕಾಶ:— ಸುಲೂ, ಕ್ಷಮಿಸು! ನೀನು ಯಾವಾಗಲೂ ಸಾವಿನ ಭೀತಿ ತೋರುವುದರಿಂದ ಬೆಸರುಗೊಂಡು, ನಿನ್ನ ಮನಸ್ತೋಷವುವ ಮಾತನ್ನಾಡಿದೆ. ಒಂದಲ್ಲೊಂದು ದಿನ ಸಹಜವಾಗಿ ಸಹೆಯುವ ವಿದ್ಯಮಾನವಲ್ಲವೇ ಸಾವು ಸುಲೋಚಾ? ಯಾವ ಸಾಹಸದ ಕಾರ್ಯ ಕೈಕೊಳ್ಳುವಾಗಲೂ ಸಾವನ್ನು ಮುಂದಾಗಿ ನೀಕ್ಷಿಸಿ, ಅಂಜಿ ಹಿಂಜರಿಯುವುದು ಹೇಡಿತನವಲ್ಲವೇ? ಹೆಜ್ಜೆ ಹೆಜ್ಜೆಗೆ ಪ್ರಾಣಾಪಾಯದ ಪಲ್ಲವಿ ಹಾಡಿ, ಪತಿಯನ್ನು ಅಧೀರನನ್ನಾಗಿ ಮಾಡುವುದು ವೀರಸತಿಗೆ ಒಪ್ಪದು ಸುಲೋಚನಾ! →

ಸುಲೋಚನಾ:— ದಗದಗಿಸುವ ಬೆಂಕಿಯುಲ್ಲಿಯೆ ಹಾರಲು ನೀವು ಮುಂದಾಗಿರುವಾಗ, ಎಂತಹ ವೀರಸತಿಯಿದ್ದರೂ ಧೈರ್ಯ ತಾಳುವುದಾದರೂ ಹೇಗೆ?

ಪ್ರಕಾಶ:— ಸಂದರ್ಭಬಂದಾಗ ಧಗಧಗಿಸುವ ದಾವಾನಲ ಪಲ್ಲಿಯೂ ಹಾರಬೇಕು; ಅಗಾಧವಾದ ಜಲಪ್ರವಾಹದಲ್ಲಿಯೂ ಈಜುಕಬೇಕು; ಗಗನದಂತರಾಳಕ್ಕೂ ಏರಿಹೋಗಬೇಕು. ಒಮ್ಮೆ ಮಲ್ಲದೆ ಹಲವು ಸಾರಿ ಬರಲಾರದು ಸಾವು! ಎಲ್ಲರೂ ಒಮ್ಮೆ ಸಾಯಬೇಕೆಂಬುದು ಅನಿವಾರ್ಯ! ಹೆಜ್ಜೆ ಹೆಜ್ಜೆಗೂ ಸಾವಿಗಂಜಿ ಅಂಜರಿಯುವವರನ್ನು, ಸಾವಿರ ವರ್ಷ ಬದುಕಲು ಬಿಡುವುದಿಲ್ಲದು; ಅವನೋಲಿಣಿದಕ್ಕಂಜಿ ಪ್ರತಿನಿತ್ಯವೂ ಸಾಯುವ ಜೀವನ್ಮೃತಾವಸ್ಥೆಯಲ್ಲಿ ಆರ್ಧವಿದೆಯೇ ಸುಲೋಚನಾ? ಅದೃಷ್ಟವಾದಿಗಳು ನಾವು. ಮೊದಲೇ ನಿಶ್ಚಯವಾಗಿರುವುದು.. ನಮ್ಮ ಸಾವಿನ ಸಮಯ. ಎಂದ ಮೇಲೆ ಮೃತ್ಯುವಿನೆದೆ ಮೆಟ್ಟಿ, ಸಾಹಸಕ್ಕೆ ಹುರಿಗೊಳ್ಳುವ ತೇಜಸ್ವಿಗಳಾಗಬೇಕು ನಾವು. ಪೌರುಷವಂತರಾಗಿ, ಸತ್ವಶಾಲಿಗಳಾಗಿ ಬಾಳಿ, ಜನ್ಮಸಾರ್ಥಕಗೊಳಿಸಬೇಕೆಂದು ಸಾರುವುದಿಲ್ಲವೆ ನಮ್ಮ ಧರ್ಮಶಾಸ್ತ್ರಗಳು?

ಸುಲೋಚನಾ:— ನೀವು ನಮ್ಮ ಧರ್ಮಶಾಸ್ತ್ರಗಳಿಗನುವಾಗಿ ನಡೆದರೆ, ನಿಮ್ಮಪಡಿನೆಳವಾಗಿ ನಡೆಯಲು ನಾನು ಸದಾಸಿದ್ಧಳಿರುವೆನು. ಆದರೆ....

ಪ್ರಕಾಶ:— ಅದೇಕೆ ಸಂದೇಹ? ಹೇಳಿಬಿಡು..ಮನದಿಚ್ಛೆ ಇದ್ದುದನ್ನು!

ಸುಲೋಚನಾ:— ದೇವರ ಪೂಜೆ ಪುನಸ್ಕಾರಗಳನ್ನೆಲ್ಲಾ ನಿಲ್ಲಿಸಿ, ದೇವಾಲಯದ ಧನ-ಚಿನ್ನಾಭರಣಗಳನ್ನೆಲ್ಲಾ ಬಡಬಗ್ಗರಿಗಾಗಿ ವಿನಿಯೋಗಿಸಬೇಕೆಂದು ಸಾರುವುವೇ ನಮ್ಮ ಧರ್ಮಶಾಸ್ತ್ರಗಳು?

ಪ್ರಕಾಶ:— ದೇವರು, ದೇವಾಲಯ, ದೇವಪೂಜೆ-ಪುನಸ್ಕಾರ, ದೇವರಿಗೆ ಹರಕೆ, ಕಾಣಿಕೆ ಮೊದಲಾದುವುಗಳ ಉದ್ದೇಶವು ಸಮಾಜ-ಕಲ್ಯಾಣ ಮತ್ತು ಜನಕ್ಷೇಮವಲ್ಲವೆ? ಆದನ್ನು ಕೆಲವುಂದಿ ಸ್ವಾರ್ಥಿಗಳು ತಮ್ಮ ಸ್ವಾರ್ಥಸಾಧನೆಯ ಉಪಕರಣಗಳನ್ನಾಗಿ ಮಾಡಿಕೊಂಡು ಸಮಾಜಘಾತುಕವಾಗಿ ನಡಸಿದರೆ, ಅವನ್ನು ನಾಶಮಾಡದೆ ಮತ್ತೇನು ಮಾಡುವುದು ಸುಲೋಚನಾ? ಒಂದೊಮ್ಮೆ ಕಳೆಯನ್ನೆಲ್ಲಾ ಕಿತ್ತು ಹಾಕಿ, ಸರಿಯಾಗಿ ಉತ್ತು, ಕ್ಷೇತ್ರವನ್ನು ಸಿದ್ಧಮಾಡಿ ಕೊಡಬೇಕಲ್ಲವೇ ಹೊಸ ಬೀಜವನ್ನು ಬಿತ್ತಲಿಕ್ಕೆ?

ಸುಲೋಚನಾ:— ನಿಮ್ಮೊಡನೆ ವಾದಿಸಲು ಸಾಧ್ಯವಿಲ್ಲ ನನಗೆ. ಏನು ಬೇಕಾದರೂ ಮಾಡಿರಿ; ಪ್ರಾಣಕ್ಕೆ ಎರವಾಗುವಂತಹ ಕೆಲಸ ಮಾತ್ರ ಮಾಡಬೇಡಿ! ನಿಮ್ಮ ಉದ್ದೇಶಕ್ಕೇನೇ ಆದರೂ ಭಂಗವಾಗುವುದಿಲ್ಲವೇ? ಮೊನ್ನೆಯ ಗಲಾಟೆಯಲ್ಲಿ ನಿಮ್ಮ ಪ್ರಾಣವೇ ಹೋಗುವಂತಾಗಿದ್ದರೆ?

ಪ್ರಕಾಶ:— ಸಾರ್ಥಕವಾಗುತ್ತಿತ್ತು ನನ್ನ ಜನ್ಮ! ನೋಡು, ಮೊನ್ನೆ ನಾನು ದೇವಸ್ಥಾನದ ಪ್ರಾಂಗಣದಲ್ಲಿ ಅರ್ಜಕರಿಂದಲೆ ಕೊಲ್ಲಲ್ಪಡುತ್ತಿದ್ದೆನಾದರೆ, ನಿಮ್ಮಂಧವರ ಭ್ರಾಂತಿಯ ಮುಸುಕೂ

ಒಮ್ಮೆಯೇ ಹರಿದು ಹೋಗುವಷ್ಟು ಬಟ್ಟಬಯಲಾಗುತ್ತಿತ್ತು— ಈಗಣ ನೀತಿ-ಧರ್ಮಗಳ ನಿಜವೇಷ. ನನ್ನ ಬಲಿದಾನದಿಂದ ನನಗಿಂತಲೂ ಉತ್ಸಾಹಿಗಳಾದ ಹಲವರು ಮುಂದೆ ಬಂದು, ನನ್ನ ಸ್ವಾಧಿನವನ್ನಲಂಕರಿಸುತ್ತಿದ್ದರು. ನೀನೆ ವೀರಸತಿಯಾಗಿ ನನ್ನ ಜೀವಿತದ ಉದ್ದೇಶವನ್ನು ನೆರವೇರಿಸುವುದಕ್ಕೆ ದೀಕ್ಷಾಬದ್ಧಳಾಗುತ್ತಿದ್ದೆ. ಆಗ..

← **ಸುಲೋಚನಾ:**— ಹೆಚ್ಚು ಮಾತನಾಡದೆ ಶಾಂತಚಿತ್ತರಾಗಿ ಮಲಗಿರಿ; ಜ್ವರವು ಮರುಕೊಳಿಸಬಹುದು!

ಪ್ರಕಾಶ.— ಒಳಗೂ ಹೊರಗೂ ಬೇಗೆಯು ನನ್ನೆದೆಯನ್ನು ಸುಡುತ್ತಿರುವಾಗ, ಶಾಂತಚಿತ್ತನಾಗಿ ಹೇಗೆ ಮಲಗಲಿ ನಾನು? ಈ ಬೆಂಕಿಯನ್ನು ತಣಿಸದೆ ಹೀಗೆಯೇ ಬಿಟ್ಟರೆ ನನ್ನನ್ನು, ನಿನ್ನನ್ನು, ನಿನ್ನ ನೀತಿ-ಧರ್ಮ-ದೇವ-ದೇವಾಲಯಗಳನ್ನೆಲ್ಲಾ ಅದು ಸುಟ್ಟು ಭಸ್ಮಮಾಡದಿರುವುದೇ? ನಾನದನ್ನು ತರಿಸಲು ಯತ್ನಿಸುವಾಗ 'ಹಾರುವಿರಿ ಬೆಂಕಿಗೆ!' ಎನ್ನುವೆ ನೀನು.

ಸುಲೋಚನಾ:— ಯಾವ ಬೆಂಕಿ? ಸ್ಪಷ್ಟವಾಗಿ ಹೇಳಬಾರದೆ?

ಪ್ರಕಾಶ:— ನಮ್ಮೂರಿಗೆ ಬರಗಾಲ ಒಂದೀಗ ಒಂದುವರ್ಷ ವಿಾರಿತು. ಅದರ ಹಾವಳಿಯನ್ನು ತಡೆಗಟ್ಟಲು ಜನರೆಲ್ಲಾ ಒಟ್ಟಾಗಿ, ಸಂಘಟಿತವಾದ ಕೆಲಸವನ್ನೇನೂ ಮಾಡುವುದಿಲ್ಲ. (ನಮ್ಮೂರ ಹಿರಿಯರೂ, ಗುರುಗಳಂತಿರುವ ದೇವಸ್ಥಾನದ ಪ್ರಮೋಪಿತರೇ ಮೊದಲಾದವರೂ ತಮ್ಮ ಅಧಿಕಾರವನ್ನು, ವರ್ಚಸ್ಸನ್ನು, ಜನತಾವಿಶ್ವಾಸದ ಸೊತ್ತಾಗಿರುವ ಸಾರ್ವಜನಿಕ ಸಂಸ್ಥೆಗಳನ್ನು, ಈ ಆಪತ್ಕಾಲದಲ್ಲಿ ನಿಜವಾದ ಜನಹಿತ ಕಾರ್ಯಗಳಿಗಾಗಿ ಒದಗಾಲದ ಸಂಕಟ ನಿವಾರಣೆಗಾಗಿ ಉಪಯೋಗಿಸದೆ, ಊರಿನ ಗಾಮುಂಕ್ಕೆ ಉಪ್ಪು ಹಾಕುವಂತಹ ಮೂರ್ಖತನದ ಹಾಗೂ ಆತ್ಮವಂಚಕ ಧೋರಣೆಯನ್ನು ವಹಿಸಿದ್ದಾರೆ.) ಅಭಿಷೇಕ, ಜಪ, ಹೋಮಾದಿಗಳಿಂದ ಮಳೆಬರುವಂತೆ ಮಾಡಬಹುದೆಂಬ ಭ್ರಾಂತಿಯಿಂದ, ಜನತೆಯಿಂದ ವಂತಿಗೆ ವಸೂಲುಮಾಡಿ, ದುರುಪಯೋಗ ಮಾಡುತ್ತಿದ್ದಾರೆ. ಇಷ್ಟರಲ್ಲೇ ಬಡಬಗ್ಗರು ಹೊಟ್ಟಿಗಿಲ್ಲದೆ ಸಾಯಹತ್ತಿದ್ದಾರೆ. ಈ ಹೊಟ್ಟೆಸಾಡಿನ ಕಿಡಿಯೇ ಕಟ್ಟಕಡೆಗೆ ದೊಡ್ಡ ಕಾಳ್ಗಿಚ್ಚಾಗಿ ಹಬ್ಬಿ, ಸರ್ವನಾಶ ಮಾಡದಿರುವುದೇ?

ಸುಲೋಚನಾ:— ಒಡಬಗ್ಗರು ಹೊಟ್ಟಿಗಿಲ್ಲದೆ ಸತ್ತರೆ ನಮ್ಮಿಂದೇನು ಮಾಡಲಾದೀತು? ಬರಗಾಲವನ್ನು ಯಾರಾದರೂ ಬೇಕೆಂದು ಬರಮಾಡಿಕೊಂಡುಂಡೇ?

ಪ್ರಕಾಶ:— ಅಲ್ಲ; ಪ್ರಕೃತಿಸಿದ್ಧವಾಗಿ ಬಂದುದದು. ಅದನ್ನು ತಡೆಗಟ್ಟಲು ಅಸಾಧ್ಯವಾದರೂ, ಅದರ ಹಾವಳಿಯನ್ನು ಕಡಿಮೆ ಮಾಡಲು ಸಾಧ್ಯವಿದೆ.

ಸುಲೋಚನಾ:— ಅದು ಹೇಗೆ?

ಪ್ರಕಾಶ:— ಈ ವಿಪತ್ಕಾಲದಲ್ಲಿ ಅನೇಕ ಮಂದಿ ಮಾನವ-ಸಹೋದರರು ಹೊಟ್ಟೆಸಾಡಿಗಿಲ್ಲದೆ ಸಾವನ್ನಿದಿರಿಸುತ್ತಿರುವಾಗ, ಕೆಲವೇ ಮಂದಿ ಶ್ರೀಮಂತರು ಇಂದು ಹೊಟ್ಟೆತುಂಬಾ ಉಂಡು ತಿಂದು ತೇಗುವುದು ಮಾತ್ರವನಲ್ಲದೆ, ಮುಂದಿಗೂ ಸಾಕಷ್ಟು ಸಂಗ್ರಹಿಸಿಕೊಂಡಿರುವುದು ನ್ಯಾಯವೆ? ನೀತಿಯೆ? ಧರ್ಮವೆ? ನಿನ್ನ ಸಹೋದರರು ಉಪವಾಸಬಿದ್ದು ನರಳುತ್ತಿರುವಾಗ, ನೀನು ಜೈನಾಗಿ ಉಂಡು ಸುಖಿಸುವೆಯಾ ಸುಲೋಚನಾ (ಸುಲೋಚನೆಯು ನಿರುತ್ತರಳಾಗಿ ಆಲೋಚನಾಮಗ್ನಳಾಗುವಳು) ಅಷ್ಟರಲ್ಲಿ ಪ್ರಕಾಶನ ಸಹವ್ಯವಸಾಯಿಗಳಾದ **ಸುಧಾಕರ, ದಿನಕರ ಅಮರನಾಥ, ಜಿತೇಂದ್ರ** ಮೊದಲಾದವರು ಗುಂಪುಗೂಡಿ ಪ್ರವೇಶಿಸುವರು. ಅವರೆಲ್ಲರೂ ಖಿನ್ನರಾಗಿರುವರು. ಸುಲೋಚನೆಯು ಥಕ್ಕನೆ ಎದ್ದು ನಿಂತು ಹೊರಹೊರಡುವಳು.)

ಪ್ರಕಾಶ:— ಬಂದವರನ್ನು ಕುಳಿತುಕೊಳ್ಳಿರೆಂದು ಕೂಡ ಹೇಳದೆ ಎಲ್ಲಿಗೋಡುವೆ ಸುಲೋಚನಾ? ಪತಿಯೊಡನೆ ಚರ್ಚಿಸಲು ಮಾತ್ರ ಗೊತ್ತೇ ನಿನಗೆ?

ಸುಧಾಕರ:— ಪ್ರತಿನಿತ್ಯ ಬಂದುಹೋಗುವ ನಮಗೆ ಉಪಚಾರ ಬೇಕೇ? ಏನು ಮಾತಿದು ಪ್ರಕಾಶರಾಯರೇ?

(ಎಲ್ಲರೂ ಹತ್ತಿರದ ಒರಗುವ ಬೆಂಚಿನ ಮೇಲೆ ಕುಳಿತುಕೊಳ್ಳುವರು.)

ಪ್ರಕಾಶ:— ಅದೇಕೆ ನಿಂತಿರುವೆ ಗೊಂಬೆಯಂತೆ ಸುಲೋಚನಾ? ಇಲ್ಲಿ ಬಾ; ಕೂತುಕೋ ಇಲ್ಲಿ ಸ್ವಲ್ಪ! ಅವರನ್ನು ನೀನು ಉಪಚರಿಸದಿದ್ದರೂ ನಿನ್ನನ್ನು ನಾನು ಉಪಚರಿಸುವೆನು. (ಎಂದು ನಸುನಗುವನು. ಸುಲೋಚನೆಯು ಮುತ್ತಪ್ಪು ನಾಚಿ, ಹತ್ತಿರದ ಕಿಟಕಿಯಬಳಿಗೆ ಹೋಗಿ, ಹೊರಗೆ ನೋಡುತ್ತಾ ನಿಂತುಕೊಳ್ಳುವಳು.) ಪ್ರತಿನಿತ್ಯವೂ ನನ್ನ ಬಳಿಗೆ ಬರುತ್ತಿರುವ ನನ್ನ ಪರಮಾಪ್ತರ ಮುಖವನ್ನು ನೋಡಲೂ ನಾಚುವಿಯಾ ಸುಲೋಚನಾ? ನನ್ನ ಪತ್ನಿಯು ಬಹಳ ಸುಧಾರಣೆಹೊಂದಿದವಳೆಂದು ಜಂಭಹೊಡೆದಿದ್ದೆ ಇವರೊಡನೆಲ್ಲ. ಆ ಮಾತನ್ನೀಗ ಹಿಂತೆಗೆದುಕೊಳ್ಳಬೇಕಾಗಿದೆ!

ಸುಲೋಚನಾ:— ಸಾಕುಮಾಡಿ, ತಮಾಷೆಮಾಡುವುದನ್ನು ಸ್ವಲ್ಪ. ಇದಕ್ಕೇನೇ ನನ್ನನ್ನಿಲ್ಲಿ ನಿಲ್ಲಹೇಳಿದುದೇ? ನಾನು ಹೋಗುವೆನು. (ಪುನಃ ಹೊರಡುವಳು.)

ಪ್ರಕಾಶ:— ಛೆ! ಛೆ! ಪತಿದೇವನ ಅಜ್ಞೆಯಿವಾರಿ ನರಕಭಾಜನಳಾಗುವೆಯಾ ಸುಲೋಚನಾ? ನಿಲ್ಲು, ಒಂದು ಹೆಜ್ಜೆ ಮುಂದಿಡಬೇಡ; ಪತಿದೇವನ ಕಟ್ಟಾಜ್ಞೆಯಿದು!

ದಿನಕರ:— ಇವೇನು ನಾಟಕ ನಿಮ್ಮದು? ಯಥಾಪ್ರಕಾರ ಪತಿಯ ಬಳಿ ಕುಳಿತು ಗಾಳಿಹಾಕುತ್ತಿರಬಾರದೇ ಸುಲೋಚನಮ್ಮಾ? ನಾವೆಲ್ಲ ನಿಮ್ಮ ಸಹೋದರ ಸಮಾನರಲ್ಲವೇ?

(ಸುಲೋಚನೆಯು ಪ್ರಕಾಶನ ತಲೆಯ ಹಿಂದೆ ಹೋಗಿ ನಿಂತು, ಗಾಳಿಹಾಕತೊಡಗುವಳು.)

ಅನುರೇಂದ್ರ:— ನಿಮಗೀಗ ಜ್ವರಬಿಟ್ಟಿರುವುದೇ? ಗಾಯದ ಬ್ಯಾಂಡೇಜುಗಳನ್ನು ಬಿಚ್ಚಿದುದೇಕೆ?

ಸುಲೋಚನಾ:— ರಾತ್ರಿ ಜ್ವರವಿತ್ತು. ಈಗ ಮಾತ್ರ ಸ್ವಲ್ಪ ಬಿಟ್ಟಿದೆ. ಜ್ವರ ಬಿಟ್ಟೊಡನೆಯೇ ನನ್ನೊಡನೆ ವಾದಕ್ಕಾರಂಭಿಸಿದ್ದಾರೆ. ಎಷ್ಟು ಹೇಳಿದರೂ ಕೇಳದೆ ಬ್ಯಾಂಡೆಜ್ ತೆಗೆಯ

ೀಕೆಂದು ಹಟಹಿಡಿದರು; ನೀವು ಬರುವುದಕ್ಕಿಂತ ಸ್ವಲ್ಪ ಮುಂಚೆ ಗೆದುದನ್ನು.

ಪ್ರಕಾಶ:— ನನಗೀಗ ಸ್ವಾಸ್ಥ್ಯವಾಗಿದೆ; ನಾಳೆಯೇ ನ್ನೊಂದಿಗೆ ಕೆಲಸಕ್ಕೆ ಬರುವೆನು. ಊರಿನ ಸುದ್ದಿಯೇನು? ನ್ಮ ಸಾಹಾಯ್ಯಕ ಕೇಂದ್ರಗಳೆಲ್ಲಾ ಚೆನ್ನಾಗಿ ನಡೆಯುತ್ತಿ-ದುವೆಯೇ?

ಸುಧಾಕರ:— ನೀವು ಯಾವ ಚಿಂತೆಯನ್ನೂ ಕಟ್ಟಿಕೊಳ್ಳದೆ, ನ್ನೂ ಕೆಲವು ದಿನ ವಿಶ್ರಾಂತಿ ತೆಗೆದುಕೊಳ್ಳಬೇಕು ಪ್ರಕಾಶರಾಯರೇ?

ಪ್ರಕಾಶ:— ಹಾಸಿಗೆಯಲ್ಲಿ ಬಿದ್ದುಕೊಂಡು ಬೇರೆ ಬೇರೆ ಷಯಗಳನ್ನೆಲ್ಲಾ ಕುರಿತು ಚಿಂತಾಮಗ್ನನಾಗಿರುವುದು ಎಂತಹ ವಿಶ್ರಾಂತಿ ಸುಧಾಕರ! ಇಂದೀಗ ಮೂರು ದಿನಗಳಾದುವು. . ನೀವು ನಗೆ ಯಾವ ಸಂಗತಿಯನ್ನೂ ತಿಳಿಸದೆ. ನಿಮ್ಮ ಮುಖವೆಲ್ಲಾ ಾಡಿರುವುದೇಕೆ? ಮುಚ್ಚುಮರೆಯಿಲ್ಲದೆ ಸಂಗತಿಯನ್ನೆಲ್ಲಾ ೀಸಿರಿ. ನಾನು ನಾಳೆಯೇ ಕೆಲಸಕ್ಕಾರಂಭಿಸುವ ನಿರ್ಧಾರ ಾಡಿರುವೆನು. ಆದೇ ನನಗೆ ನಿಜವಾದ ವಿಶ್ರಾಂತಿ, ಮನಶ್ಶಾಂತಿ!

ಅಮರೇಂದ್ರ:— ಪ್ರಕಾಶರಾಯರೇ, ಇಂದು ಒಂಬತ್ತು ಗಳ ಸಂಸ್ಥಾರದ ವ್ಯವಸ್ಥೆಮಾಡಿ ನಾನಿಲ್ಲಿ ಬಂದುದು.

ಪ್ರಕಾಶ:— ಒಂಬತ್ತು ಮಂದಿಯೂ ಅನ್ನವಿಲ್ಲದೆ ಸತ್ತುದೇ?

ದಿನಕರ:— ಹೌದು, ಸರಿಯಾದ ಆಹಾರವಿಲ್ಲದೆ ಸತ್ತುದು.

ಪ್ರಕಾಶ:— ಹಾಗಾದರೆ ನಮ್ಮ ಸಾಹಾಯ್ಯಕ ಕೇಂದ್ರಗಳು ದ್ದೇನು ಫಲ?

ಜಿತೇಂದ್ರ:— ನಮ್ಮ ಹನ್ನೆರಡು ಕೇಂದ್ರಗಳಲ್ಲಿ ನಾಲ್ಕನ್ನು ಮುಚ್ಚಿ ಇಂದಿಗೆ ಮೂರು ದಿನಗಳಾದುವು. ಇನ್ನು ಕೆಲವೇ ನಗಳಲ್ಲಿ ನಾವು ಎಲ್ಲಾ ಸಾಹಾಯ್ಯಕ ಕೇಂದ್ರಗಳನ್ನು ಮುಚ್ಚ ೀಕಾಗುವುದು.

ದಿನಕರ:— ನಮ್ಮ ಕೇಂದ್ರಗಳಿಗೆ ಬರುತ್ತಿರುವ ಜನಸಂಖ್ಯೆಯು ೀ ದಿನೇ ಬೆಳೆಯುತ್ತಿದೆ; ಆದರೆ ನಮ್ಮ ಆಹಾರಸಂಗ್ರಹವೆಲ್ಲಾ ಯವಾಗಿದೆ. ನಹಾಯದ ಆಶಯಗಳು ಬಂದಾಗಿವೆ. ಹಸಿವೆ ಿಂದ ಕೂಗುತ್ತಿರುವ ಮಕ್ಕಳು ಮರಿಗಳನ್ನು ಹಿಡಿದುಕೊಂಡು, ಾಡಿದ ಮುಖ, ಸೊರಗಿದ ದೇಹದಿಂದ ನಮ್ಮ ಕೇಂದ್ರಗಳಿಗೆ ಷತಂಡವಾಗಿ ಬರುವ ಸ್ತ್ರೀಯರನ್ನು ಹಿಂದೆ ಕಳುಹುವುದಾದರೂ ಾವ ಹೃದಯದಿಂದ? ಆದರೆ ಕಳುಹದೆ ಮಾಡಬೇಕೇನು?

ಪ್ರಕಾಶ (ಬಹಳ ಉದ್ವೇಗಗೊಂಡವನಾಗಿ):— ಮೊದಲೇ ಸೋಕೆ ತಿಳಿಸಲಿಲ್ಲ ಈ ವಿಷಯವನ್ನು? ನಾನೇನಾದರೂ ಶ್ರಾಂತಿಕ ಸಂಕಟಕ್ಕೊಳಗಾಗಿರುವೆನೆಂದು ಭಾವಿಸಿದಿರಾ?

ಸುಲೋಚನಾ:— ನ ನ್ನೊ ಡ ನೆ ಹೇಳಬಹುದಿತ್ತಲ್ಲವೆ? ೀನು ನನ್ನ ಚಿನ್ನದ ಆಭರಣಗಳನ್ನಾದರೂ ತೆಗೆದು ಕೊಡು ದ್ದೆನಲ್ಲ?

ಪ್ರಕಾಶ:— (ಒರಗಿದಲ್ಲಿಂದ ಜಗ್ಗನೆ ಎದ್ದುಕುಳಿತು) ನಿಜ ವಾಗಿಯೂ ನಿನ್ನ ಚಿನ್ನದ ಆಭರಣಗಳನ್ನು ತೆಗೆದು ಕೊಡುತ್ತಿ ದ್ದೆಯಾ ಸುಲೋಚನಾ?

ಸುಲೋಚನಾ:— ಖಂಡಿತವಾಗಿ ತೆಗೆದು ಕೊಡುತ್ತಿದ್ದೆ; ಜನರು ಅನ್ನವಿಲ್ಲದೆ ಸಾಯುತ್ತಿರುವಾಗ, ನಾನು ಆಭರಣವಿಟ್ಟು ಕೊಂಡು ಶೃಂಗರಿಸಿಕೊಂಡಿರುವುದರಲ್ಲಿ ನ್ಯಾಯವಿದೆಯೇ?

ಪ್ರಕಾಶ:— ಈಗಲಾದರೂ ಕೊಡಬಹುದಲ್ಲವೆ ಸುಲೋಚನಾ?

ಸುಲೋಚನಾ:— ಬೇಕಾದರೆ ಈಗಲೇ ಕೊಡುವೆನು; ಆ ಕುರಿತು ನಿಮಗಿನ್ನೂ ಸಂದೇಹವಿದೆಯೇ?

ಪ್ರಕಾಶ:— (ಸುಲೋಚನೆಯ ಕೈಯನ್ನು ಹಿಡಿದು) ನಿನಗೆ ನನ್ನ ಹೃತ್ಪೂರ್ವಕವಾದ ವಂದನೆಗಳು ಪ್ರಿಯೆ. ನೀನೀಗ ನನ್ನಲ್ಲಿ ನವಸ್ಫೂರ್ತಿಯನ್ನುಂಟು ಮಾಡಿರುವೆ. ನನ್ನ ಅತಿ ದೊಡ್ಡ ಚಿಂತೆ ಯನ್ನು ದೂರಮಾಡಿರುವೆ. ನಿನ್ನಿಂದಾಗಿ ನಮಗೆ ಸಾವಿರಾರು ರೂಪಾಯಿ ದೊರೆಯುವಂತಾಗಿದೆ. ನಮಗಿನ್ನು ಧನಾಭಾವದ ಚಿಂತೆಗೇ ಆಸ್ಪದವಿರಲಾರದು!

ಸುಲೋಚನಾ:- ನಾನೇನಂತಹ ಮಹತ್ಕಾರ್ಯ ಮಾಡಿದುದು ನಿಮ್ಮ ವಂದನೆಗೆ ಪಾತ್ರಳಾಗಲಿಕ್ಕೆ? ನನ್ನಲ್ಲಿ ವಿಚಾರೋದಯ ವನ್ನುಂಟು ಮಾಡಿದುದಕ್ಕಾಗಿ ನಿಮಗೆ ನಾನು ಚಿರಋಣಿಯು. ಎಷ್ಟು ಸಮಯದಿಂದ ನೀವು ಕಂಠಶೋಷಣೆ ಮಾಡಿ ಬೋಧಿಸುತ್ತ ಬಂದಿಲ್ಲ ನನಗೆ? ಮೂಢ ಮನೋವೃತ್ತಿಗೆ ಕಟ್ಟುಬಿದ್ದು, ಕಣ್ಣಿದ್ದ ಕುರುಡಳಾಗಿದ್ದೆ ನಾನು. ತಾಯಂದಿರು ಮಕ್ಕಳು—ಮರಿಗಳೊಂದಿಗೆ ಉಪವಾಸ ಬೀಳುವಂತಾಗಿರುವ ಹೃದಯದ್ರಾವಕ ಪರಿಸ್ಥಿತಿಯು ನನ್ನ ಕಣ್ಣನ್ನು ತೆರೆಯಿಸಿತು. ನಿಮಗನುಕೂಲವಾಗಿ ನಡೆಯುವ ವಿವೇಕೋದಯವನ್ನು ನನ್ನಲ್ಲುಂಟುಮಾಡಿದುದಕ್ಕಾಗಿ, ನನ್ನ ಹಾರ್ದಿಕ ವಂದನೆಗಳು ನಿಮ್ಮ ಮಿತ್ರರಿಗೆ!

ಪ್ರಕಾಶ:— ಮಿತ್ರರೇ, ನಾಳೆಯೇ ಗ್ರಾಮಜಾವಡಿಯ ಎದುರಿನ ಬಯಲಲ್ಲಿ, ಗ್ರಾಮಸ್ಥರೆಲ್ಲರ ಸಾರ್ವಜನಿಕ ಸಭೆ ಜರುಗಿ ಸುವ ವ್ಯವಸ್ಥೆಯನ್ನು ಮಾಡಬೇಕು. ಸುಲೋಚನೆಯು ಸಭೆಯಲ್ಲಿ ಮಾತನಾಡಲಿರುವಳೆಂದು ಪ್ರಕಟಿಸಿ, ಆದಷ್ಟು ಹೆಚ್ಚು ಮಂದಿ ಸ್ತ್ರೀಯರು ಸಭೆಗೆ ಬರುವಂತೆ ಮಾಡಬೇಕು.

ಸುಲೋಚನಾ:— ನಾನೇನು ಮಾತನಾಡುವುದು ಸಭೆಯಲ್ಲಿ? ನನಗೆ ಒಂದು ಶಬ್ದವನ್ನು ಕೂಡಾ ಹೇಳಲು ಸಾಧ್ಯವಿಲ್ಲ; ದಯೆ ಮಾಡಿ ಕ್ಷಮಿಸಿರಿ!

ಪ್ರಕಾಶ:— ನೀನು ನಮಗೆ ಕೊಡುವ ಆಭರಣಗಳನ್ನು ಸಾರ್ವಜನಿಕವಾಗಿ ಕೊಟ್ಟರೆ, ನಮಗದರಿಂದ ಮಹತ್ತಾದ ಪ್ರಯೋಜನವಿದೆ. ನೀನು ಹೆಚ್ಚು ಮಾತನಾಡುವುದೇನು ಬೇಡ. ಪ್ರಚಾರದ ದೃಷ್ಟಿಯಿಂದ ನಿನ್ನ ಹೆಸರನ್ನು ಪ್ರಕಟಿಸ ಹೇಳಿದುದು ನಾನು. ನಿನ್ನಂತೆಯೇ ಊರ ಹೆಚ್ಚಿನ ಶ್ರೀಮಂತ ಹೆಂಗುಸರೆಲ್ಲಾ ತಮ್ಮ ಆಭರಣಗಳನ್ನು ನಮಗೆ ಕೊಡುವಂತಾದರೆ, ನಮಗೆ

ಬೇಕಷ್ಟು ಹಣವನ್ನು ಒಂದೇ ಸಾರ್ವಜನಿಕ ಸಭೆಯ ಮೂಲಕ ಸಂಗ್ರಹಿಸಲು ಸಾಧ್ಯವಿದೆ ಸುಲೋಚನಾ !

(" ಅದು ಹೌದು, ಹೌದು " ಎಂದು ಪ್ರಕಾಶನ ಸಂಗಾತಿಗಳೆಲ್ಲ ಆತ್ಮೀಯವಾಗಿ ಒಮ್ಮೆಯೇ ಕೂಗಿ ಹೇಳುವರು.)

ಸುಲೋಚನಾ:— ಒಂದು ವೇಳೆ ಸಾರ್ವಜನಿಕ ಸಭೆಗೆ ಹೆಚ್ಚು ಮಂದಿ ಹೆಂಗುಸರು ಬಾರದಿದ್ದರೂ, ಮನೆಮನೆಗೆ ಹೋಗಿ ಸ್ತ್ರೀಯರಿಂದ ಆದಷ್ಟು ಹೆಚ್ಚು ಆಭರಣಗಳನ್ನು ಪಡೆಯುವ ಪ್ರಯತ್ನವನ್ನು ನಾನು ಮಾಡುವೆನು.

ಪ್ರಕಾಶ:— (ಆನಂದೋತ್ಕರ್ಷತೆಯಿಂದ) ಒಂದೇ ಒಂದು ಕ್ಷಣದ ಮೊದಲು ತೀವ್ರ ನಿರಾಶೆಯ ಕಾರ್ಮುಗಿಲಿಂದ ಚಿವರಿತರಾಗಿ, ಭೀಕರವಾಗಿದ್ದ ವಾತಾವರಣವು ಆದೆಷ್ಟು ಆಶಾವಾದದಿಂದ ತುಂಬಿ ಪ್ರಕಾಶಮಯವಾಗಿರುವುದೀಗ ! ನಾವು ಜಯಶಾಲಿಗಳಾಗುವೆವು ಎಂಬುದರಲ್ಲಿ ಸಂದೇಹವೇ ಇಲ್ಲ. ಶಿವಾನಂದಭಟ್ಟರೇ ಮೊದಲಾದವರೀಗ ಏನು ಮಾಡುತ್ತಿರುವರು ?

ದಿನಕರ:— ಹಲವು ದಿನಗಳ ವರೆಗೆ ಪರ್ಜನ್ಯ ಜಪ ನಡಿಸುವ ಸಿದ್ಧತೆಯಲ್ಲಿ ಇದ್ದಾರೆ. ಇಷ್ಟರಲ್ಲೇ ಊರಲ್ಲೆಲ್ಲಾ ವಂತಿಗೆ ಎತ್ತುವ ಕೆಲಸ ನಡೆದಿದೆ.

ಪ್ರಕಾಶ:— ಎಂತಹ ಭ್ರಾಂತಿಯಿದು ! ಆಗಲಿ, ಅವರೇನು ಬೇಕಾದರೂ ಮಾಡಲಿ. ಅವರ ಗೊಡವೆ ನಮಗೆ ಬೇಡ. ನಾವು ಅವರಿಗೆ ಬುದ್ಧಿ ಹೇಳಿದರೆ, ಅದಕ್ಕೆ ವಿರುದ್ಧ ಪರಿಣಾಮವಾಗುವುದು. ಕಾಲವೇ ಅವರಿಗೆ ಬುದ್ಧಿಕಲಿಸದಿರಲಾರದು. ನಾವು ನಮ್ಮ ಕೆಲಸವನ್ನು ಅತ್ಯಂತ ನಿಷ್ಠೆಯಿಂದಲೂ ವ್ಯವಸ್ಥೆಯಿಂದಲೂ ನಡೆಯಿಸಬೇಕು. ನಾನು ಗಾಯಗೊಂಡು ಹಾಸಿಗೆಯಲ್ಲಿ ಬಿದ್ದುಕೊಂಡಿದ್ದಾಗ, ಇನ್ನೊಂದು ಆಲೋಚನೆ ಹೊಳೆದಿರುವುದು ನನಗೆ. ಅದು ನನ್ನ ಹಗಲುಗನಸೆಂದು ನೀವು ನಗಬಹುದು. ಆದರೆ ಇಂತಹ ಎಷ್ಟೊಂದು ಕನಸುಗಳು ನನಸಾಗಿ, ಕಾರ್ಯಸ್ಫೂರ್ತಿಯಾಗಿ, ಕಟ್ಟಕಡೆಗೆ ವ್ಯವಹಾರ್ಯವಾಗಿ ಸಾಧಿಸಲ್ಪಟ್ಟಿಲ್ಲ ! ನನ್ನ ಕನಸು ಕಾರ್ಯಕ್ಕೆ ಬರುವಂತಾದರೆ, ಶಿವಪುರವು ಸದಾಕಾಲವೂ ಬರಗಾಲದ ಹಾವಳಿಯಿಂದ ಮುಕ್ತವಾಗುವುದು ?

ದಿನಕರ:— (ಉತ್ಸುಕತೆಯಿಂದ) ಅದೇನು ನಿಮ್ಮ ಕನಸು ?

ಪ್ರಕಾಶ:— ನಮ್ಮೂರಿಂದ ಸುಮಾರು ಹದಿನೈದು ಮೈಲು ದೂರದಲ್ಲಿ ಕಲ್ಯಾಣ ನದಿಯಿದೆಯಷ್ಟೇ ? ಅದರಲ್ಲಿ ಯಾವಾಗಲೂ ಬೇಕಷ್ಟು ನೀರಿದೆ. ಅಲ್ಲಿಂದ ಕಾಲುವೆ ಮಾಡಿ ನಮ್ಮೂರಿಗೆ ನೀರು ತರಬೇಕು.

ಅನುರೇಂದ್ರ:— ಕಲ್ಯಾಣನದಿಯಿಂದ ಶಿವಪುರದ ನದಿಯ ವರೆಗೂ ದೊಡ್ಡ ಗುಡ್ಡಸಾಲುಗಳಿವೆ; ಅವುಗಳನ್ನು ಕಡಿದು ಕಾಲುವೆ ಮಾಡಲು ಸಾಧ್ಯವೇ ಇಲ್ಲ. ಒಂದೊಮ್ಮೆ ಸಾಧ್ಯವಾದರೂ, ಸಾವಿರಾರು ರೂಪಾಯಿ ಬೇಕ್ಕಾ ಮಾಡಬೇಕಾದೀತು.

ಪ್ರಕಾಶ:— ಊರವರೆಲ್ಲಾ ಒಕ್ಕಟ್ಟಾಗಿ, ಒಂದೇ ಮನಸ್ಸಿನಿಂದ ಪ್ರಯತ್ನಿಸಿದರೆ ಸಾಧ್ಯವಿದೆ. ಕಾಲುವೆ ಮಾಡಲು ಬೇಕಷ್ಟು ಹಣವನ್ನೂ ನಾವು ಸಂಗ್ರಹಿಸಬಹುದು. ಸರಕಾರವೂ ಸಹಾಯ ಮಾಡಬಹುದು.

ಸುಲೋಚನಾ:— ನೀವು ಯಾವಾಗಲೂ ಅಸಾಧ್ಯ ಕೆಲಸವನ್ನೇ ತಲೆಗೆ ಹಚ್ಚಿಕೊಳ್ಳುವುದು. ಹಿಡಿದ ಕೆಲಸವೇ ಕಷ್ಟವಾಗಿರುವಾಗ ಮತ್ತೂ ಕಷ್ಟವಾದ ಇನ್ನೊಂದು ಕೆಲಸದ ಗೊಡವೆಯೇಕೆ ?

ಪ್ರಕಾಶ:— ಚಿರಕಾಲ ನಮ್ಮೂರಿಗೆ ಬರಗಾಲ ಬಾರದಂತೆ ಮಾಡಲಿಕ್ಕೆ ಸುಲೂ ! . . ಇಲ್ಲವಾದರೆ ಆಗಾಗ ಬರಗಾಲದ ಪೀಡೆಯು ನಮಗೆ ತಪ್ಪಲಾರದು. ಒಮ್ಮೆ ನಾವು ಎಷ್ಟೊಂದು ಕಷ್ಟಪಟ್ಟಾಷ್ಟರೂ, ಎಷ್ಟು ಹಣ ವ್ಯಯಮಾಡಿಯಾದರೂ ಈ ಕಾಲುವೆಯನ್ನು ಮಾಡಿದರೆ, ನಿರಂತರವೂ ನಮ್ಮ ಜನರು ಬರಗಾಲದ ಘೋರ ಹಾವಳಿಯಿಂದ ವಿಮುಕ್ತರಾಗುವಂತಾಗುವುದು. ಮಿತ್ರರೆ, ನೀವೀಗ ಹೋಗಿ ಸಾರ್ವಜನಿಕ ಸಭೆಯ ವ್ಯವಸ್ಥೆ ಮಾಡಿರಿ. ಕಾಲುವೆಯನ್ನು ಕುರಿತು ನಕಾಶೆ ಮತ್ತು ಇತರ ವಿವರಗಳನ್ನು ತಯಾರಿಸಿ, ನಾಳೆಯ ಸಭೆಯ ಮುಂದಿಡುವೆನು. ಜನರ ಬೆಂಬಲ ದೊರೆತರೆ ಈ ಯೋಜನೆಯನ್ನು ನಾವು ಕೂಡಲೆ ಕೈಕೊಳ್ಳಬೇಕು. ಅದರಿಂದ ಈಗ ನಿರುದ್ಯೋಗಿಗಳಾಗಿ ಕಾಲಕಳೆಯುತ್ತಿರುವ ಜನರಿಗೂ ಕೆಲಸವಾಗುವುದು.

ಸುಧಾಕರ:— ನಾವೀಗ ಹೋಗುವೆವು.

ಪ್ರಕಾಶ:— ಹೋಗಿರಿ, ನಮಸ್ಕಾರ! (ಪ್ರಕಾಶನ ಮಿತ್ರರೆಲ್ಲರೂ ನಮಸ್ಕರಿಸಿ ಹೋಗುವರು.) ಆಯಾಸದಿಂದ ಪ್ರಕಾಶನ ಮೈಯೆಲ್ಲಾ ಬೆವರುವುದು. ಸುಲೋಚನೆಯು ಅದನ್ನೊರಸುವಳು.

ಸುಲೋಚನಾ: — ಇನ್ನಾದರೂ ಸ್ವಲ್ಪ ಮಲಗಬಾರದೇ ಎಷ್ಟೊಂದು ಆಯಾಸಗೊಂಡಿರುವಿರಿ ? ಬಾಯಾರಿಕೆಯಾಗುವುದೇ ?

ಪ್ರಕಾಶ:— ಹೌದು !

(ಸುಲೋಚನೆಯು ಓಡಿಹೋಗಿ ಹಾಲುತಂದು ಕೊಡುವಳು. ಪ್ರಕಾಶನು ಕುಡಿದು ಮಲಗುವನು.

ತಿನೆಯು ನೋಟ

(ಶಿವಪುರದ ದೇವಸ್ಥಾನದ ಗೋಪುರದಲ್ಲಿ ಮುಖ್ಯ ಅರ್ಚಕ ಶಿವಾನಂದಭಟ್ಟರೂ, ಊರ ಹಿರಿಯರು ಮತ್ತು ದೇವಸ್ಥಾನದ ಮೊಕ್ತೇಸರರೂ ಸೇರಿ ಮುಂದೇನು ಮಾಡಬೇಕೆಂಬುದನ್ನು ಕುರಿತು ಆಲೋಚಿಸುತ್ತಿರುವರು)

ಶಿವಾನಂದಭಟ್ಟ:— ಇನ್ನು ಪರ್ಜನ್ಯಜಪ ನಡೆಸುವುದೊಂದೆ ಉಳಿದಿದೆ; ಆಗ ಮಳೆಯಾಗುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಕೆಲವು ಸಹಸ್ರ ರೂಪಾಯಿಗಳಾದರೂ ಬೇಕು ಅದಕ್ಕೆ. ಪ್ರಕಾಶ ಮತ್ತು ಅತನ ಗ್ರಾಮಕೂಟದವರ ಜಳವಳಿಯ ಮೂಲಕ, ನಮಗೆ ಮೊದಲಿನ ಕಾಲುಪಾಲು ವಂತಿಗೆ ಕೂಡ ದೊರೆತಿರುವುದಿಲ್ಲ.

ರಾಮರಾಯ:— ದೇವಸ್ಥಾನದ ಪ್ರಾಂಗಣದ ಸಭೆಯ ಗಲಾಟೆಯೇ ಇದಕ್ಕೆ ಕಾರಣ. ಪ್ರಕಾಶನಿಗೆ ನಾವೇ ಬೇಕೆಂದು ಹೊಡೆಸಿದೆವೆಂದು ಜನರೆಲ್ಲೆಲ್ಲಾ ಸುದ್ದಿ ಹಬ್ಬಿದೆ. ಪ್ರಕಾಶನೇಕೆ ನಮ್ಮಮೇಲೆ ಖಟ್ಲೆ ನಡಿಸಲಿಲ್ಲ. ನಡಿಸುತ್ತಿದ್ದರೆ ಬೇಕಾದಷ್ಟು

ಪುರಾವೆದೊರೆಯುತ್ತಿತ್ತು ನಾವೇ ಹೊಡಿಸಿದುದೆಂಬುದಕ್ಕೆ. ನಾವು ಮಾಡಿದ ಅ ನ್ಯಾ ಯ ದ ಫಲವನ್ನೀಗ ನಾ ವು ಅನುಭವಿಸಲೇ ಬೇಕಾಗಿದೆ.

ಶಿವಮೂರ್ತಿಶಾಸ್ತ್ರಿ:— ಅಭಿಷೇಕ, ಪೂಜೆ, ಜಪಾದಿಗಳಿಗೆಲ್ಲಾ ಶಿವಾನಂದಭಟ್ಟರು ಹೇಳಿದಂತೆ, ಜನರಿಂದ ಈ ಕಷ್ಟಕಾಲದಲ್ಲಿ ಯಾದರೂ ವಂತಿಗೆಪಡೆದು ಕೊಟ್ಟ ಫಲವೇನು? ಬರಗಾಲವು ದಿನೇ ದಿನೇ ತೀವ್ರಸ್ವರೂಪ ತಾಳುತ್ತಿದೆ. ಇನ್ನು ಪರ್ಜನ್ಯ ಜಪಕ್ಕೆ ಕೆಲವು ಸಾವಿರ ರೂಪಾಯಿ ಬೇಕಂತೆ. ನಮ್ಮಿಂದ ಸಾಧ್ಯವಿಲ್ಲ ಹಣ ಕೊಡಲಿಕ್ಕೆ. ಆರಂಭದಲ್ಲೇ ಪ್ರಕಾಶನ ಸೂಚನೆಯಂತೆ ನಡೆಯುವು ದೊಳ್ಳೆಯದಿತ್ತು ನಮಗೆ. ಆತನ ಜನಸಹಾಯಕ ಕೇಂದ್ರಗಳೆಲ್ಲಾ ಬಹಳ ಚೆನ್ನಾಗಿ ನಡೆಯುತ್ತಿವೆ. ಮೊನ್ನೆಯ ಸಾರ್ವಜನಿಕ ಸಭೆಯಲ್ಲಿ ಪ್ರಕಾಶನ ಪತ್ನಿಸುಲೋಚನೆಯೇ, ಮುಂದಾಗಿ ಸುಮಾರು ೫ ಸಾವಿರ ರೂಪಾಯಿ ಬೆಲೆಯ ತನ್ನ ಆಭರಣಗಳನ್ನೆಲ್ಲಾ ಗ್ರಾಮ-ಕೂಟಕ್ಕೊಪ್ಪಿಸಿದಂದಿನಿಂದ, ಜನತೆಯಲ್ಲೆಲ್ಲಾ ಸಪೋತ್ಸಾಹ ಉಂಟಾಗಿದೆ. ಸುಲೋಚನೆಯೇ ಕೆಲಮಂದಿ ಸ್ವಯಂಸೇವಿಕೆಯರೊಂದಿಗೆ ಮನೆಮನೆಗೆ ಹೋಗಿ, ಸ್ತ್ರೀಯರಿಂದ ಆಭರಣಗಳನ್ನು ಪಡೆಯುತ್ತಿದ್ದಾಳೆ. ಗ್ರಾಮಕೂಟದ ಸಹಾಯನಿಧಿಯು ಈಗ ಕೆಲವೇ ದಿನಗಳಲ್ಲಿ ೨೧,೦೦೦ ರೂಪಾಯಿಗೆ ವಿುಕ್ಕಿದೆಯಂತೆ.

ಶಿವಾನಂದ:—(ನಿಟ್ಟುಸಿರಿಟ್ಟು) ಇನ್ನು ಪ್ರಕಾಶ ಗೆದ್ದಂತೆಯೇ ಸರಿ. ನಾವು ಕೂಡಿಸಿದ ಪೆಟ್ಟಿನಿಂದ ತಲೆಯೊಡೆದು ಅವನು ಪಾಸಿಗೆ ಹಿಡಿದಿದ್ದಾಗ, ಗ್ರಾಮಕೂಟದ ಸಹಾಯಕೇಂದ್ರ ಗಳೆಲ್ಲಾ ಮುಚ್ಚಲ್ಪಡಬೇಕಾಗುವಷ್ಟರ ಆಹಾರಸಾಮಗ್ರಿಗಳ ಕೊರತೆಯುಂಟಾಗಿದ್ದಿತು. ಕೆಲವು ಕೇಂದ್ರಗಳು ಮುಚ್ಚಲ್ಪಟ್ಟಿದ್ದುವು. ಆಹಾರ ಸಾಮಗ್ರಿ ಕೇಳಿ, ಕೊಡದಿದ್ದರೆ ಗಲಾಟೆ ಮಾಡಿ, ಕೇಂದ್ರಗಳನ್ನೆಲ್ಲಾ ಲೂಟಾಯಿಸುವಂತೆ ಜನರನ್ನು ಪ್ರೇರೇಪಿಸಿ ಉತ್ತೇಜಿಸಬೇಕೆಂದು ನಾನು ಕೆಲವು ಜನರನ್ನು ಕಳುಹಿಸಿದ್ದೆ. ಆದರೆ ಆ ಗಲಾಟೆಗೆ ಆಸ್ಪದ ದೊರೆಯಲಿಲ್ಲವಂತೆ. ಕೇಂದ್ರಗಳಿಗೆ ಹೋದವರೆಗೆಲ್ಲಾ ನಿಶ್ಚಿತಪ್ರಮಾಣದಲ್ಲಿ ಆಹಾರಸಾಮಗ್ರಿಗಳು ಕೊಡಲ್ಪಡುತ್ತಿವೆಯಂತೆ.

ಶಿವಮೂರ್ತಿಶಾಸ್ತ್ರಿ:— ಶಿವಾನಂದಭಟ್ಟರ ಕುತಂತ್ರದಿಂದ ನಮಗೆ ಹಾನಿಯೇ ಹೊರತು ಪ್ರಯೋಜನವಿಲ್ಲ. ಇಡಿ ಊರೇ ಪ್ರಕಾಶನ ಬೆಂಬಲಕ್ಕೆ ನಿಲ್ಲುವ ದಿನ ದೂರವಿರಲಾರದೆಂದು ತೋರುತ್ತಲಿದೆ.

ಶಿವಾನಂದ:— ಪರ್ಜನ್ಯಜಪದಿಂದ ಮಳೆ ಬರುವುದೆಂದು ನಾನು ಪ್ರಮಾಣಮಾಡುವುದಕ್ಕೂ ಸಿದ್ಧನಿರುವೆನು. ಆದರೆ ಅದಕ್ಕೆ ಕಡಿಮೆಯೆಂದರೆ ೫೦೦೦ ರೂಪಾಯಿಗಳು ಬೇಕು. ಒಂದು ಸಾವಿರ ಕೂಡಾ ಸಂಗ್ರಹವಾಗಿಲ್ಲ ಈ ವರೆಗೆ. ನೀವೆಲ್ಲಾ ಒಟ್ಟು ಸೇರಿ ಯಾವ ರೀತಿಯಲ್ಲಾದರೂ ಹಣ ಸಂಗ್ರಹಿಸಿ ಕೊಟ್ಟಲ್ಲಿ, ಪರ್ಜನ್ಯ-ಜಪವನ್ನು ಸಾಂಗವಾಗಿ ನಡೆಯಿಸಿ, ಮಳೆ ಬರುವಂತೆ ಮಾಡುವ ಜವಾಬ್ದಾರಿ ನನ್ನದು.

ಪುಟ್ಟಪ್ಪ:— ದೇವಸ್ಥಾನದ ಬಂಗಾರವನ್ನು ನಾವು ಹತ್ತು ಮಂದಿಯ ಕೆಲಸಕ್ಕಾಗಿ ಉಪಯೋಗಿಸಬಾರದೇಕೆ? ಈ ಆಪತ್ಕಾಲ ದಲ್ಲಿ ೫೦೦೦ ರೂಪಾಯಿ ಸಂಗ್ರಹಿಸುವುದಾದರೂ ಹೇಗೆ?

ಶಿವಾನಂದ:— (ಕ್ರೋಧಗೊಂಡು) ಏನಂದಿರಿ? ಯಾವ ಸೂಚನೆಯನ್ನು ಪಾತ್ರ ಕೊಟ್ಟುದಕ್ಕಾಗಿ ನಾವು ಪ್ರಕಾಶನ ತಲೆಯನ್ನು ಒಡೆದೆವೋ ಅದನ್ನೇನಾವು ಮಾಡುವುದೇ?

ನಂಜಪ್ಪ:— ನಮಗೆ ಹಣ ಸಂಗ್ರಹಿಸುವ ಇನ್ನಾವ ಉಪಾಯವೂ ಸೂಚಿಸುವುದಿಲ್ಲ. ನಿಮಗೆ ಸೂಚಿಸಿದರೆ ತಿಳಿಸಿರಿ!

ಶಿವಾನಂದ:— ಪ್ರಕಾಶನು ತನ್ನ ಹೆಂಡತಿಯಿಂದ ಮೊದಲು ಆಭರಣ ಕೊಡಿಸುವ ಉಪಾಯವಾಡಿ, ಊರ ಸ್ತ್ರೀಯರಿಗೆ ಮಂಕುಬೂದಿ ಬಳೆದು, ಕೆಲವೇ ದಿನಗಳಲ್ಲಿ ೨೦,೦೦೦ ರೂಪಾಯಿ ಗಳನ್ನು ಸಂಗ್ರಹಿಸಿರುವಾಗ, ನಾವೂ ನಮ್ಮ ಹೆಂಗುಸರ ಆಭರಣ ಗಳನ್ನು ಮಾರಿಯೋ, ಒತ್ತೆಯಿಟ್ಟೋ, ನಮಗೆ ಬೇಕಾದ ಹಣ ಒಟ್ಟುಗೂಡಿಸಬಾರದೇಕೆ?

ಪುಟ್ಟಪ್ಪ:— ಆಯ್ತು ಹಾಗಾದರೆ; ನೀವು ನಿಮ್ಮ ಮನೆಯ ಹೆಂಗುಸರ ಆಭರಣ ಮಾರಿ ಎಷ್ಟು ಹಣ ಕೊಡುವಿರಿ?

ಶಿವಾನಂದ:— ಅವೆಲ್ಲಾ ಮೊದಲೇ ಬ್ಯಾಂಕಿಗೆ ಹೋಗಿರುವಾಗ ನಾನೇನು ಮಾಡಲಿ?

ಶ್ರೀನಿವಾಸ:— ಮಳೆ ಖಂಡಿತ ಬರುವಂತಾಗಿ ನಮ್ಮ ವ್ಯವಹಾರ ಉಳಿಯುವುದಾದರೆ, ನಾನು ಏನಾದರೂ ಮಾಡಿ ೫೦೦ ರೂಪಾಯಿ ಕೊಡುವೆನು!

ಶಿವಮೂರ್ತಿ:— ನೀವು ದೇವಸ್ಥಾನದ ಅಡಳಿತದ ಮೋಕ್ತೇಸರರು. ದೇವಸ್ಥಾನದಿಂದಲೇ ಪ್ರಯೋಜನ ಹೊಂದಿರುವಿರಿ, ಅದನ್ನೇ ಕೊಟ್ಟರಾಯಿತು; ನಾವೆಲ್ಲಿಂದ ಕೊಡುವುದು?

ಶಿವಾನಂದ:— ನಿಮಗೆ ಸಾಧ್ಯವಾದರೆ ನೋಡಿ. ಇಲ್ಲವಾದರೆ ಸುಮ್ಮನಾದರೂ ಕುಳಿತುಕೊಳ್ಳಿ!

ಶಿವಮೂರ್ತಿ:— ಮಳೆ ಬಾರದಿದ್ದಲ್ಲಿ ಹಿಂದೆ ಕೊಡುವ ಕರಾರಿನಿಂದ, ನಾನು ಒಂದು ಸಾವಿರ ರೂಪಾಯಿ ಕೊಡಲು ಸಿದ್ಧನಿದ್ದೇನೆ.

ಶಿವಾನಂದ — ಶ್ರೀನಿವಾಸರಾಯರ, ಉದಾರ ಮಾದರಿಯನ್ನೇ ಇತರ ಶ್ರೀಮಂತರೂ ಅನುಸರಿಸಿದರೆ, ೫೦೦೦ ರೂಪಾಯಿಗಳನ್ನು ಒಂದೆರಡು ದಿನಗಳಲ್ಲಿ ಒಟ್ಟುಗೂಡಿಸಬಹುದು ನಾನೊಂದು ಪಟ್ಟಿ ಮಾಡಿ, ಮನೆಮನೆಗಾದರೂ ಹೋಗಿ ಹಣ ಸಂಗ್ರಹಿಸಲು ಯತ್ನಿಸುವೆನು.

ಶಿವಮೂರ್ತಿ:— ಆಯ್ತು, ಅದೇ ಒಳ್ಳೆಯದು. ಪ್ರಕಾಶನ ಇನ್ನೊಂದು ಸಾಹಸಪರ ಕಾರ್ಯದ ವಿಷಯವೇನಾದರೂ ನಿಮಗೆ ಗೊತ್ತಿದೆಯೇ?

ಶ್ರೀನಿವಾಸ:— (ಆತುರಗೊಂಡು) ಏನದು?

ಶಿವಮೂರ್ತಿ:— (ಇಲ್ಲಿಂದ ಸುಮಾರು ೧೫ ಮೈಲು ದೂರವಿರುವ ಕರ್ತ್ಯಾಗಸದಿಯಿಂದ, ನಮ್ಮೂರಿಗೆ ಕಾಲುವೆ ಕಡಿಸಿ ನೀರು

ತರುವ ಯೋಜನೆಯನ್ನು ಗ್ರಾಮಕೂಟದವರು ಆರಂಭಿಸಲಿರುವ ರಂತೆ. ಅಸಿಸ್ಟಂಟ್ ಮತ್ತು ಜಿಲ್ಲಾ ಎಂಜಿನಿಯರರು ಈ ಯೋಜನೆಯು ಅವ್ಯವಹಾರ್ಯವೆಂದು ಅಭಿಪ್ರಾಯಪಟ್ಟರೂ, ಪ್ರಕಾಶನು ನಿರಾಶನಾಗದೆ ಬೊಂಬಾಯಿಯಿಂದ ಖಾಸಗಿ ಎಂಜಿನಿಯರೊಬ್ಬರನ್ನು ತರಿಸಿ, ಯೋಜನೆ ತಯಾರಿಸಿ, ನಾಳೆಯೋ ನಾಡಿದ್ದೋ— ಊರವರೆಲ್ಲ ಕಾಲುವೆಯ ಕೆಲಸಕ್ಕಾರಂಭಿಸುವ ರಂತೆ. ಇದು ಸಾಧ್ಯವಾದರೆ ಪ್ರಕಾಶನೇ ಶಿವಪುರದ ಪರ್ಜನ್ಯದೇವ ನಾಗುವನು. ಆಗಾಗ ನಮ್ಮೂರಿಗೆ ಬರುವ ಬರಗಾಲದ ಪೀಡೆಯು ನಿವಾರಿತವಾಗುವಂತಾಗುವುದು !

ಶಿವಾನಂದ— ಕಾಲುವೆ ಮಾಡಲಿ; ಗುಡ್ಡೆಗೆ ಮಣ್ಣು ಹೊರುವ ಕೆಲಸವದು. ವಿನಾಶಕಾಲಕ್ಕೆ ವಿಪರೀತ ಬುದ್ಧಿ ಬಂದಿದೆ ಪ್ರಕಾಶನಿಗೆ. ಇದರಿಂದ ಅವನ ನಾಶ ನಿಶ್ಚಯವೆಂದು ತಿಳಿದು ಕೊಳ್ಳಿ, ಶ್ರೀನಿವಾಸರಾಯರೇ.

ಪುಟ್ಟಸ್ವ:— ಅವನ ನಾಶವೋ, ನಮ್ಮ ನಾಶವೋ ಮುಂದೆ ನೋಡಬೇಕು. ನನಗೆ ಅಂಗಡಿ ಬಾಗಿಲು ತೆಗೆಯುವ ಹೊತ್ತಾಯಿತು ! ಹೋಗುವೆನು.

ಶಿವಾನಂದ:— ನನಗೂ ಪೂಜೆಗೆ ಹೊತ್ತಾಯಿತು. ಈಹೊತ್ತು ಸಂಜೆಯೇ ಪಟ್ಟಿ ತರುವೆನು ನಿಮ್ಮಲ್ಲಿಗೆಲ್ಲ. ಕಡೆಯ ಸಲ ಕೈಬಿಟ್ಟು ಸಹಾಯ ಮಾಡಿದರೆ, ನಮ್ಮ ಕೆಲಸವಾಗುವುದು.

ಸಂಜಪ್ಪ:— ನಮ್ಮ ಶಕ್ತ್ಯನುಸಾರ ಸಹಾಯ ಮಾಡಲಡ್ಡಿಯಿಲ್ಲ. ಆದರೆ ಪರ್ಜನ್ಯಜಪದಿಂದ ಏನಾದರೂ ಫಲಬರುವು ದೆಂಬ ವಿಶ್ವಾಸ ನನಗಿಲ್ಲ.

ಶಿವಮೂರ್ತಿ:— ನಾವು ೫೦೦ ರೂಪಾಯಿ ನೀರಿಗೆ ಹಾಕಿ ದಂತೆಯೇ ಸರ !

ಶಿವಾನಂದ.— ಈ ವಿಶ್ವಾಸವೆಂ ಯಾವಾಗಲೂ ಕೆಟ್ಟುದು. ನಮ್ಮ ಶ್ರದ್ಧೆ ಪ್ರತ್ನ ಭಕ್ತಿಗನುಗುಣವಾದ ಫಲವು ದೊರೆತೇ ದೊರೆಯುವುದು. ಸಂಪೂರ್ಣ ವಿಶ್ವಾಸದಿಂದ ನಾವು ಕೆಲಸ ಮಾಡಿದರೆ, ಪರ್ಜನ್ಯಜಪದಿಂದ ಫಲ ಬರುವುದು ನಿಶ್ಚಯವೆಂದು ನನ್ನ ಅಂತರಾತ್ಮವು ಪ್ರೇರೇಪಿಸುತ್ತಿದೆ.

ಶಿವಮೂರ್ತಿ:— ಪ್ರಕಾಶನಿಗೆ ಹೊಡೆಯಿಸುವುದಕ್ಕೂ ನಿಮ್ಮ ಅಂತರಾತ್ಮವು ಪ್ರೇರೇಪಿಸಿತೇನು ?

ಶಿವಾನಂದ:— ಶಿವಮೂರ್ತಿ ಶಾಸ್ತ್ರಿಗಳೇ, ನೀವೂ ಬೇಕಾದರೆ ಪ್ರಕಾಶನ ಪಕ್ಷಕ್ಕೇನೇ ಸೇರಬಹುದು. ನಮ್ಮೊಂದಿಗಿದ್ದು ನಮಗೆ ದ್ರೋಹ ಬಗೆಯಬೇಕಾಗದು. ನೀವು ಹಣ ಕೊಡದಿದ್ದರೂ ಚಿಂತೆಯಿಲ್ಲ, ಬಾಯಿಮುಚ್ಚಿಕೊಂಡಿದ್ದರೆ ದೊಡ್ಡ ಉಪಕಾರವಾಗುವುದು.

ಶಿವಮೂರ್ತಿ:— ನಾನೇ ಏಕೆ ? ನಾವೆಲ್ಲರೂ ಪ್ರಕಾಶನ ಪಕ್ಷ ವಹಿಸದೆ ನಿರ್ವಾಹವಿಲ್ಲದಾಗುವ ಪರಿಸ್ಥಿತಿಯು ಬಂದೇ ಬರುವುದು. ನಾನು ನಿನ್ನೊಡನೆ ಮಾತ್ರ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಬಹುದು; ಬೇರೆ ಯಾರೊಡನೆಯೂ ಹೇಳಿರುವು ದಿಲ್ಲ. ನಿಮಗೆ ದ್ರೋಹಮಾಡುವೆನೆಂಬ ಹೆದರಿಕೆ ಬೇಡ. ಶಿವಾನಂದ ಭಟ್ಟರ ಕೊನೆಯ ಇಚ್ಛೆಯನ್ನು ನೆರವೇರಿಸಲು ನಾನು ನನ್ನ ಶಕ್ತ್ಯನುಸಾರ ಸಹಾಯ ಮಾಡಲು ಸಿದ್ಧನೇ ಇರುವೆನು. ಒಂದು ಪಕ್ಷಕ್ಕೆ ಸೇರಿದ ಮೇಲೆ, ಅರ್ಧದಲ್ಲಿ ಅದನ್ನು ಬಿಟ್ಟು ಹೋಗುವವನು ನಾನಲ್ಲ.

ಶ್ರೀನಿವಾಸ:— ಆಯ್ತು ಹಾಗಾದರೆ. ಶಿವಾನಂದಭಟ್ಟರೆ; ಇಂದು ಸಂಜೆಗೆ ಪಟ್ಟಿ ಮಾಡಿ ಹಣ ಸಂಗ್ರಹಿಸುವ ಕೆಲಸವಾಗಲಿ! ಈಗ ನಾವು ಹೋಗುವೆವು.

(ಎಲ್ಲರೂ ಹೋಗುವರು.)

ಕನೆಯ ನೋಟ

(ಶಿವಪುರದ ಗ್ರಾಮಚಾವಡಿಯಲ್ಲಿ ಗ್ರಾಮಕೂಟದ ಸದಸ್ಯರೆಲ್ಲಾ ಸೇರಿ, ಕಲ್ಯಾಣನದಿಯಿಂದ ಶಿವಪುರಕ್ಕೆ ಕಡಿಸುವ ಕಾಲುವೆಯ ಕೆಲಸವನ್ನು ಮುನ್ನಡೆಯಿಸುವ ಕುರಿತು ಆಲೋಚಿಸುವರು.)

ಸುಧಾಕರ:— ಕಾಲುವೆಯ ಕೆಲಸವು ಸಂಪೂರ್ಣವಾಗ ಬೇಕಾದರೆ. ಇನ್ನೂ ೫೦,೦೦೦ ರೂ. ಬೇಕಾದೀತೆಂದು ಹೇಳುತ್ತಾರೆ ಎಂಜಿನಿಯರು. ಇಂದೀಗ ಕೆಲವೇ ಮಂದಿ ಶ್ರೀಮಂತರನ್ನು ಮತ್ತು ದೇವಸ್ಥಾನದ ಅರ್ಚಕರನ್ನು ಬಿಟ್ಟು ಇಡೀ ಶಿವಪುರವೇ ನಮ್ಮ ಸಾಹಾಯ್ಯಕ ಕೇಂದ್ರಗಳ ಮೇಲೆ ಹೊಂದಿಕೊಂಡಿದೆ ಆಹಾರಕ್ಕಾಗಿ. ಇನ್ನು ಕೆಲವೇ ದಿನಗಳಲ್ಲಿ ನಮ್ಮ ಸಾಹಾಯ್ಯಕ ಕೇಂದ್ರಗಳನ್ನೆಲ್ಲಾ ಮುಚ್ಚಬಿಡದೆ ನಿರ್ವಾಹವಿಲ್ಲವಾಗುವುದು. ಕಾಲುವೆಯ ಕೆಲಸವೂ ನಿಂತುಹೋದರೆ, ನಾವು ಮಾಡಿದ್ದೆಲ್ಲಾ ಗುಡ್ಡೆಗೆ ಮಣ್ಣು ಹೊತ್ಕಂತೆಯೇ ಆಗುವುದು. ನಾವು ಊರು ಬಿಟ್ಟು ಹೋಗುವುದೇ ಲೇಸೆಂದು ತೋರುತ್ತದೆ ಈ ಪರಿಸ್ಥಿತಿಯಲ್ಲ.

ಅವುರೇಂದ್ರ:— ಶಿವಾನಂದಭಟ್ಟರೇ ಮೊದಲಾದವರಿಗೆ ಈಗ ನಮ್ಮ ಕುರಿತು ಅಪಪ್ರಚಾರಕ್ಕೆ ಆಸ್ಪದ ದೊರೆತಿದೆ. ಜನರೂ ಕಿವಿಗೊಡಹತ್ತಿದ್ದಾರೆ ಅವರ ದುರ್ಬೋಧೆಗೆ. ಇತ್ತಲಾಗಿ ಹೆಚ್ಚು ಜನರು ಸಾಯುಹತ್ತಿರುವುದರಿಂದ, ಪರಿಸ್ಥಿತಿಯು ಮತ್ತಷ್ಟು ನಮಗೆ ಪ್ರತಿಕೂಲವಾಗಿದೆ. ಮಳೆಜಾರದಿರುವುದಕ್ಕೂ, ಜನರು ಹೆಚ್ಚಾಗಿ ಸಾಯುವುದಕ್ಕೂ, ದೈವದ್ರೋಹಿಗಳೂ ನಾಸ್ತಿಕರೂ ಆದ ನಾವೇ ಕಾರಣರೆಂದು, ಭಟ್ಟರ ಕಡೆಯವರು ನಾನಾರೀತಿಯ ಮೂಢಭಾವನೆಗಳನ್ನು ಜನರಲ್ಲಿ ಹಬ್ಬಿಸುತ್ತಿದ್ದಾರೆ. ದೇವರ ಮನಸ್ಸು ಕೆಟ್ಟಿದೆಯಂತೆ. ನಾವು ಈ ಊರಲ್ಲಿರುವವರೆಗೆ ಮಳೆ ಆಗಲಾರದಂತೆ. ಶಿವಪುರದ ದುರ್ಗಾದೇವಿಯ ಅಪ್ಪಣೆಯಾಗಿದೆ ಯಂತೆ ಆ ರೀತಿ. ಜನಸಾಮಾನ್ಯರೆಂದರೆ ಕೇವಲ ಕುರಿಮಂದೆ. ಈ ಮಂದೆಯನ್ನು ನಾವು ಬೇಕಾದಲ್ಲಿಗೊಯ್ಯಬಹುದು.

ದಿನಕರ:— ನಮ್ಮ ನೀರಿನ ಆಶಯವೂ ಬತ್ತಿಹೋಗುತ್ತಿದೆ. ಹೆಚ್ಚೆಂದರೆ ಇನ್ನು ಒಂದು ತಿಂಗಳು ಊರಿಗೆ ನೀರೊದಗಿಸ ಬಹುದು—ಬಹಳ ಪ್ರಯಾಸದಿಂದ. "ಕಾಲುವೆಯೆಂಬುದು ಪ್ರಕಾಶ ರಾಯರ ಬಯಲುಭ್ರಾಂತಿ. ಅದಕ್ಕಾಗಿ ವ್ಯಯಿಸಿರುವ ಸಹಸ್ರಗಟ್ಟಲೆ ಹಣವನ್ನು, ಆಹಾರಸಾಮಗ್ರಿ ತಂದು ಸಂಗ್ರಹಿಸಲು ಉಪಯೋಗಿ

ಸುತ್ತಿದ್ದರೆ, ದೀರ್ಘಕಾಲದ ವರೆಗೆ ಆಹಾರದ ಕೊರತೆಯ ಭೀತಿಗೆ ಅಸ್ಪದವಿರುತ್ತಿದ್ದಿಲ್ಲ. ಆಷ್ಟರಲ್ಲಿ ಮಳೆಯಾಗದಿರಲು ಸಾಧ್ಯವೇ ಇಲ್ಲ. ಇನ್ನು ಕೆಲವೇ ದಿವಸಗಳಲ್ಲಿ ಇಡಿಯ ಊರೇ ಉಪವಾಸ ಬಿದ್ದು ಸಾಯುವ ಪರಿಸ್ಥಿತಿ ಉಂಟಾಗಲಿದೆ" ಎಂದು ಶಿವಾನಂದ ಭಟ್ಟರೂ, ನಮ್ಮ ವಿರೋಧಿಗಳಾದ ಊರ ಹಿರಿಯರೂ ಎಡೆಬಿಡದೆ ಪ್ರಚಾರ ಮಾಡುತ್ತಲಿದ್ದಾರೆ. ಬೇಗನೆ ಅವರೊಂದು ಸಾರ್ವಜನಿಕ ಸಭೆ ಕರೆಯಲಿರುವರಂತೆ.

ಸುಲೋಚನಾ:— ಅವರು ಕೇವಲ ಒಂದು ಪರ್ಜನ್ಯ-ಜಪಕ್ಕಾಗಿ ೧೦,೦೦೦ ರೂಪಾಯಿ ವ್ಯಯಿಸಿದುದರಿಂದೇನು ಫಲ ಬಂತು? ನಾವು ನಮ್ಮ ಕೆಲಸವನ್ನು ಅರ್ಧದಲ್ಲೇ ನಿಲ್ಲಿಸದೆ ಹೇಗಾದರೂ ಮುಂದುವರಿಸಲೇ ಬೇಕು. ನಮ್ಮ ಸರ್ವಸ್ವವನ್ನೂ ವಿಕ್ರಯಿಸಿ ಅಥವಾ ಒತ್ತೆಯಿಟ್ಟು ಹಣ ಒದಗಿಸಿಕೊಳ್ಳಬೇಕು. ಏನ್ನೇ ಬರುವಾಗ ಗಾಣವೇ ಮುರಿದಂತಾದರೆ ಹೇಗೆ?

ಪ್ರಕಾಶ:— ಇನ್ನು ವಿಕ್ರಯಿಸಲಿರುವುದು ನಮ್ಮ ಪ್ರಾಣ ಗಳಲ್ಲದೆ ಮತ್ತೇನಿದೆ ಸುಲೋಚನಾ? ಇದೀಗ ನಮ್ಮ ಅಗ್ನಿಪರೀಕ್ಷೆಯ ಬಿಕ್ಕಟ್ಟಿನ ಪರಿಸ್ಥಿತಿಯು ಪುನಃ ಉಪಸ್ಥಿತವಾಗಿದೆ. ನಮ್ಮ ಕಾಲುವೆಯಲ್ಲಿ ನೀರು ಬರುವುದೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಅದನ್ನು ಸಂಪೂರ್ಣವಾಗಿ ಮುಗಿಸಲು, ಅದಕ್ಕೆ ಬೇಕಾದ ಕೆಲವು ಯಂತ್ರಸಾಮಗ್ರಿಗಳನ್ನು ತರಲು ೫೦,೦೦೦ ರೂಪಾಯಿ ಗಳಾದರೂ ಬೇಕೆಂದು ನಮ್ಮ ಎಂಜಿನಿಯರ ಅಭಿಮತ. (ನಾನೂ ಅವರೂ ಒಟ್ಟಿಗೆ ಬೊಂಬಾಯಿಗೆ ಹೋಗಿ, ಚೀಫ್ ಎಂಜಿನಿಯರ ರೊಡನೆ ಮಾತಾಡಿ,) ಸರಕಾರದ ಸಹಾಯ ಪಡೆಯಲು ಮಾಡಿದ ಯತ್ನ ನಿರರ್ಥಕವಾಯಿತು. ಚೀಫ್ ಎಂಜಿನಿಯರ ಮನಸ್ಸನ್ನೂ ಕೆಡಿಸಿದ್ದಾರೆ ನಮ್ಮ ವಿರೋಧಿಗಳು. ಅವರು ಕಾಲುವೆಯ ಕೆಲಸವನ್ನು ಪರಿಶೀಲಿಸಿದಾಗ ನಮಗನುಕೂಲರಿದ್ದಂತೆ ತೋರಿದರೂ, ಸರಕಾರಕ್ಕೆ ನಮಗೆ ವಿರುದ್ಧವಾದ ವರದಿಯನ್ನೊಪ್ಪಿಸಿರುವರು. (ನಾನು ಎರಡೆರಡು ಸಲ ಬೊಂಬಾಯಿ, ಪೂನಾ, ಧಾರವಾಡ ಹುಬ್ಬಳ್ಳಿ ಪಟ್ಟಣಗಳಿಗೆಲ್ಲಾ ಹೋಗಿ,) ಸಾರ್ವಜನಿಕ ವಿನಂತಿ ಮಾಡಿ ಕೊಂಡು ವೊಪಲೇ ಹಣ ಸಂಗ್ರಹಿಸಿರುತ್ತೇನೆ. ಇನ್ನುಳಿದಿರುವುದು, ನಾನು ಆರಂಭದ ದೇವಸ್ಥಾನದ ಪ್ರಾಂಗಣದ ಸಭೆಯಲ್ಲಿ ಸೂಚಿಸಿದುದೊಂದೇ ಮಾರ್ಗ. ನಮ್ಮ ವೈರಿಗಳು ಆ ದಕ್ಕೆ ದೇವಸ್ಥಾನದ ದರೋಡೆಯೆಂದು ಹೆಸರಿತ್ತಿರುವರು. ದೇವಾಲಯದ ದರೋಡೆಯನ್ನಾದರೂ ಮಾಡಿ, ದೇವರನ್ನಾದರೂ ಲುಟಾಯಿಸಿ, ಜನರ ಪ್ರಾಣ ರಕ್ಷಿಸುವ ನಿರ್ಧಾರವನ್ನು ಮಾಡಬೇಕು ನಾವು!

ಜಿತೇಂದ್ರ:→ ದೇವಸ್ಥಾನವು ಶಿವಾನಂದಭಟ್ಟರ ಆ ಫಾದರ ಈಗಿನ ಮೊಕ್ತೇಸರರ ಸ್ವಂತ ಹಕ್ಕಿನ ಸೊತ್ತೇನೂ ಅಲ್ಲ. ಜನತೆಯ ಹಕ್ಕಿನ ಸೊತ್ತದು. ಜನಸಾಮಾನ್ಯರ ಹರಕೆ, ಕಾಣಿಕೆ, ಸಂತಿಗೆಗಳಿಂದ ಬೆಳೆದಿದೆ ದೇವರ ಭಂಡಾರ. ಅದು ಜನತೆಯ ಕ್ಷೇಮನಿಧಿ; ಆಪದ್ಧನ. ಬರಗಾಲದ ಹಾವಳಿಯಿಂದ ಜನರು ಆಹಾರವಿಲ್ಲದೆ ಸಾಯುತ್ತಿರುವಾಗ, ಈ ಆಪದ್ಧನವನ್ನು ಕೆಲವೇ ಮಂದಿ ಸ್ವಾರ್ಥಿಗಳು ತಮ್ಮ ಸ್ವಂತದ ಸೊತ್ತಾಗಿ ಮಾಡಿಕೊಂಡು, ನಾಗರಹಾವಿನಂತೆ ಅದನ್ನು ಕಾಯ್ದುಕೊಂಡಿರುವುದು ಜನದ್ರೋಹ; ಹಾಗೂ ದೈವದ್ರೋಹ. ಜನರ ಕಲ್ಯಾಣಕ್ಕಾಗಿ ದೇವರು-ದೇವಾಲಯ ಗಳಲ್ಲದೆ, ಜನರು ಅವುಗಳಿಗಾಗಿಯಲ್ಲ. (ಇನ್ನು ಸಂದೇಹಗೊಂಡು—) ಹಿಂಜರಿದರೆ ಸರ್ವನಾಶವಾಗುವುದು. (ಪ್ರಕಾಶರಾಯರು ದೇವಸ್ಥಾನದ ಪ್ರಾಂಗಣದ ಸಭೆಯಲ್ಲೆಂದಂತೆ, ಜನತೆಗಾಗಿ ಜನತಾ-ಜನಾರ್ದನನ ಸರ್ವಸ್ವವನ್ನೂ ಉಪಯೋಗಿಸಲು ನಾವು ಹಿಂಜರಿಯಬಾರದು.)

ಸುಧಾಕರ:— ಶಿವಾನಂದಭಟ್ಟರೇ ಮೊದಲಾದ ಅರ್ಚಕರು, ಜನತೆಯಿಂದ ನೇಮಿಸಲ್ಪಟ್ಟಿರುವ ದೇವಸ್ಥಾನದ ನೌಕರರಲ್ಲದೆ ಅಧಿಕಾರಿಗಳಲ್ಲ. ಅವರ ಕೆಲಸಕ್ಕೆ ತಕ್ಕ ಸಂಬಳ ದೊರೆಯುತ್ತದವರಿಗೆ. ಜನರ ನೌಕರರು ಜನತೆಯ ತಲೆಯ ಮೇಲೆ ಕುಳಿತು ಅಧಿಕಾರ ನಡಿಸುವುದಾದರೂ ಹೇಗೆ?

ಅಮರೇಂದ್ರ:— ದೇವಸ್ಥಾನದ ಮೊಕ್ತೇಸರರೆಲ್ಲಾ ಆವರ ಪಕ್ಷದಲ್ಲಿರುವರಲ್ಲವೇ?

ದಿನಕರ:— ಮೊಕ್ತೇಸರರು ಜನರಿಂದ ಆರಿಸಲ್ಪಟ್ಟಿರುವ ಜನ-ಪ್ರತಿನಿಧಿಗಳು. ಜನತೆಯ ಅಭಿಮತದಂತೆ ನಡೆಯಲೇ ಬೇಕವರು. ಹತ್ತು ಮಂದಿಯ ಸಂಸ್ಥೆಯಾದ ದೇವಸ್ಥಾನದ ಸೊತ್ತುಗಳನ್ನು, ಹತ್ತು ಮಂದಿಯ ಹಿತಕ್ಕಾಗಿ ಉಪಯೋಗಿಸುವುದೇ ನ್ಯಾಯವಾದುದು.

ಪ್ರಕಾಶ:—ನೀನೇನೆನ್ನುವೆ ಸುಲೋಚನಾ, ಈ ಅಭಿಪ್ರಾಯಕ್ಕೆ?

ಸುಲೋಚನಾ:— ದೇವಸ್ಥಾನವು ಸಾರ್ವಜನಿಕ ಸಂಸ್ಥೆಯೆಂಬುದರಲ್ಲಿ ಸಂದೇಹವಿದೆಯೇ? ಎಂದಮೇಲೆ ಜನತೆಯ ಅಧಿಕಾರವೇ ನಡೆಯಬೇಕಲ್ಲವೇ ಅದರ ಮೇಲೆ? ಇದು ಹೊರತು ದೇವರೆಂದರೆ ಜನತೆಯ ತಂದೆ. ತನ್ನ ಮಕ್ಕಳು ಉಪವಾಸ ಬಿದ್ದು ಸಾಯುತ್ತಿರುವಾಗ, ತಂದೆಯು ತನ್ನ ಸಂಪತ್ತನ್ನೆಲ್ಲಾ ಮನೆಯೊಳಗೆ ಬೀಗಹಾಕಿಟ್ಟರೆ ಹೇಗೆ?

ಪ್ರಕಾಶ:— (ಉತ್ಸಾಹಗೊಂಡು) ಇನ್ನು ನಮ್ಮ ಕಾರ್ಯವನ್ನು ನಾವು ಸಾಧಿಸಿದಂತೆಯೇ ಸರಿ. ಆರಂಭದಲ್ಲೇ ನಾನೀ ಸೂಚನೆಮಾಡಿದಾಗ,ನಿಮ್ಮಲ್ಲಿ ಹಲವರು ಸಂದೇಹಗ್ರಸ್ತರಾಗಿದ್ದಿರಿ. ಸುಲೋಚನೆಯು ಬದ್ಧವಿರೋಧಿಯಾಗಿದ್ದಳು. ಈಗ ನೀವೆಲ್ಲ ಒಮ್ಮತದಿಂದ ನನ್ನ ಅಭಿಮತಕ್ಕೆ ಒಪ್ಪಿಗೆಯಿತ್ತಿರುವಿರಿ. ಕಾಲವೀಗ ನಮಗೆ ಬಹಳ ಅನುಕೂಲವಾಗಿರುವುದು. ನಾವೊಂದು ಕಿಡಿಯೊಡ್ಡಿದರೆ ದೊಡ್ಡದೊಂದು ಸ್ಫೋಟವೇ ಉಂಟಾಗುವಷ್ಟು ಸಿಡಿಮದ್ದೀಗ ತಯಾರಾಗಿದೆ. ಆದರೆ ನಾವು ಈ ಸಿಡಿಮದ್ದಿಗೆ ಬೆಂಕಿಕೊಡಹೋಗದೆ, ಶಾಂತನೀತಿಯಿಂದಲೇ ನಮ್ಮ ಕಾರ್ಯ ಸಾಧಿಸಬೇಕು, ಬಾಧೆಗೆಟ್ಟು ದುಡುಕಬಾರದು. ಶಿವಾನಂದ-ಭಟ್ಟರೇ ಮೊದಲಾದ ನಮ್ಮ ಬದ್ಧವೈರಿಗಳ ಮೇಲೆ, ಯಾವ ರೀತಿಯು ಪ್ರತೀಕಾರವಾಗದಿರುವ ಮನಸ್ಸು ಕೊಡಬಾ ನಮ್ಮಲ್ಲಿರಬಾರದು. ಪೂರ್ವಾಚಾರಾಂಧರಾಗಿ ವಿಚಾರಾಂಧರಾದ ಅವರನ್ನು ಪ್ರೀತಿಯಿಂದೊಲಿಸಲು ಪ್ರಯತ್ನಿಸಬೇಕು. ಶಾಂತಿಯುಕ್ತ ಕ್ರಾಂತಿಯೆ ನಮ್ಮ ಉದ್ದೇಶ. ಪಚ್ಚನ ಸಂಯಮ, ಶಿಸ್ತು

ಮತ್ತು ಸಂಘಟನೆಯಿಂದ ಜನತೆಯನ್ನು ಶಾಂತವಾಗಿ ಸರಿಯಾದ ದಾರಿಯಲ್ಲಿ ನಡೆಯಿಸುವ ನಮ್ಮ ಶಕ್ತಿಯ ಮೇಲೆ ಹೊಂದಿಕೊಂಡಿದೆ ನಮ್ಮ ವಿಜಯ. ನಾಳೆ ಸಂಜೆ ನಾವು ದೇವಸ್ಥಾನದ ಅಂಗಳದಲ್ಲೇ ಪ್ರಚಂಡವಾದ ಸಾರ್ವಜನಿಕ ಸಭೆ ನಡೆಯಿಸಿ, ಮುಂದಿನ ನಮ್ಮ ಕಾರ್ಯವನ್ನು ನಿಶ್ಚಯಿಸಬೇಕು.

ಸುಲೋಚನಾ:— ಸ್ತ್ರೀಯರೂ ನಾಳೆಯ ಸಭೆಗೆ ಬರಬೇಕಲ್ಲವೇ?

ಪ್ರಕಾಶ:— ಅಗತ್ಯವಾಗಿ; ಗಂಡುಸರಿಗಿಂತಲೂ ಹೆಚ್ಚಿನ ಹಕ್ಕು ಹೆಂಗುಸರಿಗಿದೆ ದೇವಸ್ಥಾನದ ಸೊತ್ತುಗಳ ಮೇಲೆ. ದೇವರ ಭಂಡಾರ ತುಂಬುವುದೇ ಹೆಚ್ಚಾಗಿ ಸ್ತ್ರೀಯರಿಂದಾಗಿ.

ದಿನಕರ:— ಸ್ತ್ರೀಯರು ಸಭೆಗೆ ಒರುವುದು ಮಾತ್ರವಲ್ಲದೆ, ತಮ್ಮ ಅಭಿಪ್ರಾಯವನ್ನೂ ಸ್ಪಷ್ಟವಾಗಿ ತಿಳಿಸಬೇಕು.

ಪ್ರಕಾಶ:— ಸ್ತ್ರೀಯರು ಜಾಗ್ರತರಾಗಿ ಬಂದೊಮ್ಮೆ ಸಂಘಟಿತರಾದರೆಂದರೆ, ಅವರಿಂದ ಗಂಡುಸರಿಗಿಂತಲೂ ಹೆಚ್ಚಿನ ಕೆಲಸವಾಗುವುದು. ಪುರುಷರನ್ನೂ ಹಿಂದಿಕ್ಕಿ ಮುನ್ನಡೆವ ಸಾಹಸಿಗಳಾಗುವರವರು. ಎಂತಹ ಸಂಕಷ್ಟವನ್ನಾದರೂ ತಾಳ್ಮೆಯಿಂದ ಸಹಿಸಿಕೊಂಡು, ಪ್ರಸನ್ನತೆಯಿಂದ ಕರ್ತವ್ಯಪಥದಲ್ಲಿ ಮುನ್ನಡೆಯಬಲ್ಲರವರು.

ಸುಲೋಚನಾ:— ಏತಕ್ಕಾಗಿ ಈ ಪ್ರಶಂಸೆ? ಗಂಡುಸರ ಸಹಾಯವಿಲ್ಲದೆ ಕೇವಲ ಸ್ತ್ರೀಯರಿಂದೇನಾಗುವುದು? ಸ್ತ್ರೀಯರು ಪುರುಷರ ಸಂಗಾತಿಗಳಾಗಿ ಅವರ ಹಿಂದೆ ಹೋಗಬಲ್ಲರು.

ಪ್ರಕಾಶ:— ನಿನ್ನ ಸ್ವಾನುಭವದ ಮಾತಿದು ಸುಲೋಚನಾ, ಪ್ರಶಂಸೆಯಲ್ಲ. ತಾಳ್ಮೆಯು ಮೂರ್ತಿಗಳೇ ಆದ ಸ್ತ್ರೀ ಕೆಲಸಗಾರರಿಲ್ಲದಿರುತ್ತಿದ್ದರೆ, ನಮ್ಮ ಕಾಲುವೆಯ ಕೆಲಸವು ಸಾಧ್ಯವೇ ಇದ್ದಿಲ್ಲ. ಅನ್ನನೀರಿಲ್ಲದಿದ್ದರೂ ಪಿಟ್ಟೆಂದು ಮಾತನಾಡದೆ ಅಸಾಧಾರಣ ಸ್ಥೈರ್ಯದಿಂದ ಪರಿಶ್ರಮಿಸಬಲ್ಲರವರು.

ಸುಲೋಚನಾ:— ಕಾಲುವೆಯ ಕೆಲಸ ನಡೆದಲ್ಲಿಗೆ ಹೋಗುವ ಹೊತ್ತಾಯಿತು. ಎಂಜಿನೀಯರರೊಂದಿಗೆ ಬರುವೆನೆಂದು ಹೇಳಿದ್ದಿಲ್ಲವೇ?

ಪ್ರಕಾಶ:— ನಾನೊಬ್ಬನೇ ಏಕೆ? ಎಲ್ಲರೂ ಹೋಗುವ. (ಎಲ್ಲರೂ ಕಾಲುವೆಯ ಕೆಲಸ ನೋಡಹೋಗುವರು.)

ಳನೆಯ ನೋಟ

(ದೇವಸ್ಥಾನದ ಗೋಪುರದೊಳಗೆ ಜಿಲ್ಲಾ ಕಲೆಕ್ಟರ್ ಸಾಹೇಬರೂ ಪೋಲೀಸ್ ಸುಪರಿಂಟೆಂಡೆಂಟ್ ಮೊದಲಾದವರೂ ತಮ್ಮ ಶಿಬ್ಬಂದಿಯೊಂದಿಗೆ ಆಸೀನರಾಗಿರುವರು. ಗೋಪುರದ ಹೊರಜಗಲಿಯಲ್ಲಿ ರಿಸರ್ವ್ ಪೋಲೀಸರು ಸಾಲಾಗಿ ಕುಳಿತಿರುವರು. ದೇವಸ್ಥಾನದ ಒಳಗೂ ಹೊರಗೂ ಕಿಕ್ಕಿರಿದು ಜನರು ನೆರೆದಿರುವರು. ಪ್ರಕಾಶರಾಯ್, ಸುಧಾಕರ, ದಿನಕರ, ಆಮರೇಂದ್ರ, ಜಿತೇಂದ್ರ, ಸುಲೋಚನೆ ಮೊದಲಾದವರೂ, ದೇವಸ್ಥಾನದ ಹೊಸ ಮೊಕ್ತೇಸರರು ಮತ್ತು ಅರ್ಚಕರೂ ಅಧಿಕಾರಿಗಳ ಬಲಭಾಗದಲ್ಲಿ ಕುಳಿತಿರುವರು. ಎಡಭಾಗದಲ್ಲಿ ಶಿವಾನಂದಭಟ್ಟರೇ ಮೊದಲಾದ ಹಳೆಯ ಅರ್ಚಕರೂ ಮೊಕ್ತೇಸರರೂ ಗುಂಪಾಗಿ ನಿಂತಿರುವರು. ಕಲೆಕ್ಟರ್ ಮತ್ತು ಸುಪರಿಂಟೆಂಡೆಂಟರು ಶಿವಾನಂದಭಟ್ಟರೇ ಮೊದಲಾದವರ ವಿಚಾರಣೆ ಮುಗಿಸಿ, ಪ್ರಕಾಶರಾಯರ ಮತ್ತು ಇತರ ಗ್ರಾಮಕೂಟದವರ ವಿಚಾರಣೆ ನಡಿಸುವರು.)

ಪೋಲೀಸ್ ಸುಪರಿಂಟೆಂಡೆಂಟ್:— ಪ್ರಕಾಶರಾಯರೇ, ನಾನೀಗ ನಿಮ್ಮನ್ನೆಲ್ಲಾ ಕೈದುಮಾಡಲು ರಿಸರ್ವ್ ಪೋಲೀಸ್ ಸಮೇತ ಬಂದಿರುವುದು.

ಪ್ರಕಾಶ:— ಅಡ್ಡಿಯಿಲ್ಲದೆ ಕೈದು ಮಾಡಬಹುದು!

ಪೋಲೀಸ್ ಸುಪರಿಂಟೆಂಡೆಂಟ್:— ಸಬ್ ಇನ್‌ಸ್ಪೆಕ್ಟರರು ನಿಮ್ಮನ್ನೆಲ್ಲಾ ಕೈದುಮಾಡಿಕೊಂಡೊಯ್ಯಲು ಯತ್ನಿಸಿದಾಗ ನಿಮ್ಮ ಕಡೆಯ ಜನರೆಲ್ಲಾ ಗಲಾಟೆಮಾಡಿದರಂತೆ. ದೊಡ್ಡ ಗಲಾಟೆಯಾಗುವುದೆಂದು ಹೆದರಿ ಅವರು ಹಿಂದೆಹೋದರು. ಆದುದರಿಂದ ನಾನೇ ಸ್ವತಃ ಬರಬೇಕಾಯಿತು.

ಪ್ರಕಾಶ:—ಸಬ್ ಇನ್‌ಸ್ಪೆಕ್ಟರರು ಬಂದಾಗ ಯಾರೂ ಗಲಾಟೆ ಮಾಡಿದವರಿಲ್ಲ. ಅವರು ಹೆದರಲು ಕಾರಣವೇ ಇರಲಿಲ್ಲ. ನಮ್ಮ ಜನರೆಲ್ಲಾ ಯಾವ ಗಲಾಟೆಯನ್ನೂ ಮಾಡದೆ ಶಾಂತವಾಗಿ ತಿನ್ನು ನಿಂತು ನಡೆದಿದ್ದರು. ಅವರೆಲ್ಲರೂ ನಮ್ಮೊಂದಿಗೆ ಜೈಲಿಗೆ ಬರಲು ಮುಂದಾದರು. ನಮ್ಮನ್ನು ಕೈದು ಮಾಡಿ ಬಯ್ಯುವುದಾದರೆ, ಅವರನ್ನೂ ಕೈದು ಮಾಡಬೇಕೆಂದು ಕೇಳಿಕೊಂಡರು. ಆದರೆ ಈಗ ನಾನು ಜನರನ್ನೆಲ್ಲಾ ಸಮಾಧಾನಗೊಳಿಸಿರುವೆನು. ನೀವೀಗ ಬೇಕಾದರೆ ನಮ್ಮನ್ನೇ ಕೆಲವರನ್ನು ಕೈದುಮಾಡಿ ಕೊಂಡೊಯ್ಯಬಹುದು.

ಕಲೆಕ್ಟರ್ ಸಾಹೇಬ್:— ನೀವು ದೇವಸ್ಥಾನದ ದರೋಡೆ ಮಾಡಿದುದನ್ನು ಒಪ್ಪುವಿರಾ?

ಪ್ರಕಾಶ:— ಅದನ್ನೂ ನೀವೇ ನಿಶ್ಚಯಿಸಬೇಕು. ನಾನು ಸಂಗತಿಗಳನ್ನೆಲ್ಲಾ ಇದ್ದಕ್ಕಿದ್ದಂತೆ ನಿಮಗೆ ಬರೆದು ತಿಳಿಸಿರುವೆನು.

ಕಲೆಕ್ಟರ್:— ನಿಮ್ಮಂತೆಯೇ ಎಲ್ಲರೂ ನಡೆದರೆ, ಇಡಿಯ ದೇಶದಲ್ಲಿ ಭಯಂಕರ ವಿಪ್ಲವವುಂಟಾಗುವುದಿಲ್ಲವೇ?

ಪ್ರಕಾಶ:—ನಾನೇನೂ ಭೀಕರ ವಿಪ್ಲವವನ್ನೆಬ್ಬಿಸಿಲ್ಲ. ಜನತೆಯು ದನ್ನಾಗಿರುವ ಸಂಸ್ಥೆಯನ್ನು ಕೆಲವು ಮಂದಿ ಸ್ವಾರ್ಥಿಗಳು ತಮ್ಮ ದಾಗಿ ಮಾಡಿಕೊಂಡಿದ್ದಾಗ, ಅವರನ್ನು ಜನಾಭಿಮತದ ಮೇರೆಗೆ ಶಾಂತ ಹಾಗು ನ್ಯಾಯವಾದ ರೀತಿಯಿಂದ ಅಧಿಕಾರದಿಂದ ತಳ್ಳಿ ಹಾಕಿ, ಹೊಸ ಅಧಿಕಾರಿಗಳನ್ನು ನೇಮಿಸಿರುವುದು ಮಾತ್ರ. ಹತ್ತು ಮಂದಿಯ ಸಂಸ್ಥೆಯ ಮೇಲೆ ಹತ್ತು ಜನರ ಅಧಿಕಾರ ಸ್ಥಾಪಿಸಿ, ಹತ್ತರ ಹಿತಕ್ಕಾಗಿ ಅವನ್ನು ಉಪಯೋಗಿಸುವ ಕೆಲಸ ನಾನು ಮಾಡಿದುದು.

ಪೋಲೀಸ್ ಸುಪರಿಂಟೆಂಡೆಂಟ್:— ತಾವೇ ಕಾನೂನನ್ನು ಜ್ಯಾರಿಮಾಡಿ ಬಿಟ್ಟರೆ ಮತ್ತೆ ನಾವೇಕೆ?

ಪ್ರಕಾಶ:— ದೇವಸ್ಥಾನವು ಸರಕಾರಿ ಅಥವಾ ಬಿನ್ನ ಸರಕಾರಿ ಸಂಸ್ಥೆಯಲ್ಲ. ಸರಕಾರದ ಹಸ್ತಕ್ಷೇಪ ಕೂಡಾ ನಮ್ಮ ದೇವಸ್ಥಾನಕ್ಕೆ ಸಿಕ್ಕುವುದಿಲ್ಲ. ನಮ್ಮ ಗ್ರಾಮಸಮಸ್ತರ ಸಂಸ್ಥೆಯದು. ಆದರಲ್ಲಿ ಇರುವ ಸೊತ್ತುಗಳೆಲ್ಲಾ ಗ್ರಾಮಸ್ಥರ ಸಮಷ್ಟಿ ಹಕ್ಕಿನದು.

ಕಲೆಕ್ಟರ್:— ನೀವು ಮೊದಲು ನಮಗೊಂದು ಅರ್ಜಿ ಹಾಕಿ ಇರಬೇಕಿತ್ತಲ್ಲವೆ? ನಾವೇ ನಿಮ್ಮ ಕೆಲಸಮಾಡುತ್ತಿದ್ದೆವಲ್ಲ? ನೀವೇ ಕಾಯಿಕಿ ಬಲಾತ್ಕಾರಮಾಡಿದರೆ ಹೇಗೆ?

ಪ್ರಕಾಶ:— ಸಮಸ್ತ ಗ್ರಾಮ ಸ್ಥರ ಸಭೆಯು, ಇದೇ ದೇವಸ್ಥಾನದ ಪ್ರಾಂಗಣದಲ್ಲಿ ಸುಮಾರು ಒಂದು ತಿಂಗಳ ಹಿಂದೆ ಸೇರಿರುತ್ತದೆ; ಅದರ ವರದಿಯನ್ನು ನಮ್ಮ ಬಳಿಗೆ ಕಳುಹಿಸಿರುತ್ತೀರಿ. ನಾವೇ ಬಲಾತ್ಕಾರ ಮಾಡಿರುವುದಿಲ್ಲ. ಜನಮತದ ಪ್ರಕಾರ ದೇವಸ್ಥಾನದ ಹಳೆಯ ಅಧಿಕಾರಿಗಳನ್ನು ತೆಗೆದುಹಾಕಿ, ಹೊಸಬರನ್ನು ನಿಯಮಿಸಿದುದಾಗಿದೆ.

ಪೋಲೀಸ್ ಸುಪರಿಂಟೆಂಡೆಂಟ್:— ನೀವು ದೇವಸ್ಥಾನದ ಆಸ್ತುಗಳನ್ನೆಲ್ಲಾ ವಶಮಾಡಿಕೊಳ್ಳುವಾಗ ಬಲಾತ್ಕಾರ ಮಾಡಿರುವುದಿಲ್ಲವೆ?

ಪ್ರಕಾಶ:— ಸ್ವಲ್ಪವೂ ಬಲಾತ್ಕಾರ ಮಾಡಿಲ್ಲ. ಜನರು ದೇವಸ್ಥಾನದೊಳಗೆ ಪ್ರವೇಶಿಸಿದೊಡನೆಯೆ ಶಿವಾನಂದಭಟ್ಟರೇ ಮೊದಲಾದವರು ಹೆದರಿ ಹೊರಗೋಡಿರುವರು.

ಪೋಲೀಸ್ ಸುಪರಿಂಟೆಂಡೆಂಟ್:— ದೇವಸ್ಥಾನದ ಭಂಡಾರ ಮತ್ತು ತಿಜೋರಿಗಳ ಬೀಗ ಮುರಿದಿರುವುದಲ್ಲವೆ?

ಪ್ರಕಾಶ:— ಬೀಗದ ಕೈಗಳಿಲ್ಲದಿರುವಾಗ ನಾವು ಬೀಗ ಮುರಿಯದೆ ಮತ್ತೇನು ಮಾಡುವುದು? ದೇವಸ್ಥಾನದ ಪೂಜಾದಿ ಗಳು ನಡೆಯಬೇಕಲ್ಲವೆ?

ಕಲೆಕ್ಟರ್:— ನೀವು ದೇವಸ್ಥಾನದ ಭಾಂಡಾರವನ್ನೆಲ್ಲಾ ಲೂಟಾಯಿಸಿರುವಿರೊ? ದೇವರ ಆಭರಣಾದಿಗಳನ್ನೆಲ್ಲಾ ವಿಕ್ರಯಿಸಿದ ಹಣವನ್ನು ನಿಮ್ಮ ಕಾಲುವೆಗಾಗಿ ವಿನಿಯೋಗಿಸಿರುವಿರೊ?

ಪ್ರಕಾಶ:— ಭಾಂಡಾರದಲ್ಲಿದ್ದ ಹಣದಿಂದ ಆಹಾರ ಸಾಮಗ್ರಿಗಳನ್ನು ತೆಗೆದುಕೊಂಡು, ನಮ್ಮ ಸಹಾಯಕ ಕೇಂದ್ರಗಳ ಮೂಲಕ ಜನತೆಗೆ ಕ್ರಮವಾಗಿ ಹಂಚುವ ವ್ಯವಸ್ಥೆಮಾಡಿರುವೆನು. ಸಿಂದೂರವನ್ನು ನಿರಂತರವಾಗಿಯೂ ಬರಗಾಲದ ಹಾವಳಿಯಿಂದ ಮುಕ್ತಗೊಳಿಸುವ ಕಾಲುವೆ ಕಡಿಸಲು, ದೇವರ ಆಭರಣಗಳನ್ನು ಈ ದೊರೆತ ಹಣವನ್ನು ಸಯೋಗಿಸಿರುವೆನು. ಅದೇನೂ ನನ್ನ ಸ್ವಂತಕ್ಕೆ ನೀರು ಬರಲು ಕಟ್ಟಲ್ಪಡುವ ಕಾಲುವೆಯಲ್ಲ. ನನ್ನ ಜಮೀನಿಗೆ ನೀರು ಬರಲು ಕಟ್ಟಲ್ಪಡುವ ಕಾಲುವೆಯಲ್ಲ. ನನ್ನ ಜಮೀನೆಯೆನ್ನಿಸಲಿಕ್ಕೆ!

ಕಲೆಕ್ಟರ್:— ದೊಡ್ಡ ಕ್ರಾಂತಿಯನ್ನೆಬ್ಬಿಸಿರುವಿರಿ ನೀವು!

ಪ್ರಕಾಶ:— ಹೌದು; ಜನನ ಕಲ್ಯಾಣಕ್ಕಾಗಿ!

ಇಷ್ಟರಲ್ಲಿ ಕಾಲುವೆಯ ಎಂಜಿನಿಯರು ಮೋಟರ್ ಸೈಕಲ್ಲಿನಲ್ಲಿ ಧಾವಿಸಿ ಬಂದು, ನೆಟ್ಟಗೆ ಗೋಪುರದೊಳಕ್ಕೆ ಪ್ರವೇಶಿಸಿ, ಉನ್ಮತ್ತರಂತೆ, "ಪ್ರಕಾಶರಾಯರೆ, ನೀರು ಬಂತು! ನೀರು ಬಂತು! ಬನ್ನಿ, ನೋಡಿ! ಸಾರ್ಥಕವಾಯಿತು ನಮ್ಮ ಪ್ರಯತ್ನ! ಮಂಗಲವಾಯಿತು ನಮ್ಮೂರಿಗೆ!" ಎಂದು ಕೂಗಿ ಹೇಳುವರು.)

ಪೋಲೀಸ್ ಸುಪರಿಂಟೆಂಡೆಂಟ್:— ಪ್ರಕಾಶರಾಯರೆ, ಅದಾರು? ಏನು ಹರಟುತ್ತಿರುವುದವರು.. ಇಲ್ಲಿಗೆ ಬಂದು.. ಹುಚ್ಚರಂತೆ?

ಪ್ರಕಾಶ:—(ಎದ್ದು ಎಂಜಿನಿಯರರನ್ನು ಒಂದೆಡೆ ಕರೆದೊಯ್ದು, ಸಂಗತಿಯನ್ನೆಲ್ಲಾ ಶಾಂತವಾಗಿ ವಿಚಾರಿಸಿ ತಿಳಿದು, ಅವರನ್ನು ಕಾಲುವೆಯ ಬಳಿಗೆ ಕಳುಹಿಸಿ, ಪುನಃ ಕಲೆಕ್ಟರ್ ಮತ್ತು ಪುಲೀಸ್ ಸುಪರಿಂಟೆಂಡೆಂಟರ ಬಳಿಗೆ ಬಂದು) ಅವರು ನಮ್ಮ ಕಾಲುವೆಯ ಎಂಜಿನಿಯರು. ನಾವು ನಡಿಸಿದ ಕಾಲುವೆಯಿಂದ ಕಲ್ಯಾಣನದಿಯಿಂದ ನಮ್ಮೂರಿಗೆ ನೀರು ಬಂದ ಶುಭವಾರ್ತೆಯನ್ನು ನನಗೆ ತಿಳಿಸಲು ಅವರು ಇಲ್ಲಿಗೆ ಓಡಿ ಬಂದಿರುವರು—ಒಂದೇ ನವನೆ. ಆನಂದೋತ್ಕರ್ಷತೆಯಿಂದ ತನ್ನನ್ನು ತಾನೆ ಮರೆತಿರುವರು. (ಅವರ ನತತೋದ್ಯಮ ಮತ್ತು ಜಾಣ್ಮೆಯಿಂದಲೇ ನಮಗೆ ಜಯಶೀಲವಾದ ಕಾಲುವೆ ಮಾಡಲು ಸಾಧ್ಯವಾಗಿರುವುದು. ಸರಕಾರದ ಅಸಿಸ್ಟಂಟ್, ಡಿಸ್ಟ್ರಿಕ್ಟ್ ಮತ್ತು ಇದೇ ಪ್ರಾಂತದ ಚೀಫ್ ಎಂಜಿನಿಯರು ಕೂಡ ಅಸಾಧ್ಯವೆಂದೂ ಅನ್ಯವಹಾರ್ಯವೆಂದೂ ಸ್ಪಷ್ಟವಾಗಿ ಹೇಳಿದ ಯೋಜನೆಯನ್ನು, ನಮ್ಮ ಎಂಜಿನಿಯರ್ ಘಾಟೆಯವರು ಜಯಶೀಲವಾಗಿ ಮಾಡಿರುವರು. ಇಂಥವರು ಪ್ರಯೋಗಾರ್ಥವಾಗಿ, ಯಾರೊಡನೆಯೂ ಹೇಳದೆ, ತನ್ನ ಕೆಲವು ಕೆಲಸಗಾರರೊಂದಿಗೆ ಮುಂಜಾನೆ ಎದ್ದು ಹೋಗಿ, ಕಲ್ಯಾಣ ನದಿಯ ಕಡೆಯ ಕಾಲುವೆಯ ಬಾಗಿಲನ್ನು ತೆರೆದು ಪರೀಕ್ಷಿಸಿದರಂತೆ.) ಯಾವ ತೊಡಕೂ ಇಲ್ಲದೆ, ಒಂದೇ ನವನೆ ನೀರು ಶಿವಪುರಕ್ಕೆ ಬಂದುದರಿಂದ, ಅವರ ಆನಂದಕ್ಕೆ ಪಾರವೆ ಇಲ್ಲವಾಯಿತು. ಉನ್ಮತ್ತರಂತಾಗಿ ಅವರು ಇಲ್ಲಿಗೋಡಿ ಬಂದರು. ಕಲೆಕ್ಟರ್ ಸಾಹೇಬರೆ, ಸುಪರಿಂಟೆಂಡೆಂಟ್ ದೊರೆಗಳೇ, ಇನ್ನು ನಮ್ಮನ್ನೆಲ್ಲಾ ನೀವು ದೇವಸ್ಥಾನದ ದರೋಡೆಗಾರರೆಂದು ಕೈದುಮಾಡಿ ಬಯ್ದರೂ ಚಿಂತೆಯಿಲ್ಲ. ನಾವು ಜೈಲಿನಲ್ಲಿ ಸಂತೋಷದಿಂದ ಕೆಲಕಾಲ ನಿಶ್ಚಾಂತಿ ತೆಗೆದುಕೊಳ್ಳುವೆವು. ಆ ಮೊದಲು ನಾವೆಲ್ಲಾ ಹೋಗಿ ಒಂದುಸಲ ಕಾಲುವೆಯನ್ನು ನೋಡಿ ಬರಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಕಲೆಕ್ಟರ್:— ಪ್ರಕಾಶರಾಯರೆ, ನಿಜವಾಗಿಯೂ ನೀವು ಮಹಾಪುರುಷರು ನೀವು. ನಿಮ್ಮಂತಹ ಮಹಾತ್ಮರನ್ನು ಕೈದು ಮಾಡಲು ರಿಜರ್ವ್ ಪೋಲೀಸರೊಂದಿಗೆ ಬಂದಿರುವ ನಮ್ಮ ಅಧಿಕಾರಿತ್ವವು ಮನೋವೃತ್ತಿಗಾಗಿ ನಾವು ನಾಚಿಕೆಪಡಬೇಕಾಗಿದೆ. ನಾವು ಕೈದು ಮಾಡಿ ತರಮನೆಯಲ್ಲಿರಿಸಬೇಕಾದುದು ಶಿವಾನಂದಭಟ್ಟರಂತಹ ಸಮಾಜಕಂಟಕರನ್ನು! ದೇವಸ್ಥಾನವನ್ನು ಸೂರೆಮಾಡುತ್ತಿದ್ದವರು ಅವರಲ್ಲದೆ ನೀವಲ್ಲ. ನೀವು ನಿಜವಾದ ಜನಹಿತಸಾಧಕರಾಗಿ ಕೆಲಸ ಮಾಡಿರುವಿರಿ. ನಡೆಯಿರಿ, ಹೋಗುವ ಕಾಲುವೆ ನೋಡಲಿಕ್ಕೆ!

(ಜನರೆಲ್ಲರೂ ಆನಂದೋತ್ಸಾಹದಿಂದ ಪ್ರಕಾಶರಾಯರ ಜಯಕಾರವೆಬ್ಬಿಸಿ, ಅವರನ್ನು ಹೊತ್ತು, ಕಾಲುವೆಯ ಬಳಿಗೊಯ್ಯುವರು. ಕಲೆಕ್ಟರ್ ಪೋಲೀಸ್ ಸುಪರಿಂಟೆಂಡೆಂಟ್ ಮೊದಲಾದವರು, ಕಾಲುವೆಯನ್ನು ಕಂಡು ಬಹು ಸಂತೋಷಪಡುವರು.)

ರಾಮಣ್ಣನ ಋಣಮುಕ್ತತೆ

(ಒಂದು ಕಥನಕವನ)

ಶ್ರೀ. ಬಳ್ಳಾರಿಯ ' ಬೀಚಿ '

★

ರಾಮಣ್ಣಗಿನ್ನೂ ಹದಿನಾರೇ ವರ್ಷ !
ಅವನಿನ್ನೂ ಮನೆಬಟ್ಟು ಮುಗಿದಿಲ್ಲ ವರ್ಷ !
ಮೈಸೂರಿಗೋದೆಂದು ಕಳುಹಿದ್ದ ಅಣ್ಣ,
' ಪಾಸಾಗಿ ಬಾ ! ' ಎಂದು ಹರಸಿದ್ದ ಅಣ್ಣ.

ತಾಯ್-ತಂದೆ ನೆನಪೇನೂ ರಾಮಣ್ಣಗಿಲ್ಲ ;
ಬಾಯ್‌ತೆರೆದು ಬೇಡಲೆಲೆ ಕೊಟ್ಟಣ್ಣ ಎಲ್ಲ—
ಹತ್ತಿಕ್ಕಿ ಬಡತನವ ಹೆತ್ತ ತಾಯ್ ತೆರದಿ
ಅತ್ತಿಗೆಯು ಬಾಡಿದಳು ಒಂದೂಟ ತೊರೆದು.

ಒಕ್ಕಣಿ ಬರೆದಿದ್ದ ರಾಮಣ್ಣ ಅಣ್ಣಂಗೆ
' ಸಿಕ್ಕಪ್ಪು ಹಣಕಳುಹು ಬಹುಕಷ್ಟ ನಂಗೆ ! '
' ಬಡವಂಗೆ ಬಾಳೀಕೆ ? ' ಎಂದಾಯ್ತು ಣ್ಣನಿಗೆ ;
' ಒಡವೆಯ ಮಾರಿರಿ ! ' ಎಂದಳಾ ಅತ್ತಿಗೆ.

' ಹಣಕಳುಹಿ ಬೇಗನೆ ' ಎಂದಾಕೆ ನುಡಿಯೆ,
' ಋಣಮುಕ್ತನಾಗುವ ರಾಮಣ್ಣ ದುಡಿಯೆ . . '
ಅಣ್ಣಂಗೆ ಕಣ್ತುಂಬಿ ಗಂಟಲುಬ್ಬಿಂದ,
' ಸಣ್ಣವ ನಿನ್ನನ್ನು ; ನನಗಲ್ಲ ! ' ಎಂದ.

* * *

ಚೆನ್ನಾಗಿ ಓದೆಂದು ಅಣ್ಣನ ಪತ್ರ ;
ಅನ್ನ-ನಿದ್ದೆಯ ಬಗ್ಗೆ ಅತ್ತಿಗೆಯ ಪತ್ರ ;
' ಕಷ್ಟಬಟ್ಟೋದುವೆನು ಯೋಚನೆಯು ಬೇಡಣ್ಣ !
ಸಾಷ್ಟಾಂಗ ವಂದನೆಯ ಅತ್ತಿಗೆಗೆ ಹೇಳಣ್ಣ ! '

* * *

ಅತ್ತಿಯು ಅಯ್ತೆಲ್ಲಾ, ರಾಗಿಯು ಮುಗಿಯಿತು ;
ಅಕ್ಕಪಕ್ಕದಲಿ ಕಡ ಬಹುವಾಗಿ ಬೆಳೆಯಿತು.
ಅತ್ತಿಗೆಯು ಇದನುಸುರೆ ಅಣ್ಣ ಉಸಿರಿಟ್ಟ:
' ಒತ್ತೆಯಿಡಲೇನಿಹುದು ಮನೆಯೊಂದು ಬಿಟ್ಟು ? '

ಮೂಗಿಗೆ ಬೆರಳಿಟ್ಟ ಅಣ್ಣ ಪೆಚ್ಚಾಗಿ ;
ಬಾಗಿಲಿಗೆ ನಿಂತಳು ಅತ್ತಿಗೆಯು ಹಾಗೆ.
' ಮನೆಯಿದ್ದರೊಟ್ಟಲ್ಲ ; ಉಂಡರಿರಲೆಡೆಯಿಲ್ಲ
ಕೊನೆಗದನೆ ಮಾರುವ ಗತಿ ಬಂದಿತಲ್ಲ . . ! '

' ನಿಮ್ಮದೇ ಮನೆಯಲ್ಲ ಮಾರಿ ಉಂಡುಡುವುದಕೆ ;
ತಮ್ಮನಿಗು ಪಾಲುಂಟು ; ಮಾರುವುದು ಏಕೆ ? '
ಹೆಮ್ಮೆಯಿಂದತ್ತಿಗೆಯು ನುಡಿದಳೊಳಹೊರಟು ;
ಸುಮ್ಮನೇ ಕುಳಿತಣ್ಣ ತಲೆಗೆ ಕೈಕೊಟ್ಟು !

" ಓದುವ ಯಂತ್ರವಿದೆ, ಹಾರುವ ಯಂತ್ರವಿದೆ ;
ಹಾಡುವ ಯಂತ್ರವು ಮನೆಮನೆಗೂ ಇದೆ !
ಹಾಳು ಹೊಟ್ಟೆಯ ಹಸಿವ ಹಿಂಗಿಸುವ ಯಂತ್ರವದು—
ಬಾಳ ಕಹಿ ಕಳೆಯುವುದು— ಬರುವುದದೆಂದು ?

" ಸಾಲವನು ತಂದು ಸಂದರ್ಭವ ಸಾಗಿಸಿ,
ಕಾಲವನೆ ತಳ್ಳುವ ರಾಮಣ್ಣಗಾಗಿ !
ರಾಮಣ್ಣ ಗಳಿಸಲು, ಸುಖದಿಂದ ಬಾಳುವ !
ರಾಮಣ್ಣ ಬಂದಾಗ ಕತೆಯೆಲ್ಲ ಹೇಳುವ ! "

* * *

ಪ್ರತಿದಿನವು ಹೆಣ್ಣುಗಳ ತಂದೆಯರ ಓಡಾಟ,
ಅತಿಬಿಂಕ ಅತ್ತಿಗೆಗೆ ಕಂಡಿವರ ಮೇಲಾಟ:
' ಓದು ಮುಗಿಯುವ ಮೊದಲೆ ಮದುವೆಯ ಮಾತಿಲ್ಲ ! '
ಆದರೂ ಮದುವೆ ನಾಡುವ ಆಶೆ ಎದೆಯೆಲ್ಲ.

* * *

ಮೇಲಿಂದ ಮೇಲೆ ಹಣಕೇಳಿ ರಾಮಣ್ಣ,
ಎಲ್ಲಿಂದ ತರಲೆಂದು ಕುಳಿತಾಗ ಅಣ್ಣ,
' ಪರವೂರಲಿದ್ದು ಓದುವ ಹುಡುಗ ರಾಮಣ್ಣ ;
ಮಾರಿರೀ ಮನೆಯನು ' ಎಂದಳಾ ಹೆಣ್ಣು.

* * *

ಮೈಸೂರಿನಿಂದೇಕೊ ಕಾಗದವೆ ಇಲ್ಲ—
ಏಸೊಂದು ದಿವಸಗಳು ಉರುಳಿದರು—ಇಲ್ಲ !
' ಪಾಸಾದನಿಲ್ಲವೊ ! ' ಎಂಬ ಕಳವಳ ಬಲಿತು,
ಏಸೇಸೊ ಸುಳ್ಳುಗಳ ಬರೆಯಿಸಿಯು ಅಯ್ತು.

ಅತ್ತಣುತ್ತರವಿಲ್ಲ ; ಇತ್ತ ಇರಲೆಡೆಯಿಲ್ಲ.
ಬತ್ತಿಯಾದೊಡಲಿಂಗೆ ತುಪ್ಪು ಅನ್ನವು ಇಲ್ಲ !
' ಒಲ್ಲೆ ನಾನೀ ಊರ, ಅಲ್ಲಿಗೇ ಹೋಗುವಾ
ಎಲ್ಲಿ ರಾಮಣ್ಣನೋ ಅಲ್ಲಿಯೇ ನಾನಿರುವ ! '

ಅತ್ತಿಗೆಯು ಹಟಹಿಡಿಯೆ ಬ್ಯಲು ಹೇಳಿದನು ಅಣ್ಣ:
'ಒತ್ತಿ ಇಡು ಆಶೆಯ, ಬರುವನು ರಾಮಣ್ಣ'
ಸತ್ತಿತಣ್ಣನ ಮಾತು, 'ಇನ್ನಿಚ್ಚಿ' ಎಂದಣ್ಣ.
ಹತ್ತಿದರು ಉಗೆಬಂಡಿ ಅತ್ತಿಗೆ—ಅಣ್ಣ.

ಇಲ್ಲಿಲ್ಲ ಅತ್ತಿಗೆಯು; ಮತ್ತೆಲ್ಲಿ ಇಹಳು?
ಅಲ್ಲಿರುವ ರಾಮಣ್ಣನೆದುರು ಕುಳಿತಿಹಳು.
ಕಳೆದ ಕಷ್ಟವ ಹೇಳಿ ನಳ್ಕು ಕೆಲೆಯುವಳು.
ಗಾಡಿಯಲ್ಲಿದ್ದಾಗ ಬರಿಯೆ ಕನಸುಗಳು!

ಮೈಸೂರಿನಲಿ ಎಲ್ಲಿ ರಾಮಣ್ಣ ಸಿಗುವ?
ಬೇಸತ್ತು ನಿಂತಲೆಯೆ ಅಣ್ಣ ಉಸಿರಿಡುವ!
ದೀಪದ ಮೈಸೂರು, ಧಣಿಗಳಿಗೆ ಇದು ಊರು;
ಪಾಪ, ಅಣ್ಣ-ಅತ್ತಿಗೆಯರ ಕೇಳುವವರಾರು?

ಬಸವನ ಗುಡಿಯೆಲಿ ಬಂಗ್ಲೆಯ ಸಾಲಿನಲಿ,
ಹೊಸತಾಗಿ ತಲೆಯೆತ್ತಿ ದರಮನೆಯ ಬಾಗಿಲಲಿ,
ಕೂಗುತ್ತ ಓಡಲು ಅತ್ತಿಗೆಯು ಆತುರದಿ
ತೇಗುತೆ ರಾಮಣ್ಣ ಬಂದ ಚಚ್ಚರದಿ!

* * *

ಕಣ್ಣು ಕಿಡಿಕಿಡಿಯಾಗೆ ಕಂಡಿವರ ರಾಮಣ್ಣ;
ತನ್ನುದ್ದ ಜಡೆಯಾಕೆ ಕೇಳೆ ಇವರಾರೆಂದು,
ತಕ್ಷಣವೆ ಹಸೆಬೆವತು ಕಣ್ಮರಸಿ ಎಂದ:
"ಭಿಕ್ಷುಕರು; ಇಕ್ಕಿ ಕದ ಒಳಗೆ ಬಾ ಚಿಂದ!"

ಕನ್ನಡನಾಡಿನ ಪಟ್ಟಣಗಳಲ್ಲಿ ಜಯಂತಿಯ ಪ್ರಚಾರಕ್ಕಾಗಿ ಏಜಂಟರು ಬೇಕಾಗಿದ್ದಾರೆ. ಇಷ್ಟವಿದ್ದವರು ಪತ್ರವ್ಯವಹಾರಮಾಡಿ ನಿಯಮ ತಿಳಿದುಕೊಳ್ಳಿ!

ಮುಂಬಯಿ ಸರಕಾರದ ಔದ್ಯೋಗಿಕ ಸಮಿತಿಯಿಂದ ಮನ್ನಣೆಯನ್ನು ಪಡೆದಿರುವ

ದಿ ನ್ಯಾಶನಲ್ ಟೇಲರಿಂಗ್ ಕಾಲೇಜ್

ಮರಾಠಾಗಲ್ಲಿ—ಹುಬ್ಬಳ್ಳಿ.

ಹಣವನ್ನು ವೆಚ್ಚಮಾಡಿ ಎಲ್ಲೆಲ್ಲಿಯವೊ ಖಾಸಗೀ ಸರ್ಟೀಫಿಕೆಟುಗಳನ್ನು ಪಡೆದುಕೊಳ್ಳುವುದಕ್ಕಿಂತ, ಸರಕಾರದಿಂದ ಪೂರೈಯುವ ಅಧಿಕೃತ ಸರ್ಟೀಫಿಕೇಟುಗಳನ್ನು ಪಡೆದುಕೊಂಡರೆ ಒಳ್ಳೆಯದಲ್ಲವೆ?

ಈ ಸಲ ನಮ್ಮ ಕಾಲೇಜಿನ ಪರಿಣಾಮವು ಸರಕಾರೀ ಪರೀಕ್ಷೆಯಲ್ಲಿ ೧೦೦ ಕ್ಕೆ ೯೦ ರಂತೆ ಆಗಿದೆ.

ಹೆಚ್ಚಿಗೆ ಮಾಹಿತಿ ಬೇಕಾಗಿದ್ದವರು ೧ ಆಣೆಯ ಸ್ಟ್ಯಾಂಪು ಇಟ್ಟು ಬರೆದು ಕೇಳಿರಿ.

ಎನ್. ಆರ್. ಬುಲ್‌ಬುಲಿ,
D.M.T.C.A. (London)
ಪ್ರಿನ್ಸಿಪಾಲ್

ಮಾರಾಟಕ್ಕೆ ತಯಾರಿದ್ದ ಪುಸ್ತಕಗಳು

ಶ್ರೀ. ಚಿಂತಾಮಣ ರಾಮಚಂದ್ರ ಸಹಸ್ರಬುದ್ಧೇಕೃತ

ಚಹಾಗೀತಾ	ಸಂಸ್ಕೃತ	..	೦– ೮–೦
ಕಾಕದೂತ	,,	..	೦– ೬–೦
ರಾಷ್ಟ್ರೀಯೋಪನಿಷತ್	,,	..	೦– ೨–೬
ರಾಷ್ಟ್ರೀಯ ಮಹಿಷಾಸುರ	,,	..	೦– ೧–೦
ಮಹಿಷಾಸುರ	,,	..	೦– ೧–೦
ಪ್ರತಿಕಾರ ನಾಟಕಮ್	,,	..	೧– ೦–೦
ಅಕ್ಷರಲ-ಮರ್ದನ-ನಾಟಕಮ್	,,	..	೧– ೨–೦
ರಾಷ್ಟ್ರೀಯ ಮಂಗಲಾಷ್ಟಕ	,,	..	೦– ೦–೬
ತಿಲಕ ಸೂಕ್ತಿ ಶತಕಮ್	,,	..	೦– ೪–೦
ಪನ್ಹಾಳಗಡಚಾ ಕಿಲ್ಲೇದಾರ	ಮರಾಠೀ	..	೦– ೬–೦
ಗಡ ಆಲಾ ಪಣ ಸಿಂಹ ಗೆಲಾ	,,	..	೦–೧೨–೦
ದೇಶೀ ದುಮದುಮೆ ಶತಕ	,,	..	೦– ೨–೦

ಕಿಮ್ಮತ್ತಿನ ಹೊರತಾಗಿ ಟಪಾಲು ಹೆಚ್ಚಿಗೆ ಬೀಳುವದು.

ವಿಳಾಸ:— ಮ್ಯಾನೇಜರ್,
ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್, ಧಾರವಾಡ.

ಆತ್ಮೋನ್ನತಿಗೆ ತಡೆಯಾವುದು?

(ಜೀವನಕಲಾವಿಚಾರ)

ಶ್ರೀ. ವಿಶ್ವನಾಥ ಹೆಗಡೆ, ಮುಂಬಯಿ

★

'ನಮ್ಮಿಂದ ಏನಾದೀತು?' ಎನ್ನುವ ನಿರಾಶೆಯ ಮಾತೇ ಆತ್ಮೋನ್ನತಿಗೆ ಮುಖ್ಯವಾದ ತಡೆ. ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇರುವುದು. ಆತ್ಮೋನ್ನತಿ ಯಾರೊಬ್ಬರ ಸಹಾಯದಿಂದ ಆಗುವುದಿಲ್ಲ; ಸ್ವಂತದ ಸಹಾಯದಿಂದಲೆ ಸ್ವಂತದ ಆತ್ಮೋನ್ನತಿಯಾಗುವುದು. ತನ್ನ ಕಾಲ ಮೇಲೆ ತಾನು ನಿಲ್ಲಲು ಬಯಸುವವನು ಕೀರ್ತಿಯ ಗುಡಿಯ ಕಳಸವನ್ನೇರಿ ನಿಲ್ಲಬಲ್ಲನು!

★

ಎಷ್ಟೋ ಮಂದಿ, ತಮ್ಮ ಬದುಕಿನಲ್ಲಿ ಅಭಿವೃದ್ಧಿಪಡೆಯದಿದ್ದರೆ ಏನಾದರೊಂದು ಅಸಮರ್ಥನೀಯವಾದ ನೆಪ ಹೇಳುತ್ತಾರೆ. "ನಮಗೆ ಅಂಥ ಸತಿಬವಿಲ್ಲ! ನಮ್ಮನ್ನು ಯಾರು ಕೇಳುವರು? ನಾವು ಬಡವರು! ನಮಗೆ 'ವಶೀಲಿ'ಇಲ್ಲ! ಒಳ್ಳೆಯ ಸಂದರ್ಭಗಳೇ ನಮಗೆ ಸಿಕ್ಕುವುದಿಲ್ಲ! ನಮಗೆ ಯಾರೂ ಸಹಾಯಮಾಡುವವರಿಲ್ಲ! ನಾವು ಮುದುಕರಾದೆವು, ಇನ್ನೇನು ಪ್ರಯೋಜನ?" ಎಂದು ಮುಂತಾಗಿ ಹಲವರ ಬಾಯಿಗಳಿಂದ ಹೊರಡುವ ದೈನ್ಯವಾಣಿಗಳನ್ನು ಯಾವಾಗಲೂ ಕೇಳಬಹುದು. ಈ ನೆಪದಲ್ಲಿ ಏನಾದರೂ ತಥ್ಯವಿದೆಯೆ? ನೋಡೋಣ.

ಬಡತನದಲ್ಲಿ ಬೆಳೆದು ಘನತೆಗೇರಿದ ಕರ್ತೃತ್ವಶಾಲಿಗಳ ಉದಾಹರಣೆಗಳೆಷ್ಟು ಬೇಕು? ಉನ್ನತಿಹೊಂದಿದವರಲ್ಲಿ ಅನೇಕರು ಬಡತನದ ಮಡಿಲಲ್ಲಿ ಬೆಳೆದವರು; ಎಷ್ಟೋ ಜನರು ತಂದೆ-ತಾಯಂದಿರ ಆಲನೆ-ಪಾಲನೆಗಳನ್ನು ಕಂಡಿದ್ದಿಲ್ಲ! ಎಷ್ಟೋ ಜನರಿಗೆ ಚಿಕ್ಕಂದಿನಲ್ಲಿ ವಿದ್ಯೆಕಲಿಯುವ ಅನುಕೂಲತೆಯಿದ್ದಿಲ್ಲ! ಇನ್ನೆಷ್ಟೋ ಮಂದಿಗೆ ಹೊತ್ತಿನಿಂದ ಹೊತ್ತಿಗೆ ಕೂಳಿಗೆ ಗತಿಯಿರಲಿಲ್ಲ! ಅನೇಕರಿಗೆ ಮೈತುಂಬ ಅರಿವೆ-ಅಂಜಡಿಗಳಿರಲಿಲ್ಲ! ಹಲವರಿಗೆ "ಒನ್ನಿ, ನಾವು ಸಹಾಯಮಾಡುತ್ತೇವೆ" ಎಂದು ಹೇಳುವ ಆಪ್ತೇಷ್ಟರಿದ್ದಿಲ್ಲ!

ಎಷ್ಟೋ ಮಂದಿ, ಗಲ್ಲಿ-ಗಲ್ಲಿಯಲ್ಲಿಯೂ ಓಡಾಡಿ, ಧ್ವನಿಬೀಳುವ ವರೆಗೆ ಕೂಗುತ್ತ ವೃತ್ತಪತ್ರಿಕೆಗಳನ್ನು ಮಾರಿಕೊಂಡು ಮುಂದೆ ಬಂದಿರುವರು. ಇನ್ನೆಷ್ಟೋ ಮಂದಿ, ಮ್ಯುನಿಸಿಪಾಲಿಟಿಯ ದೀಪದ ಬೆಳಕಿನಲ್ಲಿ ಓದಿ, ರಸ್ತೆಯ ಮುಗ್ಗಿಲಲ್ಲಿ ಮಲಗಿ, ಬೆಳಗುಮಾಡಿ, ವಿದ್ಯೆಕಲಿತು ಉನ್ನತಿಗೇರಿದವರಿದ್ದಾರೆ. ಹೊಟ್ಟೆಯ ಸಲುವಾಗಿ ಬೇರೆಯವರ ಮನೆಗಳಲ್ಲಿ ಜೀತದ ಆಳಾಗಿ ದುಡಿದು, ಬೈಗುಳನ್ನು ತಿಂದು, ಬಿಡುವಿನಲ್ಲಿ ಜ್ಞಾನಸವನ್ನು ಸಂಪಾದಿಸಿಕೊಂಡು ಪ್ರಗತಿ ಹೊಂದಿದವರಿದ್ದಾರೆ. ಮಧುಕರಿ ಬೇಡಿ, ಹಗಲುರಾತ್ರಿ ಕಷ್ಟಪಟ್ಟು ವಿದ್ಯೆಕಲಿತು, ಚಿಕ್ಕ ನೌಕರಿಯಿಂದ ದೊಡ್ಡಸಾಹೇಬರಾದವರೂ ಬೇಕಾದಷ್ಟು ಜನ ಇದ್ದಾರೆ.

ಏಬ್ರಹಾಮ್ ಲಿಂಕನ್ನನ ಸ್ಥಿತಿಯು ಇವರದಿದ್ದಿದ್ದರೆ ಏನೆನ್ನುತ್ತಿದ್ದರೊ! ಸಾಲೆ, ಮನೆ-ಮಠ, ಉಗೆಬಂಡಿ, ಪುಸ್ತಕ, ವೃತ್ತಪತ್ರಿಕೆ, ಹಣ ಮೊದಲಾದ ಅವಶ್ಯಕತೆಗಳಿರದ ಕಾಡಿನಲ್ಲಿ ಹುಟ್ಟಿ, ಕಿಟಕಿ-ಸೆಲಗಳಿಲ್ಲದ ಕಟ್ಟಿಗೆಯ ಮನೆಯಲ್ಲಿ ಇದ್ದು, ಸಾಲೆಗೆ ಹೋಗಬೇಕಾದರೆ ೯ ಮೈಲು ನಡೆದು ಕೊಂಡು ಹೋಗುವ ಪ್ರಸಂಗಬಂದಿದ್ದರೆ ಏನು ಮಾಡುತ್ತಿದ್ದರೊ! ಲಿಂಕನ್ನನು ಇಂತಹ ಕಠಿನಪರಿಸ್ಥಿತಿಗಳನ್ನೂ ಕಡೆಗಣಿಸಿದನು. ಹಗಲು ರಟ್ಟೆಮುರಿಯೆ ದುಡಿದು ದಣಿದರೂ, ರಾತ್ರಿ ಉರಿಯ ಬೆಳಕಿನಲ್ಲಿ ಓದಿ ಬುದ್ಧಿವಂತನಾದನು. ಪುಸ್ತಕವನ್ನು ಕೊಂಡು ಕೊಳ್ಳುವ ಸಾಮರ್ಥ್ಯವು ಅವನಲ್ಲಿದ್ದಿಲ್ಲ; ಆದರೂ ಓದುವ ಲವಲವಿಕೆಯಿದ್ದುದರಿಂದ, ಒಂದು ಸಲ ಪುಸ್ತಕವನ್ನು ಎರವಲಾಗಿ ತರುವುದಕ್ಕೋಸ್ಕರ, ೪೦ ಮೈಲು ನಡೆದುಕೊಂಡು ಹೊಗಿದ್ದನು! ಕಠಿನಪರಿಸ್ಥಿತಿಗಳನ್ನು ಪುರುಷನಂತೆ ಎದುರಿಸಿ, ದಿನದಿನಕ್ಕೂ ಊರ್ಜಿತಾವನ್ನೆಹೊಂದಿ, ಉತ್ತರ ಅಮೇರಿಕದ ರಾಷ್ಟ್ರಾಧಿಪತಿಯಾದನವನು.

ಬಡಬ್ರಾಹ್ಮಣರ ಕುಲದಲ್ಲಿ ಹುಟ್ಟಿ ಬೆಳೆದು, ಹಗಲು ಮನೆಗೆಲಸ ಮಾಡಿ, ರಾತ್ರಿ ನಿದ್ದೆಬರಬಾರದೆಂಬ ಉದ್ದೇಶದಿಂದ ಕಣ್ಣೊಳಗೆ ಎಣ್ಣೆಹಾಕಿಕೊಂಡು ಓದಿ, ಶಾಸ್ತ್ರ, ತರ್ಕ, ಅಲಂಕಾರ ಮೊದಲಾದುವನ್ನು ಅಭ್ಯಾಸಮಾಡಿ 'ವಿದ್ಯಾಸಾಗರ' ಎಂದು ಪ್ರಸಿದ್ಧಿ ಹೊಂದಿದ **ಈಶ್ವರಚಂದ್ರರ** ಚರಿತ್ರೆಯನ್ನು ನೆನಪುಮಾಡಿಕೊಳ್ಳೋಣ. ಎಡರು-ತೊಡರೆಗಳಿಗೆ ಹಿಂಜರಿಯದೆ ವಿವಾಹ ಪದ್ಧತಿಯಲ್ಲಿ, ಶಿಕ್ಷಣ ಪದ್ಧತಿಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಿ, ಅನೇಕ ಸಂಸ್ಥೆಗಳನ್ನು ಸ್ಥಾಪಿಸಿ, ಅವರು ಎಷ್ಟೋ ಜನರಿಗೆ ಉಪಕಾರಮಾಡಿ, ಹೆಸರುವಾಸಿಯಾಗಲಿಲ್ಲವೆ?

ಗೋಪಾಲ ಕೃಷ್ಣ ಗೋಖಲೆ ಬಡಕುಟುಂಬದಲ್ಲಿಯೆ ಜನ್ಮ-ನೆತ್ತಿದರು. ಚಿಕ್ಕವರಿರುವಾಗಲೆ ತಂದೆಯನ್ನು ಕಳೆದುಕೊಂಡರು. ಅವರು ಸುಮ್ಮಗೆ ಕುಳಿತಿದ್ದರೆ? ಮನಗೊಟ್ಟು ದುಡಿದು ಉತ್ತಮ ಶಿಕ್ಷಕರೆಂದು ಮಾನಹೊಂದಿ, ಆಂಗ್ಲಭಾಷೆಯಲ್ಲಿ ಪ್ರಭುತ್ವವನ್ನು ಸಂಪಾದಿಸಿ, ದೊಡ್ಡ ವಾಗ್ಮಿಗಳಾದರು. ಹಗಲಿರುಳು ಕಷ್ಟಪಟ್ಟು ದೇಶಸೇವೆಗೆ ಜನ್ಮವನ್ನು ವಿಾಸಲಾಗಿರಿಸಿ ಹೆಸರುವಾಸಿ ಗಳಾದರು.

ಊಲ್‌ವರ್ತ್‌ನ ತಂದೆ-ತಾಯಿಗಳೂ ಬಡವರಾಗಿದ್ದರು. ಅವನ ಶಿಕ್ಷಣದ ಮಾತು ಹಾಗಿರಲಿ, ಒಪ್ಪೊತ್ತು ಸಲ ಹೊಟ್ಟೆಗೆ ತತ್ವಾರವಾಗಿದ್ದಿತು. ಕಲಿತ ಎನೋ ಒಂದಿಷ್ಟು ವಿದ್ಯೆಯನ್ನು ಮುಗಿಸಿ, ಚಿಕ್ಕಂದಿನಲ್ಲಿಯೇ ಬೇಸಾಯ ಮಾಡಬೇಕಾಯಿತು. ಅದರಲ್ಲಿ ಲಾಭಕ್ಕಿಂತ ಕಷ್ಟ-ನಷ್ಟಗಳೇ ಹೆಚ್ಚಾದ ಬಳಿಕ ನೌಕರಿಯನ್ನು ಅರಸಹತ್ತಿದನು. ಎಲ್ಲಿ ಹೋದರೂ ಸ್ಥಳಸಿಕ್ಕಲಿಲ್ಲ. ಹತಾಶನಾಗದೆ ಬಿಡುವಿನಲ್ಲಿ ಓದುತ್ತ, ಅನುಭವವನ್ನು ಸಂಪಾದಿಸುತ್ತ ಜನರ ಪರಿಚಯ ಮಾಡಿಕೊಳ್ಳುತ್ತಿರಲು, ರೇಲ್ವೆ ಕಂಪನಿಯಲ್ಲಿ ಒಂದು ಸಣ್ಣ ನೌಕರಿ ಸಿಕ್ಕಿತು. ಕೆಲಕಾಲದಲ್ಲಿಯೆ ವ್ಯಾಪಾರ ಮಾಡಬೇಕೆಂಬ ಆಕಾಂಕ್ಷೆ ಅವನಲ್ಲಿ ಉಂಟಾಯಿತು. ಆದರೆ ಜೋಮುಹಿಡಿಸುವ ಚಳಿಯಲ್ಲೂ ಬೂಟಿಗೆ ಸಹ ಗತಿಯಿಲ್ಲದ ಊಲವರ್ತ್‌ನಲ್ಲಿ ಭಂಡವಾಳವೆಲ್ಲಿಂದ ಬರಬೇಕು? ಬಂದ ಹಣ-ಕಾಸಿನಲ್ಲಿಯೇ ಸ್ವಲ್ಪ ಸ್ವಲ್ಪ ತೆಗೆದಿಡುತ್ತ, ಕೊನೆಗೆ ೫-೬ ಸೆಂಟುಗಳಲ್ಲಿ ಸಿಕ್ಕಬಹುದಾದ ಗೃಹೋಪಯೋಗಿ ಸಾಮಾನುಗಳನ್ನು ಮನೆ-ಮನೆಗೊಯ್ದು ಮಾರಹತ್ತಿದನು. ಇದರಲ್ಲಿಯೂ ಮೂರು ಸಲ ಸೋತ; ಮತ್ತೆ ಬೇಸಾಯಕ್ಕೆ ಮರಳಿದ! ಆದರೂ 'ಮುಂದೆ ಬರಬೇಕು, ಧನಿಕನಾಗಬೇಕು!'ಎಂಬ ಅವನ ಆಕಾಂಕ್ಷೆಯು ಅಚಲವಾಗಿದ್ದಿತು. ಮತ್ತೂ ವ್ಯಾಪಾರಮಾಡುವ ಸಂಧಿಯನ್ನು ಕಲ್ಪಿಸಿಕೊಂಡು ನ್ಯೂಯಾರ್ಕಿಗೆ ತೆರಳಿದನು. ಅಲ್ಲಿ ಅವನ ಪ್ರಯತ್ನವು ಸಫಲವಾಯಿತು. ವ್ಯಾಪಾರವು ಬೆಳೆಯಿತು. ಉತ್ಪನ್ನ ಹೆಚ್ಚಿತು. ಕೆಲವು ವರ್ಷಗಳಲ್ಲಿ ಕೋಟ್ಯಧೀಶನಾದನು! ಅವನ ಕೈಕೆಳಗೆ ಒಟ್ಟು ಐವತ್ತು ಸಾವಿರ ಜನರು ಚಾಕರಿ ಮಾಡುತ್ತಿದ್ದರು. ಆಗಿನ ಕಾಲಕ್ಕೆ ಅತಿ ಎತ್ತರವಾಗಿದ್ದ ೭೯೫ ಅಡಿ ಉನ್ನತವಾದ ಭವ್ಯ ಪಾರತಿಗೆ ಮೂಲಕನಾದನು.

ನೆಪೋಲಿಯನ್ನು ಸಾದಾ ಸೀಪಾಯಿಯಾಗಿದ್ದನು. ಟೆಲಿಫೋನಿನ ಜನಕನಾದ **ಎಡಿಸನ್**ನು ಪುದ್ದಿತಿಳಿಸುವ ಚಪರಾಸಿಯಾಗಿದ್ದನು. ಚಿಮಣಿಯೆಣ್ಣೆಯ ರಾಜನೆಂದೆನಿಸಿಕೊಳ್ಳುವ ರಾಕ್‌ಫೆಲರ್‌ನು ಕಾರಕೂನಿಕೆ ಮಾಡುತ್ತಿದ್ದನು. ಮುಸೋಲಿನಿಯು ಸಾಧಮಿಕ ಶಾಲೆಯಲ್ಲಿ ಕಲಿಸುತ್ತಿದ್ದನು. ಬರ್ನಾರ್ಡ್‌ಶಾ ಟೆಲಿಫೋನಿನ ಚಾಕರನಾಗಿದ್ದನು. ಥಾಮಸ್ ಆಟಾ ಹಳ್ಳಿಯ ಬಡ ಮೊಚ್ಚೆಗಾರನ ಮಗನಾಗಿದ್ದನು. ಸ್ಟಾಲಿನ್‌ನೂ ರೈತರ ವಂಶದ ಚಮ್ಮಗಾರನ ಮಗನು. ಶೇಕ್‌ಸ್ಪಿಯರ್ ಕವಿಯು ಕಟುಕನ ಕೈಕೆಳಗೆ ಉಮೇದುವಾರನಾಗಿದ್ದು, ಮನೆಯಿಂದ ಮನೆಗೆ ಮಾಂಸವನ್ನು ತಲುಪಿಸುವಂಥವನಾಗಿದ್ದನು. ಎಲ್ಲರೂ ಬಡತನದ ಶಾಲೆಯಲ್ಲಿ ಕಲಿತವರೆ!

ಬಡತನದಲ್ಲಿ ಭಾಗ್ಯವು ಅಡಗಿದೆ. ಬಡವರೂ ಅವರ ಮಕ್ಕಳೂ ಸುಟಿಯಾಗಿಯೂ ಗಟ್ಟಿಮುಟ್ಟಾಗಿಯೂ ಆತ್ಮಬಲವುಳ್ಳವರಾಗಿಯೂ ಇರುವರು. ಶ್ರೀಮಂತರಿಗೆ ದುರ್ಲಭವಾದ ಎಷ್ಟೋ ಅನುಭವವು ಅವರಿಗೆ ದೊರೆಯುವುದು. ಅವರು ಸ್ವಾವಲಂಬಿಗಳಾಗುವರು. ಅವರ ಶಾರೀರಿಕ ಮಾನಸಿಕ ಶಕ್ತಿಗಳು ವಿಕಾಸಗೊಂಡು, ಬಡತನದ ಕುಲುಮೆಯಲ್ಲಿ ವಿಕಸದ್ದರಾಗಿ, ನಿಜವಾದ ಪುರುಷರಂತೆ ಬದುಕಬಲ್ಲರು. ತಮ್ಮ ಅನಿಚ್ಛಿನ್ನವಾದ ಪರಿಶ್ರಮದಿಂದ ತಾವೇ ಮುಂದೆ ನುಗ್ಗುವರು.

ನಿಮಗೆ ಜನರ ಸಹಾಯವಿಲ್ಲವೆ? ನಿಮಗೆ ಸುಸಂದರ್ಭಗಳಿಲ್ಲವೆ? ದಾರಿ ತೋರುವುದಿಲ್ಲವೆ? ಸುಳ್ಳು! ನಿಮ್ಮ ಪಾಲಿನ ಕೆಲಸವನ್ನು ಮಾಡುತ್ತ ಹೋದರೆ ನಿಮಗೆ ಸಹಾಯ ಸಿಕ್ಕೇ ಸಿಕ್ಕುವುದು. ನಿಮಗೆ ನೀವೇ ನೊದಲು ಸಹಾಯಮಾಡಿಕೊಳ್ಳಿ. ನಿಮ್ಮ ಕಾಲ ಮೇಲೆಯೆ ನಿಂತಿರಲಿಕ್ಕೆ ಕಲಿಯಿರಿ. ಅನುಕೂಲತೆಗಳು ತಾವೇ ಕಾಣಿಸಿಕೊಳ್ಳುವುವು. ಕಣ್ಣು-ಕಿವಿಗಳನ್ನು ತೆರೆದು ನೋಡಿರಿ. ಯೋಜನೆ ಮಾಡಿರಿ. ನಿಮ್ಮ ಸುತ್ತುಮುತ್ತಲೂ ನಿಮ್ಮ ಪ್ರಗತಿಗೆ ಅನುಕೂಲವಾದ ಎಷ್ಟೊ ಸಂದರ್ಭಗಳು ಪ್ರತಿದಿನವೂ ಒದಗುತ್ತಲಿರುತ್ತವೆ. ಪರಿಸ್ಥಿತಿಯನ್ನು ನಾವು ಬದಲಾಯಿಸದ ವಿನಾ ಅದು ತಾನೇ ಬದಲಾಗುವುದು ಅಪರೂಪ. ಹೊಸ ಸಂದರ್ಭಗಳನ್ನು — ಹೊಸ ಪರಿಸ್ಥಿತಿಯನ್ನು — ನಾವೇ ಉಂಟುಮಾಡಿಕೊಳ್ಳಬೇಕು. ದೃಢನಿಶ್ಚಯಕ್ಕೆ ಕಬ್ಬಿಣವೂ ಮಣಿಯುವುದು. ಜೀನ್ನಾಗಿ ಬಾಳಬೇಕೆಂಬ ಬಲವಾದ ಲವಲವಿಕೆಯಿದ್ದರೆ, ನಿಮಗೆ ತಾನೆತಾನಾಗಿ ದಾರಿ ಕಾಣುವುದು; ವಿನೇನು ಮಾಡಬೇಕೆಂಬುದು ತಿಳಿಯುವುದು. ಎಡರುಗಳನ್ನು ಕಂಡು ಹೆದರಬೇಡಿರಿ! ಕಷ್ಟಗಳು ಬಂದರೆ ಕೆಚ್ಚೆದೆಯವರಾಗಿರಿ! ಜೀವನವನ್ನು ಅಂದಗೊಳಿಸುವುದು ನಿಮಗೆ ಸಾಧ್ಯವಿದೆ!

ಕೈ ಕೆಸರಾದರೆ ಬಾಯಿ ಮೊಸರಲ್ಲವೆ? ನಮಗೆ ಕಾರ್ಯಸಿದ್ಧಿ ಬೇಕಿದ್ದರೆ ಪರಿಶ್ರಮರೂಪದ ಬೆಲೆಯನ್ನು ಸಲ್ಲಿಸಬೇಕಷ್ಟೆ? ಯೋಗ್ಯವಾದ ಪ್ರಯತ್ನವಾಡಿದರೆ ನಮ್ಮ ಮನೀಷೆಗಳು ಸಫಲವಾಗುವುವು. ಇದನ್ನು ನೆನಪಿನಲ್ಲಿಟ್ಟು ಕಾರ್ಯರಂಗಕ್ಕಿಳಿಯಿರಿ; ಆಕಾಂಕ್ಷೆಗಳು ನೆರವೇರುವ ತನಕ ನಿಂದಿಸಬೇಡಿರಿ!

ಆತ್ಮೋನ್ನತಿಗೆ ಬಡತನವಾಗಲಿ, ಪ್ರಾಯವಾಗಲಿ, ಇತರ ಜನರಾಗಲಿ, ಕಾಲವಾಗಲಿ ತಡೆಯನ್ನುಂಟು ಮಾಡುವುದಿಲ್ಲ. ನಾವೇ ದೊಡ್ಡ ತಡೆ. ನಾವೇ ನಮ್ಮ ಶತ್ರುಗಳೂ ಮಿತ್ರರೂ ಆಗಬಲ್ಲೆವು. ನಮ್ಮ ಭಾಗ್ಯವು ನಮ್ಮ ಕೈಯಲ್ಲಿಯೇ ಇದೆ!

ಸ್ಮಶಾನದ ★ ★ ಉಡುಗೊರೆ

(ನೀಳ್ಗತೆಯೊಂದು)*

ಶ್ರೀ. ಶ್ಯಾಮಪ್ರಸಾದ್ ಮೌನ್ಗಲ್ಲ, ಬೆಂಗಳೂರು

★

೧

ಅದು ಈ ತಿಂಗಳಲ್ಲಿಯ ಮಾತೆ!

ನಾನು ಅವನ್ನು ಮರೆಯಲು ಬಹಳ ಪ್ರಯತ್ನ ಮಾಡುತ್ತೇನೆ. ಆದರೆ ಆ ಮಾತು ರೂಪುಗೊಂಡು, ನನ್ನ ನೆನಪಿನಲ್ಲಿಯೇ ನೆಲಸಿ ಕೊಂಡಿದ್ದು ಸದಾ ಕಾಡಿಸುತ್ತಲಿದೆ. ಹೇಗೆ ಮರೆಯಲಿ? ಇದಕ್ಕೆ ನನಗೆ ದಾರಿಯನ್ನು ಯಾರು ತೋರಿಸಬಲ್ಲರು? ಮನಸ್ಸು ಆಯಾಸ ಗೊಂಡಿದೆ; ಕಲ್ಪನೆಯು ಕೂಡ ದುಃಖದಿಂದ ಥರಥರನೆ ನಡುಗು ತ್ತಿದೆ. ಪೂರ್ವಜನ್ಮದ ಸುಖ-ದುಃಖಗಳ ಹಾಗೆ ಅದನ್ನು ಮರೆಯ ಬಲ್ಲವನಾಗಿದ್ದರೆ, ನಾನು ಎಷ್ಟು ಸುಖಿಯಾಗಿರುತ್ತಿದ್ದೆ!

ಹೌದು, ಅದು ಈ ತಿಂಗಳಲ್ಲಿಯ ಮಾತೆ! ನನ್ನ ಒಬ್ಬ ಮಿತ್ರನ ಜೀವನ ಸಹಚರಿಯು ದೇಹಾವಸಾನವಾಗಿತ್ತು. ಅವಳು ಪೂರ್ಣ-ಯೌವನದಲ್ಲಿಯೇ ಮೃತಳಾದಳು; ತನ್ನ ಸೌಮಾಂಗಲ್ಯವನ್ನು ಕೂಡ ತನ್ನ ಜೊತೆಯಲ್ಲಿಯೇ ತೆಗೆದುಕೊಂಡು ಹೋದಳು. ನಾಲ್ಕೈರಡು ಗಾಜಿನ ಒಳಗೆಗಳೂ ಅವಳ ಜೊತೆಯಲ್ಲಿಯೇ ಭಸ್ಮ ವಾದುವು; ಮತ್ತು ಅವಳ ಲಲಾಟದ ಸಿಂಧೂರವು ಭಸ್ಮಭೂತ ವಾಯಿತು ಆ ಅಜಉ ಸೌಭಾಗ್ಯವತಿಯೊಡನೆ ನಾನೂ ಸ್ಮಶಾನದ ವರೆಗೆ ಹೋಗಿದ್ದೆ. ಇನ್ನು ಮುಂದೆ ಕಾಲಿಡಲು ಮಾರ್ಗವಿರಲಿಲ್ಲ.

ನನ್ನ ಸಮ್ಮುಖದಲ್ಲಿಯೇ ಅವಳ ದೇಹಲತೆಯು ಉರಿಯುತ್ತಾ ಭಸ್ಮದ ರೂಪದಲ್ಲಿ ಪರಿಣತಿಗೊಂಡಿತು. ಆ ಗೃಹಲಕ್ಷ್ಮಿ, ಆ ಆಶ್ರಿತರ ಜನನಿಯಾದ ಅನ್ನಪೂರ್ಣೆ– ತನ್ನ ಶಯ್ಯೆಗೆ ಅನುರೂಪ ವಾದ "ಕಲಾ"ಸಂಸಾರದ ಅನ್ಯತಟವನ್ನು ಸೇರಿದಳು. ನಾನು ಮರಳಿನಿಂದಿಡಿದ ನದಿಯ ದಡದಮೇಲೆ ಕುಳಿತುಕೊಂಡು ಏನನ್ನೋ ಯೋಚಿಸುತ್ತಿದ್ದೆ. ಏನು ಯೋಚಿಸುತ್ತಿದ್ದೆನೋ ಅದು ನನಗೆ ಜ್ಞಾಪಕವಿಲ್ಲ; ಅದನ್ನು ಜ್ಞಾಪಿಸಿಕೊಳ್ಳುವುದಕ್ಕೂ ನಾನು ಈಗ ಆಶಿಸುವುದಿಲ್ಲ. ಹೌದು, ಏನನ್ನೋ ಯೋಚಿಸುತ್ತಿದ್ದೆ; ಅಲಸಿತ ಅಂಗುಲಿಯಿಂದ ಮರಳಿನ ಮೇಲೆ ಗೆರೆಗಳನ್ನು ತಿದ್ದುತ್ತಿದ್ದೆ.

ಪುಷ್ಯಮಾಸದ ಮಧ್ಯಾಹ್ನ ವಾಗಿತ್ತು. ಜಲವಿಹೀನವಾದ ನದಿಯ ಒಂದು ನಿರ್ಜನ ತೀರದ ಮೇಲೆ ಕೆಲವು ಚಿತೆಗಳು ಹರಡಿದ್ದುವು;

ನದಿಯ ತಡಿಯ ಮರುಳುದಿಣ್ಣೆಯಲ್ಲಿ ಕುಳಿತಾಗ, ಬಳೆಯ ಚೂರುಗಳು ಕೆಲವು ದೊರೆತುವು. ಅದರ ಯೋಚನೆಯಲ್ಲಿರು ವಾಗ ಕಂಡ ಹಗಲುಗನಸಿನಲ್ಲಿ, ಆ ಬಳೆಯಚೂರಿನ ಯಜಮಾನಿತಿ ಕಂಡಳು; ತನ್ನ ಕರುಣಕಥೆ ಹೇಳಿದಳು.

★

ಎದುರಿಗೆ ಒಂದು ಚಿತೆಯು ಉರಿಯುತ್ತಿತ್ತು. ಅದೇ ನನ್ನ ಮಿತ್ರನ ಸುಖಸಂಸಾರದ ಚಿತೆಯಾಗಿತ್ತು. ಅದರ ಮೇಲೆ ಅವನ ಪ್ರಾಣಗಳ ಜ್ಯೋತಿಯು ಉರಿಯುತ್ತಿತ್ತು. ಅಳಸ್ಮಾತ್ತಾಗಿ ಮರಳಿನ ಮೇಲೆ ಒಂದು ಬಳೆಯ ಚೂರು ಗೋಚರವಾಯಿತು. ಅದರ ಕೆಂಪು, ಯಾವಳೋ ಒಬ್ಬ ಸುಮಂಗಲೆಯ ಸಿಂಧೂರದ ರೇಖೆಯ ಹಾಗೆ ಹೊಳೆಯುತ್ತಿತ್ತು. ಹತ್ತಿರದಲ್ಲಿಯೇ ಅಂತಹವೆ ಇನ್ನೈರಡು ಚೂರುಗಳು ಸಿಕ್ಕಿದುವು. ಆ ಚೂರುಗಳನ್ನೆಲ್ಲಾ ಅಂಗೈಯಲ್ಲಿ ಸೇರಿಸಿ ಜೋಡಿಸಿದಾಗ, ಒಂದು ಚಿಕ್ಕ ಬಳೆಯ ಆಕಾರವು ನನ್ನ ಕಣ್ಣುಗಳಿಗೆ ಸ್ಪಷ್ಟವಾಯಿತು.

ನಾನು ಯೋಚಿಸಲು ತೊಡಗಿದೆ: "ಒಂದಾನೊಂದು ದಿನ ಈ ಬಳೆಯ ಆಸ್ತಿತ್ವದ ಮೇಲೆಯೇ, ಯಾವಳೋ ಒಬ್ಬ ಅಬಲೆಯ ಭವಿಷ್ಯದ ಪೂರ್ಣ ಸಹಾನುಭೂತಿಯೂ ಭಾರವೂ ಇದ್ದಿರಬಹುದು. ಆದರೆ– ಇಂದು!!! ಈ ಸ್ಮಶಾನದಲ್ಲಿಯೇ ತನ್ನ ಬಳೆ ಮತ್ತು ಕುಂಕುಮಗಳ ಆಹುತಿಗಳನ್ನು ಕೊಟ್ಟು, ಆ ಹತಭಾಗಿನಿಯು ತನ್ನನ್ನು ತಾನೇ ಬೀದಿಯ ಭಿಕಾರಿಣಿಯನ್ನಾಗಿ ಮಾಡಿಕೊಂಡಿರ ಬಹುದು! ನನಗೆ ಅವಳ ಸ್ಥಾನ-ನಾಮಗಳ ಪರಿಚಯವಿಲ್ಲ. ಆದರೆ ಈ ಬಳೆಯು ಮಾತನಾಡಬಲ್ಲುದಾಗಿದ್ದಿದ್ದರೆ ಒಂದು ಭಯಾನಕ ಸತ್ಯದ ಪರದೆಯು ಪ್ರಕಟವಾಗುತ್ತಿತ್ತು. ಮೂಕ-ಬಳೆಯು ಎಲ್ಲವನ್ನೂ ಸಹಿಸಿತು; ಎಲ್ಲವನ್ನೂ ನೋಡಿತು! ಎಂದು ತನ್ನ ಒಡತಿಯು ಅತಿ ಬಿಡಗಿನಿಂದ ಅಲಂಕರಿಸಿಕೊಂಡು, ತನ್ನ ಜೀವನ ದೇವತೆಯ ಪೂಜೆಯನ್ನು ಮಾಡುತ್ತಿದ್ದಳೋ—ಆ ಒಳ್ಳೆಯ ದಿನವನ್ನೂ ಈ ಬಳೆ ನೋಡಿ ಬಿಟ್ಟಿದೆ; ಎಂದು ಈ ಮಹಾ ರುದ್ರ-ಭೂಮಿಯ ಮೇಲೆ ತನ್ನನ್ನು ಒಡೆದು ಅವಳು ಬಿಸಾಡಿದಳೋ—ಆ ದುರ್ದಿನವನ್ನೂ ಈ ಬಳೆ ನೋಡಿಯಾಗಿದೆ.."ನನ್ನ ಮನಸ್ಸು ಯೋಚಿಸುತ್ತಾ ಯೋಚಿಸುತ್ತಾ ಭಾರವಾಯಿತು ಚಿತೆಯು ಉರಿದು ಬೂದಿಯ ರಾಶಿಯಾಗುವುದಕ್ಕೆ ಆಶಿಸುತ್ತಿತ್ತು. ನೀಲ—ಪೀತಲ ಜ್ವಾಲೆಯು ಅವರಿಸಿಕೊಂಡು, ಆಗಾಗ ಕಾಣಿಸಿಕೊಳ್ಳು ತ್ತಿತ್ತು. ದಿನವು ಕಳೆಯುತ್ತಿತ್ತು; ಒಂದು ದೀರ್ಘ ನಿಶ್ವಾಸ ವನ್ನು ಬಿಟ್ಟು ನನ್ನ ಸ್ನೇಹಿತನು ಎದ್ದನು, ಮತ್ತು ಯಾವ ಹೃದಯಕುಮುದಚಂದ್ರಿಕೆಯನ್ನು ಕ್ಷಣಕಾಲ ಕೂಡ ಅಗಲಿ

* ಹಿಂದೀ ಕಥೆಯೊಂದರ ಅನುವಾದವಿದು. —ಲೇಖಕ

ಇರುತ್ತಿರಲಿಲ್ಲವೋ ಅವಳನ್ನು ಅಗ್ನಿತಲ್ಪದಲ್ಲಿ ಮಲಗಿರಲು ಬಿಟ್ಟು, ಹೊರಡುವುದಕ್ಕೆ ಸಿದ್ಧನಾದನು. ಬಳೆಗಳ ಚೂರುಗಳನ್ನು ಜೇಬಿನೊಳಗೆ ಹಾಕಿಕೊಂಡು, ನಾನೂ ಅವನನ್ನು ಹಿಂಬಾಲಿಸಿದೆನು.

ಹೌದು, ಇದೇ ತಿಂಗಳಲ್ಲಿಯ ಮಾತೇ ಆಗಿದೆ. ನಾನು ಎಷ್ಟು ಪ್ರಯತ್ನಮಾಡಿದರೂ ಅದು ಮರೆಯುವುದೇ ಇಲ್ಲ. ನನಗೆ ನನ್ನ ಮರೆವಿನ ಮೇಲೆ ಕೋಪ ಬರುತ್ತದೆ. ನಾನು ಎಷ್ಟೊಂದು ಸುಖ-ದುಃಖಗಳನ್ನು ಮರೆತು ಬಿಟ್ಟಿದ್ದೇನೆ; ಎಷ್ಟು ಹಾಸ್ಯ-ರೋದನಗಳನ್ನು ಮರೆತು ಬಿಟ್ಟಿದ್ದೇನೆ; ಜೀವನದ ಎಷ್ಟೋ ಸಂಘರ್ಷಣೆಗಳ ಮೇಲೆ ವಿಸ್ಮೃತಿಯ ಪರದೆಯು ಬಿದ್ದಿದೆ. ಆದರೆ ಆಶ್ಚರ್ಯ! ಆ ದಿನದ ಮಾತನ್ನು ಇನ್ನೂ ಮರೆಯುವುದಕ್ಕೆ ನನಗೇಕಾಗುವುದಿಲ್ಲ? ನನ್ನ ಹಾಳು ನೆನಪಿನ ಮೇಲೆ ಉರಿದು ಬಿದ್ದೆ.

೨

ಆ ಬಳೆ!

ಆ ಕೆಂಪು-ಕೆಂಪು ಬಳೆ! ಕೆಲವು ದಿನಗಳಾದಮೇಲೆ, ಒಂದು ದಿನ ನಾನು, ನನ್ನ ಮೇಜಿನ ಡ್ರಾಯರ್‌ನಿಂದ ಆ ಒಳೆಯ ಚೂರುಗಳನ್ನು ಹೊರಕ್ಕೆ ತೆಗೆದು ನನ್ನ ಎದುರಿಗೆ ಇಟ್ಟುಕೊಂಡೆ. ನನ್ನ ದೃಷ್ಟಿಯು ಆ ಚೂರುಗಳ ಮೇಲೆ ಬಿದ್ದಿತು. ಮತ್ತು ನಾನು ಅದರಲ್ಲಿಯೇ ತಲ್ಲೀನನಾದೆ. ಕೊರಡಿಯು ನಿರ್ಜನವಾಗಿತ್ತು. ಎದುರಿಗೆ ಒಂದು ದೀಪವು ಉರಿಯುತ್ತಿತ್ತು. ಮಧ್ಯರಾತ್ರಿಯಾಗಿ ಹೋಗಿತ್ತು. ಛಾಯಾ-ಪ್ರಕಾಶಗಳಿಂದ ನಿರ್ಮಿತವಾದ ಒಂದು ನಾರಿಯ ಮೂರ್ತಿಯು ನನ್ನ ಎದುರಿಗೆ ಸ್ಪಷ್ಟವಾಗುತ್ತಿರುವ ಹಾಗೆ ನನಗೆ ಭಾಸವಾಯಿತು. ಅವಳು ಶುಭ್ರ-ಶುಕ್ಲ-ವಸ್ತ್ರಾನ್ವಿತಳಾದ ವಿಷಾದನಾರಿಯ ಮೂರ್ತಿಯಂತೆ ನನ್ನ ಮುಂದೆ ಬಂದು ನಿಂತುಕೊಂಡಳು. ಅವಳ ದೀರ್ಘನಿಶ್ವೇಷಗಳು ಚಲಿಸಿಕ್ಕವಾಗಿದ್ದುವು, ಅಲ್ಲದೆ ಆಸನಗೊಂಡಿದ್ದುವು. ಅವಳ ಶ್ಯಾಮಲಕೇಶಭಾರವು ಅಸ್ತ-ವ್ಯಸ್ತವಾಗಿ ಭುಜಗಳ ಮೇಲೆ ಬಿದ್ದಿತ್ತು. ಇದರಲ್ಲಿ ಲೇಶವೂ ಸಂದೇಹವಿರಲಿಲ್ಲ: ಅವಳು ಅನುಪಮ ರೂಪವತಿಯೂ, ತರುಣಿಯೂ ಆಗಿದ್ದಳು. ನಾನು ವಿಸ್ಮಯಾನ್ವಿತನಾದೆ.

ಅವಳ ಸೂಕ್ಷ್ಮ ಅಧರವು ಅಲುಗಿತು, ಮತ್ತು ಮಧುರಸ್ವರವು ನನ್ನ ಕಿವಿಗಳಲ್ಲಿ ಪ್ರತಿನಾದಿಸಿತು; ಆದರೆ ಅವಳ ವಾಣಿಯು ದುಃಖದಾಯಕವಾಗಿತ್ತು. ಆ ನಾರೀಮೂರ್ತಿಯು ಹೇಳಿತು: "ನೀವು ನನ್ನ ಸೌಭಾಗ್ಯದ ಚಿನ್ಹೆಯನ್ನು ಸ್ಮಶಾನದಿಂದ ಏತಕ್ಕೆ ತಂದಿರಿ? ನಾನು ಯಾವ ರೀತಿಯಲ್ಲಿ ಶೀತಲಜಲದಲ್ಲಿ ನನ್ನ ದೇಹವನ್ನು ಸಮಾಧಿ ಮಾಡಿ ಶಾಂತಿಯನ್ನು ಹೊಂದಿದ್ದೇನೋ, ಅದೇ ರೀತಿಯಲ್ಲಿ, ಈ ಮಂಗಲವಸ್ತುವನ್ನು ನದಿಯ ಅನಂತವಾದ ಮರಳ ರಾಶಿಯಲ್ಲಿಯೇ ನಿಗೂಢವಾಗಿರುವುದಕ್ಕೆ ಬಿಟ್ಟಿದ್ದರೆ! ಅಯ್ಯೋ! ನೀವು ಎಂತಹ ತಪ್ಪನ್ನು ಮಾಡಿದಿರಿ?"

ನಾನು ಎನೆಯಿಕ್ಕದೆ ಎಲ್ಲವನ್ನೂ ನೋಡುತ್ತಾ ಇದ್ದೆ; ಕೇಳುತ್ತಲೂ ಇದ್ದೆ ಆ ವಿಧವೆಯ ಆತ್ಮದ ಕಥೆಯನ್ನು! ಅವಳು ಪುನಃ ನಿಟ್ಟುಸಿರುಬಿಟ್ಟು ಹೇಳಿದಳು: "ನಾನೂ ಒಂದಾನೊಂದು ಕಾಲದಲ್ಲಿ ನಿಮ್ಮ ಹಾಗೆ ಸುಖ-ದುಃಖಗಳ ಹೊರೆಯನ್ನು ಹೊತ್ತುಕೊಂಡು ಸಂಸಾರದಲ್ಲಿ ಇದ್ದೆ. ನಾನು ಯಾವ ಸೌಮಾಂಗಲ್ಯದ ಬಾಸಿಗವನ್ನು ನಗು-ನಗುತ್ತಾ ತಲೆಯಮೇಲೆ ಕಟ್ಟಿಕೊಂಡಿದ್ದೆನೋ ಅದು, ಮುಂದೆ ಹೊರಟು ಹೋಗಿ ವಿಧಾತನ ಒಂದು ನಿಷ್ಕಾರಣ ಪರಿಹಾಸಮಾತ್ರವೆಂದು ಸಿದ್ಧವಾಗುವುದಾಗಿ ನನಗೇನು ಗೊತ್ತಿತ್ತು? ಅಜ್ಞಾನಿ, ನಾನು ವಂಚಿತಳಾದೆ!" ಇಷ್ಟು ಹೇಳಿ ಅವಳು ನಕ್ಕುಬಿಟ್ಟಳು. ಅವಳ ನಗುವು ನನಗೆ ದುಃಖದಾಯಕವಾಗಿತ್ತು. ಅವಳು ವಿಶ್ವಪ್ರಪಂಚದಿಂದಲೂ ಅದರ ಸಂಘರ್ಷಣಗಳಿಂದಲೂ ದೂರವಾಗಿದ್ದಳು; ಆದರೆ ಅವಳ ಮನಸ್ಸಿನ ವ್ಯಥೆಯು ಇಷ್ಟೊಂದು ತೀವ್ರವಾಗಿತ್ತು: ಅವಳು ಸಂಸಾರದಿಂದ ದೂರಸರಿದಾಗಲೂ ಅವಳ ತ್ಯಕ್ತದೇಹದಿಂದ ಆ ವ್ಯಥೆ ಬೇರೆಯಾಗಿರಲಿಲ್ಲ. ನಾನು ಕೇಳಿದೆ: "ದೇವಿ, ನೀನು ಏಕೆ ಇಷ್ಟು ವ್ಯಗ್ರಳಾಗುತ್ತಿಯೇ? ಯಾವುದು ಆಗಬೇಕಾಗಿತ್ತೋ ಅದು ಆಯಿತು. ವಿಧಿವಿಧಾನವನ್ನು ಅನಿವಾರ್ಯವೆಂದು ತಿಳಿದುಕೊಂಡು, ಹೃದಯದಲ್ಲಿ ಸಂತೋಷಧಾರಣೆಯನ್ನು ಏಕೆ ಮಾಡುವುದಿಲ್ಲ?

ಅವಳು ಹೇಳಿದಳು: "ನೋಡಿ, ಇಲ್ಲಿ ಮೊದಲು— ಈ ಪ್ರದೇಶದಲ್ಲಿಯೇ— ಹೃದಯವೆಂಬ ಹೆಸರಿನ ಒಂದು ಮಾಂಸಪಿಂಡವು ಪ್ರತಿಕ್ಷಣವೂ ಸುಖ-ದುಃಖಗಳ ಕಾಳಿಗದಿಂದ ಕಂಪಿಸುತ್ತಿತ್ತು. ಈಗಂತೂ ನನ್ನ ದೇಹವು ಕ್ಷೀಣವಾಗಿ ಹೋಗಿದೆ. ಆದರೆ ನಾನು ಸರ್ವದಾ ಅನುಭವಿಸುತ್ತಿದ್ದೇನೆ: ಎಲ್ಲಿ ಮೊದಲು ಹೃದಯವಿತ್ತೋ ಅಲ್ಲಿ ಬರಿಯ ಒಂದು ತೆರದ ನೋವಿರುತ್ತದೆ. ಒಂದು ವಿಧವಾದ ವೇದನೆಯಿದ್ದು, ನನ್ನನ್ನು ಹಗಲು-ರಾತ್ರಿ ಕಾಡಿಸುತ್ತಿದೆ. ವಿಶ್ರಾಂತಿ ಹೊಂದಲು ಅವಕಾಶವನ್ನೇ ಕೊಡುವುದಿಲ್ಲ. ಬೇಸರಿಕೆಯನ್ನುಂಟು ಮಾಡುತ್ತಿದೆ. ನಾನೇನು ಮಾಡಲಿ?..... ಕೇಳಿ, ಇಂದಿಗೆ ಹದಿನೈದು ವರ್ಷಗಳಿಗೆ ಹಿಂದೆ ನನಗೆ ವಿವಾಹವಾಗಿತ್ತು. ನಾನು ಆಗ ಹತ್ತು ವರ್ಷದ ಹುಡುಗಿಯಾಗಿದ್ದೆ. ನನ್ನ ಬೊಂಬೆಯೊಡನೆ ಆಟವಾಡುತ್ತಿದ್ದೆ. ನನ್ನ ಸಂಸಾರವು ಹಾಸ್ಯ-ವಿನೋದಗಳಿಂದ ಕೂಡಿತ್ತು. ಅಲ್ಲಿ ಸೌಮಾಂಗಲ್ಯ-ವೈಧವ್ಯಗಳಿರಲಿಲ್ಲ, ಸಂತಾಪ ಹಾಹಾಕಾರಗಳಿರಲಿಲ್ಲ! ಕೇವಲ ಆನಂದ; ಕ್ರೀಡಾವಿನೋದ; ಕೇವಲ ಶಾಂತಿ, ಕೇವಲ ಶೈಶವ್ಯದ ಸಾಮ್ರಾಜ್ಯವಿತ್ತು. ಆಗ ನಾನು ಕೇವಲ ಹತ್ತು ವರ್ಷದ ಹುಡುಗಿಯಾಗಿದ್ದೆ!

ಒಂದು ದಿನ ಫಾಲ್ಗುನವು ಬಂದಿತು..ರಾಗ-ವೇಷದೊಡನೆ, ಕೋಗಿಲೆಯ ಕುಕಿಲೊಡನೆ ಪುಷ್ಪಗಳ ಸೌರಭದೊಡನೆ ನನ್ನ ತಾಯಿಯೊಡನೆ ನನ್ನನ್ನು ಕರೆದಳು. ಮತ್ತು ಸರ್ವಾಂಗಗಳ ಮೇಲೆ ಬೆಳ್ಳಿಯ ಆಭರಣಗಳನ್ನು ಹೇರಿ, ಹೊರಗೆ ಕಾಲಿಡಕೂಡದೆಂದು ನಿಷೇಧಿಸಿದಳು. ನನಗೆ ಹಳದಿ ಬಣ್ಣದ ಸೀರೆಯನ್ನು ಉಡಿಸಿದ್ದಳು, ಮತ್ತು ಅದರಿಂದ ಅರಿಸಿಣದ ತೀವ್ರವಾಸನೆಯು ಬರುತ್ತಿತ್ತು—ಆ ವಾಸನೆಯು ಇಂದಿಗೂ ನನ್ನ ಪ್ರಾಣ-ಮನಗಳಲ್ಲಿ ತುಂಬಿದೆ. ೮

ಎರಡು ದಿನಗಳಾದ ಮೇಲೆ ನೋಡಿದೆ; ನನ್ನ ಮನೆಯ ಮುಂದೆ ಮಂಗಲವಾದ್ಯವು ಮೊಳಗುತ್ತಿತ್ತು. ನಾನು ಆ ಉತ್ಸವವನ್ನು ನೋಡುವುದಕ್ಕೆ ಅಪೇಕ್ಷಿಸಿದೆ; ಆದರೆ ನಾನು ಮನೆಯಲ್ಲಿ ಬಂಧಿತಳಾಗಿದ್ದೆ. ನನ್ನನ್ನು ಪಧುವನ್ನಾಗಿ ಮಾಡಿದ್ದರು. ನನಗೆ ಈಗಲೂ

ಜ್ಞಾಪಕವಿದೆ. ಒಂದು ರಾತ್ರಿ—ಫಾಲ್ಗುನದ ಚಂದ್ರನು ಆಕಾಶದಲ್ಲಿ ಹೊಳೆಯುತ್ತಿದ್ದನು, ಅಲ್ಲದೆ ಮಂದಮಾರುತವು ಜೇನಿನ ಹೂಗಳ ಸುಗಂಧವನ್ನು ಹೊರಸೂಸುತ್ತಿತ್ತು. ನನ್ನ ಬಡತನದ ಮನೆಯ ಅಂಗಳದಲ್ಲಿ ಒಂದು ಉತ್ಸವ ನಡೆಯಿತು. ಒಬ್ಬ ಕಿಶೋರನೊಡನೆ ನನ್ನ ಪಾಣಿಗ್ರಹಣವಾಯಿತು. ಅವನು ನನ್ನ ಲಲಾಟವನ್ನು ಸಿಂಧೂರದಿಂದ ತುಂಬಿದನು: ಭಾಗ್ಯಚಕ್ರವು ನಮ್ಮಿಬ್ಬರನ್ನೂ ಒಂದೇ ಬಂಧನದಲ್ಲಿ ಬಂಧಿಸಿತು. ಆದರೆ, ಅಯ್ಯೋ! ಆ ಪವಿತ್ರಬಂಧನವನ್ನು ಕಾಲಾಂತಕನು ಸ್ವಲ್ಪವೂ ಕರುಣೆಯಿಲ್ಲದೆ ತನ್ನ ಯಮದಂಡಪ್ರಹಾರಗಳಿಂದ ಛಿನ್ನವಿಚ್ಛಿನ್ನವಾಗಿ ಮಾಡಿದನು. ಆದರೂ ಕೂಡ ಇಂದಿಗೂ ಅದು ತನ್ನ ಸೌಂದರ್ಯದಲ್ಲಿಯೇ ಸ್ಪುರವಾಗಿದೆ. ಅದು ಭೌತಿಕ ಜಗತ್ತಿನಿಂದ ಅತ್ಯುನ್ನತಕ್ಕೆ ಏರಿ, ಪ್ರಾಣಗಳಲ್ಲಿ ಐಕ್ಯಹೊಂದಿದೆ! ನಾನು ಮರೆತಿಲ್ಲ, ಆ ಕೋಮಲ ಹಸ್ತದ ಸ್ಪರ್ಶವನ್ನು. ಯಾವಾಗ ಪುರೋಹಿತರು ಮಂತ್ರದ ಜೊತೆಗೆ ಯಾವ ಕೈಯನ್ನು ನನ್ನ . . . .! ನಾನು ಹೇಗೆ ಹೇಳಲಿ ! ಅನುಭವಿಸಿದ್ದೆ. ಯಾವಾಗ ಆ ಸುಂದರ ಕಿಶೋರನ ಕೈಯು ನನ್ನ ಕೈಯಲ್ಲಿ ಇರಿಸಲ್ಪಟ್ಟಿತೊ ಆಗ ನಾನು ಪುಲಕಿತಳಾದೆ! ಅದೇ ನನ್ನ ಅಂತಿಮಸ್ಪರ್ಶವಾಗಿತ್ತು. ಅದೇ ನನ್ನ ಅಂತಿಮಪುಲಕವಾಗಿತ್ತು! ಅದು ಒಂದು ಸಂಕ್ಷಿಪ್ತ ನಾಟಕವಾಗಿತ್ತು. ಯಾವುದನ್ನೂ ಮನವಾರೆ ನೋಡಲೂ ಆಗಲಿಲ್ಲ, ತಿಳಿಯಲೂ ಆಗಲಿಲ್ಲ. ಸಮಾಪ್ತಿಗೊಂಡಿತು! ಆ ನಾಟಕದ ಆರಂಭದಲ್ಲಿಯೇ, ನಿಷ್ಠುರವಾದ ಅಂತ್ಯವು ಪ್ರಚ್ಛನ್ನವಾಗಿತ್ತು!!!

ತದನಂತರ!

ಮೆರವಣಿಗೆಯು ಮುಂದೆ ಸಾಗಿತು. ವಾದ್ಯದ ಧ್ವನಿಯು ಕೂಡ ಉತ್ತರೋತ್ತರ ಕ್ಷೀಣವಾಗುತ್ತಾ ನನ್ನ ಶ್ರವಣಪಥದಿಂದ ಲೀನವಾಯಿತು. ನನ್ನ ತಾಯಿಯು ನಾನು ಈಗ ಪರರ ಸ್ವತ್ತಾದೆನೆಂದೂ, ಆಟ-ಪಾಟಗಳಿಗಿಂತ ಗೃಹಕರ್ಮಗಳಲ್ಲಿ ಅಧಿಕಶ್ರದ್ಧೆಯನ್ನು ಇರಿಸಬೇಕೆಂದೂ ಉಪದೇಶಿಸಿದಳು. ನಾನು ನೋಡಿದೆ, ಹಣೆಯಲ್ಲಿ ಕುಂಕುಮವಿತ್ತು: ಕೈಗಳಲ್ಲಿ ಒಳಿಗಳಿದ್ದುವು. ನನ್ನ ಮನಸ್ಸು ತನ್ನಷ್ಟಕ್ಕೆ ತಾನೆ ಗಂಭೀರಗೊಂಡಿತು, ಮತ್ತು ಆ ಕಿಶೋರನ ಕರಸ್ಪರ್ಶವಾದ ಕೂಡಲೆ ನನ್ನ ಬಾಲ್ಯವು ಎಲ್ಲಿಗೋ ಪಲಾಯನ ಮಾಡಿದ ಹಾಗೆ ಭಾಸವಾಯಿತು. ನಾನು ಈಗ ಬಾಲ್ಯದ ಸಖಿಯಾಗಿರಲಿಲ್ಲ, ಒಬ್ಬ ಕಿಶೋರನ ಸಖಿಯಾಗಿ ನಾನು ಕಿಶೋರಿಯಾಗಿದ್ದೆ. ಯಾವುದೋ ಒಂದು ಪ್ರಬಲ ಮಂತ್ರಶಕ್ತಿಯಿಂದ ನನ್ನ ಪ್ರಭಾತವು ಮಧ್ಯಾಹ್ನವಾಯಿತು. ಈ ರೀತಿಯಾಗಿ ನನ್ನ ಜೀವನದ ಪ್ರಥಮ ಅಧ್ಯಾಯವು ಸಮಾಪ್ತಿಗೊಂಡಿತು.

೩

ಕ್ಷಣಕಾಲ ಸುಮ್ಮನಿದ್ದು ಆ ಸ್ತ್ರೀಮೂರ್ತಿಯು ಪುನಃ ಹೇಳಲು ತೊಡಗಿತು: 'ಹೌದು, ನನ್ನ ಪ್ರಭಾತವು ಮಧ್ಯಾಹ್ನದ ರೂಪದಲ್ಲಿ ಪಾರ್ವಾಡನ್ನು ಹೊಂದಿತು. ಪ್ರಭಾತದಲ್ಲಿ ಲಾಲಿಮೆ ವಿತ್ತು, ಲೀಲಾ-ವಿಲಾಸಗಳಿದ್ದುವು, ಜೀವನಯಾತ್ರೆಯ ಆರಂಭದ ಸವೋತ್ಸಾಹವಿತ್ತು, ಪರಮಾನಂದವಿತ್ತು; ಆದರೆ ಮಧ್ಯಾಹ್ನವು ಬಂತು; ಆಲಸ್ಯದ ಹೊರೆಯನ್ನು ಹೊತ್ತೆ. ನಾನು ಆಗ ಹದಿನಾಲ್ಕು-ಹದಿನೈದು ವರ್ಷದವಳಾಗಿದ್ದೆ. ಬಾಲ್ಯದ ಮೈತ್ರಿಯು ಬಿಟ್ಟುಹೋಗಿತ್ತು. ಹೃದಯದಲ್ಲಿ ಬೇಸರದ ಭಾವನೆಗಳು ಏಕೆ ತುಂಬಿದ್ದುವೋ ನನಗೆ ಗೊತ್ತಿಲ್ಲ. ನನಗೆ ಇಡಿಯೆ ಜಗತ್ತು ಒಂದು ಅಂತವಿಲ್ಲದ ಬೇಸರದ ಕೂಪನಾಗಿ ತೋರುತ್ತಿತ್ತು. ನನ್ನ ಮನಸ್ಸನ್ನು ಪ್ರಾಗೈತಕ್ಕಾಗಿತ್ತೆಂಬುದನ್ನು ನಾನು ಇಂದಿಗೂ ಹೇಳಲಾರೆ.

ನಾನು ಮನೆಯಿಂದ ಹೊರಗೆ ಹೊರಡುತ್ತಿರಲಿಲ್ಲ. ಆದರೂ ನದಿಯ ನಿರ್ಜನತಟ, ಮತ್ತು ಶಾಂತ ಅಮರತ್ವದ ಸ್ಮೃತಿಯು ನನ್ನ ಹೃದಯವನ್ನು ಪ್ರವೇಶಿಸಿ, ನನ್ನನ್ನು ಎಚ್ಚರುಗೊಳಿಸುತ್ತಿತ್ತು. ಆದರೆ ನನ್ನ ಮನಸ್ಸು ಕೊರಗುತ್ತಿತ್ತು. ಮಧ್ಯಾಹ್ನದಲ್ಲಿ ಹಳ್ಳಿಯ ಜನರು ಹೊಲದ ಮೇಲೆ ಹೊರಟರೆ, ನಾನು ಬಾಗಿಲಿನ ಮರೆಯಲ್ಲಿ ಇಣಕಿ-ಇಣುಕಿ ನೋಡುತ್ತಿದ್ದೆ: ಮುಂದುಗಡೆ ಹೊಲ, ಅದಾದ ಮೇಲೆ ಮಾವಿನ ಮತ್ತು ತೆಂಗಿನ ಮರಗಳ ದಟ್ಟವಾದ ತೋಪು, ತದನಂತರ ಪರ್ವತಗಳ ನೀಲಶ್ರೇಣಿ; ಮತ್ತೆ ಮೇಲೆ ಶ್ಯಾಮಲಗಗನ. ಪ್ರಕೃತಿಯ ಉಡಿಯಲ್ಲಿ ಪುನಃ ಹೋಗಿ ಬಂದು ಸಲ ಒದ್ದಾಡಲು ನನ್ನ ಜೀವನವು ಆತಿಸುತ್ತಿತ್ತು. ಆದರೆ ನನ್ನ ಪುನಸ್ಸಿನ ಕಾಲುಗಳ ಮೇಲೆ ಯಾವು ಘನವಾದ ಶೃಂಖಲೆಗಳನ್ನು ಹಾಕಿದ್ದರೋ ನಾನು ಹೇಳಲಾರೆ. ನಾನು ಬಂದಿನಿಯೇ ಆಗಿದ್ದೆ.

ಒಂದು ದಿನ ಹಾಗೂ ಆಯಿತು; ನಾನು ನನ್ನ ಅತ್ತೆಯ ಮನೆಯನ್ನು ಸೇರಿದಮೇಲೆ, ಘೋರ ದರಿದ್ರತೆಯ ನಿಷ್ಠುರ ಸುಂಡಲದಲ್ಲಿ ಬಿದ್ದು ನನಗೆ ಉಸಿರುಕಟ್ಟಿಕೊಳ್ಳುವ ಹಾಗೆ ಆಯಿತು. ಅತ್ಯಂತ ಆವಶ್ಯಕ ಪದಾರ್ಥಗಳದು ಕೂಡ ಅಭಾವ ಬೇರೆ! ನನ್ನ ಪತಿಯು ತನ್ನ ಅಂಧಮಾತೆಯ ಸೇವಾಶುಶ್ರೂಷೆ ಮಾಡುತ್ತಾ ನಿರ್ಧನತೆಯ ಪ್ರತಿಫಲವಾಗಿ ಪೇಚಾಡುತ್ತಿದ್ದರು. ನನಗೆ ಒಂದು ದಿನ ಕೂಡ ಲಜ್ಜಾವತೀವಧುವಾಗಿ ಶ್ವಶುರಗೃಹದಲ್ಲಿ ಇರುವ ಸೌಭಾಗ್ಯವು ಪ್ರಾಪ್ತವಾಗಲಿಲ್ಲ. ಅಲ್ಲಿ ಹೋಗುತ್ತಲೇ ಸೊಂಟಕಟ್ಟಿ ಜೀವನಸಂಗ್ರಾಮದಲ್ಲಿ ಇಳಿಯಬೇಕಾಗಿ ಬಂದಿತು. ಒಂದು ಕ್ಷಣದ ವಿಳಂಬವು ಕೂಡ ಕಷ್ಟದಾಯಕವಾಗಿತ್ತು. ನನ್ನ ಪತಿಯು ಹೇಳಿದರು: "ನಿನ್ನ ಕುರುಡಿಯಾದ ಅತ್ತೆಯ ಸೇವೆಯ ಭಾರವನ್ನು ವಹಿಸು; ಪಕ್ವವೋ ಅಪಕ್ವವೋ—ನಿನ್ನ ಕೈಯಲ್ಲಿ ಹೇಗಾಗುತ್ತದೆಯೋ ಹಾಗೆ ಮಾಡಿ, ಎರಡು ತುತ್ತು ಬಡಿಸಿ, ನನ್ನ ಪ್ರಾಣರಕ್ಷಣೆಯನ್ನು ಮಾಡು" ಅಡಿಗೆ ಮತ್ತು ಇತರ ಗೃಹಕಾರ್ಯಗಳನ್ನು ಮಾಡುತ್ತಾ-ಮಾಡುತ್ತಾ ನನ್ನ ಪ್ರಾಣವು ವರ್ಷಗಳನ್ನು ಎಳೆಯತೊಡಗಿತು. 'ನಾನು ಬಡತನದ ಗುಡಿಸಿಲಿಗೆ ಮಹಾರಾಣಿಯಾದೆ, ತವರೂರನ್ನು ಬಿಟ್ಟುಬಂದಾಗ ನಾನು ಹದಿನೈದು-ಹದಿನಾರು ವರ್ಷದವಳಾಗಿದ್ದೆ. ನನಗೆ ಗೃಹಕರ್ಮಗಳ ಒನಾಮ ಕೂಡ ತಿಳಿದಿರಲಿಲ್ಲ. ಕೆಲವು ದಿನಗಳು ಹೀಗೆಯೇ ಕಳೆದುವು. ನಾನು ಒಂದು ಮಗುವಿನ ತಾಯಿಯಾದೆ. ಆದರ ಸ್ವರೂಪವನ್ನು ನೋಡಿ

ನನಗೇ ಏಕೋ ಬಹಳ ನಗು ಬಂದಿತು. ಭಗವಂತನು ತನ್ನ ಗೃಹದಲ್ಲಿದ್ದ ಇನ್ನೊಬ್ಬ ಅಭಾಗ್ಯನನ್ನು ನನ್ನ ಮಡಿಲಲ್ಲಿ ಬಿಸಾಡಿ, ತನ್ನ ಭಾರವನ್ನು ದೂರಮಾಡಿಕೊಂಡಿರುವ ಹಾಗೆ ನನಗೆ ಹೊಳೆಯಿತು.

ಎರಡು ಎಕರೆ ಮಾತ್ರ ಜಮೀನು; ಅದನ್ನವಲಂಬಿಸಿದುವು ನಾಲ್ಕು ಜೀವ. ಆ ಭೂಮಿಯ ಅಲ್ಪ ಉತ್ಪತ್ತಿಯ ಮೇಲೆ ಜೀವಿಸಲು ಇಷ್ಟಪಡುವವರು ನಾಲ್ಕು ಜನರು ! ಎಂತಹ ಅನರ್ಥ! ನಿರ್ಧನತೆಯು ನಮ್ಮ ಸಮಸ್ತ ಲಾಲಸೆಗಳನ್ನೂ ಕೆಜೆಪೆಟ್ಟಿತು. ಆದರೆ ಆಶಾಲತಿಕೆಯು ಈ ದಹ-ದಹಿಸುತ್ತಿರುವ ಹವನಕುಂಡದಲ್ಲಿ ಜ್ವಲಿಸುತ್ತಿತ್ತು. ಪತಿಯು ನೌಕರಿ ಹುಡುಕುವ ಇಚ್ಛೆಯಿಂದ ಮನೆಯನ್ನು ಬಿಟ್ಟು ಹೊರಗೆ ಹೊರಡಲು ಉದ್ಯುಕ್ತರಾದರು...."

ಇಷ್ಟು ಹೇಳಿ ಆ ಸುಂದರಿಯು ಸುಮ್ಮಗಾದಳು. ಅರ್ಧರಾತ್ರಿಯು ಕಳೆದು ಬಹಳ ಗಂಟೆಗಳಾಗಿದ್ದುವು. ದೀಪದ ಪ್ರಕಾಶವು ಕ್ಷಯಿಸುತ್ತಿತ್ತು. ನಾನು ಉಸಿರನ್ನು ತಡೆದು ಕೊಂಡು, ಸುಮ್ಮನೆ ನನ್ನ ಕುರ್ಚಿಯ ಮೇಲೆ ಕುಳಿತಿದ್ದೆ. ಮುಂದೆ ತೆರೆದುಬಿದ್ದಿರುವ ಒಂದು ಪುಸ್ತಕದ ಹಾಳೆಯ ಮೇಲೆ, ಕೆಲವು ದಿನಗಳ ಹಿಂದೆ ನಾನು ಸ್ಮಶಾನದಿಂದ ತಂದಿದ್ದ ಆ ಬಳೆಯ ಚೂರುಗಳು ಬಿದ್ದಿದ್ದುವು.

ಆ ಸುಂದರಿಯು ಪುನಃ ಹೇಳಲು ಆರಂಭಮಾಡಿದಳು: "ಅವರು ನವಯುವಕರೂ, ಮತ್ತು ಶಿಕ್ಷಿತರೂ ಆಗಿದ್ದರು. ನಿರ್ಧನತೆಯಿಂದ ಜನಿಸಿದ ಕಷ್ಟವು ಅವರನ್ನು ಉದ್ವೇಗಗೊಳಿಸುವ ಬದಲು ಕಾತರಗೊಳಿಸುತ್ತಿತ್ತು. ದಾರಿದ್ರ್ಯದ ಪ್ರಹಾರಗಳು ಯಾವಾಗ ಯಾವಾಗ ಭೀಷಣರೂಪದೊಡನೆ ಬೀಳುತ್ತಿದ್ದುವೋ, ಆಗೆಲ್ಲ ಅವರು ಚೀತ್ಕಾರಮಾಡುವುದಕ್ಕೆ ಬದಲು ರೊಷಗೊಳ್ಳುತ್ತಿದ್ದರು, ಮತ್ತು ಗುರುಗುಟ್ಟುತ್ತಿದ್ದರು. ಅವರ ಈ ವರ್ತನೆಗಳಿಂದ ಎಲ್ಲವನ್ನೂ ನಾನು ಮನಸ್ಸಿನಲ್ಲಿಯೇ ತಡೆಯುತ್ತಿದ್ದೆ. 'ನಿರುದ್ಯೋಗ ಮತ್ತು ನಿರ್ಧನತೆಯು ಅವರನ್ನು ದುರ್ಮಾರ್ಗಿಯನ್ನಾಗಿ ಮಾಡಿಬಿಡುತ್ತದೆಯೆಲ್ಲಿಯೋ' ಎಂಬ ಭಯವು ನನಗಿತ್ತು. ಪ್ರತಿಜೀವಧಾರಿಯೂ ಕಠೋರಪ್ರಹಾರಗಳನ್ನು ಸ್ವೀಕರಿಸಿ, ದುಃಖದಿಂದ ಮತ್ತು ಪೆಟ್ಟಿನ ಪೀಡೆಯಿಂದ ಆರ್ತನಾದಮಾಡುತ್ತಾನೆ. ಇದು ನೈಸರ್ಗಿಕನಿಯಮವೇನೋ ಆಹುದು, ಆದರೆ ನನ್ನ ಪತಿಯ ಸ್ವಭಾವವು ಬೇರೆಯಾಗಿತ್ತು— ನವಯೌವನ, ಮತ್ತು ಹೃದಯದ ತುಂಬ ಚಿಂತಾಜ್ವಾಲೆ— ಈ ಜ್ವಾಲೆಯು ಅವರು ಪ್ರತಿಕೂಲತೆಯ ಆಘಾತವನ್ನು ತಿಂದು, ಎಂದು ಹಿಂದೆ ಸರಿಯುತ್ತಿದ್ದರೋ ಅಂದು, ಅವರ ಕಣ್ಣುಗಳಲ್ಲಿ ಪ್ರಜ್ವಲಿಸುತ್ತಿತ್ತು! ಅವರು ತಮ್ಮ ವಿಚಾರದಲ್ಲಿ ತಾವೇ ದಯಾಹೀನರಾಗಿದ್ದರು....

ನೌಕರಿಯ ಚಿಂತೆಯಿಂದ ಮನೆಯನ್ನು ತ್ಯಜಿಸುವ ಯೋಚನೆ ಯಲ್ಲಿ ಅವರು ತೊಡಗಿದ್ದಾಗ, ನನ್ನ ಅಂತಃಕರಣವು ವಿಕಲಗೊಂಡಿತು; ಆತ್ಮವು ಕಂಪಿಸಿತು. ಅದನೆ ಉಪಾಯವೇನಿತ್ತು? ಮನೆಯಲ್ಲಿ ತಿನ್ನಲು ಅನ್ನವಿರಲಿಲ್ಲ; ಮತ್ತು ಹೊರಗೆ ಕಾಲಿಡಲು ಸರಿಯಾಗಿ ಉಟ್ಟುಕೊಳ್ಳುವುದಕ್ಕೆ ಒಟ್ಟೆಯಿರಲಿಲ್ಲ. ಜೀರ್ಣ-ಶೀರ್ಣವಾದ ಬಟ್ಟೆಗಳಿಗೆ ತೇಪೆಹಚ್ಚಲು ಸೂಜಿ-ದಾರಗಳಿಗೆ ಕೂಡ ಅಭಾವವಾಗಿತ್ತು. ನನ್ನ ತಂದೆಯ ಮನೆಯೂ ನಿರ್ಧನವಾಗಿತ್ತು. ಅಲ್ಲಿಂದ ಸಹಾಯವು ದೊರೆಯುವ ಆಶೆಯು ಹುಚ್ಚು ಆಶೆ ಮಾತ್ರವಾಗಿತ್ತು. ಈ ಮಧ್ಯೆ ಒಂದು ಘಟನೆ ನಡೆದುಹೋಯಿತು: ಬಾಕಿ ತೀರಿಸುವುದರಲ್ಲಿ ನಮ್ಮ ಭೂಮಿಯು ಹರಾಜಿಗೆ ಏರಿಸಲ್ಪಟ್ಟಿತು. ಅನುನಯ-ವಿನಂತಿಮಾಡಿಕೊಳ್ಳಲು ಅವರು ಜಮೀನ್ದಾರನ ಸಮ್ಮುಖಕ್ಕೆ ಹೋಗಲು, ಆತ ಇವರನ್ನು ಒದ್ದೋಡಿಸಿಬಿಟ್ಟನು! ಮರುದಿನ ಜಮೀನ್ದಾರನ ಸೇವಕನು, ದ್ವಾರದ ಹತ್ತಿರ ಬಂದು ನಿಂತುಕೊಂಡು, ಜೋರಾಗಿ ಕದವನ್ನು ಒದೆಯುತ್ತಾ ಬೈಯುತ್ತಿದ್ದನು.

ಅವರು ದೂಷಣೆಗಳನ್ನು ಕೇಳುತ್ತಿದ್ದರು; ಆಗ ನಾನು ಬಾಡಿದವಳಾಗಿ ನಿಂತುಕೊಂಡು ಕಣ್ಣುಗಳನ್ನು ಹೊರಳಿಸುತ್ತಾ ಸುಮ್ಮನೆ ನೋಡುತ್ತಿದ್ದೆ; ಬಂದ ಕೋಪವನ್ನು ನುಂಗಿ ಸುಮ್ಮನಾಗುತ್ತಿದ್ದೆ. ಯಾವ ರೀತಿಯಲ್ಲಿ ಪ್ರಭಾತದ ತಾರೆಗಳು ಒಂದೊಂದಾಗಿ ಕ್ಷೀಣವಾಗುತ್ತಾ ಅದೃಶ್ಯಹೊಂದುತ್ತವೆಯೋ ಅವೇ ರೀತಿ ನನ್ನ ಆಭರಣಗಳೆಲ್ಲವೂ ಒಂದೊಂದಾಗಿ ಲೋಪ ಹೊಂದಿದುವು. 'ಉದರಯಜ್ಞ'ದಲ್ಲಿ ಎಲ್ಲವೂ ಸ್ವಾಹಾ ಆಯಿತು. ಆದರೆ ಒಂದು ಬೆಳ್ಳಿಯ ಚಂದ್ರಹಾರವು ಮಾತ್ರ ಉಳಿದಿತ್ತು. ಅತಿ ಕಷ್ಟದಿಂದ ನಾನು ಮಗುವಿಗೋಸ್ಕರ ನಾಲ್ಕು ಬಳೆಗಳನ್ನು ಮಾಡಿಸಿದ್ದೆ! ಅವರು ಹೊರಡುವುದಕ್ಕೆ ಒಂದು ದಿನ ಮುಂಚೆ ನಾನು, ಆ ಬಳೆಗಳನ್ನು ಮಗುವಿನ ಕೈ-ಕಾಲುಗಳಿಂದ ತೆಗೆದೆ. ಆಗ ನನ್ನ ಇಡಿಯೆ ಶರೀರವು ನಡುಗಿತು. ನನ್ನ ಎದೆಯು ಚೂರು ಚೂರಾಯಿತು. ಈ ಬಳೆಗಳು ಅವರ ಪ್ರಯಾಣದ ಖರ್ಚಿಗಾದುವು. ಐದಾರು ರೂಪಾಯಿಗಳಿಗಿಂತ ಹೆಚ್ಚಾಗಿ ಪಡೆಯುವ ಆಶೆಯಿರಲಿಲ್ಲ. ಆದರೆ ಈ ಅಲ್ಪವು ಕೂಡ ಆ ಸಮಯದಲ್ಲಿ ಬಹಳ ಸಹಾಯಕರವಾಗಿತ್ತು. ಅವರು ಬಳೆಗಳನ್ನು ನಿರಾಕರಿಸಲು ಉದ್ಯುಕ್ತರಾಗಿರಲಿಲ್ಲ; ಆದರೆ ಕಠಿನ ಮನಸ್ಸುಮಾಡಿ ನಾನು ಈ ಕೆಟ್ಟ ಸಂದರ್ಭವನ್ನು ಸ್ವಾಗತಿಸಿದೆನು. ನಿರ್ಗತಿಕಳಾಗಿದ್ದೆ; ಕೇವಲ ಇನ್ನಾವ ಬೇರೆ ಉಪಾಯವಿರಲಿಲ್ಲ. ಬಳೆಗಳನ್ನು ಮಾರಿದೆ!

ಅವರು ಹೊರಟುಹೋದರು. ಆಶೆಗೆ ಮಿತಿಯಿಲ್ಲ. ನಾನು ಹಸಿರು ಹಸಿರಾದ ಉದ್ಯಾನದಲ್ಲಿ ಕಾಣುತ್ತಿರುವ ತೃಣಕಟಿಯಲ್ಲಿ ಅಗಮಿಸುವ ಸುವರ್ಣಮಯ ದಿನಗಳ ಕಲ್ಪನೆಯನ್ನು ಮಾಡತೊಡಗಿದೆ. ಹೊರಡುವಾಗ ಅವರು ಮಲಗಿರುವ ಮಗುವನ್ನು ಚುಂಬಿಸಿದ್ದುದು ನನಗೆ ಈಗಲೂ ಜ್ಞಾಪಕವಿದೆ. ಅದು ಗಾಢನಿದ್ರೆಯಲ್ಲಿಯೇ ನಸುನಗುತ್ತಿತ್ತು. ಅದರ ಮಂದಹಾಸ್ಯದಲ್ಲಿ, ಗೋಪ್ಯವಾಗಿ ವಿಧಾತನು ವ್ಯಂಗವಾದ ನಗುವನ್ನು ನಗುತ್ತಿದ್ದನು. ಅದು ಯಾರಿಗೆ ತಿಳಿದಿತ್ತು?"

೪

ಆ ಪ್ರೇತಮೂರ್ತಿಯ ಕಂಠಸ್ವರವು ಹಠಾತ್ತಾಗಿ ಕಠೋರವಾಯಿತು. ಅವಳ ಕಣ್ಣುಗಳು ಜ್ವಲಿಸತೊಡಗಿದುವು. ಅವಳ

ವೀರಪ್ಪ ಶಿವಪ್ಪ ಅರಬಳ್ಳಿ, ರಬಕವಿ

ಬಣ್ಣದ ನೂಲು ಮತ್ತು ಇರಕಲ್

ನಮೂನೆಯ ರಬಕವಿ ಸೀರೆಯ ವ್ಯಾಪಾರಿಗಳು.



ನಮ್ಮಲ್ಲಿ ಕೈಮಗ್ಗಗಳ ಮೇಲೆ ಇರಕಲ್, ಧನವಡೀ ಮತ್ತು ನಾರಾಯಣಪೇಟ ಆಂಚಿನ ಉತ್ತಮ ಮತ್ತು ಬಣ್ಣದ ಪಾತ್ರಿಯ ಸೀರೆಗಳು ಯೋಗ್ಯಬೆಲೆಗೆ ಸಿಕ್ಕುತ್ತವೆ.

ದೇಹವು ನಡುಗುತ್ತಿದ್ದಿತು. ನನ್ನ ಹೃದಯವೂ ನನಗಿತು. ಅವಳು ಹಲ್ಲುಕಡಿದು ಹೇಳಿದಳು: "ಮುಂದಿನ ಕಥೆಯನ್ನೂ ಕೇಳಿ" ಆ ಮೂರ್ತಿಯ ಭಾವವು ಸಹಸಾ ಬದಲಿಸಿತು. ಕರುಣೆಯ ಸ್ಥಾನದಲ್ಲಿ ರೌದ್ರವು ಸಂಚರಿಸುತ್ತಿತ್ತು. ಕಣ್ಣುಗಳು ವಿಶಾಲವಾಗಿ ತೆರೆದಿದ್ದುವು. ಗುಂಡ್ಡೆಗಳು ಹೊರಗೆ ನೀಡಿದ್ದುವು. ಮೂಗಿನ ರಂಧ್ರಗಳು ಅರಳಿದ್ದುವು. ನಾನು ಇತ್ತ ಅತ್ತ ನೋಡಿದೆನು. ನಿರ್ಜನ ರಾತ್ರಿ; ಕೊಠಡಿಯಲ್ಲಿ ಗಡಿಯಾರದ ಟಿಕ್-ಟಿಕ್ ಶಬ್ದವು ಮಾತ್ರ ಪ್ರತಿಧ್ವನಿಗೊಡುತ್ತಿತ್ತು. ನಾನು ಇಷ್ಟೊಂದು ಶಾಂತನಾಗಿದ್ದೆ; ನನ್ನ ಹೃದಯಸ್ಪಂದನದ ಶಬ್ದವು ಕೂಡ ವಿಶದವಾಗಿ ಕೇಳಿಸುತ್ತಿತ್ತು. ನಾನು ಹಾಗೆಯೆ ಆತ್ಮಸಂಯಮನ ಮಾಡಿಕೊಂಡು, ಕುರ್ಚಿಯ ಮೇಲೆ ಕುಳಿತುಕೊಂಡೆ. ಆ ಪ್ರೇತಮೂರ್ತಿಯು ಸ್ವಲ್ಪ ಶಾಂತವಾಗಿ ಪುನಃ ಹೇಳಿತು: "ಆವರು ದುರ್ಭಾಗ್ಯದ ಮೇಲೆ ದಾಳಿಮಾಡಲು ಹೊರಟಿದ್ದರು. ನನ್ನ ಅಂಧಳಾದ ಅತ್ತೆ-ಮತ್ತು ಎರಡು ವರ್ಷದ ಮಗುವಿನೊಡನೆ ನಾನು ಆ ಪಾಳು ಗುಡಿಸಿಲಿನಲ್ಲಿಯೇ ನಿಂತೆ. ನನ್ನ ಚಿಕ್ಕ ಸಂಸಾರವು ಇನ್ನೂ ಚಿಕ್ಕುದಾಯಿತು. ಆದರೆ ಜೊತೆಗೆ ಚಿಂತೆಯು ಹೆಚ್ಚಿತು; ಖರ್ಚು ಹೆಚ್ಚಿತು. ಒಂದು ತಿಂಗಳಾದ ಮೇಲೆ ನನಗೆ ಒಂದು ಕಾಗದವು ಬಂದಿತು. ಆದರ ಜೊತೆಗೆ ಐದು ರೂಪಾಯಿಯ ಮನಿಯಾರ್ಡರು ಕೂಡ ಒಂದಿತು. ಕಾಗದದಿಂದ ಅವರಿಗೆ ಒಂದು ಉತ್ತಮ ಸ್ಥಳದಲ್ಲಿ ನೌಕರಿಯು ದೊರೆತಿದೆಯೆಂದು ತಿಳಿಯಿತು. ಆ ನೌಕರಿಯೆಂದರೆ ಎರಡು ಮುಕ್ಕೆಳಿಗೆ ಸಾಕಷ್ಟೇ ಆಗುವುದು. ತಿಂಗಳಿಗೆ ಹತ್ತು ರೂಪಾಯಿ ವೇತನ ಸಿಕ್ಕುತ್ತಿತ್ತು. ನಾನು ಪರಮಾತ್ಮನಿಗೆ ವಂದಿಸಿದೆ! ಆದರೆ ನಾನು ಖಂಡಿತ ಹೇಳಲಾರೆ: ಈ ನಿರ್ಭಾಗ್ಯಳ ಶುಷ್ಕವಂದನೆಯು ಈಶ್ವರನಿಂದ ಸ್ವೀಕೃತವಾಯಿತೋ ಇಲ್ಲವೊ. ನನ್ನ ವಂದನೆಯಲ್ಲಿ ಅತನಿಗೆ ಮೆಚ್ಚಿಕೆಯಾಗುವಷ್ಟು ಜೈಕಸ್ಯವಿಲ್ಲವೆಂದು ನನಗೆ ಪೂರ್ಣ ವಿಶ್ವಾಸವಿತ್ತು!

ಐದಾರು ತಿಂಗಳ ತನಕ ರೂಪಾಯಿ ಬರುತ್ತಿದ್ದುವು; ಅಲ್ಲದೆ ಅವರೂ ಒಂದು ಸಲ ಬಂದರು. ಅವರ ದೇಹವು ಬಾಡಿಹೋಗಿತ್ತು. ಕಣ್ಣುಗಳು ಕೆಂಪಾಗಿದ್ದುವು. ಅವರಿಗೆ ನೌಕರಿ ದೊರೆತುದು ಒಬ್ಬ ಧನಿಕವರ್ತಕನ ಮನೆಯಲ್ಲಿ. ಅವನಿಗೆ ಸೇರಿದುವಾಗಿ ಅನೇಕ ಚಿನ್ನ-ಬೆಳ್ಳಿಗಳ ಅಂಗಡಿಗಳಿದ್ದುವು; ಮೋಟಾರು ಮೊದಲಾದ ವಾಹನಗಳೂ ಸಾಕಷ್ಟಿದ್ದುವು. ದೊಡ್ಡ ಮಗನು ಸ್ಕೂಲಿನಲ್ಲಿ ಓದುತ್ತಿದ್ದನು; ಆದರೆ ಅವನು ತುಂಟರ ನಾಯಕನಾಗಿದ್ದನು. ಅವರು ತಮ್ಮ ಪ್ರಕೃತ ಸ್ಥಿತಿಯಿಂದ ಅಸಂತುಷ್ಟರಾಗಿದ್ದಾರೆಂಬುದು ನನಗೆ ಗೊತ್ತಾಯಿತು. ಅವರ ಹೃದಯದಲ್ಲಿ ಗುಪ್ತಜ್ವಾಲೆಯು ಸದಾ ಉರಿಯುತ್ತಿತ್ತು; ಸಮಯವು ಸಿಕ್ಕಿದ್ದರೆ ಅದು ಉದ್ರೇಕ ಗೊಳ್ಳುವುದರಲ್ಲಿ ಸಂದೇಹವೇನೂ ಇರಲಿಲ್ಲ. ಅವರು ತಮ್ಮನ್ನು ತಾವೇ ಸಂಯಮಿಸಿಕೊಳ್ಳುತ್ತಿದ್ದರು.

ಒಂದು ಸಲ ಅವರು ವಿಜಯದಶಮಿಯ ದಿನ ಬಂದರು; ಎರಡು ವಾಗಳಿದ್ದು ಹೊರಟುಹೋದರು. ಅವರು ಹಸನ್ಮುಖರಾಗಿದ್ದುದನ್ನು ನಾನು ಎಂದೂ ನೋಡಿರಲಿಲ್ಲ. ಅವರ ಕಠೋರವೂ ಗಂಭೀರವೂ ಆದ ಮುಖಭಾವವನ್ನು ನಾನು ಎಂದೂ ಮರೆಯಲಾರೆ. ಅವರು ಪ್ರಾಯಃ ವಿಕಾರಿಯಾಗಿರಲು ಅಶಿಸುತ್ತಿದ್ದರು; ಬಂದಾಗಲೆಲ್ಲ ಮನೆಬಿಟ್ಟು ಹೊರಗೆ ಕಾಲಿಡುತ್ತಿರಲಿಲ್ಲ. ಈಗ ನನ್ನ ಕಥೆಯು ಕಳೆದ ವರ್ಷದ ಹತ್ತಿರ ಹತ್ತಿರಕ್ಕೆ ಬಂದಿದೆ. ನೀವು ಬಳಲಿರಬಹುದು. ನಾನು ತುಂಬ ದುಃಖಿತಳಾಗಿದ್ದೆ; ಈಗಲೂ ನಾನು ದುಃಖಿತಳು. ದುಃಖದ ಕಥೆಯು ಮನೋರಂಜಕವಾಗಿರುವುದಿಲ್ಲ; ಆದರೆ ನನ್ನ ಆತ್ಮದ ಕಥೆಯನ್ನು ಯಾರಲ್ಲಾದರೂ ಹೇಳಿಕೊಳ್ಳುವುದಕ್ಕೆ ನನ್ನ ಮನಸ್ಸು ಆತುರಪಡುತ್ತಲಿದೆ. ಹಿಂದಿನ ಸ್ಮೃತಿಗಳ ಭಾರವನ್ನು ನಾನು ಹೊತ್ತುಕೊಂಡಿರುವಂತೆ ಮತ್ತು ಅದರಿಂದ ತಪ್ಪಿಸಿಕೊಳ್ಳಲು ಯಾವ ಉಪಾಯವೂ ಇಲ್ಲದಿರುವಂತೆ ನನಗೆ ತೋರುತ್ತದೆ. ನಾನು ಇಂದು ಸುಖ-ದುಃಖಗಳ ಬಂಧನವನ್ನು ತೊಡೆದಿದ್ದೇನೆ. ಆದರೆ ದೇವರೇ ಬಲ್ಲ, ನಾನು ನನ್ನ ಮನಸ್ಸಿನ ಕಥೆಯನ್ನು ಹೇಳಿಕೊಳ್ಳುವುದಕ್ಕೆ ಎಷ್ಟು ವ್ಯಾಕುಲಳಾಗಿದ್ದೇನೆಂಬುದನ್ನು. ಇನ್ನು ಸ್ವಲ್ಪ ಕಥೆ ಮಾತ್ರ ಉಳಿದಿದೆ; ನೀವು ಕೇಳಿದರೆ ನನ್ನ ಮನಸ್ಸು ಹಗುರಾಗುವುದು.

ಹೌದು, ಈಗ ನನ್ನ ಕಥೆಯು ಕಳೆದ ವರ್ಷದ ಹತ್ತಿರ ಹತ್ತಿರಕ್ಕೆ ಬಂದಿದೆ. ನನ್ನ ಪತಿಯು ಪುನಃ ತಮ್ಮ ಕೆಲಸದ ಮೇಲೆ ಹೊರಟು ಹೋಗಿ, ಹದಿನೆಂಟು ತಿಂಗಳ ತನಕ ಅವರಿಂದ ಒಂದು ಕಾಗದವೂ ಬರಲಿಲ್ಲ; ಅವರ ಯಾವ ಸಮಾಚಾರವೂ ನನಗೆ ದೊರೆಯಲಿಲ್ಲ. ನಾನು ಎಂತಹ ವಿಕಲತೆಯಿಂದ ದಿನಗಳನ್ನು ಕಳೆಯುತ್ತಿದ್ದೆನೆಂಬುದು ಅನುಭವದಿಂದ ಅರಿಯಬಹುದಾದ ಮಾತಾಗಿದೆ. ಹಳ್ಳಿಗೆ ಅಂಚೆ-

ಯವನು ಬಂದರೆ, ನನ್ನ ಹೃದಯವು ತೀರ ಉತ್ಸುಕತೆಗೊಳುತ್ತಿತ್ತು. ಅವನು ನನ್ನ ಬಾಗಿಲಿನ ಎದುರಿಗೆ ಬರುತ್ತಿದ್ದರೆ, ನಾನು ಬಹಳ ವ್ಯಗ್ರಳಾಗುತ್ತಿದ್ದೆ. ಆದರೆ ಅವನು ಮುಂದೆ ಸಾಗಿದಾಗ ಹೃದಯವು ನಿಟ್ಟುಸಿರೊಡನೆ ಕಂದಿಕೋಗುತ್ತಿತ್ತು. ಕೆಲವು ಸಲ ಆಂಡೆಯವನು, ನನ್ನ ಬಾಗಿಲಿನ ಬಳಿ ನನ್ನ ಪತ್ರವನ್ನೇ ಹಾಕಿ ಹೋಗುತ್ತಿದ್ದನು. ಕವರನ್ನು ಕೈಯಲ್ಲಿ ತೆಗೆದುಕೊಳ್ಳುವುದಕ್ಕೆ ಮೊದಲು ನಾನಾಪ್ರಕಾರದ ಭಾವಗಳು ಏಳುತ್ತಿದ್ದುವು; ಆದರೆ ಯಾವಾಗ ನನ್ನ ಕಾಗದವೇ ಹಿಂದಿರುಗಿ ಬಂದಿದೆಯೆಂದು ಗೊತ್ತಾಗುತ್ತಿತ್ತೋ ಆಗ, ನಾನು ಬೇಜಾರುಗೊಂಡು ಅತ್ತುಬಿಡುತ್ತಿದ್ದೆ. ಒಂದೆರಡು ಸಲ ಹೀಗೆಯೇ ಆಯಿತು. ಇಲ್ಲದಿದ್ದರೆ ನನ್ನ ಕಾಗದವು ಎಲ್ಲಿಗೆ ಹೋಗುತ್ತಿತ್ತೋ ಅಲ್ಲಿಯೇ ಅದೃಶ್ಯವಾಗಿಬಿಡುತ್ತಿತ್ತು. ನಾನಾಪ್ರಕಾರದ ಶಂಕೆಗಳು ನನ್ನ ಮನಸ್ಸನ್ನು ಕ್ಷುತ-ವಿಕ್ಷತವಾಗಿ ಮಾಡಿ, ನನ್ನ ವಿಪತ್ತಿಗೆ ಕಾರಣಗಳಾದುವು.

ಇತ್ತಕಡೆಗೆ ಕೈಯಲ್ಲಿಯ ಕಾಸುಗಳು ಕೂಡ ಜಾರುತ್ತಾ-ಜಾರುತ್ತಾ ತೀರುವುದಕ್ಕೆ ಬಂದುವು. ಸ್ವಲ್ಪ ದುಡ್ಡುಗಳನ್ನು ಕೂಡಹಾಕಿಟ್ಟಿದ್ದೆ; ಆದರೆ ಅದೂ ಕೂಡ ತಿನ್ನುವುದಕ್ಕೇ ಆಗಿ ಹೋಯಿತು. ಒಂದು ದಿನ ನೋಡಿದೆ; ನನ್ನ ಪತಿಯು ಮನೆಯ ಕಡೆಗೆ ಬರುತ್ತಿದ್ದರು. ಹೆಜ್ಜೆ ಹೆಜ್ಜೆಗೂ ನಿಲ್ಲುತ್ತಾ, ಕಣ್ಣುಗಳನ್ನು ಮುಚ್ಚಿಕೊಂಡು ಏದುತ್ತಾ ಇದ್ದರು. ಶರೀರವು ಬಾಡಿ, ಮೂಳೆ-ಚರ್ಮಗಳು ಮಾತ್ರ ಉಳಿದಿದ್ದುವು. ಗಡ್ಡವು ಹೆಚ್ಚಾಗಿ ಬೆಳೆದಿತ್ತು. ಮೈಮೇಲೆ ಒಂದು ಜೀರ್ಣವೂ ಮಲಿನವೂ ಆದ ಅಂಗಿಯು ಬಿದ್ದಿತ್ತು. ಕಾಲುಗಳಲ್ಲಿ ಜೋಡಿರಲಿಲ್ಲ; ತಲೆಯಮೇಲೆ ಟೋಪಿಯಿರಲಿಲ್ಲ. ಕೈಯಲ್ಲಿ ಮಾತ್ರ ಒಂದು ದಪ್ಪವಾದ ಬೆತ್ತವಿದ್ದ ಕೋಲಿತ್ತು. ಅವರು ನಾಲ್ವತ್ತನೆಯ ವರ್ಷವನ್ನು ಸವಿಾಪಿಸಿದವರಾದರೂ, ಅಲ್ಪಕಾಲದಲ್ಲಿಯೇ ಎಪ್ಪತ್ತೈದು ವರ್ಷಗಳ ವೃದ್ಧರೋಗಿಯ ಹಾಗೆ ಆಗಿ ಮನೆಗೆ ಬರುತ್ತಿರುವಂತೆ ನನಗೆ ಕಾಣುತ್ತಿದ್ದರು. ನನ್ನ ಕೈಯಲ್ಲಿದ್ದ ಆಶಾಪಕ್ಷಿಯು ಹಾರಿ ಹೋಯಿತು! ಮಗುವು ಗಟ್ಟಿಯಾಗಿ ಕೂಗುತ್ತಾ ಮನೆಯೊಳಗೆ ಓಡಿಬಂದು 'ಅಪ್ಪಾ ಬರ್ತಾ ಇದ್ದಾರೆ' ಎಂದು ಸೂಚಿಸಿದರೂ ಕೂಡ, ನನ್ನ ಮನಸ್ಸಿನಲ್ಲಿ ಒಂದು ತೀರದ ಸಿಡುಕು ಉತ್ಪನ್ನವಾಗಿತ್ತು. "ಒಂದುವರೆ ವರ್ಷಗಳ ತನಕ ಸುಮ್ಮನೆ ಯಾಕಿದಿರಿ? ನನ್ನನ್ನು ಈ ರೀತಿ ಏಕೆ ಮರೆತಿದ್ದಿರಿ?" ಎಂದು ಕೇಳಕೂಡದೆಂದು ಯೋಚಿಸುತ್ತಿದ್ದೆ. ಆದರೆ ಅವರು ನನ್ನ ಎದುರಿಗೆ ಬಂದುನಿಂತಾಗ ನಾನು ಗಾಬರಿಗೊಂಡು, ಹುಚ್ಚಿಯ ಹಾಗೆ ದಿಟ್ಟಿಸಿ ನೋಡತೊಡಗಿದೆ. ಗುಳಿಬಿದ್ದ ರಕ್ತಹೀನವಾದ ಕಣ್ಣುಗಳು, ಸುಕ್ಕಿಹೋದ ಮುಖ, ಒಳಗೆ ಬೊಕ್ಕಿದ ಎದೆ, ಶಿಥಿಲವಾದ ಕತ್ತು-ಕೈಯಕೋಲಿನ ಮೇಲೆ ಬರಗಿಕೊಂಡು ಏದುತ್ತಿದ್ದಾರೆ. ಗಾಬರಿಗೊಂಡು ಕೇಳಿದೆ:— 'ಈ ಸ್ಥಿತಿ! ಏನು ಅಸ್ವಸ್ಥರಾಗಿದ್ದಿರೋ?"

ಅವರು ಗುರುಗುಟ್ಟುತ್ತಾ ಉತ್ತರ ಕೊಟ್ಟರು: "ಜೈಲಿನಲ್ಲಿದ್ದೆ. ಅವರು ನನ್ನ ಮೇಲೆ ಕಳ್ಳತನದ ಸುಳ್ಳು ಆಪವಾದವನ್ನು ಹೊರಸಿ, ಜೈಲಿಗೆ ಕಳುಹಿದ್ದರು. ಮೊನ್ನೆ ಬಿಡುಗಡೆ ಹೊಂದಿದೆ.... ಹೇಳಲಾಗುವುದಿಲ್ಲ! ಜೈಲಿನಲ್ಲೇ ಖಾಯಿಲೆಯಾಗಿ ಬಿದ್ದಿದ್ದೆ.... ಖಾಯಿಂದ ರಕ್ತವು ಬೀಳುತ್ತಿತ್ತು.... ಈಗ ಸ್ವಲ್ಪ.... ಸುಧಾರಿಸಿದ್ದೇನೆ.." ದಾರಿದ್ರ್ಯವು ಸಮಸ್ತದೋಷಗಳಿಗೆ ಮೂಲವಾಗಿದೆ.

ನನಗೆ ಮೂರ್ಛೆ ಬರುವಹಾಗಾಯಿತು. 'ಕಳ್ಳತನ' ಮತ್ತು 'ಜೈಲು'—ಇದು ಎಂತಹ ಮಾತು! ಪುನಃ ಕೇಳಲು ನನಗೆ ಧೈರ್ಯ ಬರಲಿಲ್ಲ. ಮೂರ್ನಾಲ್ಕು ದಿನಗಳಾದ ಮೇಲೆ ನನಗೆ ಗೊತ್ತಾಯಿತು; ಕಳ್ಳತನದ ಅಪರಾಧವನ್ನು ಸ್ವೀಕಾರಮಾಡಿಸುವುದಕ್ಕೆ ಯಾವ ಉಪಾಯದಿಂದ ರಾತ್ರೆಗೆ ಕರೆದುಕೊಂಡು ಹೋಗಿದ್ದರೋ, ಅದರ ಪರಿಣಾಮವಾಗಿಯೇ ಖಾಯಿಂದ ಉಗುಳಿನ ಜೊತೆಯಲ್ಲಿ ರಕ್ತವೂ ಬರತೊಡಗಿತೆಂದು. ಕೋಪ ಮತ್ತು ನಿಷ್ಫಲ ಕ್ಷೋಭದಿಂದ ನನ್ನ ಹೃದಯವು ತುಳಿದ ಸರ್ಪದ ಹಾಗೆ ಬುಸುಗುಟ್ಟತೊಡಗಿತು. ಅಯ್ಯೋ! ಅವರ ಮೇಲೆ ಏನೇನು ಒತ್ತಾಯ ನಡೆದಿರಬಹುದು? ದೂರ ದೇಶ, ರಾತ್ರೆಯ ಚಿಕ್ಕಮನೆ, ಅದರ ಜೊತೆಗೆ ಪ್ರಹಾರ ಪ್ರಯೋಗಗಳು, ಮತ್ತಾ ಜೈಲು.... ನಾನು ಆಗ ಅಲ್ಲಿದ್ದಿದ್ದರೆ..! ನನ್ನ ಪತಿಗೆ ನನ್ನ ದೇವತೆಗೆ—ಈ ಅಪಮಾನ, ಈ ಲಾಂಛನ!!!

ಅವರು ತಮ್ಮ ಜೊತೆಯಲ್ಲಿ ಸ್ವಲ್ಪ ರೂಪಾಯಿಗಳನ್ನು ತಂದಿದ್ದರು. ನಾನು ಯಾವ ಸ್ಥಿತಿಯಲ್ಲಿ ಸಿಕ್ಕಿಬಿದ್ದಿದ್ದೆನೋ ಆ ಸ್ಥಿತಿ

ಮೇಲ್ತರಗತಿಯ

ಹಳುಕು (Concentrated) ಬಣ್ಣಗಳು

- ಬರೆಯುವ ಮಸಿಗಳು
- ಟಾಯಿಪ್‌ರಾಯಿಟಿಂಗ್ ರಿಬನ್ನುಗಳು
- ಸಾಬೂನುಗಳು
- ಮಿಠಾಯಿಗಳು

ಇವುಗಳನ್ನೆಲ್ಲ ತಯಾರಿಸುವುದಕ್ಕೆ ಬಳಸುವ ಬಣ್ಣಗಳು.
ವಿಶೇಷವಿವರಗಳಿಗಾಗಿ ಇಂಗ್ಲಿಷ್ ಭಾಷೆಯಲ್ಲಿ ಬರೆದು ಕೇಳಿಕೊಳ್ಳಿರಿ.

ಕ್ರೈಪಾಗ್ ಲಿಮಿಟೆಡ್,
ಪೋ. ಬಾ. ನಂ. ೨೧೦. ಮುಂಬಯಿ.

ಓರಿಯೆಂಟಲ್

ಗೌ. ಸೆಕ್ಯುರಿಟಿ ಲೈಫ್ ಇನ್ಶುರನ್ಸ್ ಕಂ., ಲಿ.

ಮುಖ್ಯ ಕಚೇರಿ: ಮುಂಬಯಿ

—ಯಂತ್ರಂ—

ವಿವೇಚನಾಶೀಲರಾದ ಸಾವಿರಾರು ಜನ ಸುಶಿಕ್ಷಿತರು, ತಮ್ಮ ಮುಪ್ಪಿನ ಕಾಲದಲ್ಲಿ ತಮಗಾಗಿಯೊ, ಇಲ್ಲವೆ ತಮ್ಮ ನಂತರ ತಮ್ಮ ಅವಲಂಬಿತ ಕುಟುಂಬಕ್ಕಾಗಿಯೊ ಆರ್ಥಿಕ-ಸ್ವಾತಂತ್ರ್ಯದ ಅಡಿಗಲ್ಲನ್ನು ಹಾಕಿ ಇರಿಸುತ್ತಿರುವರು.

ಎಂದರೆ

ಪ್ರತಿವರ್ಷವೂ ಸಾವಿರಾರು ಜನರು 'ಓರಿಯೆಂಟಲ್' ನಲ್ಲಿ ತಮ್ಮ ಜೀವವಿಮೆ ಮಾಡುತ್ತಿರುವರು.

ತಡಮಾಡಬೇಡಿರಿ! ಕೂಡಲೆ ನೀವೂ ಒಂದು 'ಓರಿಯೆಂಟಲ್' ಪಾಲಿಸಿ ಕೊಳ್ಳಿರಿ!

ವಿಶೇಷ ಸಂಗತಿಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ಟಿ. ಅಥಣಿಕರ್,
ರಳಕವಾಡಿ, ಬೆಳಗಾಂವಿ.

ಯಿಂದ ಪಾರಾಗುವುದಕ್ಕೆ ಒಂದೇ ಒಂದು ಸಾಧನವಿತ್ತು. ಧನದ ಕೊರತೆ ಪೂರ್ಣವಾಗಿ ಇದ್ದಿತು ನನಗೆ. ಸಂತೋಷದಿಂದ ಮನಸ್ಸೇನೋ ಜಿನ್ನಾಗಿ ತುಂಬಿ ಹೋಗುವುದು; ಆದರೆ ಉದರ ವಸ್ತು ತುಂಬಿಸಿಕೊಳ್ಳುವುದಕ್ಕೆ ಅನ್ನವು ಅತ್ಯಗತ್ಯವು. ಪತಿಯ ರೋಗವು ಕ್ಷಣಕ್ಷಣಕ್ಕೂ ನನ್ನನ್ನು ಚಕಿತಳನ್ನಾಗಿಸುತ್ತಿತ್ತು. ಅವರಿಗೆ ಔಷಧಿ ಮತ್ತು ಪಥ್ಯದ ಆವಶ್ಯಕತೆಯಿತ್ತು. ಆಲ್ಪಧನದ ಬಾಪುಲ್ಯವಿತ್ತಿರಬಹುದು? ನೋಡುತ್ತಾ ನೋಡುತ್ತಾ ಮಂಜಿನ ಗಡ್ಡೆಯಂತಾಗಿ ಅದು ಕರಗುತ್ತಾ ಬಂದಿತು. ಅದರೊಡನೆಯೆ ಇತ್ತ ಅವರ ಸ್ವಾಸ್ಥ್ಯಧನವೂ ಕರಗುತ್ತಾ ಬಂದಿತು. ಚಿಂತೆ ಪತ್ತು ಮನಸ್ತಾಪ, ಕ್ಲುಪ್ತಿ ಮತ್ತು ರೋಗ—ಈ ಪ್ರಪಂಚದಲ್ಲಿ ಬಿದ್ದು, ನಿಶ್ಚಯವು ನಾನು ನನಗಾಗಿ ಯಮರಾಜನನ್ನು ಪ್ರಾರ್ಥಿಸ ತೊಡಗಿದೆ. ಆದರೆ ಆ ದಯಾಹೀನನು ನನ್ನ ಪ್ರಾರ್ಥನೆಗಳಿಗೆ ಕಿವಿಗೊಡಲಿಲ್ಲ.

ಕ್ರಮೇಣ-ಕ್ರಮೇಣ ಮೂರು-ನಾಲ್ಕು ತಿಂಗಳು ಕಳೆದು ಹೋದುವು. ಈಗ ಅವರಿಗೆ ಮಂಜಹಿಂದ ಏಳುವುದಕ್ಕೆ ಕಷ್ಟವಾಗುತ್ತಿತ್ತು. ಕೆಮ್ಮಲು ಬಂದಾಗಲೆಲ್ಲಾ ರಕ್ತವು ವಾಂತಿಯಾಗುತ್ತಿತ್ತು. ಅವರು ಹಾಸಿಗೆಯನ್ನೇ ಹಿಡಿದುಬಿಟ್ಟರು. ಉಳಿದಿರುವ ನಾಲ್ಕೈದು ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ನಾನು ಹವಣಿಸಿದರೆ ಆಗ ಅವರು: 'ನಿನಗೆ ನನ್ನ ಶವವನ್ನು ಕೊಳೆಯಿಸುವ ವಿಚಾರವಿದೆಯೇನು? ನಾನಂತೂ ಕೊನೆಗೆ ಈಗ ಹೊರಟೆ. ಕೈ ಖಾಲಿಯಾಗಿ ಹೋದರೆ ಈ ಮಣ್ಣು ದೇಹವನ್ನು ನದಿಯ ದಡ ಸೇರಿಸುವುದಕ್ಕೆ ಏನು ಉಪಾಯಮಾಡುವೆ?' ಎಂದು ಕೇಳುತ್ತಿದ್ದರು.

ಆಗ ನನ್ನ ಹೃದಯವು ಬರಿದುಹೋಗುತಿತ್ತು. ಮಗುವು ಕೂಡ ಸರಿಯಾದ ಆಹಾರವಿಲ್ಲದೆ ಸೊರಗಿ ಹೋಗುತ್ತಲಿತ್ತು. ಅನೇಕ ಸಮಯದಲ್ಲಿ ಜೋಳದ ರೊಟ್ಟಿಯನ್ನೋ ಇನ್ನಾವುದಾದರೂ ತಂಗುಳನ್ನೋ ತಿಂದು, ಜೀವಿತರಾಗಿರಲು ಜೀವಿಸುತ್ತಿದ್ದೆವು. ನೆರೆಯವರಿಂದ ಸಾಲತಂದು ಕಾರ್ಯವನ್ನು ನಡೆಯಿಸುತ್ತಿದ್ದೆ. ಸಾಲ-ಸೋಲಗಳ ನಾವಿನ ಮೇಲೆ ಹತ್ತಿ, ಜೀವನದ ಅಪಾರ ಸಾಗರವನ್ನು ದಾಟುವೆನೆನ್ನುವುದು ವಿದ್ಯುವೇನೋ ನಿಜ. ಸುಳಿಗಾಲವು ಬಂದುಹೋಯಿತು; ಅನಂತರ ಚಳಿಗಾಲವು ಬಂದಿತು! ಚಳಿಯು ಪ್ರಾರಂಭವಾದ ಮೇಲೆ ನನ್ನ ಪತಿಯ ಕೆಮ್ಮಲು ಇಮ್ಮಡಿಯಾಗಿಬಿಟ್ಟಿತು.

ಆ ರಾತ್ರಿಯು ಎಷ್ಟು ಭಯಂಕರವಾಗಿತ್ತು! ಮಗುವು ಎರಡು ವಾರಗಳಿಂದ ಜ್ವರಪೀಡಿತವಾಗಿತ್ತು. ತ್ರಿದೋಷಾವಸ್ಥೆಯಲ್ಲಿ ಅದು ಇದ್ದಕ್ಕಿದ್ದ ಹಾಗೆಯೆ 'ಅಪ್ಪಾ ಅಪ್ಪಾ' ಎಂದು ಕಿರಿಚಿಕೊಳ್ಳುತ್ತಿತ್ತು. ಹಳ್ಳಿಯಲ್ಲಿ ವೈದ್ಯರಿದ್ದರು; ಆದರೆ ಅವರು ದುಡ್ಡಿಲ್ಲದೆ ಔಷಧಿಯನ್ನು ಕೊಡಲು ನಿರಾಕರಿಸಿದರು. ಒಂದು ಮೂಲೆಯಲ್ಲಿ ಮರಣಾಸನ್ನ ಪತಿಯು ಮಲಗಿದ್ದರು; ಮತ್ತೊಂದು ಮೂಲೆಯಲ್ಲಿ ನನ್ನ ಪ್ರಾಣಪ್ರಿಯವಾದ ಮುದ್ದುಮಗುವು ಒದ್ದಾಡುತ್ತಿತ್ತು. ಮಧ್ಯರಾತ್ರಿಯಾಗಿತ್ತು; ಪುಷ್ಯಮಾಸವು ಪ್ರಾರಂಭವಾಗಿ ಹೋಗಿತ್ತು. ನನ್ನ ಕಣ್ಣುಗಳಲ್ಲಿ ನಿದ್ದೆಯಿರಲಿಲ್ಲ. ಪತಿದೇವರು ತಂದ್ರಾವಸ್ಥೆಯಲ್ಲಿ ಬಿದ್ದಿದ್ದರು. ಶ್ವಾಸೋಚ್ಛ್ವಾಸವು ಜೋರಾಗುತ್ತಿತ್ತು. ಮತ್ತು ಇತ್ತಕಡೆಗೆ ಮಗುವಿನ ಕೈಕಾಲುಗಳೂ ತಣ್ಣಗಾಗುತ್ತಿದ್ದುವು. ನಾನು ಹುಚ್ಚಿಯ ಹಾಗೆ ಇಲ್ಲಿಂದ ಅಲ್ಲಿಗೆ ಓಡಾಡುತ್ತಿದ್ದೆ. ಒಂದು ಸಲ ವೈದ್ಯರ ಬಳಿಗೂ ಹೋಗಿ, ಅವರ ಚರಣಗಳಲ್ಲಿ ಕಣ್ಣೀರು ಸುರಿಸಿ ಬಂದೆ. ಆದರೆ ಅವರು ಸ್ವಲ್ಪವೂ ಕರುಣೆಯನ್ನು ತೋರಿಸಲಿಲ್ಲ. ಸರಿಯಾಗಿ ಅರ್ಧರಾತ್ರಿಯ ಮೇಲೆ ನನ್ನ ಪತಿಯು, ಅಕಸ್ಮಾತ್ತಾಗಿ ಜೋರಾಗಿ ಕೂಗಿಕೊಂಡರು—ಬಾಯಿಂದ ರಕ್ತವು ಹರಿಯಿತು. ಮತ್ತು ಅವರ ನಿರ್ಜೀವವಾದ ತಲೆ ಒಂದು ಕಡೆ ಹೊರಳಿಕೊಂಡಿತು. ಒಂದು ಸಲ ದೀಪವು ಕೂಡ ಫಕ್ಕನೇ ಹೊಳೆದು, ಅನಂತರ ನಾಶ ಹೊಂದಿ ಅಂಧಕಾರದಲ್ಲಿ ಸೇರಿಹೋಯಿತು. ನನ್ನ ಸ್ಥಿತಿಯು ಆಗ ಹೇಗಿದ್ದಿತೆಂಬುದನ್ನು ನೆನಸಿದರೆ ಈವೊತ್ತೂ ಧರಧರನೆ ನಡುಗುತ್ತೇನೆ. ಅಂಧಕಾರಪೂರ್ಣ ಮನೆಯಲ್ಲಿ ನಾನೊಬ್ಬಳೇ; ಮುಗ್ಗರಿಸಿಬಿದ್ದೆ. ಮತ್ತೊಂದು ಮೂಲೆಯಿಂದ ಮಗುವು ನರಳುತ್ತಿರುವ ಶಬ್ದ ಕೇಳಬರುತ್ತಿತ್ತು. ಏಳುತ್ತಾ—ಮುಗ್ಗರಿಸುತ್ತಾ ಹ್ಯಾಗೋ ದೀಪವನ್ನು ಹಚ್ಚಿದೆ. ಆದರೆ ಮನೆಯಲ್ಲಿ ಎಣ್ಣೆಯಿರಲಿಲ್ಲ. ಅವರ ಎದೆಯನ್ನು ತಿಕ್ಕುವುದಕ್ಕೆ ಕಂದಿದ್ದ ಎಣ್ಣೆಯನ್ನು ದೀಪದಲ್ಲಿ ಹಾಕಿ, ಹೇಗೋ ಕೆಲಸವನ್ನು ಸಾಗಿಸಿದೆ. ಪುಷ್ಯಮಾಸದ ಆ

ಮಧ್ಯರಾತ್ರಿಯಲ್ಲಿ ಯಾರು ಬರುತ್ತಾರೆ? ಯಾರನ್ನು ಕರೆಯಲಿ? ಆ ಹಳ್ಳಿಯಲ್ಲಿ ನನ್ನ ದುಃಖದಲ್ಲಿ ಭಾಗಿಯಾಗುವುದಕ್ಕೆ ನನ್ನವರೆಂದು ಯಾರಿದ್ದರು? ನಾನು ದಾರಿದ್ರ್ಯದ ಮೂರ್ತಿ!

ಮಗುವಿನ ಆರ್ತನಾದದ ಕಡೆಗೆ ಧ್ಯಾನ ಹೊರಟು ನನ್ನ ಹೃದಯದೊಳಗೆ ಒಂದು ವಿಧವಾದ ನೋವು ಹುಟ್ಟಿತು. ನನ್ನ ಸೌಭಾಗ್ಯವು ಮಾಯವಾಯಿತು; ಅಲ್ಲದೆ ಉಡಿಯಲ್ಲಿ ಕೂಡ ಬೆಂಕಿ ಹತ್ತಿಕೊಳ್ಳುವುದರಲ್ಲಿತ್ತು. ಮಗುವು 'ಅಪ್ಪಾ—ಅಪ್ಪಾ' ಎಂದು ಕಿರಿಚಿಕೊಂಡಿತು. ಆ ಮರಣೊನ್ಮುಖ ಹಸುಗೂಸಿಗೇನು ಗೊತ್ತು, ಅದರ ತಂದೆಯು.... !!!

* * *

ಹೇಗೋ ಸೂರ್ಯೋದಯವು ನನ್ನ ಅಂಗಳದಲ್ಲಿ ತನ್ನ ಪ್ರಕಾಶವನ್ನು ಹರಡಿತು. ಹಳ್ಳಿಯ ಕೆಲವು ಜನರೂ ಬಂದರು. ಸ್ಮಶಾನದ ಸರ್ವಸಿದ್ಧತೆಗಳು ಪ್ರಾರಂಭವಾದುವು. ಒಬ್ಬರು ಒಂದು ಹೇಳಿದರೆ ಇನ್ನೊಬ್ಬರು ಇನ್ನೊಂದನ್ನು ಹೇಳುತ್ತಿದ್ದರು. ಆದರೆ ನಾನು ಕಲ್ಲಿನ ಮೂರ್ತಿಯ ಹಾಗೆ ನಿಂತಿದ್ದೆ! ಕಣ್ಣುಗಳಲ್ಲಿ ನೀರಿರಲಿಲ್ಲ, ಕಂಠದಲ್ಲಿ ಶಬ್ದವಿರಲಿಲ್ಲ, ಹೃದಯದಲ್ಲಿ ಚೈತನ್ಯವಿರಲಿಲ್ಲ, ಉಡಿಯಲ್ಲಿ ದುಡ್ಡಿರಲಿಲ್ಲ. ಒಳಗೆ-ಹೊರಗೆ ಸರ್ವತ್ರವೂ ಒಂದು ಹಾಹಾಕಾರವು ವ್ಯಾಪಿಸಿತ್ತು. ಈ ಹಾಹಾಕಾರದ ಚಂಡಮಾರುತದ ಮಧ್ಯೆ ನಾನು ಒಂದು ತರಗೆಲೆಯ ಹಾಗೆ ಹಾರಾಡುತ್ತಿದ್ದೆ. ಶವಸ್ಪರ್ಶ ಮತ್ತು ಸೌದೆಗಳ ಯೋಜನೆಯ ಗಲಿಬಿಲಿಯಲ್ಲಿಯೆ ಮಧ್ಯಾಹ್ನವು ಕಳೆಯಿತು. ನಾನು ಶವದ ಪಕ್ಕದಲ್ಲಿ ಸುಮ್ಮನೆ ಕುಳಿತಿದ್ದೆ...."

ಜ

ನನ್ನ ಎದೆಯು ಜೋರಾಗಿ ಹೊಡೆಯುತ್ತಿತ್ತು. ಆ ನಾರೀಮೂರ್ತಿಯು ತನ್ನ ಕಥೆಯನ್ನು ಹೇಳುತ್ತಾ ಇತ್ತು. ಕೆಲವು ಸಲ ಅದರ ಸ್ವರವು ಮಂದವಾಗುತ್ತಿತ್ತು, ಮತ್ತೆ ಕೆಲವು ಸಲ ಧಿಯಾನಕ-ಉತ್ತೇಜಿತ ಭಾವದ ಕಾರಣದಿಂದ, ಅದರ ಮುಖದಿಂದ ಕೆಂಡಗಳು ಉದುರುತ್ತಿದ್ದುವು. ಇತ್ತ ರಾತ್ರಿಯು ಸಮಾಪ್ತವಾಗುತ್ತ ಬಂದಿತು! ನಾನು ಆ ತಂದ್ರಾವಸ್ಥೆಯಲ್ಲಿ ಸುಮ್ಮನೆ ಕುಳಿತುಕೊಂಡು, ಅವಳ ಕಥೆಯನ್ನು ಕೇಳುತ್ತಾ ಇದ್ದೆ! ಆ ಮೂರ್ತಿಯು ಒಂದು ಸಲ ಇತ್ತ-ಇತ್ತ ನೋಡಿ, ಪುನಃ ಹೇಳಲು ಪ್ರಾರಂಭಿಸಿತು: "ದಣಿದಿಲ್ಲವಷ್ಟೆ? ಪರರ ದುಃಖದ ಕಥೆಯನ್ನು ಕೇಳುವುದಕ್ಕೆ ಯಾರಿಗೆ ಅಸಕ್ತಿ ಇದೆ? ಇನ್ನು ಐದು ನಿಮಿಷಗಳು ದಯೆಯಿಟ್ಟು ತೊಂದರೆ ತೆಗೆದುಕೊಳ್ಳಿ! ನಾನು ನನ್ನ ಕರುಣ-ಕಥೆಯ ಅಂತಿಮ ಪರಿಚ್ಛೇದವನ್ನು ಹೇಳುತ್ತಿದ್ದೇನೆ. ಕೇಳಿ ಪತಿಯನ್ನು ಸ್ಮಶಾನಕ್ಕೆ ತಲುಪಿಸಿ, ಸೌಮಾಂಗಲ್ಯದ ಭಾರವನ್ನು ಅವರ ಚಿತೆಯಮೇಲೆ ಸಮರ್ಪಿಸಿ ಮನೆಗೆ ಬಂದಾಗ, ಮಗುವು ಕಣ್ಣುಗಳನ್ನು ಅಗಲ ತಾನೇ ತೆರೆದಿತ್ತು. ಅದರ ಕೆಂಪಾದ ವಿಶಾಲವಾದ ಕಣ್ಣುಗಳಿಂದ ಜ್ವಾಲಾಗ್ನಿಯು ಉರಿಯುತ್ತಿರುವಂತಿತ್ತು. ಕುಗ್ಗಿದ ಧ್ವನಿಯಲ್ಲಿ ಅದು "ಅಪ್ಪ ಎಲ್ಲಿ? ಅವರು ಕೊಂಟುಹೋದರೆ? ನಾನೂ ಹೋಗುತ್ತೇನೆ; ನನ್ನ ಕೋಟು ಎಲ್ಲಿ?" ಎಂದು ಕೇಳಿತು. ಆನಂತರ ನಡುಗುತ್ತಿರುವ ದುರ್ಬಲವಾದ ಕೈಗಳಿಂದ ತನ್ನ ಕೋಟನ್ನು ಹುಡುಕತೊಡಗಿತು. ನಾನು ದಿಕ್ಕುತೋಚದವಳಾದೆ! ಅದನ್ನು ಮೆಲ್ಲಗೆ ನನ್ನ ತೊಡೆಯ ಮೇಲೆ ಎತ್ತಿಕೊಂಡು, ಸೆರಗಿನಿಂದ ಮುಖವನ್ನು ಮುಚ್ಚಿಕೊಂಡು ಅತ್ತೆ. ಮಗುವು ನನ್ನ ಅಳುವನ್ನು ಕೇಳಿ ಗಾಬರಿಯಾಗಕೂಡದೆಂದು ಮನಸ್ಸಿನೊಳಗೆಯೆ ಅಳುತ್ತಿದ್ದೆ. ದುರ್ದೈವವು ನನಗೆ ಮನವಾರೆ ಅಳುವುದಕ್ಕೂ ಅವಸರವನ್ನು ಕಲ್ಪಿಸಿಕೊಡಲಿಲ್ಲ—ಎಷ್ಟು ಮರ್ಮಾಂತಿಕವಾದ ವ್ಯಥೆ!

ಎರಡು ದಿನಗಳಾದ ಮೇಲೆ, ನನ್ನ ಮುದ್ದುಮಗುವು ಕೂಡ ನನ್ನನ್ನು ತ್ಯಜಿಸಿತು! ನನಗೆ ಜ್ವಾಲಪಕವಿದೆ; ಅದು ಅಂತಿಮ ಸಮಯದಲ್ಲಿ 'ಅಪ್ಪ'ನ ಆನ್ವೇಷಣೆಯಲ್ಲಿತ್ತು, ಮತ್ತು ತನ್ನ ಶುಷ್ಕವೂ ಕೋಮಲವೂ ಆದ ಬಾಹುಗಳಿಂದ ನನ್ನ ಕತ್ತನ್ನು ಕಟ್ಟಿಕೊಂಡು ಪ್ರಾಣಬಿಟ್ಟಿತು. ಒಂದು ಚಿಕ್ಕ ಬಿಕ್ಕಲುಬಂತು; ಅನಂತರ ಇಡಿಯ ಶರೀರವು ನಡುಗಿ ಸ್ಥಿರವಾಯಿತು! ವಿಧವೆ. ಯಾಗಿ ಕೇವಲ ಐದುದಿನಗಳಾಗಿರುವಾಗಲೆ ನಾನು ಪುತ್ರಹೀನಳೂ ಆದೆ. ಅಳುವಿನ ವೇಗದಿಂದ ನನ್ನ ಎದೆಯು ಛಿದ್ರಛಿದ್ರವಾಗುತ್ತಿತ್ತು.

ಕಳೆದ ರಾತ್ರಿ ಮಗುವು ಸತ್ತಿತು. ನಾನು ಅದರ ಮೃತ-ದೇಹವನ್ನು ಸೆರಗಿನಿಂದ ಮುಚ್ಚಿಕೊಂಡು ಬೆಳಗಿನ ವರೆಗೂ ಒಬ್ಬಳೇ ಕುಳಿತಿದ್ದೆ. ಗೋಡೆಯ ಗೂಟದ ಮೇಲೆ ನನ್ನ ಪತಿಯ ಹರಿದು

ವೈ. ರಾ. ಸಾ. ಭೀಮರಾವ ಕಲಕೋಟಿ,
ರಿಟಾಯರ್ಡ್ ಇನ್ಸ್‌ಪೆಕ್ಟರ್ ಇವರು ತಯಾರಿಸಿದ

मराठी पोलीस गाईड

सुधारून वाढविलेली मराठी आवृत्ति

★

डिस्ट्रिक्ट, रेल्वे पोलीस, अबकारी पोलीस व
पोलीस पाटील यांना

अत्यंत उपयुक्त

रॉयल अष्टपेजी पृष्ठे ४२९.

किंमत फक्त २॥ रुपये.

★

कमीत कमी पोस्टेज व्ही. पी. मात्र ३. आ. प्रत्येक.

पुस्तक सिक्कतक्क स्थळ:
मॅनेजर,
कर्नाटक प्रिंटिंग वर्क्स, धारवाड.

ನಿಮ್ಮನ್ನು ಚೆಲುವಿಕೆಯತ್ತ ಕರೆದೊಯ್ಯುವ
ಮಾರ್ಗದರ್ಶಕ!

ಮಾರ್ಗೊ ಸಾಬೂನು

ಇದು ಮಾರ್ಗೊಸಾ ಎಣ್ಣೆಯಿಂದ ತಯಾರಾಗಿದ್ದು, ತುಂಬ ಪರಿಮಳದಿಂದ ಕೂಡಿದುದಾಗಿದೆ. ಇದನ್ನು ನಿತ್ಯವೂ ಬಳಸುತ್ತಿದ್ದಲ್ಲಿ, ನಿಮ್ಮ ನುಣುಪ ಕಳೆ ಹೆಚ್ಚುವುದು.

ಯಾವಾಗಲೂ

ಬಳಸಿರಿ!

ಕಲಕತ್ತಾ ಕೆಮಿಕಲ್ ಕಂಪನಿ, ಲಿಮಿಟೆಡ್,
ಪ್ರಿನ್ಸೆಸ್ ಸ್ಟ್ರೀಟ್, ಮುಂಬಯಿ.

ಹೋದ ಬಟ್ಟೆಗಳು ನೇತಾಡುತ್ತಿದ್ದುವು. ಹಗ್ಗದಮೇಲೆ ಮಗುವಿನ ಪುಟ್ಟಪುಟ್ಟ ಅಂಗಿಗಳು ಜೋಲಾಡುತ್ತಿದ್ದುವು. ಆಟದ ಸಾಮಾನುಗಳು ಗೂಡಿನಲ್ಲಿ ಬಿದ್ದಿದ್ದುವು. ಈ ದೃಶ್ಯವು ನನಗೆ ಆಸಹನೀಯವಾಗಿತ್ತು! ನನ್ನ ಹತ್ತಿರ ಒಂದು ಬಿಡಿಕಾಸು ಕೂಡ ಇರಲಿಲ್ಲ. ಚಂದ್ರಮತಿಯ ಕಥೆಯನ್ನು ನಾನು ಎಂದೋ ಹಿಂದೆ ಓದಿದ್ದೆ; ಆ ದಿವಸ ನನ್ನ ಸೀರೆಯನ್ನು ಹರಿದು ಮಗುವಿಗೆ ಶವವಸ್ತ್ರವನ್ನು ಕೊಡಬೇಕಾಗಿ ಬಂದಿತು! ದಾರಿದ್ರ್ಯವು ಗಡಿಯನ್ನು ಉಲ್ಲಂಘಿಸಿತ್ತು. ಮತ್ತು ವಿಪತ್ತು ಸರ್ವಸ್ವವನ್ನೂ ನಾಶಮಾಡುವುದರಲ್ಲಿ ತೊಡಗಿತ್ತು.

* * * *

"ಲೋಕವು ನನಗೆ ಸರ್ವತ್ರವೂ ಅಂಧಕಾರಮಯವಾಗಿತ್ತು! ನನ್ನನ್ನು ನಾನೇ ಅಮಂಗಲಮೂರ್ತಿ ಎಂದು ತಿಳಿದೆ! ನನ್ನ ಸಮ್ಮುಖದಲ್ಲಿಯೇ ನನ್ನ ಸುವರ್ಣಸಂಸಾರವು ನಾಶಹೊಂದಿತು! ಪತಿಯು ಹೋದರು; ಉಡಿಯ ಬೊಂಬೆಯು ಕೂಡ ಶಬ್ದವಿಲ್ಲದೆ ಮಣ್ಣಿನಲ್ಲಿ ಮುಚ್ಚಲ್ಪಟ್ಟಿತು. ಮಗುವನ್ನು ಅದರ ನಿರ್ದೇಶಕ್ಕೆ ಕಳುಹಿಸಿ ನಾನು, ಈಗ ನನ್ನ ಕಡೆಗೆ ಧ್ಯಾನತಿರುಗಿಸಿದೆ. ಒಂದೊಂದಾಗಿ ಹಿಂದಿನ ಜೀವನದ ಕಥೆಯು ಕಣ್ಣುಗಳ ಮುಂದೆ ಪಿಶಾಚಿಯ ಹಾಗೆ ಕುಣಿಯತೊಡಗಿತು! ಈ ಸಮೃದ್ಧ ಸಂಸಾರವು ನನಗೆ ರುದ್ರಭೂಮಿಯಾಗಿತ್ತು!!

ನಿತ್ಯದ ಹಾಗೆ ಕರಾಳರಾತ್ರಿಯು ಬಂತು. ನಾನು ಮೌನವಾಗಿ ಎದ್ದೆ. ಪತಿ ಮತ್ತು ಮಗುವಿನ ಬಟ್ಟೆಗಳನ್ನು ಗಂಟುಮಾಡಿ ಅದನ್ನು ಎದೆಯ ಮೇಲೆ ಗಟ್ಟಿಯಾಗಿ ಬಿಗಿದುಕೊಂಡೆ. ಅನಂತರ ಸದ್ದುಮಾಡದೆ ಅಂಗಳದ ಬಾವಿಯ ಹತ್ತಿರ ಮೆಲ್ಲಗೆ ಹೋದೆ. ಧುಮುಕಿದರೆ ಶಬ್ದವಾಗಿ ಎಲ್ಲಿ ನೆರೆಹೊರೆಯವರು ಎಚ್ಚತ್ತುಕೊಳ್ಳುವರೋ ಎಂದು ದಿಗಿಲಾಯಿತು. ಮೆಲ್ಲ-ಮೆಲ್ಲಗೆ ಆ ಅಂಧಕಾರಪೂರ್ಣವಾದ ಬಾವಿಯಲ್ಲಿ ಇಳಿಯತೊಡಗಿದೆ. ನೀರಿನ ಸವಿಸ್ಪರ್ಶವನ್ನು ಸೇರಿದ ಮೇಲೆ, ಶಾಂತಚಿತ್ತದಿಂದ ಅದರಲ್ಲಿ ಧುಮುಕಿದೆ. ನನಗೆ ಉಸಿರುಕಟ್ಟಿಕೊಳ್ಳುವಹಾಗಾಯಿತು. ಆದರೆ ಸಾಯುವ ಕಾಲದಲ್ಲಿ ನನಗೆ ಎಂತಹ ಸುಖ ಮತ್ತು ಶಾಂತಿಯು ಸಿಕ್ಕಿತು! ನನ್ನ ಇಡಿಯ ಜೀವನದಲ್ಲಿಯೂ ಅಂತಹ ಸುಖ ಮತ್ತು ಸಮಾಧಾನದ ಭಾಗ್ಯವು ನನಗೆ ದೊರೆತಿರಲಿಲ್ಲ. ಕ್ರಮೇಣ ಕ್ರಮೇಣ ನಾನು ಸಮಸ್ತ ನಿಯಂತ್ರಣಗಳಿಂದ ಮುಕ್ತಿಹೊಂದಿದೆ! ಇದು ಕಳೆದ ವಾರದ ಮಾತು. ಆ ಮೇಲೆ ನನ್ನ ಮೃತದೇಹಕ್ಕೆ ಏನಾಯಿತೆಂಬುದು ನನಗೆ ಗೊತ್ತಿಲ್ಲ! ಆ ಮನೆಯ ಕಡೆ ಪುನಃ ಇಣಿಕಿ ಕೂಡ ನೋಡಲಿಲ್ಲ. ಆ ಶವವು ಬಾವಿಯಲ್ಲಿ ಬಿದ್ದು ಕೊಳೆಯುತ್ತಿದೆಯೊ, ಅಥವಾ ನಾಯಿ-ನರಿಗಳು ಕಚ್ಚಿ ತಿಂದುಬಿಟ್ಟಿವೆಯೋ! ನಾನು ಅದರ ಚಿಂತೆಯಲ್ಲಿ ಏತಕ್ಕಿರಲಿ?

ನನ್ನ ಕಥೆಯು ಸಮಾಪ್ತಿಗೊಂಡಿತು! ನಿಮ್ಮಲ್ಲಿ ನನ್ನದೊಂದು ಪ್ರಾರ್ಥನೆ ಇದೆ. ಈ ನನ್ನ ಬಳೆಯನ್ನು ಯಾವಳಾದರೊಬ್ಬ ಸೌಭಾಗ್ಯವತಿಯ ಚಿತೆಯಲ್ಲಿ ಬಿಸಾಡಿಬಿಡಿರಿ! ಇದು ಸ್ಮಶಾನದ ಘಟ್ಟದ ಉಡುಗೂರೆಯು—ಇದನ್ನು ಸ್ಮಶಾನಕ್ಕೇ ಸೇರಿಸಿಬಿಡಿರಿ! ಇದರ ಜೊತೆಗೆ ನನ್ನ ದುರ್ಭಾಗ್ಯವು ಎಲ್ಲಿಯಾದರೂ ಅಂಟಿಕೊಂಡಿರಲಾರದೆ—ಎಂಬ ಶಂಕೆಯು ನನಗಿದೆ. ಒಳ್ಳೆಯದು; ಇನ್ನು ನಾನು ಹೊರಡುತ್ತೇನೆ ನಮಸ್ಕಾರ!"

* * * *

ಹಠಾತ್ತಾಗಿ ಆ ಮೂರ್ತಿಯು ಅದೃಶ್ಯವಾಯಿತು! ನಾನು ಬೆಚ್ಚಿಬಿದ್ದೆ. ರಾತ್ರಿಯು ಕೊನೆಗೊಳ್ಳುವುದರಲ್ಲಿತ್ತು. ಆ ಮೂರ್ತಿಯ ಮೃದು-ಕ್ಷೀಣ ಪ್ರಭೆಯು ಪೂರ್ವದಿಗಂತದ ಕಡೆಗೆ ಓಡುತ್ತಿತ್ತು. ಕಣ್ಣುಗಳನ್ನು ಉಜ್ಜುತ್ತಾ ಕೂಡಲೆ ಎದ್ದೆ. ಏನು, ರಾತ್ರಿಯಲ್ಲಿ ನಡೆದ ಕಥೆಯು ಸತ್ಯವೊ ಅಥವಾ ಕೇವಲ ನನ್ನ ಕಲ್ಪನೆಯ ನಾಟಕವಾಗಿತ್ತೋ ಎಂಬುದಕ್ಕೆ ಉತ್ತರವನ್ನು ಯಾರು ಕೊಡಬಲ್ಲರು? ನಾನು ನೋಡಿದೆ. ನನ್ನ ಮೇಜಿನ ಮೇಲೆ ಒಂದು ತೆರೆದ ಪುಸ್ತಕವು ಬಿದ್ದಿದೆ, ಮತ್ತು ಅದರ ಮೇಲೆ ಕೆಂಪು ಬಳೆಯ ಕೆಲವು ಚೂರುಗಳು ಬಿದ್ದಿವೆ!

ಮಹಾಕವಿ ಕಾಳಿದಾಸ ಮತ್ತು ★ ಭವಭೂತಿ

ಶ್ರೀ. ಉಪಾಧ್ಯಾಯ ನಾರಾಯಣ, ಶಿರೋಮಣಿ

★

[ನಾಟಕಪ್ರಪಂಚದಲ್ಲಿ ಕಾಳಿದಾಸ ಮತ್ತು ಭವಭೂತಿಯರ ಯಶಃಪ್ರಭೆಯು ಇನ್ನೂ ಮಸುಳಿಸಿ ಹೋಗಿಲ್ಲ. ಕಾಳಿದಾಸ ಮಹಾಕವಿಯು ಶಾಕುಂತಲ ನಾಟಕವನ್ನು ಅರಿಯದ ಜನವಿಲ್ಲ. ಭಾರತದಲ್ಲಿ ಅತ್ಯಂತ ಪ್ರಸಿದ್ಧನಾದ ದುಷ್ಯಂತಚಾರಿತ್ರ್ಯವು, ಶಾಕುಂತಲದಲ್ಲಿ ಅವಲಂಬಿತನಾಗಿದೆ. ರಾಮನು ಪಟ್ಟಾಭಿಷಿಕ್ತನಾದ ತರುವಾಯ, ಅವನೋ ಗಾವಿಲನ ಅಪವಾದಕ್ಕೆ ಹೆದರಿ ಸೀತೆಯನ್ನು ತ್ಯಜಿಸಿದ ರಾಮಾಯಣದ ಉತ್ತರಭಾಗವು, ಭವಭೂತಿಯ ಉತ್ತರರಾಮಚರಿತ ನಾಟಕದಲ್ಲಿ ಪ್ರತಿಪಾದಿಸಲ್ಪಟ್ಟಿದೆ. ಅದೇನೇ ಇರಲಿ, ಕವಿಯು ಬರೆದ ಅವು ದಾದರೂ ಕಾವ್ಯಕ್ಕಿರುವ ಮೂಲಗ್ರಂಥ ನಿರೀಕ್ಷಣೆಯು ವಿಮರ್ಶಕರ ಪಾಲಿಗೆ ಸೇರಿದುದು. "ಕವಿಚರಿತ್ರೆ; ನಿಜನಾಮಧೇಯ; ದೇಶ; ಬರೆದ ಇತರ ಗ್ರಂಥಗಳು; ಕಾಲ ಮೊದಲಾದ ವಿಚಾರವು, ಪ್ರಕೃತ ನಮ್ಮಿಂದ ದೂರವಾಗಿದೆ. ಸ್ವರ್ಗಂಗೆಯ ಮೂಲವನ್ನು ಶೋಧಿಸುವ ಭಾರವು ವಿಮರ್ಶಕ ಮಹನೀಯರ ಪಾಲಿಗಿರಲಿ; ಗಂಗೆಯು ಹರಿದು ಬಂದ ಹಚ್ಚನೆಯ ಬಯಲಲ್ಲಿ, ಬೆಳೆಬೆಳೆಯಿಸಿ ತಣಿದುಣ್ಣುವ ಭಾಗ್ಯವು ಮಾತ್ರ ನಮ್ಮ ಪಾಲಿಗಿದ್ದರೆ ಸಾಕು. ಸಂಸ್ಕೃತಸಾಹಿತ್ಯ ಮುಕುಟದ ಶ್ರೇಷ್ಠರತ್ನಗಳಂತಿರುವ ಈ ಕವಿದ್ವಯರ ನಾಟಕದಲ್ಲಿ ಬಂದ ಪಾತ್ರಗಳನ್ನೂ ಅರಿಸಿದ ಕಥಾಸಂದರ್ಭವನ್ನೂ ಪ್ರಸ್ತುತಲೇಖನದಲ್ಲಿ ಲಘುವಾಗಿ ಚರ್ಚಿಸುವುದು ನಮ್ಮ ಉದ್ದೇಶವಾಗಿದೆ.]

ಪವಿತ್ರವಾದ ಆಶ್ರಮವಾತಾವರಣವು ಎಲ್ಲೆಲ್ಲೂ ತುಂಬಿದೆ. ದುಷ್ಯಂತನು ವನದಲ್ಲಿ ಬೇಟೆಯಾಡುತ್ತ ಕಣ್ವಋಷಿಯ ಆಶ್ರಮದ ಕಡೆಗೆ ಬರುವನು. ಅಲ್ಲಿಯೆ ಸವಿಾಪದಲ್ಲಿ ಅನಸೂಯೆ-ಪ್ರಿಯಂವದೆಯರಿಂದೊಡಗೂಡಿದ ಶಕುಂತಲೆಯು, ಗಿಡ-ಬಳ್ಳಿಗಳ ಪಾತಿಗೆ ನೀರೆರೆಯುತ್ತಿರುವಳು. ಋಷಿಗಳ ಆಶ್ರಮದಲ್ಲಿ ಬೆಳೆದ ನಾಗರಿಕತನದ ಸೋಂಕೂ ತಗಲದಿರುವ ಪಸುಳೆ! ದುಷ್ಯಂತನು ಲತೆಯನ್ನು ನೋಡಿದವನೇ ಮೋಹಗೊಂಡು, ಚೆಲ್ವುಮಾತುಗಳನ್ನಾಡಿ ವರಿಸುವನು. ಕಣ್ವರು ಆಶ್ರಮದಲ್ಲಿಲ್ಲದ ಪ್ರಯುಕ್ತ ಗಾಂಧರ್ವವಿಧಿಯಿಂದ ವಿವಾಹವಾಗುವುದು. ಇದೇ ವರ್ತನೆಯನ್ನು ಕಾಳಿದಾಸನ ದುಷ್ಯಂತನಲ್ಲದೆ ಇನ್ನೊಬ್ಬ ನಾಗರಿಕನಿಟ್ಟುಕೊಂಡಿದ್ದರೆ ಸಮಾಜವೇನೆನ್ನುತ್ತಿತ್ತು? ಮುಂದೆ ಎರಡುಮೂರು ದಿನಗಳಲ್ಲಿ ಕರೆಯಿಸಿಕೊಳ್ಳುವೆನೆಂದು ನಂಬಿಗೆ ಹುಟ್ಟಿಸಿ ಹೋದವನು, ತಿಂಗಳುಗಟ್ಟಲೆ ಕಳೆದರೂ ಒಂದು ಪತ್ರವನ್ನಾದರೂ ಬರೆಯಬೇಡವೆ? ದುಷ್ಯಂತ-ಶಕುಂತಲೆಯರೊಳಗಿದ್ದ ಭಾವ-ಪ್ರವಾಹವನ್ನು ಪ್ರೇಮವೆಂದು ಕರೆಯೋಣವೆ? ಕ್ಷಣಿಕ ಪಶು-ಸಂಬಂಧವೆಂದು ಹೀಯಾಳಿಸಬಾರದೇಕೆ?

ಕೊನೆಗೆ ಧರ್ಮಸಂಕಟಕ್ಕೊಳಗಾಗಿ ಕಾಶ್ಯಪನು ಶಕುಂತಲೆಯನ್ನು ರಾಜನ ಸವಿಾಪ ಕಳುಹಿಸುವನು. ರಾಜನು ನಿರ್ದಾಕ್ಷಿಣ್ಯವಾಗಿ ಆಕೆಯನ್ನು ನಿರಾಕರಿಸುವನು. ರಾಜಾಧಿರಾಜನಾದವನು ಆಶ್ರಮದ ಹೆಣ್ಣನ್ನು ಮದುವೆಯಾದನೆಂದು ನೆರೆದ ಸಭಿಕರಾದರೂ ವಿಶ್ವಾಸಪಡುವರೆಂತು? ವಾದ-ವಿವಾದದಲ್ಲಿ ದುಷ್ಯಂತನಿಗೇ ಜಯವಾಗುವುದು. ದುಷ್ಯಂತನು ಶಕುಂತಲೆಯನ್ನು ವಿವಾಹ

★

ಉತ್ತರ ರಾಮಚರಿತದಲ್ಲಿಯೂ, ಶಾಕುಂತಲದಲ್ಲಿಯೂ ಛಾಯೋರೂಪಿಯಾಗಿ ಬರುವ ಕತೆಯು ಒಂದೇ ಎನ್ನಬಹುದು. ಪಾತ್ರಗಳ ಹೆಸರಿನಲ್ಲಿ ವೈವಿಧ್ಯವಿರಬಹುದು. ರಸ-ವೈಚಿತ್ರ್ಯ, ಸಂದರ್ಭವೈಚಿತ್ರ್ಯ ಕಂಡುಬರಬಹುದು. ಆದರೆ ಸಾಮಾಜಿಕರಲ್ಲಿ ಉಂಟಾಗುವ ಪರಿಣಾಮವು ಒಂದೇ ರೀತಿಯದು!

★

ವಾಗಲಿಲ್ಲವೆಂದು ತೀರ್ಮಾನವಾಗುವುದು. ಆಕೆಯೊಡನೆ ಬಂದ ಋಷಿಕುಮಾರರು ಆಕೆಯನ್ನು ಆರಮನೆಯಲ್ಲಿಯೆ ಇರಹೇಳಿ ಆಶ್ರಮಕ್ಕೆ ಮರಳುವರು. ಆಗಲಾದರೂ 'ಗೋಳೊ' ಎಂದು ಅಳುತ್ತಿರುವ ಶಕುಂತಲೆಯನ್ನು ನೋಡಿ ದುಷ್ಯಂತನು ಕರುಣೆ ತೋರಬೇಡವೆ? "ಹೆಣ್ಣು ಜೇನಿ ಕುದಿವ ನೀರಿನಂತೆ ತಳಮಳಿಸುವುದನ್ನು ಕಂಡೂ ಕಾಣದೆ, ಕೇಳಿಯೂ ಕೇಳದೆ, ಕಲ್ಲಾಗಿರುವ ರಾಜನನ್ನು ಏನೆನ್ನಬೇಕು? ರಾಜನ ಮಾತಂತಿರಲಿ; ಸಾಮಾನ್ಯ ಒಬ್ಬ ಪ್ರಜೆಯ ವರ್ತನವು ಇಂತು ಹೀನಾಯವಾದದ್ದಾದರೆ ರಾಜನು ಶಿಕ್ಷಿಸುತ್ತಿದ್ದಿಲ್ಲವೆ? ರಾಜನಾದುದರಿಂದ ಆಗ ಧರ್ಮವು ಜಡವಾಯಿತು: ವಿವೇಚನೆಯು ಶೂನ್ಯವಾಯಿತು. ನೀತಿಯು ನುಚ್ಚುನೂರಾಯಿತು: ನ್ಯಾಯವು ಕುರುಡಾಯಿತು; ಮುಂದೆ ನಾಟಕದ ಕೊನೆಯಲ್ಲಿ ಇನ್ನೆಷ್ಟೋ ಮಂದಿ ಶಕುಂತಲೆಯರನ್ನು ದುಷ್ಯಂತನು ಪರಿತ್ಯಾಗಿಸಬಹುದು; ಆದರೆ ಒಬ್ಬ ದುಷ್ಯಂತನನ್ನು ಶಕುಂತಲೆಯು ಪತಿದೇವತೆಯಾಗಿ, ಆಕೆಯು ಕ್ಷಮೆಯ ನಿಕ್ಷೇಪ---ದಯೆಯ ನಿಧಾನವೆಂದು ಧಾರಾಳವಾಗಿ ಹೇಳಬಹುದು.

ರಾಮಾಯಣದಲ್ಲಿ ವಾಲ್ಮೀಕಿಯು ಸೀತೆಯನ್ನು ಆದರ್ಶ ಮಹಿಳೆಯನ್ನಾಗಿರಿಸಿದ್ದಾನೆ. ಸ್ವಾಮಿ ವಿವೇಕಾನಂದರವರು ಹೇಳುವಂತೆ

ಮುಂದೆ ಅನೇಕ ರಾಮರು ಜನಿಸಬಹುದು; ಆದರೆ ಒಬ್ಬಾಕೆ ಸೀತೆಯನ್ನು ಕಳೆದುಕೊಂಡ ಭಾರತವು ಆ ನಷ್ಟವನ್ನು ತುಂಬಿ ಕೊಳ್ಳಬೇಕಾದರೆ, ಸಾವಿರ ಶತಮಾನಗಳು ಕಳೆದರೂ ಸಾಲವು. ಶಾಕುಂತಲದಲ್ಲಿಯೂ ಕಾಳಿದಾಸನು ನವೀನ ಸೀತೆಯನ್ನು ಸೃಷ್ಟಿಸಿದ್ದಾನೆ. ಸೀತೆಯಲ್ಲಿ ರಾಮನೆಂಬಂತೆ ಶಕುಂತಲೆಯಲ್ಲಿ ದುಷ್ಯಂತನು ಮೊದಲು ನಿಷ್ಠುರನಾಗುವನು. ಶ್ರೀರಾಮನ ನಿಷ್ಠುರತೆಯನ್ನು ಭವಭೂತಿಯು ಉತ್ತರರಾಮಚರಿತದಲ್ಲಿ ಎತ್ತಿ ತೋರಿಸಿದ್ದಾನೆ. ದುಷ್ಯಂತನ ಕಲ್ಲೆದೆಯನ್ನು ಕೊರೆದು ತೋರಿಸಿದವ ಕಾಳಿದಾಸ ಮಹಾಕವಿ. ಈ ಕವಿಗಳಿಬ್ಬರೂ ಸಾಹಿತ್ಯ-ಪ್ರಪಂಚಕ್ಕೆ ಮಾಡಿದ ಉಪಕಾರ ಕಷ್ಟಿಷ್ಟಲ್ಲ.

ಕಾವ್ಯದಲ್ಲಿ ನಾಯಕನು ಉತ್ತಮನಾಗಿರಬೇಕು; ಕವಿಯು ಇದಕ್ಕಾಗಿ ಅಹರ್ನಿತಿ ಯತ್ನಿಸುತ್ತಿರುವನು. ನಾಯಕನು ಎಷ್ಟೆಷ್ಟು ಉತ್ತಮನಾಗುವನೋ ಅಷ್ಟಷ್ಟು ಕಾವ್ಯವು ಉಜ್ವಲವಾಗುವುದು. ಕಾಳಿದಾಸಮಹಾಕವಿಯು ಮಹಾಭಾರತದಲ್ಲಿನಿವ ಉಳಿದ ಜಟ್ಯಾಯಿಕೆಗಳನ್ನು ತೊರೆದು, ಶಕುಂತಲೋಪಾಖ್ಯಾನವನ್ನೇ ಆರಿಸಲು ಕಾರಣವೇನು? ಭಾರತದಲ್ಲಿ ದುಷ್ಯಂತನ ಚಾರಿತ್ರವೇ ಸಜೀವ ಚಾರಿತ್ರ. ದುಷ್ಯಂತನ ಜೀವನದಲ್ಲಿ ಘರ್ಷಣೆಯಿದೆ. ಧರ್ಮಸಂಕಟದಲ್ಲಿ ಸಿಲುಕಿ ದುಷ್ಯಂತನು ಪುಟವಿಟ್ಟ ಚಿನ್ನದಂತೆ, ರಾಹುಮುಕ್ತ ಚಂದ್ರನಂತೆ ಶುದ್ಧನಾಗಿದ್ದಾನೆ. ಜೀವನವು ಸರಳವಾಗಿದ್ದರೆ ಸಾಲದು; ಜೀವನದಲ್ಲಿ ಪ್ರತಿಕೂಲ ವಾತಾವರಣವು ತುಂಬಿ ಸೋಲು-ಗೆಲುಗಳ ತಿಕ್ಕಾಟದಿಂದ ಉದ್ಭುತ ಕಾವ್ಯ ಹುಟ್ಟಬೇಕು. ಅಂತಹ ಕಾವಿನಿಂದ ನಾಟಕವು ಸಜೀವವೆನಿಸಿ ಜೈತನ್ಯಹೊಂದುವುದು. ವಿರುದ್ಧ ಭಾವಗಳ ಪ್ರತಿಕೂಲಸಂಘರ್ಷಗಳ ಕಾವಿನಿಂದ ಕಾವ್ಯಕ್ಕೆ ಕಳೆಯೇರುವುದು. ತನ್ನ ನಾಟಕದಲ್ಲಿ ಅಂತಹ ಕಳೆಯಿರಬೇಕೆಂದೇ ಕಾಳಿದಾಸನು,ಶಕುಂತಲೋಪಾಖ್ಯಾನವನ್ನು ಕಥಾವಸ್ತುವನ್ನಾಗಿ ತೆಗೆದುಕೊಂಡಿರುವನು. ಇದರಿಂದ ಶಾಕುಂತಲವು, ಶತಮಾನ-ಶತಮಾನಗಳು ಕಳೆದರೂ ಕಾಲಪ್ರವಾಹದಲ್ಲಿ ತೇಲಿಹೋಗದೆ ದೃಢವಾಗಿ ಸಜೀವವಾಗಿ ನಿಂತಿರುವುದು.

ಭವಭೂತಿಯು ಕಾಳಿದಾಸನನ್ನು ಅನುಕರಿಸುವುದರಲ್ಲಿ ಬಹಳ ಚಾತುರ್ಯ ತೋರಿಸಿದ್ದಾನೆ. ಶಾಕುಂತಲಕ್ಕೆ ಪ್ರತಿಯಾಗಿ ತನ್ನ ಉತ್ತರ ರಾಮಚರಿತವಿರಬೇಕೆಂದೇ ಅವನ ಉದ್ದೇಶವಿದ್ದಂತೆ ತೋರುವುದು. ಉತ್ತರರಾಮಚರಿತವನ್ನಾರಿಸಿದ ಭವಭೂತಿಯ ದೃಷ್ಟಿಯು ಕಾಳಿದಾಸನ ದೃಷ್ಟಿಯನ್ನೇ ಅನುಸರಿಸಿದೆ. ರಾಮನ ಚರಿತ್ರೆಯು ಉತ್ತರ ರಾಮಾಯಣದಲ್ಲಿ ಪುಟಪಾಕದಲ್ಲಿ ಬೆಂದು ಧಳಧಳಿಸುತ್ತಿದೆ. ಮೊದಲು ರಾವಣನು ಸೀತೆಯನ್ನು ಕದ್ದೊಯ್ದುದನ್ನು ನಾವು ಅಷ್ಟಾಗಿ ಗಮನಿಸುವುದಿಲ್ಲ. ಅದನ್ನು ಸೀತೆಯು ಎಂತಾದರೂ ಸಹಿಸಿದ್ದಾಳೆ. ಒಂದು ಶುಭಪ್ರಭಾತದಲ್ಲಿ ಪತಿದೇವನು ರಾವಣನ ಶಿರವನ್ನು ಕಡಿದು, ತನ್ನನ್ನು ಆಶ್ವಾಸಿಸಬಹುದೆಂಬ ಆಶೆಯತಂತುವಿನಲ್ಲಿ ಸೀತೆ ಜೀವಹಿಡಿದು ರಾಮಧ್ಯಾನದಲ್ಲಿ ಕಾಲಕಳೆಯುತ್ತಿರುವಳು. ಉತ್ತರರಾಮಾಯಣದಲ್ಲಾದರೋ ರಾಮನೇ ತೊರೆದನೆನ್ನುವಾಗ ಆಶೆಗೆ ಆಸ್ಪದವೆಲ್ಲುಳಿಯಿತು? ಭೂವಿಯೇ ಬಾಯ್ದೆರೆದರೆ, ಅದೇ ಆಧಾರವಾಗಿರುವ ಪ್ರಾಣಿಗಳ ಪಾಡೇನು? ಶಾಕುಂತಲದಲ್ಲಿ ದುಷ್ಯಂತನು ಶಕುಂತಲೆಯನ್ನು ತೊರೆದಿದ್ದಾನೆ. ರಾಮಾಯಣದಲ್ಲಿ ರಾಮನು ಸೀತೆಯನ್ನು ತೊರೆದನು. ತೊರೆದ ಕಾರಣಗಳು ಬೇರೆ ಬೇರೆ ಇರಬಹುದು; ಆದರೆ ಅದರಿಂದುಂಟಾದ ಫಲವು ಮಾತ್ರ ಒಂದೇ ಬಗೆಯದಾಗಿರುವುದು.

ದುಷ್ಯಂತನು ಕಾಮುಕಮನೋವೃತ್ತಿಯವನೆಂದೂ, ಶಕುಂತಲೆಯನ್ನು ತೊರೆದುದು ನೀತಿಬಾಹಿರತನವೆಂದೂ ನಾವು ಈ ಮೊದಲೇ ಒಪ್ಪಿ, ಅನೇಕ ಆಕ್ಷೇಪಗಳನ್ನೆತ್ತಿದ್ದೇವೆ. ಕವಿಗೂ ಇದೇ ಬೇಕಾಗಿದೆ. ಕಣ್ವನ ಪೌರೋಹಿತ್ಯದಲ್ಲಿ ವಿಶ್ವಾವಿತ್ಸು ಮೇನಕೆಯರು ಜತೆಯಾಗಿ, ಮುದ್ದುಗುವರಿ ಶಕುಂತಲೆಯನ್ನೆತ್ತಿ, ದುಷ್ಯಂತನಿಗೆ 'ಸುಮುಹೂರ್ತೇ ಸಾವಧಾನ' ಮಾಡಿದ್ದರೆ ಕವಿಯು ಶಾಕುಂತಲನಾಟಕವನ್ನೇ ಬರೆಯುತ್ತಿದ್ದಿಲ್ಲ. ಕತೆಯು ಸಾಮಾಜಿಕ ಧಾರ್ಮಿಕ ನಿಬಂಧನೆಗಳ ಗ್ರಂಥಿಗಳಿಂದ ತುಂಬಿದುದರಿಂದ, ಆ ಗ್ರಂಥಿಗಳನ್ನು ಬಿಡಿಸಲು ಕವಿಯು ಬುದ್ಧಿಗೆ ಕೆಲಸ ಕೊಡಬೇಕಾಯಿತು. ಕವಿಯ ನೂತನ ಸೃಷ್ಟಿಗೆ ಅವಕಾಶ ದೊರೆಯಿತು. ಕವಿಯು ದುಷ್ಯಂತನನ್ನು ನಾಯಕನನ್ನಾಗಿ ಮಾಡಿಲ್ಲ. ತನ್ನ ನಾಟಕಕ್ಕೆ ಯೋಗ್ಯ ನಾಯಕನನ್ನು ಹುಡುಕುತ್ತ ಅಲೆಯುತ್ತಿರುವಲ್ಲಿ, ದುಷ್ಯಂತನು ಎದುರಾದಾಗ ಬಾರೆಂದು ಸ್ವಾಗತಿಸಿದನು. ಕಾಳಿದಾಸನ ಅತಿಥಿಯಾಗಿ ದುಷ್ಯಂತನು ಆದರ್ಶವ್ಯಕ್ತಿಯಾದನು. ಆತನಲ್ಲಿದ್ದ ರಂಧ್ರಗಳೆಲ್ಲ ಮಾಯವಾದುವು. ಶ್ರೀಕೃಷ್ಣನಂತಹ ಸಾರಥಿಗೆ ಸವ್ಯಸಾಚಿಯಂತಹ ಮಹಾರಥಿಕನು ಇರಬೇಕು. ದುರ್ಯೋಧನನಂತಹ ಪಿಶುಣನಿಗೆ ಶಕುನಿಯಂತಹ ಮಂತ್ರಿಯಿರಬೇಕು. ಕಾಳಿದಾಸನಂತಹ ಕವಿಚಕ್ರವರ್ತಿಗೆ ದುಷ್ಯಂತನಂತಹ ಕ್ರಾಂತಿಕಾರ ನೇತಾರನಿರಬೇಕು.

ಕತ್ತಲು ತುಂಬಿದ ಜೀವನಪಥದಲ್ಲಿ ಕ್ರಾಂತಿಯೇ ಎತ್ತಿಹಿಡಿದ ಪಂಜು. ಕ್ರಾಂತಿಯಿಂದ ಜೀವನವು ಕೃತಾರ್ಥವಾಗುವವುದು. ಅಂತಹ ಕ್ರಾಂತಿಕಾರರ ಚರಿತ್ರೆಯು ಉಲ್ಲೇಖಯೋಗ್ಯವಾಗಿದೆ. ಸಾಮಾನ್ಯವಾಗಿ ಚಾರಿತ್ರಿಕವ್ಯಕ್ತಿಗಳೆಲ್ಲರೂ ಕ್ರಾಂತಿಕಾರರೇ ಇರುವರು. ಕ್ರಾಂತಿಯಿಂದ ಬೆಳಕಿನ ಕಣ್ಣು ತೆರೆದು, ಜಗದ ಜಡ ನಿದ್ರೆ ಪರಿಹಾರವಾಗುವುದು. ಅಂತಹ ಕ್ರಾಂತಿಕಾರರಲ್ಲಿ ದುಷ್ಯಂತ ನೊಬ್ಬನು; ಶ್ರೀರಾಮಚಂದ್ರನೊಬ್ಬನು. ದುಷ್ಯಂತನು ಕಾಳಿದಾಸನ ನಾಟಕದಲ್ಲಿ ನಾಯಕನಿದ್ದಾನೆ. ಶ್ರೀರಾಮನು ಭವಭೂತಿಯ ವಿಭೂತಿಗೆ ಪಾತ್ರನೆನಿಸಿದ್ದಾನೆ.

ಶಾಕುಂತಲದಲ್ಲಿ ದುಷ್ಯಂತನು ಶಕುಂತಲೆಯನ್ನು ತಿರಸ್ಕರಿಸಿ ಅನಂತರ ಪಶ್ಚಾತ್ತಾಪಕ್ಕೊಳಗಾಗುವನು. ಆಗ ಇಂದ್ರನು ದೇವಕಾರ್ಯವನ್ನು ಪೂರೈಸಲು ತನ್ನೆಡೆಗೆ ಬರಬೇಕೆಂದು ಕರೆಕಳುಹುವನು. ತನ್ನಲ್ಲಿ ಅಪಾರದುಃಖವಡಗಿದ್ದರೂ ಗಣಿಸದೆ, ದೇವಕಾರ್ಯವು ಶ್ರೇಯಸ್ಸೆಂದು ಬಗೆದು, ದುಷ್ಯಂತನು ಅಮರಾವತಿಗೆ ಪ್ರಯಾಣ ಬೆಳಸುವನು. ದೇವಕಾರ್ಯವನ್ನು ಜಯಪ್ರದವಾಗಿ ತೀರಿಸಿ, ಇಂದ್ರನಿಂದ ಸಮ್ಮಾನಿತನಾಗಿ ಹಿಂತಿರುಗಿ ಬರುವಾಗ,

ಮಧ್ಯೆ ದಾರಿಯಲ್ಲಿ ಮಾರೀಚನ ಆಶ್ರಮದಲ್ಲಿ, ಶಕುಂತಲೆಯು ಭೆಟ್ಟಿಯಾಗುವಳು; ಈಪ್ಸಿತಾರ್ಥವು ಕೈಗೂಡುವುದು.

ಶ್ರೀರಾಮನು ಲೋಕನಿಂದೆಗೆ ಭಯಪಟ್ಟು, ಸೀತೆಯನ್ನು ಲಕ್ಷ್ಮಣನೊಡನೆ ಕಾಡಿಗೆ ಕಳುಹಿಸುವನು. ಅನಂತರ ದೇವತೆಗಳಿಗೆ ಅತ್ಯಂತ ಪ್ರಿಯವಾದ ಅಶ್ವಮೇಧವನ್ನು ಮಾಡಲು ಅವನು ಉದ್ಯೋಗಿಸುವನು. ಯಾಗಸಂಬಂಧಿಯಾದ ಕುದುರೆಯು ಊರೂರು ಸುತ್ತುತ್ತ ವಾಲ್ಮೀಕಿಯ ಪುಣ್ಯಾಶ್ರಮದೆಡೆಗೆ ಬರುವುದು. ಅಲ್ಲಿ ಲವ-ಕುಶರು—ಶಾಕುಂತಲದಲ್ಲಿ ಸರ್ವದಮನನು ಸಿಂಹದ ಮರಿಯೊಡನೆ ಆಡಿಕೊಂಡಿದ್ದಂತೆ—ಕ್ಷಾತ್ರತೇಜದ ಹಿಮ್ಮಿನಿಂದ ಕುದುರೆಯನ್ನು ಕಟ್ಟಿಹಾಕುವರು. ಅವರಿಂದ ಕುದುರೆಯನ್ನು ಬಿಡಿಸಿಕೊಳ್ಳಬೇಕಾದರೆ ಶತ್ರುಘ್ನನ ಕೈಯಿಂದ ಸಾಧ್ಯವಾಗಲಿಲ್ಲ; ಶ್ರೀರಾಮನೇ ಬರಬೇಕಾಯಿತು. ಶ್ರೀರಾಮನ ವೀರಾಟೋಪವೂ ವೀರಬಾಲಕರ ಸಮ್ಮುಖದಲ್ಲಿ ನಡೆಯಲಿಲ್ಲ. ಕೊನೆಗೆ ವಾಲ್ಮೀಕಿಯಿಂದ ನಿಜವಾದ ವೃತ್ತಾಂತವೆಲ್ಲ ತಿಳಿದುಬರುವುದು.

ಉತ್ತರರಾಮಚರಿತದಲ್ಲಿಯೂ ಶಾಕುಂತಲದಲ್ಲಿಯೂ ಛಾಯಾರೂಪಿಯಾಗಿ ಬರುವ ಕತೆಯು ಒಂದೇ ಎನ್ನಬಹುದು. ಪಾತ್ರಗಳ ಹೆಸರಿನಲ್ಲಿ ವೈವಿಧ್ಯವಿರಬಹುದು; ರಸವೈಚಿತ್ರ್ಯ-ಸಂದರ್ಭವೈವಿಧ್ಯ ಕಂಡುಬರಬಹುದು; ಆದರೆ ಕತೆಯನ್ನು ನಿರೂಪಿಸಿದುದರಿಂದ ಸಾಮಾಜಿಕರಲ್ಲಿ ಉಂಟಾಗುವ ಪರಿಣಾಮ ಏಕರೀತಿಯದು. ಒಂದರ ಛಾಯಾಸ್ವೀಕರಣ ಇನ್ನೊಂದು. ಇನ್ನೊಂದರ ಛಾಯಾಪ್ರತಿರೂಪಿ ಮೊದಲನೆಯದು. ಎರಡು ಪ್ರಣಾಳಿಕೆಗಳಿಂದ ಹೊಮ್ಮಿದ ನೀರು ಒಂದೇ ಕ್ಷೇತ್ರವನ್ನು ಬೆಳೆಯಿಸಿ ಹಸನಾಗಿರಿಸಿದೆ.

ಕನ್ನಡದ ಕವಿಗಳಲ್ಲಿ ಗಣ್ಯನಾದ ಮುದ್ದಣನು **ಅದ್ಭುತರಾಮಾಯಣ, ರಾಮಪಟ್ಟಾಭಿಷೇಕ; ರಾಮಾಶ್ವಮೇಧ** ಮೊದಲಾದ ಕಾವ್ಯಗಳನ್ನು ಬರೆದರೂ 'ಉತ್ತರೇ ರಾಮಚರಿತೇ ಭವಭೂತಿರ್ವಿಶಿಷ್ಯತೆ' ಎಂಬಂತೆ, ರಾಮಾಶ್ವಮೇಧದಲ್ಲಿ ಮುದ್ದಣನ ವ್ಯಕ್ತಿತ್ವವು ಎಚ್ಚತ್ತು ತೋರುವುದು. ರಾಮಾಶ್ವಮೇಧದಲ್ಲೂ ಸೀತಾಪರಿತ್ಯಾಗದ ಸಂದರ್ಭವು ಮನೋಹರವಾಗಿ ಚಿತ್ರಿಸಲ್ಪಟ್ಟಿದೆ.

ಸರಳ ಕಥಾನಿರೂಪಣದಲ್ಲಿ ಕವಿಯ ಪ್ರತಿಭೆಗೆ ಅವಕಾಶವಿಲ್ಲ. ಕಥೆಯು ಕ್ಲಿಷ್ಟವಿದ್ದಷ್ಟು ಕವಿಯ ಬುದ್ಧಿಗೆ ಕೆಲಸ ಹೆಚ್ಚು. ಉತ್ತಮ ನಾಯಕನ ಉತ್ತಮಗುಣ ವರ್ಣನೆಯಲ್ಲಿ ಕವಿಯ ಮಹತ್ತ್ವವೇನಿದೆ? ಮೃಚ್ಛಕಟಿಕದಲ್ಲಿಂಬಂತೆ ದರಿದ್ರಚಾರುದತ್ತನಲ್ಲಿ ಉದಾತ್ತಗುಣ ನಿರೂಪಣೆ ಇರಬೇಕು. ವೇಶ್ಯೆಯು ಸಂಪನ್ನನನ್ನು ಮೋಹಿಸುವುದು ಲೋಕರೂಢಿ; ವಸಂತಸೇನೆಯು ರಾಜಸಂಬಂಧಿಯಾದ ಶಕಾರನನ್ನಲ್ಲದೆ, ದರಿದ್ರ ಚಾರುದತ್ತನಲ್ಲಿ ಅನುರಕ್ತಳಾಗಿರುವಳು. ನಾಟಕದಲ್ಲಿ ಇದೊಂದು ಕ್ರಾಂತಿಕಾರಕ ಮನೋವೃತ್ತಿಯೆನ್ನಬಹುದು. ಸಮಾಜದಿಂದ ಬಹಿಷ್ಕರಿಸಲ್ಪಟ್ಟ ವೇಶ್ಯೆಗಾದರೂ ಒಂದು ಹೃದಯವಿದೆಯೆಂಬುದು, ನಾಟಕವನ್ನೋದುತ್ತ ನಮಗೆ ಮನದಟ್ಟಾಗುವುದು. 'ರತ್ನಾವಳಿಯಲ್ಲಿ ವತ್ಸರಾಜನಿಗೆ ವಾಸವದತ್ತೆಯಂತಹ ಗಡುಸುಗಾತಿ ಹೆಂಡತಿ ಇದ್ದರೆ ಇರಲಿ ಇಲ್ಲದಿದ್ದರೆ ಹೋಗಲಿ; ವಸಂತಸೇನೆಯಂತಹ ಅನುಕೂಲೆ ವೇಶ್ಯೆಯು ಮಾತ್ರ ಇರಲೊಲ್ಲಳೇಕೆ?' ಎಂದೆನಿಸುವುದು.

ಮೃಚ್ಛಕಟಿಕದಲ್ಲಾಗುವಾಗ ವಸಂತಸೇನೆಯು ವೇಶ್ಯೆಯಲ್ಲ; ಗರತಿ. 'ಶಾಕುಂತಲದಲ್ಲಿ ದುಷ್ಯಂತನು ಬರಿಯೆ ಕಾಮುಕನಲ್ಲ; ಧೀರೋದಾತ್ತನಾದ ಕ್ಷಾತ್ರವೀರನು. ಉತ್ತರರಾಮಚರಿತದಲ್ಲಿ ಶ್ರೀರಾಮನು ಧರ್ಮಧೀರುವಲ್ಲ; ಧರ್ಮವೀರ. ಕವಿಯು ತನ್ನ ಬುದ್ಧಿಶಕ್ತಿಯಿಂದ ಪಾತ್ರಗಳನ್ನು ಮಾರ್ಪಡಿಸಿಕೊಂಡು, ಉಜ್ವಲವಾಗಿರಿಸಿದ್ದಾನೆ. ಅದನ್ನೇ ನಾವು ಕವಿಕರ್ಮವೆನ್ನುತ್ತೇವೆ; ಕಾವ್ಯವೆಂದು ಆದರಿಸುತ್ತೇವೆ.

ಸಾಧನ ಮುದ್ರಣಾಲಯದ ಸುಂದರ ಪ್ರಕಟನೆಗಳು

ಮೈಸೂರು ವಿದ್ಯಾಖಾತೆಯವರಿಂದ ಸುಂಜೂರಾಗಿದೆ.

T.B.C. No. 162 of 39-40.

ವರ್ಧಾಯಾತ್ರೆ: ಲೇ. ಶ್ರೀ. ಎಸ್. ಕೃಷ್ಣಶರ್ಮ. ಬೆಲೆ: ೧-೦-೦

ಅಭಿಪ್ರಾಯಗಳು

೧) ಈ ಪುಸ್ತಕವನ್ನು ಗಾಂಧೀಜಿಯವರ ಸತ್ಯಶೋಧನೆ, ಜವಾಹರಲಾಲರ ಆತ್ಮಕಥೆ, ಪಟ್ಟಾಭಿಯವರ ಕಾಂಗ್ರೆಸ್ ಇತಿಹಾಸ ಇವುಗಳೊಡನೆ ಓದಿ ನೋಡಬೇಕು.

—ವಿಶ್ವಕರ್ನಾಟಕ: ಶ್ರೀ. ತಿ. ತಾ. ಶರ್ಮನ್.

೨) WARDHA YATRA is a new departure in Kannada Literature. —*Indian P.E.N.*

ಇದೇ ಲೇಖಕರ **ಹರ್ಜಿಕುಟಿ** ಅಚ್ಚಿನಲ್ಲಿದೆ.

ಭಾರತೀಯ ಕಥಾವಳಿ

ಭಾರತದಲ್ಲಿರುವ ಸುಪ್ರಸಿದ್ಧ ಭಾಷೆಗಳಿಂದ ಆಯ್ದು ಉತ್ತಮವಾದ ಕಥೆಗಳ ಸಂಗ್ರಹದ ಹೊಸಯೋಜನೆ. ಅಖಿಲಭಾರತದ ಸಾಂಸ್ಕೃತಿಕ ತಿಳುವಳಿಕೆಗೆ ತುಂಬ ಅವಶ್ಯವಾದ ಸಂಗ್ರಹ. ಪ್ರತಿ ಮನೆಮನೆಗೂ ಇರಬೇಕಾದ ಅತ್ಯವಶ್ಯ ಸಾಹಿತ್ಯ.

೧. ತೆಲುಗಿನ ಕತೆಗಳು .. ೦-೮-೦

೨. ಅಸಾಮೀ ಕತೆಗಳು .. ೦-೮-೦

ಉಳಿದ ಕತೆಗಳ ಸಂಗ್ರಹಗಳಾದರೂ ಬೇಗ ಪ್ರಕಟಿಸಲ್ಪಡುವುವು.

ದೊರೆಯುವ ಸ್ಥಳ:— **ಸಾಧನ ಮುದ್ರಣಾಲಯ, ಧಾರವಾಡ**

ಅಹಿಂಸೆಯ ಅವಾಂತರ ★ (ಒಂದು ಹರಟೆ)

ಶ್ರೀ. ಎಂ. ವಿ. ವೆಂಕಟರಾಮಯ್ಯ ಬಿ.ಎ. ಮುಂಡ್ಯ

ಶರ್ಮನ ಅಹಿಂಸೆಯ ಆದರ್ಶ ಭೂಮಿಗೆ ಬಿದ್ದ ಆಣೆಕಲ್ಲುಂತಾಯಿತು. ಮನುಷ್ಯಕುಲದ ಕಟ್ಟಡವೆ ಹಿಂಸೆಯ ತಳಹದಿಯ ಮೇಲೆ ನಿಂತಿರುವಾಗ, ಜೀವನದಲ್ಲಿ ಅಹಿಂಸೆಯ ಸಾಧನೆಗೆ ಮಾರ್ಗವೆಲ್ಲಿ?, ಹಿಂಸೆಗಾಗಿ ಮರುಗಿ, ಸಾಯಬೇಕೆನ್ನುವನು ಕೂಡ ಆತ್ಮಹತ್ಯೆಯೆಂಬ ಹಿಂಸೆಗೆ ಶರಣುಹೋಗಬೇಕಾಗುವುದಲ್ಲವೆ?

★

ಬಿಕ್ಕುವಿನಿಂದಿನಿಂದಲೂ ಅಹಿಂಸೆಯೇ ಪರಮ ಧರ್ಮವೆಂಬ ತತ್ತ್ವವನ್ನು ಕಲಿತ ಸತ್ಯನಾರಾಯಣ ಶರ್ಮನು, ಬೆಳೆದಂತೆಲ್ಲಾ ಇದನ್ನು ಕುರಿತು ಸೂಕ್ಷ್ಮಾತಿಸೂಕ್ಷ್ಮವಾಗಿ ಅಭ್ಯಾಸಮಾಡುತ್ತಾ ಬಂದನು. ಪ್ರಪಂಚದ ಇತರ ದೇಶಗಳಲ್ಲಿ ಎಲ್ಲಿಯೂ ರೂಢಿಯಲ್ಲಿಲ್ಲದೆ, ನಮ್ಮ ಪುಣ್ಯಭೂಮಿ ಭಾರತದಲ್ಲಿ ಮಾತ್ರ ಅನಾದಿಯಿಂದಲೂ ಪರಿಪೋಷಿತವಾಗಿ ಬಂದಿರುವ್ದು ಅಹಿಂಸೆ; ಅಂದಿನ ಬುದ್ಧಭಗವಾನನಿಂದ ಇಂದಿನ ಮಹಾತ್ಮಾಗಾಂಧಿಯವರ ವರೆಗೂ ಪ್ರಚಾರದಲ್ಲಿ ಬಂದಿರುವುದು ಅಹಿಂಸೆ; ಕರ್ಮ-ಕರ್ಮಾಂತರಕ್ಕೆ ಅಂಟಿಕೊಂಡು, ಪಾಪ-ಪುಣ್ಯಗಳ ಹೆಬ್ಬಾಗಿಲಾದುದು ಅಹಿಂಸೆ—ಇತ್ಯಾದಿ ಅನೇಕ ಪ್ರಮಾಣಗಳಿಂದ ಸಿದ್ಧಿಯಾಗಿ ಆಚರಣೆಯಲ್ಲಿರುವ ಅಹಿಂಸಾತತ್ತ್ವಕ್ಕೆ ನಮ್ಮ ಶರ್ಮನ ಭಕ್ತಿ-ಭಾವನೆಗಳು ಅಪಾರವಾಗಿ ಬೆಳೆದಿದ್ದುವು.

ಶಾಲೆಯಲ್ಲಿ ಓದುತ್ತಿದ್ದ ಕಾಲ ಕ್ಕೆ ಅವನು ತನ್ನ ನಡೆವಳಿಕೆಗಳಲ್ಲಿ ಅಪಷ್ಟುಮಟ್ಟಿಗೆ ಅಹಿಂಸೆಯನ್ನೇ ಆಚರಿಸುತ್ತ, ತನ್ನ ಇಷ್ಟಮಿತ್ರರಲ್ಲೂ ಅವನ್ನೇ ಬತಾಯಿಸಿಪಡಿಸುತ್ತಿದ್ದನು.

ಅವನು ಎಂದೂ ಪ್ರಾಣಿಪ್ರದರ್ಶನಶಾಲೆಗೆ (Zoo) ಹೋದವನಲ್ಲ. 'ಸ್ವತಂತ್ರವಾಗಿದ್ದ ಮೂಗುಪ್ರಾಣಿಗಳನ್ನು ಹಿಡಿದು ತಂದು ಸೆರೆಮನೆಯಲ್ಲಿಟ್ಟು, ಮನುಷ್ಯಪ್ರಾಣಿಯೊಬ್ಬನ ವಿಹಾರಕ್ಕಾಗಿ ಹಿಂಸಿಸುವುದು ನ್ಯಾಯವೆ? ಈ ಪ್ರಾಣಿಗಳ ಆಕಾರವನ್ನು ನೋಡಬೇಕಾದರೆ ಚಿತ್ರಗಳಲ್ಲಿ ನೋಡಿದರಾಗದೆ? ಅಮೇರಿಕಾಖಂಡದಲ್ಲಿರುವ ನಯಾಗರ್ ಜಲಪಾತವನ್ನು ಪ್ರತ್ಯಕ್ಷ ನೋಡುವುದಕ್ಕೆ ನಮಗೆ ಅವಕಾಶವಿಲ್ಲದೆ ಇರುವುದರಿಂದ, ಅದರ ಚಿತ್ರವನ್ನು ನೋಡಿ ನಾವು ಅದರ ಲಕ್ಷಣವನ್ನು ತಿಳಿಯುವುದಿಲ್ಲವೆ? ಬಂಧನದಲ್ಲಿರುವ ಪ್ರಾಣಿಗಳನ್ನು ನೋಡಿದ ಮಾತ್ರಕ್ಕೆ ಅವುಗಳ ಆಹಾರ, ವಿಹಾರ ಮೊದಲಾದ ವಿಷಯಗಳನ್ನು ಸರಿಯಾಗಿ ಸ್ವಭಾವಪೂರ್ಣವೆಂದು ತಿಳಿದಂತಾಯಿತೆ?' ಹೀಗೆಂದು ಅವನ ವಾದ.

ಕಮಲೀನು ಎಂದೂ ಸರ್ಕಸ್ಸಿಗೆ ಹೋದವನಲ್ಲ. 'ಬೃಹದಾಕಾರವಾದ ಆನೆಯನ್ನು, ಕೇವಲ ಮೂರು ಅಡಿ ವ್ಯಾಸವುಳ್ಳ ಆಸನದ ಮೇಲೆ ನಾಲ್ಕು ಕಾಲುಗಳನ್ನೂ ಊರಿ ನಿಲ್ಲುವಂತೆ ಹಿಂಸಿಸುವುದು, ಮಾನವನ ದುಷ್ಟ ಸ್ವಭಾವವಲ್ಲದೆ ನಿಪುಣತನವೆನಿಸುವುದೆ? ಹೀಗೆಯೇ ಇತರ ಎಷ್ಟೋ ಮೂಗುಪ್ರಾಣಿಗಳನ್ನು, ತನ್ನ ಹೊಟ್ಟೆಯ ಪಾಡಿಗಾಗಿ ಅನೇಕ ರೀತಿಯಲ್ಲಿ ಹಿಂಸಿಸುವುದು ಅಧರ್ಮವೆಂದು ಯಾರಿಗಾದರೂ ತಿಳಿದಿರಲೇ ಬೇಕು' ಎಂಬುದಾಗಿ ಸಾರಿ ಸಾರಿ ಹೇಳುವನು.

ಶರ್ಮನು ಪ್ರಯಾಣಕಾಲದಲ್ಲೆಲ್ಲ ಸಾಧ್ಯವಾದ ಮಟ್ಟಿಗೆ ರೈಲು ಅಥವಾ ಮೋಟಾರು ಬಸ್ಸುಗಳನ್ನೇ ಹತ್ತುವನು. ಎತ್ತಿನ ಗಾಡಿಯಾಗಲಿ, ಕುದುರೆಯ ಗಾಡಿಯಾಗಲಿ, ಆವನಿಗೆ ಸರಿಯೆನಿಸುತ್ತಿರಲಿಲ್ಲ. ಈ ಆಭಿರುಚಿಯು ಹೊರಗಿನ ಆಡಂಬರಕ್ಕೇನೂ ಅಲ್ಲ; ಕೇವಲ ಅಹಿಂಸೆಯ ಆಚರಣೆಗಾಗಿ ಮಾತ್ರ.

ಶಾಲೆಯ ವ್ಯಾಸಂಗವನ್ನು ಮುಗಿಸಿಕೊಂಡು ಶರ್ಮನು, ತನ್ನ ಹಳ್ಳಿಯ ತೋಟಕ್ಕೆ ಬಂದು ನೆಲಸಿದನು. ಅವನ ವಂಶದಲ್ಲಿ ಹಿರಿಯರೆಲ್ಲರೂ ವ್ಯವಸಾಯದಿಂದಲೆ ಜೀವನ ಮಾಡುತ್ತಿದ್ದುದರಿಂದ ತಾನೂ ಅದೇ ಉದ್ಯೋಗವನ್ನು ಅವಲಂಬಿಸಿದನು. ಅಲ್ಲಿಯೂ ತನ್ನ ಅಹಿಂಸೆಯ ಭಾವನೆಗಳನ್ನು ಹೆಚ್ಚುಹೆಚ್ಚಾಗಿ ಕಾರ್ಯರೂಪಕ್ಕೆ ತರಲು ಮೊದಲು ಮಾಡಿದನು.

ವಿಶಾಲವಾದ ತೋಟದಲ್ಲಿ ದನ-ಕರುಗಳು, ಪಕ್ಷಿಗಳು ಮುಂತಾದ ಅನೇಕ ಪ್ರಾಣಿಗಳು ಇದ್ದುವು. ಅವು ಸ್ವೇಚ್ಛೆಯಾಗಿ ಸಂಚಾರ ಮಾಡಿಕೊಂಡು, ತೃಪ್ತಿಯಿಂದ ಆಹಾರ-ವಿಹಾರಗಳನ್ನು ನಡೆಯಿಸಿಕೊಂಡು ಓಡಾಡುತ್ತಿದ್ದುದನ್ನು ಕಂಡು, ಶರ್ಮನಿಗೆ ಮಿತಿಯಿಲ್ಲದ ಆನಂದ. ಅವುಗಳ ಆಟ-ಪಾಟಗಳನ್ನು ನೋಡುತ್ತ ಕೆಲವು ಗಂಟೆಗಳ ಕಾಲ ಆನಂದದಲ್ಲಿ ಕಳೆಯುವನು. ಅವನು ತನ್ನ ಆಳುಕಾಳುಗಳಲ್ಲಿಯೂ ಹೆಚ್ಚಾಗಿ ಈ ವಿಚಾರವನ್ನೇ ಮಾತನಾಡುವನು. ಅವರಿಗೆ ಇದೆಲ್ಲವೂ ಸಾಧಾರಣವೆಂದು ತೋರಿ, ತಮ್ಮ ಯುವಮಾನಸನ ಮಾತೆಲ್ಲವನ್ನೂ ಹುಡುಗಾಟವೆಂದು ಅವರೆಣಿಸುತ್ತಿದ್ದರು. ಶರ್ಮನ ಉತ್ಸಾಹಕ್ಕೆ ಅವರಿಂದ ಏನೂ ಉತ್ತೇಜನ ದೊರೆಯದೆ, ಅನೇಕ ವೇಳೆ ಉದಾಸೀನ ಭಾವನೆಯೆ ಕಾಣುತ್ತಿದ್ದಿತು.

ಒಂದುದಿನ ಶರ್ಮನು ನೆರೆಯೂರಿಗೆ ಸಂತೆಯ ವ್ಯಾಪಾರಕ್ಕಾ ಹೊರಟನು. ಗಾಡಿಯಲ್ಲಿ ತೆಂಗಿನ ಕಾಯಿಗಳನ್ನು ಮಾರಾಟಕ್ಕಾ

ತುಂಬಿಸಿದ್ದನು. ಗಾಡಿ ಹೊಡೆಯುವ ಆಳು, ಗಾಡಿಯೊಳಗೆ ಕುಳಿತು ಕೊಳ್ಳಿರೆಂದು ಎಷ್ಟು ಹೇಳಿದರೂ ಒಪ್ಪದೆ, ಶರ್ಮನು ನಡೆದು ಬರುತ್ತಿದ್ದನು. ಸ್ವಲ್ಪ ದೂರ ಸಾಗಿದನಂತರ ಗಾಡಿಯ ಎಡ-ಭಾಗದ ಎತ್ತು ಮಲಗಿತು. ಶರ್ಮನಿಗೆ ಹೆದರಿಕೆಯಾಯಿತು. ಗಾಡಿಯ ಆಳು ಸ್ವಲ್ಪವೂ ಗಾಬರಿಯಾಗದೆ, ನಿಧಾನವಾಗಿ ಇಳಿದು ಎತ್ತಿನ ಮುಂದೆ ಬಂದನು; ಎರಡು ಕೈಗಳಿಂದಲೂ ಅದರ ಮುಸುಡಿಯನ್ನು ಅಮುಕಿ ಹಿಡಿದುಕೊಂಡನು. ಎತ್ತು ಸ್ವಲ್ಪ ಒದ್ದಾಡಿ ಮೇಲಕ್ಕೆದ್ದಿತು. ಶರ್ಮನು ಹತ್ತಿರ ಬಂದು "ಇದೇನು ಕನ್ಯಾಯ?" ಎಂದು ಕೇಳಿದನು.

"ಇದು ಕಳ್ಳ ಎತ್ತು ಬುದ್ದೀ! ಕೊಂಡಾಗ ಜಾತ್ರೆಯಲ್ಲಿ ಸರಿ ಯಾಗಿ ನೋಡಲಿಲ್ಲ; ಕೆಲಸಕ್ಕೆ ಹೂಡಿದರೆ ಸ್ವಲ್ಪ ಹೊತ್ತಿನೊಳಗೇ ಮಲಗುತ್ತದೆ. ಹುರುಳಿ, ಹುಲ್ಲು ತಿನ್ನುವದರಲ್ಲಿ ಜೊತೆಯ ಎತ್ತಿಗಿಂತಲೂ ಒಂದು ಕೈ ಮೇಲು. ಕೆಲಸದಲ್ಲಾದರೋ ಐಬು. ಮೊದಲನೆಯ ದಿನ ಉಳುವುದಕ್ಕೆ ಕಟ್ಟಿದಾಗ, ನಾಲ್ಕೇ ನಾಲ್ಕು ಸಾಲು ಉತ್ತಮೇಲೆ ಹೀಗೆಯೇ ಮಲಗಿತು. ಹೊಡೆದೆವು; ಏಳ ಲಿಲ್ಲ. ಬಾಲವನ್ನು ಸುಲುಚಿದೆವು; ಅಳ್ಳಾಡಲಿಲ್ಲ. ಬಾಲಕ್ಕೆ ಬೆಂಕಿಯನ್ನು ಕೂಡ ತೋರಿಸಿದೆವು; ಅದಕ್ಕೂ ಜಗ್ಗಲಿಲ್ಲ. ಯಾವ ಉಪಾಯವೂ ತೋರದೆ, ರಂಗನು ಇದರ ಮೂಗಿನ ಹೊಳ್ಳೆಗಳನ್ನು ಹಿಮುಕಿ ಹಿಡಿದನು. ಉಸಿರಾಡಲಾರದೆ ಒದ್ದಾಡಿಕೊಂಡು ಮೇಲಕ್ಕೆದ್ದಿತು. ಆಗಿನಿಂದಲೂ ಹೀಗೆಯೇ! ಇದು ಕೆಲಸದ ಮಧ್ಯೆ ಮಲಗುವುದನ್ನು ಬಿಟ್ಟಿಲ್ಲ. ನಾವು ಇದರ ಮುಸುಡಿ ಹಿಡಿದು ಎಬ್ಬಿಸುವುದನ್ನು ಬಿಟ್ಟಿಲ್ಲ. ಮಾರಿ ಬಿಡೋಣವೆಂದರೆ ಯಾರೂ ಕೊಳ್ಳುವವರೇ ಇಲ್ಲ!" ಎಂಬುದಾಗಿ ಆಳು ಎತ್ತಿನ ಕತೆಯನ್ನು ಹೇಳಿದನು.

ಆಳಿನ ಮಾತುಗಳನ್ನು ಕೇಳಿ ಶರ್ಮನಿಗೆ ವಿಚಿತ್ರವೆನಿಸಿತು. ಪ್ರಕೃತಿಯನ್ನರಿಯದ ಮೂಗುಪ್ರಾಣಿಯು ಈ ರೀತಿ ಕಳ್ಳತನದಿಂದ ಕೆಲಸಕ್ಕೆ ತಪ್ಪಿಸಿಕೊಳ್ಳುವುದುಂಟೆ? ಇನ್ನು ಮುಂದೆ ತೋಟದಲ್ಲಿ ಈ ರೀತಿ ಮಲಗಿದರೆ, ಅದನ್ನು ಹಿಂಸೆಮಾಡದೆ ತಾನಾಗಿ ಏಳುವ ತನಕ ಬಿಟ್ಟುಬಿಡಬೇಕೆಂದು ತೀರ್ಮಾನ ಮಾಡಿಕೊಂಡನು.

* * *

ಸಂತೆಯಲ್ಲಿ ವ್ಯಾಪಾರವನ್ನು ನಡೆಯಿಸುತ್ತಿರುವಾಗಲೂ ಶರ್ಮನ ಕಣ್ಣಿಗೆ ಅನೇಕ ಸಹಿಸಲಾರದ ನೋಟಗಳು ಕಂಡುವು. ಒಂದು ಕಡೆ ಕೋಳಿಯ ಮೊಟ್ಟೆ, ಇನ್ನೊಂದು ಕಡೆ ರಾಶಿರಾಶಿ ಯಾಗಿದ್ದ ಸತ್ತ ಏಡಾನಗಳು, ಮತ್ತೊಂದು ಕಡೆ ಕಾಲುಗಳನ್ನು ಕಟ್ಟಿ ತಲೆ ಕೆಳಕುಮಾಡಿ ಹಿಡಿದಿದ್ದ ಕೋಳಿಗಳು, ಹಗ್ಗ ಬಿಗಿದು ಸಡಿಲಾಳ ಕಟ್ಟುತ್ತಿದ್ದ ಎತ್ತುಗಳು, ತುಪ್ಪಟನನ್ನೆಲ್ಲಾ ಕತ್ತರಿಸಿ ನೋಡಲಸಹ್ಯವಾಗಿದ್ದ ಕುರಿಗಳು.. ಇಂತಹ ನೋಡಲಾಗದ ದೃಶ್ಯ ಗಳನ್ನೆಲ್ಲ ನೋಡಿದನು.

ಒಂದೆಡೆಯಲ್ಲಿ ಸಾಲುಸಾಲಾಗಿ ದನಗಳನ್ನು ನಿಲ್ಲಿಸಿಕೊಂಡಿ ದ್ದರು. ಜಾತ್ರೆಯಲ್ಲಿದ್ದಂತೆ ಅಲ್ಲ; ಎಲ್ಲವೂ ಇಂದೋ ನಾಳೆಯೋ ಸಾಯುವಂತೆ ತೋರುತ್ತಿದ್ದುವು. ಕೆಲವು ಮುದಿ; ಮತ್ತೆ ಕೆಲವು ಮುದಿಯಲ್ಲದಿದ್ದರೂ ಆಹಾರವಿಲ್ಲದೆ ಕೃಶವಾಗಿದ್ದುವು. ಕೆಲವು ದನಗಳ ಮೈಮೇಲೆಲ್ಲಾ ರಕ್ತದ ಕಲೆಗಳಾಗಿದ್ದುವು. ಅವುಗಳಿಗೆ ನೊಣ ಮುತ್ತಿದ್ದುವು. ವಿಚಾರಿಸಿದುದರಲ್ಲಿ ಈ ದನಗಳೆಲ್ಲವೂ ಕಟುಕರಿಗೆ ಮಾರುವುದಕ್ಕೆಂದೂ, ದಾರಿ ನಡೆಯಲಾರದೆ ಅವು ನಿಂತಾಗ ಹೊಡೆದ ಏಟುಗಳಿಂದ ರಕ್ತದ ಕಲೆಗಳು ಆದುವೆಂದೂ ತಿಳಿಯಬಂದಿತು. ಇದನ್ನು ಕೇಳಿದಾಗ ಶರ್ಮನಿಗೆ 'ಮಾರು ವವರು ಕಟುಕರೋ ಅಥವಾ ಕೊಳ್ಳುವವರು ಕಟುಕರೋ' ಎಂಬು ದನ್ನು ತೀರ್ಮಾನಿಸಲು ಸಾಧ್ಯವಾಗಲಿಲ್ಲ.

ಸಂತೆಯಿಂದ ಹಿಂದಿರುಗಿ ಬಂದನಂತರ, ಪದೇ ಪದೇ ಅಲ್ಲಿ ಕಂಡ ದೃಶ್ಯಗಳು ಶರ್ಮನಿಗೆ ನೆನಪಾಗುತ್ತಿದ್ದುವು. 'ಇಷ್ಟು ಘೋರ ವಾದ ಹಿಂಸೆಯು ನಡುಬೀದಿಯಲ್ಲಿ ನಡೆಯುತ್ತಿದ್ದರೂ, ಜನರಾಗಲಿ ಸರ್ಕಾರದವರಾಗಲಿ ಅವುಗಳನ್ನು ನಿಲ್ಲಿಸದೆ ಇರುವುದು ಬಲು ಸೋಜಿಗ' ಎಂದುಕೊಂಡನು. ಪಟ್ಟಣಗಳಲ್ಲಿ ಹಿಂಸೆಯು ಹೆಚ್ಚೆಂದು ತಿಳಿದಿದ್ದ ಶರ್ಮನಿಗೆ, ಹಳ್ಳಿಯ ಕಡೆ ಅಲ್ಲಿಗಿಂತ ವಿಪರೀತ ವೆಂಬುದು ಈಗ ಅರಿಕೆಗೆ ಬಂದಿತು. ಆತನ ಅನುಭವದಲ್ಲಿ ಪ್ರತಿ-ದಿನವೂ ಒಂದಲ್ಲೊಂದು ಹಿಂಸೆಯ ಸಂದರ್ಭ ಬರುತ್ತಿದ್ದಿತು. ತನ್ನ ಮುದ್ದಿನ ಆಕಳ ಕರು, ಒಂದು ದಿನ ಅವನನ್ನು ಕಾರಣವಿಲ್ಲದೆ ಅಟ್ಟಿಸಿಕೊಂಡು ಬಂದು ಬಲವಾಗಿ ಗುದ್ದಿತು. ಅದರಿಂದ ಶರ್ಮನು ಬಿದ್ದುಬಿಟ್ಟ; ಬೆನ್ನು ಕೈ ಸ್ವಲ್ಪ ಪೆಟ್ಟಾಯಿತು. ಕರುವು ಓಡಿ ಹೋಯಿತು; ಇಲ್ಲದಿದ್ದರೆ ತಾನಾಗಿ ಅದನ್ನು ಹೊಡೆಯು-ತ್ತಿದ್ದನೋ ಇಲ್ಲವೋ ಹೇಳುವಂತಿರಲಿಲ್ಲ. ಹಳ್ಳಿಯಲ್ಲಿಯ ಪಟೇಲ ಮುದ್ದಪ್ಪನು ತನ್ನ ಹೆಂಡತಿಯನ್ನು ಮೂಳೆಮುರಿಯುವವರೆಗೂ ಹೊಡೆಯುತ್ತಿದ್ದನು. ಆಗಸರ ಬೀರನು, ಕತ್ತೆಯ ಮುಂದಿನ ಎರಡು ಕಾಲುಗಳನ್ನು ಕಟ್ಟಿ ಹೊಡೆದು ಓಡಿಸುತ್ತಿದ್ದನು. ಪಾಪನು ಎಮ್ಮೆಗೆ ಎಳೆಯಲಾರದಂತಿದ್ದ ಕೊರಡನ್ನು ಕೊರಳಿಗೆ ಕಟ್ಟಿದ್ದನು. ಜೆನ್ನಪ್ಪನು ತನ್ನ ನಾಯಿಗೆ ಆಟಗಳನ್ನು ಕಲಿಸ-ಬೇಕೆಂದು, ಎಡೆಬೇ ಕಾಲಿನಮೇಲೆ ನಿಲ್ಲುವುದು—ನಡೆಯುವುದು ಮುಂತಾದ ಚೂಟಿಗಳನ್ನು ಅದರ ಕಡೆಯಿಂದ ಮಾಡಿಸುತ್ತಿದ್ದನು. ತಿರುಕನೊಬ್ಬನು ಕೋತಿಯ ಸೊಂಟಕ್ಕೆ ಹಗ್ಗ ಬಿಗಿದು ಲಾಗ-ಹಾಕಿಸಿ, ಎಡೆಬೇ ಕಾಲಲ್ಲಿ ನಡೆಯಿಸುತ್ತಾ ಹಿಂಸಿಸುತ್ತಿದ್ದನು. ಈ ಪ್ರಕಾರವಾಗಿ ಒಂದಲ್ಲ ಒಂದು ವಿಧದಲ್ಲಿ ಹಿಂಸೆಯ ಪ್ರಕರಣ ಗಳು ನಡೆಯುತ್ತಲೇ ಇದ್ದುವು.

ಒಂದು ಸಂದರ್ಭದಲ್ಲಿ ಪ್ರಸವವಿಪತ್ತು ಸಂಭವಿಸಿ, ತಾಯಿಯೂ ಹೊಟ್ಟೆಯೊಳಗಿನ ಮಗುವೂ ಆಪಾಯದಲ್ಲಿದ್ದಾಗ, ಪ್ರವೀಣರು ತಾಯಿಯ ಜೀವವನ್ನು ಉಳುಹುವುದಕ್ಕಾಗಿ, ಹೊಟ್ಟೆಯೊಳಗಿನ ಮಗುವನ್ನು ಕೊಯ್ದು ತೆಗೆದಂತೆ. ಈ ಚಿಕಿತ್ಸೆಯ ಹಿಂಸೆಗೂ 'ಪ್ರೊಕಾ' ವನ್ಚಿತಿಯ ಘೋರಹಿಂಸೆಗೂ ಅಪಾರ ವ್ಯತ್ಯಾಸವಿದೆ. ಎತ್ತಿಗೆ ಲಾಳಕಟ್ಟಿಸುವುದಕ್ಕೂ ರಿಕ್ಷಾಗಾಡಿಯಲ್ಲಿ ಕುಳಿತು ಕೊಳ್ಳುವುದಕ್ಕೂ ಇರುವ ವ್ಯತ್ಯಾಸಕ್ಕೆ ಹಿಂಸಾಭಾವನೆಯ ನೆರೆ ಯನ್ನು ಎಲ್ಲಿ ಎಳೆಯಬೇಕೆಂಬುದು ಕಷ್ಟ. ಯಾವ ಹಿಂಸೆಯು ಅನಿವಾರ್ಯವಾದುದು, ಯಾವುದು ಹೇಯವಾದುದು—ಎಂಬು

(೫೫೬ ನೆಯಪುಟ ನೋಡಿರಿ)

ಸ್ತ್ರೀಯರು ಮತ್ತು ಆರ್ಥಿಕಸ್ವಾತಂತ್ರ್ಯ

ಶ್ರೀಮತಿ ಪಣಜೀಕರ್ ಕೃಷ್ಣಾಬಾಯಿ, ಧಾರವಾಡ

★

ಇಂದಿನ ವಿಜ್ಞಾನಯುಗದಲ್ಲಿ ಸಾಮಾಜಿಕರೀತಿ-ನೀತಿಗಳೂ, ಕೌಟುಂಬಿಕಆಚಾರ-ವಿಚಾರಗಳೂ ಮೊದಲಿಗಿಂತ ಭಿನ್ನವಾದ ದಾರಿಯನ್ನು ಹಿಡಿದಿವೆ. ಇಂತಹ ಕಾಲದಲ್ಲಿಯೂ ಭಾರತೀಯ ಮಹಿಳೆಯರು ಆರ್ಥಿಕಪಾರತಂತ್ರ್ಯದಲ್ಲಿಯೆ ಬದುಕಿಕೊಂಡಿರಬೇಕೆಂದರೆ, ಸಮಾಜದಲ್ಲಿ ಸುಖ-ಶಾಂತಿಗಳು ನೆಲಸಬೇಕು ಹೇಗೆ?

★

ಸ್ತ್ರೀಸ್ವಾತಂತ್ರ್ಯ ಇವೆಂಡೂ ಜಗತ್ತಿನಲ್ಲಿ ಬದುಕಿ ಬಾಳುವುದಕ್ಕೆ ಅಗತ್ಯವಾಮುವುಗಳು. ದಾರಿದ್ರ್ಯ-ದಾಸ್ಯಗಳಲ್ಲಿ ಮಾನವನು ಮಾನವಂತನಾಗಿ ಬಾಳಲಾರನು. 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಶಾಸ್ತ್ರಕಾರರು ನುಡಿದು, ಸ್ತ್ರೀಯರನ್ನು ಸಂತತದಾಸ್ಯದಲ್ಲಿ ದೂಡಿರುವರು. ಹಿಂದುಸ್ತಾನದಲ್ಲಿ ಸುಮಾರು ೧೫ ಕೋಟಿ ಜನ ಹಿಂದೂ ಸ್ತ್ರೀಯರು ದಾಸ್ಯ-ದಾರಿದ್ರ್ಯಗಳಲ್ಲಿ ತೊಳಲುತ್ತಿರುವರು. ಇನ್ನು ಇತರ ಸ್ತ್ರೀಯರಾದರೂ ಹೆಚ್ಚು ಕಡಿಮೆ ಇದೇ ಪರಿಸ್ಥಿತಿಯಲ್ಲಿ ಕೊರಗುತ್ತಿರುವರು. 'ಸ್ತ್ರೀಯರ ಪಾಲನವು ಬಾಲ್ಯದಲ್ಲಿ ತಂದೆ ಅಥವಾ ಬಂಧುವಿನಿಂದಲೂ, ತಾರುಣ್ಯದಲ್ಲಿ ಪತಿಯಿಂದಲೂ, ವೃದ್ಧಾಪ್ಯದಲ್ಲಿ ಪುತ್ರನಿಂದಲೂ ಆಗಬೇಕಾದದ್ದು' ಎಂಬ ಶಾಸ್ತ್ರೋಕ್ತಿಯಿಂದ ಸ್ತ್ರೀಯರನ್ನು ಬಂಧಿಸಿ, ಸ್ವಸಂರಕ್ಷಣೆಯ ಚರ್ಯತೆಯಿಂದಲೂ, ಅಧಿಕಾರದಿಂದಲೂ ಅವರನ್ನು ವಂಚಿತರನ್ನಾಗಿ ಮಾಡಿದುದಾಗಿದೆ.

ಮಗಳು ತಂದೆಯ ಮನೆಯಲ್ಲಿರುವಾಗ, ಮಗನಂತೆ ಅವಳಿಗೆ ಶಿಕ್ಷಣವು ದೊರೆಯುದು. ಮಗನು ಮನೆಯನ್ನು ಉದ್ಧರಿಸುವವನೆಂದೂ, ಮಗಳು ಪರರ ಮನೆಯಲ್ಲಿ ಜೀವಿಸುವವಳೆಂದೂ, ತಾಯಿ-ತಂದೆಗಳ ಮನಸ್ಸಿನಲ್ಲಿ ಭಾವನೆಗಳು ಒಡಮೂಡಿ ನಿಂತಿರುವುವು. ವಿವಾಹವೆಂದರೆ ಕನ್ಯಾವಿಕ್ರಯ ಇಲ್ಲವೆ ಕನ್ಯಾದಾನವೆಂಬುದೇ ಬಲಾಢ್ಯರ ತಿಳಿವಳಿಕೆ. ವಿವಾಹದ ಕಾಲದಲ್ಲಿ ಮಗಳ ಮೈಮೇಲೆ ದಾಕಿದ ಆಭರಣಗಳ ಮೇಲೆ ಮಾತ್ರ ಅವಳ ಅಧಿಕಾರವು; ಕೆಲವೆಡೆಯಲ್ಲಿ ಅದೂ ಗೌಣವಾಗಿರುವುದು. ವರದಕ್ಷಿಣೆಯು ವರನಿಗೆ ದಕ್ಷಿಣೆಯಾಗಿಯೇ ಉಳಿಯುವುದು. ವಿವಾಹಿತಳಾದ ಮಗಳು ಎಂಥ ದಾರಿದ್ರ್ಯದಿಂದ ಪೀಡಿತಳಾಪರೂ, ತಂದೆಯ ಮನೆಯಲ್ಲಿ ಅವಳಿಗೆ ಆಸ್ತಿ-ವಸ್ತ್ರದ ಅಧಿಕಾರವೂ ಇಲ್ಲವಾಗಿದೆ. ವಿಭಕ್ತಕುಟುಂಬದಲ್ಲಿ ಹುಟ್ಟಿದ ಒಬ್ಬಳೆ ಒಬ್ಬಳು ಮಗಳಾದರೆ ಮಾತ್ರ, ತಂದೆ-ತಾಯಿಗಳ ತವರಾಯ ಅವರ ಸಂಪತ್ತು ಅವಳಿಗೆ ಬರುವುದು. ಆದರೆ ಪತಿಯ ಅಪ್ಪಣೆ ಇಲ್ಲದೆ ಇಂತಹ ಸೊತ್ತಿನ ವಿನಿಯೋಗ ಮಾಡುವುದೂ ಅವಳ ಅಧಿಕಾರದೊಳಗಿನದಲ್ಲ. ಅವಿವಾಹಿತಳಾದ ಮಗಳಾದರೆ ಅವಳಿಗೆ ಅನ್ನ, ವಸ್ತ್ರ ಹಾಗೂ ವಿವಾಹದ ವೆಚ್ಚದಷ್ಟು ದ್ರವ್ಯ ಇದಿಷ್ಟು ಮಾತ್ರ ಸಲ್ಲುವುದು. ಮಗಳು ಅವಿವಾಹಿತಳಾಗಿಯೇ ಇರಬೇಕೆಂದು ನಿಶ್ಚಯಮಾಡಿದರೆ, ತಂದೆ ಅಥವಾ ಬಂಧುಗಳು ಅವಳಿಗೆ ಶಿಕ್ಷಣ ಕೊಡಿಸದೆ ಇದ್ದರೆ, ಅದನ್ನು ಹಕ್ಕಿನಿಂದ ಪಡೆಯುವ ಅಧಿಕಾರವು ಅವಳಿಗಿಲ್ಲ. ಶಿಕ್ಷಣಪಡೆದುಕೊಂಡರೆ, ಶಿಕ್ಷಣವು ಧನಸಂಪಾದನೆಯ ಸಾಧನ ಮಾತ್ರವಾಗಬಲ್ಲುದೇ ಹೊರತು ಅದು ಸಾಧ್ಯವು ಅಲ್ಲ. ಅದರಿಂದ ಅವಳು ಧನಾರ್ಜನೆ ಮಾಡುವುದು ಅಶಕ್ಯವಾದರೆ, ಅವಳು ಸ್ವತಂತ್ರಳೀತಿಯಲ್ಲಿ ಮಾನವಂತೆಯಾಗಿ ಬಾಳುವುದೂ ಕಠಿನವಾಗುವುದು. ಈ ಪ್ರಕಾರ ಅಸಹಾಯ್ಯರಾದವರಿಗೆ ಕೊನೆಗೆ ಶೀಲವನ್ನೂ ಕೂಡ ಮಾರಿಕೊಳ್ಳುವ ಕಾಲ ಬರುವುದು. ಇದಕ್ಕೆಲ್ಲ ಕಾರಣವೆಂದರೆ ತಂದೆಯ ಸಂಪತ್ತಿನಲ್ಲಿ ಮಗಳ ಹಕ್ಕು ಇರದಿರುವುದೇ ಎಂದು ಹೇಳಬಹುದು. ಮುಸಲ್ಮಾನ್ ಮತ್ತು ಕ್ರೈಸ್ತರಲ್ಲಿ ಈ ಅಧಿಕಾರಗಳು ಸ್ವಲ್ಪ ಜೀರೆಯಾಗಿರುವುವು.

ಪತಿಯ ಪತ್ನಿಯಾದವಳಿಗೆ ಪತಿಯ ಮನೆಯಲ್ಲಿ ಹೊಸಜನ್ಮವೇ ಆದಂತಾಗುವುದರಿಂದ, ತವರುಮನೆಯು ಅವಳಿಗೆ ದೂರವಾಯಿತು; ಆದರೆ ವೇದ-ಸ್ಮೃತಿಗಳಲ್ಲಿ ಹೇಳಿರುವಂತೆ ಅವಳು ಪತಿಯ ಸಂಪತ್ತಿಗೆ ಸಮಭಾಗಿಯಾಗುವಳು. ಪತಿಯು ಪತಿಯ ಅರ್ಧಾಂಗವಾದುದರಿಂದ, ಪತಿಯನ್ನಗಲಿ ಯಾವ ದಾನ-ಧರ್ಮಗಳನ್ನೂ ಪತಿಯು ಮಾಡಲಾರನೆಂದು ಧರ್ಮಶಾಸ್ತ್ರವು ಹೇಳುವುದು. ಆದರೆ ಈ ತೆರದ ನಡೆವಳಿಯು ಕಾಣುವುದು ತೀರ ವಿರಳ. ಪತಿಯ ಗಳಿಕೆಯಲ್ಲಿ ಪತ್ನಿಯು ಅನ್ನ-ವಸ್ತ್ರಗಳು, ಮಕ್ಕಳ ವಿದ್ಯಾಭ್ಯಾಸ ಇವುಗಳನ್ನೆಲ್ಲ ಸಾಗಿಸುವಳು. ಆದರೆ ತನಗಾಗಿಯೇ ನಾಲ್ಕು ಕಾಸು ಬೇಕಾದರೆ ಅಕೆಯು ಪತಿಯ ದಯೆಯನ್ನೇ ಅವಲಂಬಿಸಬೇಕಾಗುವುದು. ಸ್ತ್ರೀಯು ಸ್ವತಃ ದ್ರವ್ಯಾರ್ಜನೆ ಮಾಡುವುದಕ್ಕೂ ಮಾಡಿದುದರ ಮೇಲೆ ತನ್ನ ಹಕ್ಕನ್ನು ಪ್ರಸ್ಥಾಪಿಸುವುದಕ್ಕೂ ಪತಿಯ ಅಪ್ಪಣೆ

ಇಲ್ಲದೆ ಶಕ್ಯವಿಲ್ಲ. ಪತಿಯು ದುರ್ವ್ಯಸನಿ, ದುಷ್ಟ ಅಥವಾ ದುಂದು ಗಾರನಾದರೆ ಅವನ ಐತ್ತಕ್ಕೆ ವಿಪತ್ತು ಕಟ್ಟಿಟ್ಟದ್ದು. ಅವನ ಸಂಪತ್ತೆಲ್ಲ ಸಾಲದಲ್ಲಿ ಮುಳುಗುವಂತಿದ್ದರೆ, ಅದನ್ನು ತನ್ನ ಅನ್ನ-ವಸ್ತ್ರಕ್ಕಾಗಿ ರಕ್ಷಿಸುವುದಕ್ಕೆ ಕೂಡ ಪತ್ನಿಗೆ ಅಧಿಕಾರವಿಲ್ಲ.

ಪತಿಯು ಪತ್ನಿಯನ್ನು ತ್ಯಜಿಸಿದರೆ, ಅವಳಿಗೆ ಅನ್ನ-ವಸ್ತ್ರ, ನಿವಾಸ ಇವುಗಳ ಅಧಿಕಾರ ಮಾತ್ರ ಇರುವುದು. ಇತ್ತೀಚೆಗೆ ಕಾಯಿದೆ ಗಳಲ್ಲಿ ಸ್ವಲ್ಪ ಉದಾರಭಾವನೆಯು ತಲೆದೋರಹತ್ತಿದೆ. ಆದರೆ ಪತ್ನಿಯ ಮೇಲೆ ಶೀಲಸಂದೇಹದ ಆರೋಪಣೆಯನ್ನು ಹೊರಿಸಿ, ಅವಳಿಗೆ ಅನ್ನ-ವಸ್ತ್ರವೂ ಸಿಕ್ಕದಂತೆ ಮಾಡುವುದು ಪತಿಗೆ ಸಹಜ-ಸಾಧ್ಯವಾದರೆ, ಇಂತಹ ಸತಿಯರ ಜೀವನವು ತುಂಬ ದುಸ್ತರ ವಾಗುವುದು. ವಿಧವೆಯಾದವಳಿಗೆ ಅವಿಭಕ್ತಕುಟುಂಬದಲ್ಲಿ ಅನ್ನ-ವಸ್ತ್ರಗಳು ಸಿಕ್ಕುವುವು; ಆದರೆ ಕಾಯಿದೆಯಿಂದ ಸಿಕ್ಕ ಈ ಅಧಿಕಾರ ವನ್ನು ದೊರಕಿಸಬೇಕಾದರೆ ಅವಳು ಎಷ್ಟೋ ಯಾತನೆಗಳನ್ನು ಸಹಿಸ ಬೇಕಾಗುವುದು. 'ದೇವರು ಕೊಟ್ಟರೆ ಪೂಜಾರಿ ಕೊಡುವುದಿಲ್ಲ.' ವಿಧವೆಗೆ ಪುತ್ರನಿದ್ದರೆ ಮಕ್ಕಳು ಪಾಲು ಮಾಡಿದ ಹೊರತು ಅವಳಿಗೆ ಸಿಕ್ಕಲಾರದು. ಮಗ ಮತ್ತು ಸೊಸೆ ಇವರಿರ್ವರ ದಯೆಯಿಂದಲೇ ಅವಳು ಬಾಳಬೇಕು. ಅವರು ನಿರ್ದಯರಾದರೆ ನೀಡಿದುದನ್ನು ಉಂಡು, ಸಮಾಧಾನಪಡಬೇಕು. ವಿಭಕ್ತ ಕುಟುಂಬದಲ್ಲಿ ನಿಪುತ್ರಿಕ ಳಾದರೆ, ಪತಿಯ ಸಂಪತ್ತು ಅವಳಿಗೆ ದೊರೆಯುವುದು. ಆದರೆ ಅದರ ಉಪಭೋಗವನ್ನು ಮಾಡಿ, ಕೇವಲ ಪತಿಯ ಆತ್ಮಕ್ಕೆ ಶಾಂತಿ ಯಾಗುವುದಕ್ಕೆಂದು ಮಾತ್ರ ಸ್ವಲ್ಪ ವೆಚ್ಚವನ್ನು ಅವಳು ಮಾಡ ಬಹುದು. ಅದನ್ನು ವಿನಿಯೋಗ ಮಾಡುವ ಸಂಪೂರ್ಣ ಅಧಿಕಾರವು ಅವಳಿಗಿಲ್ಲ. ಪತಿಯು ಗಳಿಸಿದ್ದರಲ್ಲಿ ಮಿತವ್ಯಯದಿಂದ ಉಳಿಸಿದ ಹಣವನ್ನು, ಅವಳು ತನ್ನ ತರುವಾಯ—ಎಂತಹವರೇ ಆಗಲಿ—ತನ್ನ ವಂಶಜರಿಗೆ ಬಿಟ್ಟುಹೋಗಬೇಕೇ ಹೊರತು, ಯಾವುದೇ ಸತ್ಕಾರ್ಯ ಕ್ಕಾಗಿ ಕೂಡ ಅದರ ವಿನಿಯೋಗವನ್ನು ಅವಳು ಮಾಡಲಾರಳು.

ಈ ತೆರದ ಪರಾವಲಂಬಿ ಜೀವನವನ್ನು ಕಳೆಯುವವರಿಗೆ, ಸ್ವತಂತ್ರ ವ್ಯಕ್ತಿತ್ವವೇ ಇಲ್ಲವಾಗುತ್ತದೆ. ಸ್ವತಂತ್ರ ವ್ಯಕ್ತಿತ್ವವು ಇರದವರ ಏಳ್ಗೆ ಆಗುವ ಬಗೆ ಹೇಗೆ? ಹಿಂದುಸ್ಥಾನದಲ್ಲಿ ದಾಸ್ಯ-ದಾರಿದ್ರ್ಯ ಗಳು ಮಾನವನನ್ನೇ ದಹಿಸುತ್ತಿರುವುವು. ಎಲ್ಲಿ ಪುರುಷರಿಗೂ ಸ್ವಾತಂತ್ರ್ಯವಿಲ್ಲವೊ ಅಲ್ಲಿ ಸ್ತ್ರೀಯರು ಅದನ್ನು ಎಲ್ಲಿಂದ ಕಾಣುವರು? ಈಗಿರುವ ಪರಿಸ್ಥಿತಿಯಲ್ಲಿ ಸ್ತ್ರೀ-ಪುರುಷರಿಗೆ ಸಮಾನವಾದ ಹಕ್ಕುಗಳು ದೊರೆತರೆ, ಹಿಂದುಸ್ಥಾನದ ಏಳ್ಗೆಗೂ ಸಹಾಯವಾಗು ವುದು. ಸ್ವಾತಂತ್ರ್ಯ ಹಾಗು ಸಂಪತ್ತು ಇದ್ದ ದೇಶಗಳಲ್ಲಿ ಸ್ತ್ರೀಯರ ಜೀವನವು ಎಷ್ಟೋ ಸುಧಾರಿಸಿದ್ದಾಗಿದೆ. ರಷಿಯಾದಲ್ಲ ಪ್ರತಿಯೊಬ್ಬನೂ ದುಡಿದೇ ತಿನ್ನಬೇಕೆಂಬ ಕಾಯಿದೆ ಇರುವುದು. ಅಲ್ಲಿ ಸ್ತ್ರೀ-ಪುರುಷರ ಶಿಕ್ಷಣದಲ್ಲಿ ಯಾವುದೇ ತರದ ಭೇದವೂ ಇಲ್ಲ; ಸ್ತ್ರೀಯರನ್ನು ದೂರವಾಗಿಟ್ಟ ಕಾರ್ಯಕ್ಷೇತ್ರ ಯಾವುದೂ ಅಲ್ಲಿ ಕಾಣಲೊಲ್ಲದು. ಶಿಕ್ಷಣ, ವೈದ್ಯಕ, ಬಿಕ್ಕಲುತನ, ವ್ಯಾಪಾರ, ಉದ್ಯೋಗ ಹಾಗು ಸೈನ್ಯ ಈ ಎಲ್ಲ ಕಾರ್ಯಕ್ಷೇತ್ರಗಳಲ್ಲಿಯೂ ಅವರು ಭಾಗಿಯಾಗಿರುವರು. ಇಷ್ಟಾದರೂ, ಶಿಶುಪಾಲನೆಗಾಗಿ ಅವರು ವಿಧ-ವಿಧದ ವ್ಯವಸ್ಥೆಯನ್ನು ಮಾಡಿರುವುದರಿಂದ, ಅವರಲ್ಲಿ ಆ ತೆರದ ಕುಂದುಗಳೂ ಕಾಣಬರುವುದಿಲ್ಲವೆಂದೇ ಹೇಳಬಹುದು. ಇಲ್ಲಿಯ ತಾಯಿಗಳಿಗಿರುವ ಶಿಕ್ಷಣಕ್ಕಿಂತ ಅಲ್ಲಿಯ ದಾಯಿಗಳ ಶಿಕ್ಷಣವು ವೇಲ್ತರಗತಿಯದಿರುವುದು. ಆ ತೆರದ ದಿನಗಳು ಹಿಂದುಸ್ಥಾನಕ್ಕೆ ಯಾವಾಗ ಬರುವುವೋ ಬರಲಿ; ಆದರೆ ದಾರಿದ್ರ್ಯ ದಿಂದ ಪೀಡಿತವಾದ ಈ ದೇಶದಲ್ಲಿ, ಸಂಪತ್ತಿನ ಸಮಭಾಗವು ಸ್ತ್ರೀಯರಿಗೆ ದೊರೆತರೆ, ಸಿರಿವಂತರ ಸ್ತ್ರೀಯರು ಸುಖದಿಂದಿದ್ದು ಸಮಾಜ ಸುಧಾರಣೆಯನ್ನಾದರೂ ಕೈಕೊಳ್ಳುವರು. ಇನ್ನುಳಿದ ಸ್ತ್ರೀಯರಿಗೆ ಸ್ವತಂತ್ರರೀತಿಯಿಂದ ದ್ರವ್ಯಾರ್ಜನೆ ಮಾಡುವುದಕ್ಕೆ ಅರ್ಹತೆಯೂ ಅಧಿಕಾರವೂ ಅನುವೂ ದೊರೆತರೆ, ಸಂಸಾರವನ್ನು ಸುಗಮವಾಗಿ ಸಾಗಿಸುವದಕ್ಕೆ ಸಾಧ್ಯವಾಗುವುದು. 'ವನಿತೆಯ ಕೈಯಲ್ಲಿ ವಿತ್ತವು ಸ್ಥಿರವಾಗಿ ನಿಲ್ಲದು' ಎಂದು ಅನೇಕರು ಆಕ್ಷೇಪಿ ಸುವರು. ಅವಳ ಕೈಯಲ್ಲಿ ವಿತ್ತದ ಅಧಿಕಾರವನ್ನೆಂದೂ ಕೊಡದೆ, ಅವಳ ಅರ್ಹತೆಯಲ್ಲಿ ಸಂದೇಹವನ್ನು ಕಲ್ಪಿಸುವುದು ತರವಲ್ಲ. ಸ್ವಾಭಾವಿಕವಾಗಿಯೆ ಔದಾರ್ಯ-ದಯೆಗಳಿಂದ ಕೂಡಿದ ಸ್ತ್ರೀಯು ಶಿಕ್ಷಣವನ್ನು ಪಡೆದವಳಾದರೆ, ಧನದ ಸದುಪಯೋಗವನ್ನೇ ಮಾಡುವಳು. ಪುರುಷರು ದುರ್ವ್ಯಸನಗಳಲ್ಲಿ ಹಣವನ್ನು ಹಾಳು ಮಾಡುವಾಗ ತಡೆಹಾಕುವವರುಂಟೇ? ಆ ತೆರದ ವ್ಯಸನಗಳಾದರೂ ಸ್ತ್ರೀಯರನ್ನು ಬಿಟ್ಟಿರುವವೆಂದು ನಾವು ಸಂಬಬಹುದಲ್ಲ! ಸ್ತ್ರೀಯರು ತಮ್ಮ ಸ್ವಾತಂತ್ರ್ಯ ಸೂರ್ಯನಿಗೆ ಗ್ರಹಣಹತ್ತಿ ಕವಿದ ಕತ್ತಲೆಯನ್ನು ಕುಗ್ಗಿಸಿ, ಅರುಣೋದಯವನ್ನು ಕಾಣಬೇಕಾದರೆ ಅವರೇ ಶ್ರಮಪಡಬೇಕಾಗಿದೆ. ಹಿಂದೂ ಧರ್ಮಶಾಸ್ತ್ರಗಳಲ್ಲಿಯ ತರ್ಕ-ವಿತರ್ಕಗಳನ್ನು ವಿಚಾರಿಸಿ, ನಿಜವಾದ ಪರಿಸ್ಥಿತಿಯನ್ನು ಬಯಲಿಗೆಳೆಯುವುದು ಒಂದು ಮಾರ್ಗ. ರಜಿಸ್ಟರ್ ಪದ್ಧತಿ ಯಿಂದ ವಿವಾಹಗಳನ್ನು ಮಾತಿಕೊಂಡು, ಸಕ್ಸೆಶನ್ ಆಕ್ಟಿನ ಪ್ರಕಾರ ಆರ್ಥಿಕ ಅಧಿಕಾರಗಳನ್ನು ಪಡೆಯುವುದು ಇನ್ನೊಂದು ಮಾರ್ಗ. ಈ ಬಗೆಯ ವಿವಾಹಪದ್ಧತಿಯಿಂದ ಇನ್ನಿತರ ಸುಧಾರಣೆಗಳ ಲಾಭವೂ ಸಿಕ್ಕುವುದು. ಸ್ತ್ರೀಯರಲ್ಲಿ ಸಹಜವಾಗಿದ್ದ ಕಲೆಗಳ ಉಪಯೋಗದಿಂದ ಅವರು ಧನಾರ್ಜನೆ ಮಾಡಬೇಕೆಂದರೂ **ಶೀಲ** ವೆಂಬ ಶಬ್ದದ ವಿಪರ್ಯಾಸವು ಅವರಿಗೆ ತಡೆಹಾಕುವುದು. ಆದುದ ರಿಂದ ಸ್ತ್ರೀಯರೇ ನೀತಿ, ಶೀಲ, ಆಚಾರ, ವಿಚಾರಗಳ ಸಮಂಜಸ ವಾದ ಪರ್ಯಾಲೋಚನೆಯನ್ನು ಮಾಡಬೇಕಾಗಿದೆ. ನಿಸರ್ಗವು ಶೀಲದ ದೊಡ್ಡ ಜವಾಬ್ದಾರಿಯನ್ನು ವನಿತೆಯರ ಮೇಲೆ ಹಾಕಿರು ವುದು ನಿಜ; ಆದರೆ ಅದನ್ನು ನೀಗಿಸಿಕೊಂಡು ಮಾನವಂತರಾಗಿ ಸ್ವತಂತ್ರವ್ಯಕ್ತಿತ್ವದ ಸವಿಯನ್ನು ಉಂಡು ಬದುಕುವುದಕ್ಕೂ, ಜೀವನವನ್ನು ರಮ್ಯವನ್ನಾಗಿ ಮಾಡುವುದಕ್ಕೂ, ಸ್ತ್ರೀಯರೇ ಮುಂದೆ ಬರಬೇಕು. ಇನ್ನು ಈ ವರೆಗೆ ಶಾಸ್ತ್ರಗಳ ವಿಪರ್ಯಾಸ ಮಾಡಿ, ಸ್ತ್ರೀಯರನ್ನು ದಾಸ್ಯದಲ್ಲಿ ಕೊಳೆಹಾಕಿದ ಪುರುಷರೂ ಇದಕ್ಕಾಗಿ ಪ್ರಯತ್ನಿಸಿದರೆ, ಅವರ ಜೀವನವೂ ಸುಖಮಯ ವಾಗುವುದು ಖಂಡಿತ.

———o———

"ಕುರೂಪಿ"*

(ಲಘುಪ್ರಬಂಧ)

ಶ್ರೀ. ಎನ್. ಕೃಷ್ಣಸ್ವಾಮಿ, ಬಿ.ಎಸ್.ಸಿ. ಬೆಂಗಳೂರು

★

ಕುರೂಪಿಗಳಾಗಿದ್ದವರ ವ್ಯಕ್ತಿತ್ವವು ಅದೇತಕ್ಕೆ ಸುಸ್ವರೂಪಿಯಾಗಿರುವುದು ಗೊತ್ತೇ ? ರೂಪವಂತರಾದವರು ತಮ್ಮ ಜೀವನಕ್ಕೆ ರೂಪವಷ್ಟೆ ಸಾಕು ಎನ್ನುವರು. ಅದಿಲ್ಲದ ಕುರೂಪಿಗಳು ತಮ್ಮ ಜೀವನಕ್ಕಾಗಿ ವಿವಿಧಮುಖದ ಸಂಸ್ಕೃತಿ ಸಂಪಾದಿಸಲು ಹೆಣಗುವರು.

★

ನಮ್ಮ ತಾಯಿ ಕೂಡ ನನ್ನನ್ನು ರೂಪಶಾಲಿಯೆಂದು ಹೇಳುತ್ತಿರಲಿಲ್ಲ. ಅವಳೂ ಆಗಾಗ ನನ್ನನ್ನು ದೀರ್ಘಕಾಲದವರೆಗೆ ದಿಟ್ಟಿಸಿ ನೋಡುತ್ತಿದ್ದು, ಆ ಮೇಲೆ ಕಿಲಕಿಲನೆ ನಕ್ಕುಬಿಡುತ್ತಿದ್ದಳಂತೆ. ನಾನು ಎರಡು ತಿಂಗಳ ಮಗುವಾಗಿದ್ದಾಗ, ನನ್ನ ಸೋದರತ್ತೆಯೊಬ್ಬಳು—ಅವಳು ಶ್ರೀಮಂತಳಂತೆ—ನನ್ನನ್ನು ನೋಡಲು ಬಂದಳಂತೆ; ಬೆಲ್ಲಗೆ ಏನನ್ನೋ ಗೊಣಗಿಕೊಳ್ಳುತ್ತಾ ತೊಟ್ಟಿಲಿನ ಬಳಿಗೆ ಬಂದಾಗ, ನನ್ನನ್ನು ನೋಡಿದಳೋ ಇಲ್ಲವೋ—ಕ್ಷಣಕಾಲ ಹಿಂಗು ಬಡಿದವಳಂತೆ ನಿಂತುಬಿಟ್ಟಳಂತೆ. ನನ್ನನ್ನು ಬಹಳ ಕಾಲ ನಿಟ್ಟಿಸಿ ನೋಡಿಬಿಟ್ಟು " ಅಬ್ಬಾ ಏನು ವಿಚಿತ್ರದ ಮಗು ! " ಎಂದು ನುಡಿದು ಬಿಟ್ಟು ಹಿಂದಿರುಗಿ ಹೊರಟುಹೋದಳಂತೆ; ಅಂದಿನಿಂದ ಇದುವರೆಗೆ ಆಕೆಳ ಮುಖವನ್ನು ನಾವು ಮರಳಿ ನೋಡಲಿಲ್ಲ.

ನಾನುಅತ್ಯಂತ ಕುರೂಪಿ ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಬೆಳೆಯುತ್ತ ಸಡೆದಂತೆಲ್ಲಾ ನನ್ನ ವಿಕಾರ ಸ್ವರೂಪವೇನೂ ಉತ್ತಮಗೊಳ್ಳಲಿಲ್ಲ. ಈಗಲೂ ನಾನು ಕುರೂಪಿ. ಒಂದೊಂದು ಸಲ ಕನ್ನಡಿಯಲ್ಲಿ ನಾನು ಮುಖನೋಡಿಕೊಂಡಾಗ, ನನಗೆ ಸ್ವಲ್ಪ ಸಮಾಧಾನವಾಗುತ್ತದೆ; ಏಕೆಂದರೆ ನನಗೆ ಒಳ್ಳೇ ಬಲವಾದ ಗಲ್ಲವಾದರೂ ಇದೆಯಲ್ಲಾ—ಎಂದು. ಬಹುಶಃ ಅದೂ ನನ್ನ ಊಹೆಯೆ ಇರಬಹುದು. ಒಟ್ಟಿನಲ್ಲಿ ' ನನ್ನ ಮೋರೆ ಹಾಗಿದೆ ಹೀಗಿದೆ ' ಎಂಬ ಸ್ವಪ್ನಸೃಷ್ಟಿಯೇನೂ ನನಗೆ ಇರಲಿಲ್ಲ. ಎಷ್ಟೋ ಮಂದಿ ನನ್ನ ಕಡೆಗೆ ಆಶ್ಚರ್ಯದಿಂದಲೂ ಭೀತಿಯಿಂದಲೂ ನೋಡುತ್ತಿದ್ದುದನ್ನು ನಾನು ಕಂಡಿದ್ದೇನೆ. ಎಷ್ಟೋ ಹೆಂಗುಸರ ಬೈಗುಳಗಳನ್ನೂ ನಾನು ಸಹಿಸಿದ್ದೇನೆ. ಆಗೆಲ್ಲ ಅವರ ಆ ಚರ್ಯೆಗೂ ನನಗೂ ಏನೇನೂ ಸಂಬಂಧವಿಲ್ಲ ಎಂದು ನನ್ನಲ್ಲಿ ನಾನು ನುಡಿದುಕೊಳ್ಳುತ್ತಿರುವೆನು; ಈ ಭಾವನೆಯನ್ನು ನಾನು ಬೇಕಾಗಿಯೆ ಅಭ್ಯಾಸಿಸಿರುವೆನು. ' ಸಾಮಾನ್ಯ ಜನಕ್ಕೆ ಕುರೂಪಿಗಳನ್ನು ನೋಡುವುದರಲ್ಲಿ ಆಸಕ್ತಿ ಇರಬಹುದು ' ಎಂದು ನನ್ನಲ್ಲಿ ನಾನೇ ಎಂದುಕೊಂಡು ಸಮಾಧಾನಪಟ್ಟುಕೊಳ್ಳುತ್ತಿದ್ದೆನು.

'ಮನುಷ್ಯನಿಗೆ ರೂಪವೇನೂ ಅಷ್ಟೊಂದು ಮುಖ್ಯವಲ್ಲ' ಎಂದು ಹಲವರು ಹೇಳುವರು. ಇದಕ್ಕಿಂತಲೂ ಸತ್ಯಕ್ಕೆ ದೂರವಾಗಿರುವ ಮಾತು ಬೇರೊಂದಿಲ್ಲ. ರೂಪಶಾಲಿಯಾದವನಿಗೆ ತನ್ನ ಜೀವನವನ್ನು ಪ್ರಾರಂಭಿಸುವಾಗಲೇ ವಿಶೇಷತರದ ಅನುಕೂಲ್ಯವಿರುತ್ತದೆ. ನೂರರಲ್ಲಿ ಐದರಷ್ಟು ಅನುಕೂಲ ಅವನಿಗೆ ಅದೊಂದು ರೂಪದಿಂದಲೇ ದೊರೆಯುತ್ತದೆ. ಯಾವನೊಬ್ಬ ರೂಪವಂತನಿಗೆ ಎಲ್ಲೆಲ್ಲೂ ಬಾಗಿಲು ತೆರೆದಿರುತ್ತದೆ; ಎಲ್ಲರೂ ಅವನನ್ನು ಆದರದಿಂದ ಬರಮಾಡಿಕೊಳ್ಳುವರು. ಯಾವಾಗಲೂ ಹೀಗೆಯೆ ಇರುತ್ತದೆಂದು ನಾನೇನೂ ಹೇಳುವುದಿಲ್ಲ. ಆದರೆ ರೂಪಶಾಲಿಗೆ ಅನುಕೂಲಗಳು ಹೆಚ್ಚೆಂಬುದೇನೋ ಕಂಡುಂಡ ಸಂಗತಿ. ನನ್ನ ಜೀವನದಲ್ಲಿ ಬಹಳ ಮೊದಲೇ ಈ ಅಂಶ ನನಗೆ ಗೊತ್ತಾಯಿತು. ಸುಂದರವಾದ ನೇತ್ರಗಳೂ, ಗುಂಗುರುಗೂದಲೂ ಉಳ್ಳ ಬಾಲಕರನ್ನು ಎಲ್ಲರೂ ನಗೆಮೊಗದಿಂದ ಬರಮಾಡಿಕೊಳ್ಳುವರು; ಅಂತಹರಿಗೆ ಸಹಾಯ ಮಾಡಲು ಎಲ್ಲ ಜನರು ಅಪೇಕ್ಷಿಸುವರು. ಅವರು ಜೀವನದಲ್ಲಿ ಮುಂದುವರಿಯಬೇಕೆಂದು ಎಲ್ಲರಿಗೂ ಆಶೆ;—ಒಟ್ಟಿನಲ್ಲಿ ನನ್ನನ್ನು ನೋಡುವುದಕ್ಕಿಂತ ಅವರನ್ನು ನೋಡಿದರೆ ಜನಕ್ಕೆ ಸಂತೋಷ.

ಶಾಲೆಯಲ್ಲಂತೂ ಸುಂದರ ಬಾಲಕರ ಕಡೆಗೆ ತುಂಬ ಪಕ್ಷಪಾತವಿರುವುದು. ನಮ್ಮ ಶಾಲೆಯಲ್ಲಿಯೂ ಹಾಗೆಯೆ ಇದ್ದಿತು. ನಾನಲ್ಲಿ ಕೇವಲ ಕಾಡು ಪಾಲು. ಇದರಿಂದ ಒಳ್ಳೆಯ ಪಾಠವನ್ನೇ ಕಲಿತುಕೊಂಡೆ ನಾನು. ರೂಪಶಾಲಿಯಾದವನಿಗೆ ಹೇಗೋ ಮುಂದಕ್ಕೆ ಹೋಗಲು ಅವಕಾಶವಿತ್ತು; ಆ ಅವಕಾಶ ನನಗಿರಲಿಲ್ಲ. ನಾನು ಎಲ್ಲಾ ವಿಚಾರಗಳನ್ನೂ ಜೆನ್ನಾಗಿ ತಿಳಿದುಕೊಂಡು, ಸರಿಯಾಗಿ ಪಾಠ ಒಪ್ಪಿಸಬೇಕಾಗಿತ್ತು. ಆ ಮೇಲಿನ ನನ್ನ ಜೀವನದಲ್ಲಿ ಈ ಒಂದು ಪಾಠದಷ್ಟು—ಶಾಲೆಯಲ್ಲಿ ಕಲಿತ ಮತ್ತಾವುದೂ ಉಪಯೋಗಕ್ಕೆ ಬರಲಿಲ್ಲ. ಇದನ್ನು ನಾನು ಎಂದಿಗೂ ಮರೆಯಲಾರೆ, ಮರೆತಿಲ್ಲ.

ನನ್ನ ಬಾಲ್ಯದ ಯಾವುದೋ ಒಂದು ಖಿನ್ನಚಿತ್ರವನ್ನು ನಿಮ್ಮ ಮುಂದಿಡುತ್ತಿದ್ದೇನೆಂದು ತಿಳಿಯಬೇಡಿ. ನನ್ನ ವಿಕಾರರೂಪದ ಮೂಲಕ ನನಗೆ ಅನುಕೂಲತೆಗಳೇ ಹೆಚ್ಚಾಗಿದ್ದುವು. ಮುಂಕು. ಹೆಂಗುಸರು ನನ್ನನ್ನು ನೋಡಿ ಮೆಚ್ಚಲಿಲ್ಲ; ನನಗೆ ತಲೆಬಾಚಬೇಕೆಂದು ಯಾರೂ ಅಪೇಕ್ಷಿಸಲೂ ಇಲ್ಲ. ತೊಂಡರೆಯನ್ನೂ ತೆಗೆದುಕೊಳ್ಳಲಿಲ್ಲ. ಯಾರೂ ರಾಜಕುವರನಂತೆ ನನ್ನನ್ನು ಸಿಂಗರಿಸಿ ಎಲ್ಲರಿಗೂ ತೋರಿಸಲಿಲ್ಲ. ಆಷ್ಟೇಕೆ, ಯಾರೂ ನನ್ನನ್ನು ಮುದ್ದಿಸಲಿಲ್ಲ ಕೂಡ. ನಾನು ಒರಟುಒರಟಾಗಿ, ದೃಢಕಾಯನಾಗಿ, ಆತ್ಮವಿಶ್ವಾಸಪೂರಿತನಾಗಿ ಬೆಳೆದೆನು.

---

* Allan Cattrick ಎಂಬವರು ಬರೆದಿರುವ " The Case For the Ugly Man " ಎಂಬ ಲೇಖನವನ್ನೋದಿದ ಫಲವಿದು. —ಲೇಖಕ

ಇಲ್ಲಿ ಹೇಳಿದುವೆಲ್ಲವೂ ಅಲ್ಪವಿಚಾರಗಳೇ ಹೌದು. ನನಗೆ ಯೌವನ ಪ್ರಾಪ್ತವಾಯಿತು. ರೂಪವಂತನೊಬ್ಬನು ಸುಂದರ ಸ್ತ್ರೀಯರ ಜೊತೆಯಲ್ಲಿ ಇರಲು ಹೇಗೆ ಆಶೆಪಡುವನೋ ಹಾಗೆಯೆ ಕುರೂಪಿ ಕೂಡ ಆಶೆಪಟ್ಟೇ ಪಡುತ್ತಾನೆ. ಆದರೆ ಆಗರ್ಭ ಶ್ರೀಮಂತನಾಗಿರುವ ಹೊರತು ಕುರೂಪಿಗೆ ಆದು ಎಂದಿಗೂ ಲಭ್ಯ ವಾಗುವುದಿಲ್ಲ. ಎಲ್ಲರೊಡನೆ ಬೆರೆಯಲು ಕುರೂಪಿಗೂ ಆಶೆಯಿರುತ್ತದೆ; ಆದರೆ ಯಾರೂ ಅವನನ್ನು ಕರೆಯುವುದಿಲ್ಲ. ತನ್ನ ಬುದ್ಧಿ-ಕೌಶಲ್ಯದಲ್ಲಿ ಹತ್ತರಲ್ಲಿ ಒಂದು ಪಾಲೂ ಇಲ್ಲದವರು ಕೂಡ, ತಮ್ಮ ಇಚ್ಛೆಗೆ ಬೇಕಾದ ಕಾರ್ಯಗಳನ್ನು ಮಾಡುವರು. ಕುರೂಪಿಯಾದ ವನು ಇದನ್ನೆಲ್ಲಾ ನೋಡಿ ಸಹಿಸಿಕೊಂಡಿರಬೇಕು!

ಯಾವನೇ ಒಬ್ಬ ಕುರೂಪಿಯ ಜೀವನದಲ್ಲಿ, ಬಹುಶಃ ಇದೇ ಅತ್ಯಂತ ಕಷ್ಟದ ದಿನಗಳಾಗಿರಬೇಕು. ಯೌವನದ ನಗೆಯಾಟಗಳಲ್ಲಿ ಅವನಿಗೆ ದೊರೆಯಬೇಕಾದ ಭಾಗವು ದೊರೆಯುವುದಿಲ್ಲ. ಸುತ್ತಲೂ ಸಕ್ಕರೆಯಿದ್ದರೂ ಹಸಿವಿನಿಂದ ರೋದಿಸುತ್ತಿರುವ ಮಗುವಿನಂತೆ ಅವನು ಇರಬೇಕಾಗುವುದು. ಆದರೆ ಇದೇ ರೀತಿಯಾಗಿಯೆ ಹೆಚ್ಚು ಕಾಲವಿರಬೇಕಾಗುವುದಿಲ್ಲ. ಅವನಿಗೆ ಸಪೂರ್ಣವಾಗಿ ವಂತೆ ಕೆಲವು ಅನುಕೂಲ್ಯಗಳೂ ಅವನ ರಕ್ಷಣೆಗೆ ಬರುತ್ತವೆ. ಅವುಗಳ ಮೂಲಕ ಅವನು ತನ್ನ ಮುಂದಿನ ಹಾದಿಯನ್ನು ಕಂಡು ಕೊಳ್ಳುವನು. ತನ್ನ ಬುದ್ಧಿಕುಶಲತೆಯನ್ನೂ, ಹಾಸ್ಯಪ್ರವೃತ್ತಿ-ಯನ್ನೂ ನೋಡಿ ಯಾರು ಮೆಚ್ಚುವರೋ ಅಂತಹವರ ಗೆಳೆತನ ವನ್ನು ಇವನು ಬೆಳಸುವನು. ತನ್ನ ಕೆಲಸ-ಕಾರ್ಯಗಳಲ್ಲಿ ಇನ್ನೂ ಹೆಚ್ಚು ಶ್ರದ್ಧೆಯನ್ನು ತೋರುವನು. ಸಾಮಾನ್ಯ ರೂಪವಂತನಿ ಗಿಂತ ಸ್ವಲ್ಪ ಹೆಚ್ಚು ಒರಟಾದ ಕಸಾಯಿದ ನೋರೆಯಿದ್ದುದರಿಂದ, ತನ್ನ ಜೀವನ ಕಷ್ಟಕರವಾಯಿತೆಂಬುದನ್ನು ನೆನಸಿಕೊಂಡರೆ ಆತನಿಗೆ ಆಗಾಗ ರೋಷವುಂಟಾಗದಿರದು.

'ತನ್ನ ರೂಪೇ ತನಗೊಂದು ಕುಂದು' ಎಂಬುದು ಕುರೂಪಿಗೆ ಗೊತ್ತು. ಆದುದರಿಂದಲೆ ಅವನು ಆ ಕೊರತೆಯನ್ನು ತುಂಬಿಕೊಳ್ಳು ವುದಕ್ಕೆ ತನಗೇ ತಿಳಿಯದಂತೆ ತನ್ನ ಇತರ ಗುಣಗಳನ್ನು ವೃದ್ಧಿ-ಗೊಳಿಸಿಕೊಳ್ಳುವನು. ಇದ್ದುದರಿಂದಲೇ ಕುರೂಪಿಗಳು ಬಹು ಶ್ರೇಷ್ಠ ಮಾತುಗಾರರಾಗಿರುತ್ತಾರೆ. ತಮ್ಮ ಸ್ವಂತದ ರಕ್ಷಣೆ-ಗಾಗಿ 'ಈ ಮಾರ್ಗವನ್ನು ಅವರು ಸಂಶೋಧಿಸಿಕೊಳ್ಳುವರು. ತೀರ ವಿಕೃತಾಕಾರಿಯಾದ ಮನುಷ್ಯನಿಗೆ ಅತ್ಯಂತ ಮಧುರವಾದ ಕಂಠವಿರುತ್ತದೆಂಬುದು ಸರ್ವವಿದಿತವಾಗಿದೆ. ಅವನು ಮಾತನಾಡು ತ್ತಿರುವಾಗ ನೀವು ಕಣ್ಣುಮುಚ್ಚಿ ಕುಳಿತು ಕೇಳಿದರೇ ಆದರೆ, ಅದರ ಸೊಗಸನ್ನು ನೀವು ಅರಿತು ಆನಂದಿಸಬಹುದು. ಅವನ ವಿಕಾರರೂಪದಿಂದ ಅವನಿಗೇನೂ ಕುಂದುಂಟಾಗುವುದಿಲ್ಲ.'

ಇನ್ನೂ ಒಂದು ವಿಷಯ: ರೂಪವತಿಯಾಗಿರುವವನು ತನ್ನ ಯೌವನದ ಸೊಕ್ಕಿನಿಂದ, ಯಾವುದೇ ಸಂದರ್ಭ ಬಂದರೂ ತನ್ನ ರೂಪದ ಮೇಲೆಯೆ ನಿಲ್ಲಲು ಕಲಿತಿರುವನು. ತನ್ನ ಮಾತುಗಾರಿಕೆ ಯನ್ನು ವೃದ್ಧಿಗೊಳಿಸಿಕೊಳ್ಳಲು ಅವನು ಇಚ್ಛಿಸುವುದಿಲ್ಲ, ಕಷ್ಟ-ಪಡುವುದಿಲ್ಲ. ವಿಷಯಗಳನ್ನು ಸಂಪೂರ್ಣವಾಗಿ ಗ್ರಹಣಮಾಡು-ವುದಕ್ಕೆ ಅವನು ಎಂದೂ ಯತ್ನಿಸುವುದಿಲ್ಲ. ಅಂಥವನು ತನ್ನ ಬುದ್ಧಿಕೌಶಲ್ಯವನ್ನೆಲ್ಲಾ ಹಾಳುಮಾಡಿಕೊಳ್ಳುವನು. ದುರಭಿ-ಮಾನಿಯಾಗುವನು; ಅಹಂಭಾವ ಅವನಲ್ಲಿ ಹೆಚ್ಚುತ್ತದೆ. ಸ್ವಲ್ಪ ಕಾಲದ ಮೇಲೆ ಅಂಧವನ ಸ್ಥಿತಿ ತೀರ ಚಿಂತಾಜನಕವಾಗುತ್ತದೆ. ದೇವರು ಸದ್ಯ ನನ್ನ ಮಕ್ಕಳನ್ನು ಆ ಸ್ಥಿತಿಯಿಂದ ಕಾಪಾಡಿದರೆ ಸಾಕು; ಆ ತರದ ಸ್ಥಿತಿ ನನ್ನ ಮಕ್ಕಳಿಗೆ ಬರುವುದೆಂದು ನಾನು ನಂಬಿಯೂ ಇಲ್ಲ.

ಒಬ್ಬ ಮನುಷ್ಯನಲ್ಲಿ ಗುಣ-ಶೀಲಗಳು ಇದ್ದರೆ, ಅವನು ಕುರೂಪಿ, ಯಾಗಿದ್ದಷ್ಟೂ ಅವನಿಗೆ ಅನುಕೂಲ. ಕೆಲವರಿಗೆ ತಮ್ಮ ವ್ಯಕ್ತಿತ್ವ ವನ್ನು ಬೆಳಸಿಕೊಳ್ಳಲು ಆಸ್ಪದವಿರುತ್ತದೆ. ಅಂಥವರು ತಮಗೆ ಬೇಕಾದುದನ್ನು ಸಾಧಿಸಿಕೊಳ್ಳಲಿಕ್ಕೆಂದು ಏಕಚಿತ್ತದಿಂದಿರ-ಬೇಕಾಗುವುದು; ಏಕಾಂತಿಯಾಗಿರಬೇಕಾಗುವುದು; ಸಾಮಾನ್ಯರ ಸಂಗತಿಯಿಂದ ದೂರವಿರಬೇಕಾಗುವುದು. ಕುರೂಪಿಗಳಾದವ ರಿಗೆ ಇದೆಲ್ಲ ಸಹಜವಾಗಿಯೆ ಸಿಕ್ಕುವುದು.

ನಾನು ಇಲ್ಲಿ ಹೇಳಿದ ವಿಚಾರಗಳನ್ನು ನೀವು ಇತಿಹಾಸ ದಲ್ಲಿಯೂ ಕಾಣುವಿರಿ; ನಿಮ್ಮ ಪ್ರತಿದಿನದ ಬಾಳಿನಲ್ಲೂ ನೋಡು ವಿರಿ. ನೆಪೋಲಿಯನ್ ಕುರೂಪಿ; ಹಾಗೆಯೇ ನೆಲ್ಸನ್. ಬಾಲ್ಯದಲ್ಲಿ ಅವರು ತಮ್ಮಲ್ಲಿಯ ಶಕ್ತಿಯನ್ನೆಲ್ಲಾ ವ್ಯಯಮಾಡಿ, ತಮ್ಮ ಗುರಿಯನ್ನು ಸಾಧಿಸಿದರು.

ಕನ್ನಡ

ಸಾರ್ಥ ಜ್ಞಾನೇಶ್ವರೀ

ಸಚಿತ್ರ

ಎನೆಯ ಭಾಗ

೧ ರಿಂದ ೯ ಅಧ್ಯಾಯಗಳು

ಶ್ರೀಮದ್ಭಗವದ್ಗೀತೆಯ ಮೇಲೆ "ಜ್ಞಾನೇಶ್ವರರು" ಮಹಾರಾಷ್ಟ್ರ ಭಾಷೆಯಲ್ಲಿ ಬರೆದ ಭಾವಾರ್ಥ-ದೀಪಿಕೆ ಎಂಬ ಟೀಕೆಯ ಕನ್ನಡ ಅನುವಾದವು.

ಲೇಖಕರು

ಶ್ರೀನಿವಾಸ ಕೃಷ್ಣ ಕುಲಕರ್ಣಿ, ಸುನಗ

ಬೆಲೆ ೩ ರೂಪಾಯಿಗಳು. ಅಂಚೆಯಮೇಚ್ಚು ಬೇರೆ

ಪೋಕ ಮತ್ತು ಕಿರುಕುಳ ಬೇಕಾದವರು ಕೆಳಗಿನ ಪತ್ತೇಕ್ಕೆ ಪತ್ರ ಬರೆದು ಕೇಳಿಕೊಳ್ಳಬೇಕು.

ವಿಳಾಸ:—

ಮ್ಯಾನೇಜರ್

ಕರ್ನಾಟಕ ಪ್ರಿಂಟಿಂಗ್ ವರ್ಕ್ಸ್,

ಧಾರವಾಡ

ಮಕ್ಕಳಿಗೆ

ಡೋಂಗರೆ ಬಾಲಾಮೃತವು

ಆದರ್ಶಕರವಾದ ಪೌಷ್ಟಿಕ.

ಮತ್ತು ಇದರಿಂದ

ಹಲ್ಲುಗಳು ಕಷ್ಟವಿಲ್ಲದೆ ಹೊರಬೀಳುತ್ತವೆ.

ನೀಡಿದೆ. ಅವೆರ ರೂಪು ಹೇಗಿದೆಯೆಂದು ನೀವು ನೋಡುವುದಿಲ್ಲ ಮಾನವರನ್ನಾಗಿ ಅವರನ್ನು ನೀವು ನೋಡುತ್ತೀರಿ. ಉಳಿದ ನಟರಲ್ಲಿ ಅವರ ರೂಪು ಮಾತ್ರ ನಿಮ್ಮ ಗಮನವನ್ನು ಸೆಳೆಯುತ್ತದೆ.

ವಾಲ್ಟೇರ್ ಹೇಳಿದ್ದಾನೆ: "ಸೌಂದರ್ಯವು ನೇತ್ರಗಳಿಗೆ ಹಬ್ಬವನ್ನು ಮಾಡುತ್ತದೆ; ಆದರೆ ರಜನಾಮಾಧುರ್ಯವು (Sweetness of disposition) ಆತ್ಮವನ್ನು ಬೆಳಗುತ್ತದೆ, ಅದಕ್ಕೆ ಒಂದು ಸೊಂಪನ್ನು ನೀಡುತ್ತದೆ" ಎಂದು. ಆದರೆ ದುರದೃಷ್ಟವಶಾತ್ ತತ್ತ್ವಜ್ಞ ವಾಲ್ಟೇರ್ ಸಹ ವಿಕಾರರೂಪದ ಪುರುಷ!

ವಾಲ್ಟೇರ್‌ಗಿಂತ ಬಹು ಹಿಂದೆಯೇ ಪ್ಲಾಟಿಸ್ ಎಂಬಾತನು "ಅತ್ಯಂತ ಸುಂದರ ಪುರುಷನಾಗಿರುವುದು ದ್ರಾಭೆತನ" ಎಂದು ಹೇಳಿದ್ದಾನೆ. ರಾಬರ್ಟ್ ಟೇಲರ್ ಕೂಡ ಇದನ್ನು ಒಪ್ಪುವನೆಂದು ನಂಬಿದ್ದೇನೆ.

ರೂಪಶಾಲಿಗೆ ಕೆಲಸದಲ್ಲಿ ಶ್ರದ್ಧೆಯಿದ್ದರೆ, ಅಹಂಪ್ರಜ್ಞೆಯಿಂದ—ಗರ್ವದಿಂದ—ಬಿಡುಗಡೆ ಹೊಂದಬಹುದುಎಂದು ತಿಳಿದಿರಬಹುದು. ಆದರೆ ಅದನ್ನು ಸಾಧಿಸುವವರು ಮಾತ್ರ ತೀರ ವಿರಳರು.

ಹಿಟ್ಲರ್, ಮುಸೋಲಿನಿ, ಡಲೇಡಿಯರ್, ಸ್ಟಾಲಿನ್, ಚೆಂಬರ್‌ಲಿನ್, ಚಂಗ್ ಕೈ ಷೇಕ್— ಇವರಲ್ಲಿ ಒಬ್ಬರಾದರೂ ಸುಂದರ ಪುರುಷರಿದ್ದಾರೆಯೇ ನೋಡಿ!

ನಿನಿವಾ ಅಭಿನೇತೃಗಳನ್ನೂ ಇದೇ ಪರೀಕ್ಷೆಗೆ ಗುರಿಮಾಡಿ, 'ಮೂವರು ಮಹಾ ಅಭಿನೇತೃಗಳನ್ನು ಆರಿಸು' ಎಂದು ನನಗೆ ಹೇಳಿದರೆ, ನಾನು ಚಾರಲ್ಸ್ ಲಾಫ್ಟನ್, ಸ್ಪೆನ್ಸರ್ ಟ್ರೇಸಿ, ಲೆಸ್ಲಿ ಹೊವಾರ್ಡ್ ಇವರನ್ನು ಆರಿಸುವೆನು. ರಾಬರ್ಟ್ ಟೇಲರ್, ಎರೊಲ್ ಫ್ಲಿನ್ ಮೊದಲಾದ ರೂಪಶಾಲಿ ನಟರಿಗಿಂತ ಇವರು ಯಾಕೆ ವಿಖ್ಯಾತರಾದರು? ಅದಕ್ಕೆ ಉತ್ತರ ಇಷ್ಟೇ: ಇವರು ತಮ್ಮ ವ್ಯಕ್ತಿತ್ವವನ್ನು ಜೀನ್ಯಾಗಿ ಬೆಳಸಿಕೊಂಡಿದ್ದಾರೆ. ಅದು ಇವರ ಇತರ ಸಾಮಾನ್ಯ ವಿಷಯಗಳಿಗೂ ಒಂದು ಕಾಂತಿಯನ್ನು

ಎಲ್ಲಕ್ಕಿಂತ ಆಗ್ಗ! ಎಲ್ಲಕ್ಕಿಂತ ಉತ್ತಮ!
ಮಿಕ್ಕ ಬ್ಲೇಡುಗಳಿಗಿಂತ ಅಚ್ಚುಕಟ್ಟಾದ ಹೆಚ್ಚಿನ ಕೆಲಸ!

೫ ಆಣೆಗೆ ೧೦ ಬ್ಲೇಡು!

(೫೧೧ ನೆಯ ಪುಟದಿಂದ ಮುಂದುವರಿದುದು)

ದನ್ನು ಆಚರಣೆಯಲ್ಲಿ ವಿಂಗಡಿಸಿ ತಿಳಿಯಬೇಕು, ಹಿಂಸೆಯು ಇಷ್ಟು ವ್ಯಾಪಿಸಿ ನಾಗರಿಕ ಪ್ರಪಂಚದಲ್ಲೂ ಪ್ರಬಲವಾಗಿರುವುದೇಕೆ? ಅಹಿಂಸೆಯನ್ನು ಅನುಮೋದಿಸಿದರೂ ಅನುಸರಿಸುವವರಿಲ್ಲವೆ? ಒಂದು ಕೆನ್ನೆಗೆ ಹೊಡೆದವನಿಗೆ ಇನ್ನೊಂದು ಕೆನ್ನೆಯನ್ನು ತೋರಿಸುವುದು ದೊಡ್ಡ ಗುಣವೇನೋ ಸರಿ; ಆದರೆ ಹಾಗೆ ಮಾಡತಕ್ಕವರು ಎಷ್ಟು ಮಂದಿ? ಇದೇ ಸರಣಿಯಲ್ಲಿ ಎಷ್ಟು ಬಗೆಯಲ್ಲಿ ಯೋಜಿಸಿದರೂ ಅದಕ್ಕೆ ತೃಪ್ತಿಕರವಾದ ಉತ್ತರವು ಸಿಕ್ಕಲಿಲ್ಲ. ತಾನು ಸೆಮ್ಮಡಿಯಾಗಿದ್ದರೂ ಇತರರ ಹಿಂಸಾಪ್ರವೃತ್ತಿಯನ್ನು ನೋಡಿ ಶರ್ಮನಿಗೆ ಕೊರಗಿ ಕೊರಗಿ ಸಾಕಾಯಿತು. ಕ್ರಮೇಣ ತನ್ನ ಅಹಿಂಸೆಯ ಅಂತಸ್ತನ್ನು ವ್ಯವಹಾರಕ್ಕೆ ಅನುಗುಣವಾಗಿ ಬದಲಾಯಿಸಬೇಕಾಗಿ ಬಂದಿತು. ಅಹಿಂಸೆಯಲ್ಲಿದ್ದ ಅಚಲವಾದ ಆಸಕ್ತಿಯು, ಅವಾಂತರದಿಂದ ರೂಪಾಂತರ ಹೊಂದಿತೆಂದು ತಿಳಿಯೋಣವೆ?

ರಾಯರು ನಾಡಿನ ಪುಣ್ಯವ್ಯಕ್ತಿಗಳನ್ನು ಮನ ಬಂದಂತೆ ಉಪಯೋಗಿಸಿಕೊಂಡಿದ್ದಾರೆ. ಇದು ಶುದ್ಧ ತಪ್ಪು. ಒರ್ವ ಜವಾಬ್ದಾರಿ ಲೇಖಕನು ಮಾಡುವ ಕಾರ್ಯವಲ್ಲವಿದು.

"ಎಲ್ಲ ಸಂಸ್ಕೃತಿಯ ಬಗ್ಗೆಯೂ, ಎಲ್ಲ ಧರ್ಮದ ಬಗ್ಗೆಯೂ ನಾನು ಬರೆದಿದ್ದೇನೆ." ಎಂದು ಹೇಳಿಕೊಳ್ಳುವ ರಾಯರಿಗೆ, ಮಾನವ ಸಂಸ್ಕೃತಿಯ ಅರ್ಥವೇ ಇನ್ನೂ ಅಗಿಲ್ಲವೆಂದು ಹೇಳಬಹುದು ಈ ಕೃತಿಯ ಅವಗಾಹನೆಯಿಂದ. ಮೂರ್ತಿ (ಕೃಷ್ಣರಾಯ) ನಾಡಿನ ಸುತ್ತಲೂ ದಿಗ್ವಿಜಯ ಕೈಕೊಂಡಾಗ, ಧಾರವಾಡಕ್ಕೂ ಬರುತ್ತಾನೆ. ಇಲ್ಲಿಯ ಪರಮ ದಾಸೋಹಮೂರ್ತಿಗಳೂ, ತಪಸ್ವಿಗಳೂ, ಆದ ಶ್ರೀ. ಮ. ನಿ. ಪ್ರ. ಸ್ವರೂಪಿಗಳಾದ ಮೃತ್ಯುಂಜಯ ಮಹಾಸ್ವಾಮಿಗಳು ಮೂರ್ತಿಯನ್ನು ಮಠಕ್ಕೆ ಭಾಷಣಕ್ಕಾಗಿ ಆಮಂತ್ರಿಸುತ್ತಾರೆ. ಮಠ. ದಲ್ಲಿ ಮೂರ್ತಿ 'ಪ್ರಭುದೇವ'ರ ಬಗ್ಗೆ ಮಾತಾಡುತ್ತಾನೆ. ಭಾಷಣ ಕೇಳಿದ ಮಹಾಸ್ವಾಮಿಗಳು 'ಈವೊತ್ತು ಪ್ರಭುವೇ ನೂತನನಾಡಿದನಪ್ಪಾ ಪ್ರಭು ಸಂಪೂರ್ಣ ನಿನುಗೆ ಒಲಿದಿದ್ದಾನೆ.' ಎಂದು, ಈ ಕಾದಂಬರಿಯ ಒಂದು ಸಂದರ್ಭದಲ್ಲಿ ಈ ಸನ್ನಿವೇಶ ರಚಿಸಿಕೊಂಡು, ತನಗಾಗಿಯೇ ಈ ಮಾತನ್ನು ಮಹಾಸ್ವಾಮಿಗಳಿಂದ ಹೇಳಿಸಿಕೊಂಡ ಈ ವ್ಯಕ್ತಿ, ತನಗಾಗಿ ಅಗದಿದ್ದರೂ ನಾಡಿನ ಕಲ್ಯಾಣದೃಷ್ಟಿಯಿಂದ ಲಾದರೂ. ಪ್ರಭುವಿನ ಹೃದಯವೈಶಾಲ್ಯತೆಯನ್ನೂ, ಪ್ರಭುವಿನ ದಿವ್ಯದೃಷ್ಟಿಯನ್ನೂ, ಹೃದಯ ಪಾವಿತ್ರ್ಯವನ್ನೂ ಪಡೆದುಕೊಳ್ಳಲು ಶ್ರಮಿಸಲಿ!

'ವ್ಯಕ್ತಿ ವಿದ್ವೇಷ' ವನ್ನು ಖಂಡಿಸುತ್ತ ಇದೇ ಕಾದಂಬರಿಯಲ್ಲಿಯೇ ಶ್ರೀ. ಕೋ. ಚೆನಬಸಪ್ಪನವರ ಕೃತಿಯ ಬಗ್ಗೆ ಬುದ್ಧಿವಾದ ಹೇಳುವ ಲೇಖಕ, ತನ್ನ. ಕಾದಂಬರಿಯ ಪ್ರತಿಯೊಂದು ಶಬ್ದದಲ್ಲಿಯೂ ವ್ಯಕ್ತಿದ್ವೇಷ ತುಂಬಿದೆಯೆಂಬುದನ್ನು ಅರಿಯದಿರುವುದೊಂದು ಶೋಚನೀಯ ಸಂಗತಿ.

'ಕನ್ನಡಮ್ಮನ ಗುಡಿಯಲ್ಲಿ' ಯ ಎರಡನೆಯ ಭಾಗ 'ದೀಪಾರಾಧನೆ.' 'ದೀಪಾರಾಧಾನೆ' ನಡೆಸುವುದಕ್ಕಿಂತ ಮುಂಚೆ ನಾಡಿನವರ ಅಭಿಪ್ರಾಯದತ್ತ ಮನಸ್ಸು ಹಾಕಲಿ. ತಮ್ಮನ್ನು ಆಭಿಮಾನದಿಂದ ಕಂಡ, ತಮ್ಮ ಕೃತಿಯನ್ನು ಮೆಚ್ಚಿಕೊಂಡ ಜನತೆಯ ಮಾತನ್ನು ಕಡೆಗಣಿಸಿ ರಾಯರು 'ದೀಪಾರಾಧನೆ' ಮಾಡಿದರೆ, ಇಲ್ಲಿಗೆ 'ರಾಯರ 'ಸಮಾರಾಧನೆ' ಕಟ್ಟಟ್ಟಬುತ್ತಿ. ಕನ್ನಡಮ್ಮನ ಗುಡಿಯಲ್ಲಿಯೇ ಮೂರ್ತಿ (ಕೃಷ್ಣರಾಯ) ಯ ಅವಸ್ಥೆ ಮುಗಿದಿರುವಾಗ, 'ದೀಪಾರಾದನೆ'ಯಲ್ಲಿ ಏನು ಕಾದಿದೆಯೋ ತಿಳಿಯದಾಗಿದೆ.

ಅಂತೂ ರಾಯರಿಗೆ ಬಡಿದುಕೊಂಡಿರುವ ಆತ್ಮಪ್ರಶಂಸೆ, ಆತ್ಮ ಗ್ಲಾನಿಯ ಮುಂಕು ಕಳೆಯಲಿ. ಕನ್ನಡ ಜನತೆಗೆ, ಸಾಹಿತ್ಯಕ್ಕೆ ವಂಚಕರಾಗಿ ಬಾಳದಿರಲಿ ಅ. ನ. ಕೃ!

ಧಾರವಾಡ — 'ತಿರುಳ್'

ತನೆಯ ಓಲೆ

"ಜಯಂತಿ" ಯ ಸಂಪಾದಕರಲ್ಲಿ,
ಸನಿನಯ ವಿಜ್ಞಾಪನೆಗಳು.

ಪ್ರಿಯರೇ,

ಬಹುದಿನಗಳನಂತರ ಪತ್ರ ಬರೆಯುತ್ತಿದ್ದೇನೆ. ಇದಕ್ಕೆ ಕಾರಣ ಮಾರ್ಚ್ ತಿಂಗಳ 'ಜಯಂತಿ' ಯ "ಸಾಹಿತ್ಯ ವಿಮರ್ಶೆಯ ಶಿಕ್ಷಣ ರಂಗ" ದಲ್ಲಿ ಪ್ರಕಟವಾದ ವಿಮರ್ಶೆ. ನಾನು ಬರೆಯುತ್ತಿರುವ ಮಾತುಗಳಲ್ಲಿ ತಮಗೆ ಅರಿಯದ ವಿಚಾರವೇನೂ ಇಲ್ಲ. ಆಸರೆ ಮುಂದಿನ ಕೆಲವು ಮಾತುಗಳನ್ನು ಪ್ರಕಟಿಸಿದರೆ "ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ" ದಲ್ಲಿ ಭಾಗವಹಿಸುವವರಿಗೆ ಅಲ್ಪವಾದರೂ ಸಹಾಯವಾದೀತೆಂದು ಭಾವಿಸುತ್ತೇನೆ.

೧. ಮುಖ್ಯವಾಗಿ, ಇತ್ತೀಚಿಗೆ ಈ ವಿಭಾಗದಲ್ಲಿ ಬರುತ್ತಿರುವ ವಿಮರ್ಶೆಗಳಲ್ಲಿ ಅತಿಶಯ ಪ್ರಶಂಸೆಯೇ ತುಂಬಿರುತ್ತದೆ. ವಿಮರ್ಶೆಗೊಳಗಾಗುವ ಕೃತಿ "ಜಯಂತಿ" ಯಲ್ಲಿ ಪ್ರಕಟವಾದುದಾಗಿರುವುದೇ ಇದಕ್ಕೆ ಒಂದು ಕಾರಣವಾಗಿರಬೇಕು. ಪತ್ರಿಕೆಯಲ್ಲಿ ಬಂದ ಕೃತಿಯನ್ನು ಹೊಗಳಿ ಬಿಟ್ಟರೆ ಸಂಪಾದಕರು ಒಪ್ಪಲೇ ಬೇಕಲ್ಲ—ಎಂಬ ಒಣಭೆಟ್ಟರ್ಯ ಈ ಅಭ್ಯಾಸಿಗಳಲ್ಲಿರುವಂತೆ ತೋರುತ್ತದೆ. ಆದುದರಿಂದ ವಿಮರ್ಶೆಯಲ್ಲಿ ವಿಮರ್ಶಕನ ಸ್ವಂತ ವಿಚಾರಶಕ್ತಿ ಗೋಚರಿಸುವುದೇ ಇಲ್ಲ. ಸ್ವಂತ ವಿಚಾರಶಕ್ತಿಯನ್ನು ಪಯೋಗಿಸಿದಲ್ಲಿಯೂ ಹಾಸ್ಯಾಸ್ಪದ ಸಂಗತಿಗಳು ಕಾಣಿಸುತ್ತಿವೆಯಲ್ಲದೆ, ನಿಜವಾದ ವಿಮರ್ಶಕನ ಸೂಕ್ಷ್ಮ ಬುದ್ಧಿ ಗೋಚರಿಸುವುದಿಲ್ಲ. ಉದಾ:— ಮಾರ್ಚ್ ತಿಂಗಳ ವಿಮರ್ಶೆಯಳ ನೆಯ ಪ್ಯಾರಾ ಮತ್ತು ಸ್ವಪ್ನಶಾಸ್ತ್ರದ ಕುರಿತು ವಿಮರ್ಶಕರ ವ್ಯಾಖ್ಯಾನ. (ಈ ವಿಚಾರವನ್ನು ಪ್ರಾಯಶಃ ಕತೆಗಾರರೂ ಯೋಚಿಸಿರಲಿಕ್ಕಿಲ್ಲ).

೨. ವಿಮರ್ಶೆಗೆ ಹೆಚ್ಚಾಗಿ ಸಣ್ಣಕತೆಯನ್ನೇ ಆರಿಸುವುದು ವಿಮರ್ಶೆಯ ಪುಟ್ಟ ಕೆಳಗಿಳಿಯುತ್ತಿರುವುದರ ಇನ್ನೊಂದು ಕಾರಣವಾಗಿದೆ. ಸಣ್ಣಕತೆಗಳ ಗಾತ್ರ ಸಾಮಾನ್ಯವಾಗಿ "ಜಯಂತಿ" ಯ ೩-೫ ಪುಟಗಳಷ್ಟು ಇರುತ್ತದೆ. ವಿಮರ್ಶೆಯ ಗಾತ್ರ ಹೆಚ್ಚಾಗಿ ೩ ಪುಟಗಳಷ್ಟು. ಎಂದರೆ ಕೃತಿ ಮತ್ತು ವಿಮರ್ಶೆ—ಎರಡರ ಗಾತ್ರವೂ ಒಮ್ಮೊಮ್ಮೆ ಸಮಾನವಾಗಿರುತ್ತವೆ. (ಮಾರ್ಚ್ ತಿಂಗಳ 'ಕಸದ ಬುಟ್ಟಿ' ಕಥೆಗೆ ಬಂದ ವಿಮರ್ಶೆಗಳಲ್ಲಿ, ಕೆಲವು ಕಥೆಗಿಂತಲೂ ದೊಡ್ಡವಿದ್ದಿರಬಹುದೆ?) ನಿಜವಾಗಿ ಸಾಮಾನ್ಯವಾದ ಒಂದು ಸಣ್ಣಕಥೆಯ ವಿಮರ್ಶೆಗೆ 'ಜಯಂತಿ' ಯ ಅರ್ಧ ಪುಟ ಸಾಕು. ಆದರೆ ಅಷ್ಟು ಚಿಕ್ಕ ಬರೆಹ 'ವಿಮರ್ಶೆ'ಎನಿಸೀತೆ? ಪ್ರಕಟನಾರ್ಹವಾದೀತೆ? ಎಂಬ ಸಂದೇಹದಿಂದ ಈ ಬರೆಹಗಾರರು ವ್ಯರ್ಥವಾಗಿ ಲೇಖನವನ್ನು ಬೆಳೆಯಿಸುತ್ತಾರೆ. ಉದ್ದುದ್ದವಾಗಿ ಕಥಾಸಾರಾಂಶವನ್ನು ಬರೆಯುತ್ತಾರೆ. (ಮಾರ್ಚ್‌ತಿಂಗಳ ವಿಮರ್ಶೆಯಲ್ಲಂತೂ ಕಥಾಸಾರಾಂಶ ೨ ಸಲ ಬಂದಿದೆ!)

ಕೊಂಕಣದ ವಿಹಂಗಮ ನೋಟ

ಶ್ರೀ. ಜಿ. ಶ್ರೀನಿವಾಸರಾಯರು

★

ಬರಿಯೆ ಮುಂದುವರಿದ ಮೂರುವರೆ ಜನರ ಸಂಸ್ಕೃತಿಯು ಮೇಲಿಂದ ಭಾರತದೇಶವೆಲ್ಲ ಅಂತಹ ಸಂಸ್ಕೃತಿಪೂರ್ಣ ಜನರಿಂದಲೆ ತುಂಬಿರುವುದೆಂದು ತಿಳಿಯುವುದು ತೀರ ತಪ್ಪು. ಅದರಂತೆಯೆ ಇಲ್ಲಿಯ ಕಾಡುಜನರನ್ನು ಕಂಡು, ಅವರೇ ಭಾರತೀಯರೆಂದು ತಿಳಿದು, ಅವರ ನಡೆ-ನುಡಿಗಳನ್ನೆ ಪ್ರದರ್ಶಿಸಿ ಹೀಯಾಳಿಸುವುದೂ ತಪ್ಪು. ಭರತಖಂಡದ ಸಮಾಜದ ಮೂಲೆ ಮೂಲೆಯಲ್ಲಿಯೂ ಇಂದು ಸಂಸ್ಕೃತಿಪ್ರಚಾರವಾಗಬೇಕಾಗಿದೆ.

★

ಒಂದು ಸ್ಥಾನದಲ್ಲಿ ಹಲವು ಬಗೆಯ ಹವಾಮಾನವಿರುವಂತೆ, ಹಲವು ಬಗೆಯ ಜಾತಿಗಳೂ ಸಂಸ್ಕೃತಿಗಳೂ ಇವೆ. ಅಲ್ಲದೆ ಹಾಗೆ ಇರುವುದೂ ಸ್ವಾಭಾವಿಕ. ಉಚ್ಚ ಸಂಸ್ಕೃತಿಯ ಜನಾಂಗವು ಫಲವತ್ತಾದ ಮತ್ತು ತಪ್ಪಲು ಪ್ರದೇಶಗಳಲ್ಲಿ ವಾಸವಾಗಿದ್ದುದರಿಂದ, ಅನಾಗರಿಕ ಜನರು ಅರಣ್ಯಗಳ ಸುತ್ತುಮುತ್ತು ವಾಸಿಸಬೇಕಾಯಿತು. ಹೀಗೆ ವಾಸಿಸಿದ ಹೀನಜಾತಿಯವರ ಇರುವಿಕೆ, ಆವರಲ್ಲಿಯ ಆಚಾರ ಮತ್ತು ವಿಚಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಈ ಜಾತಿಯ ಜನರ ಪೂರ್ವಜರು ಸಾವಿರಾರು ವರುಷಗಳ ಹಿಂದೆ ಯಾವ ತರದ ಅನಾಗರಿಕ ಸ್ಥಿತಿಯಲ್ಲಿದ್ದರೆಂಬುದನ್ನು ಸುಲಭವಾಗಿ ಊಹಿಸಬಹುದು. ಮುಂಬಯಿ ಇಲಾಖೆಯಲ್ಲಿ ದಕ್ಷಿಣೋತ್ತರವಾಗಿ ಹಬ್ಬಿದ ಸಹ್ಯಾದ್ರಿಯ ಬದಿಯ ಇಳುಕಲಿನ ಮೇಲೆ ದಟ್ಟವಾದ ಆಡವಿಗಳು ಇದ್ದು, ಅವುಗಳಲ್ಲಿ ಮೇಲೆ ಬರೆದಂತಹ ಜನಾಂಗವು ವಾಸವಾಗಿದೆ. ಈ ಇಳುಕಲಿನ ಭಾಗಕ್ಕೆ 'ಕೊಂಕಣಪಟ್ಟಿ' ಎಂದು ಕರೆಯುವರು. ಪ್ರದೇಶದ ಹೆಸರಿನ ಮೇಲೆಯೇ ಇಲ್ಲಿಯ ಜನಾಂಗಕ್ಕೆ 'ಕೊಂಕಣಿ' ಅಥವಾ 'ಕೋಕಣಿ' ಎಂಬ ಹೆಸರು ಪ್ರಾಪ್ತವಾಗಿದೆಯೇನೊ! ಇವರಲ್ಲಿಯೇ ಇನ್ನೊಂದು ಜಾತಿ ಇದ್ದು ಅವರಿಗೆ 'ಭಿಲ್ಲ' ಎನ್ನುವರು. ಕೋಕಣಿ ಮತ್ತು ಭಿಲ್ಲ ಜನರ ರೀತಿ-ನೀತಿಗಳಲ್ಲಿ ವಿಶೇಷವಾಗಿ ಭೇದವಿರದಿದ್ದರೂ, ಕೋಕಣಿ ಜನರು ತಾವು ಉಚ್ಚಜಾತಿಯವರೆಂದು ಜೆಮ್ಮೆಪಡುವರು.

ಸುಧಾರಣೆಯ ಗಾಳಿಯಲ್ಲಿ ಬಳೆದ ಜನರಿಗೆ, ಇಲ್ಲಿಯವರ ಇರುವಿಕೆಯು ಕೌತುಕದಾಗಿ ಪರಿಣಮಿಸುವುದು. ಸಂಪೂರ್ಣ ಕೊಂಕಣ ಪಟ್ಟಿಯ ವಿಷಯವನ್ನು ಬರೆಯುವುದಕ್ಕಿಂತ, ನಾಸಿಕ ಜಿಲ್ಲೆಯ ಪಶ್ಚಿಮಭಾಗ, **ಸುರಗಣಾ, ಧರ್ಮಪೂರ** ಮತ್ತು **ಡಾಂಗ್** ಸಂಸ್ಥಾನಗಳ ವಿಷಯವಾಗಿ ಬರೆದು, 'ಉಳಿದ ಕೊಂಕಣ ಭಾಗವು ಸಾಧಾರಣವಾಗಿ ಇದರಂತೆಯೇ ಇದೆ' ಎಂದು ಹೇಳಿದರೆ ತಪ್ಪಾಗದು. ಮುಂಬಯಿ ಇಲಾಖೆಯ ಸಕಾಶದಲ್ಲಿ ನೋಡಿದರೆ ಸುರತ, ಠಾಣಾ, ನಾಸಿಕ ಜಿಲ್ಲೆಗಳನ್ನು ಬಳಸಿಕೊಂಡ ಈ ಸಂಸ್ಥಾನಗಳ ಭಾಗವ್ಯಕಾಣುವುದು; ಈ ಭಾಗವು ಸಹ್ಯಾದ್ರಿಯ ಇಳುಕಲಿನೊಂದಿಗೆ ಹಬ್ಬಿರುವುದು. ಇಲ್ಲಿಯ ಸಂಸ್ಥಾನಗಳ ರಾಜರು ಭಿಲ್ಲ ಮತ್ತು **ಕೋಕಣೀ** ಜಾತಿಯವರು. ಈ ಸಂಸ್ಥಾನಿಕರ ಉತ್ಪನ್ನವು ವಿಶೇಷವಾಗಿ ಅರಣ್ಯಗಳ ಮೇಲೆಯೆ. ಭೂಮಿಯು ಕಪ್ಪು ಇದ್ದು ಫಲದ್ರೂಪವಿದ್ದರೂ, ಇಲ್ಲಿಯ ಹವೆ ಮತ್ತು ಮಳೆಗಳ ವೈಚಿತ್ರ್ಯದ ಮೂಲಕ ಬಬೇಕಾದಷ್ಟು ಫಲವು ಬರುವುದಿಲ್ಲ. ಅರಣ್ಯದಲ್ಲಿ ಅತಿಯಾಗಿ ಮಳೆ ಸುರಿದು, ಕೊಳೆತ ಕಟ್ಟಿಗೆ, ಎಲೆ ಮುಂತಾದುವುಗಳಿಂದ ಹವೆಯು ದೂಷಿತವಾಗಿ, ಮನುಷ್ಯ-ಕೋಟಿಗೆ ಒತ್ತಟ್ಟಿಗಿರಲಿ—ಹೊಲದಲ್ಲಿಯು ಬೆಳೆಗಳಿಗೆ ಕೂಡ ಹಾನಿಕಾರಕವಾಗುತ್ತದೆ.

ಇಲ್ಲಿಯ ಉತ್ಪಾದನೆಯೆಂದರೆ ಮುಂಗಾರಿಯಲ್ಲಿ ರಾಗಿ, ಗೋವಿನ ಜೋಳ, ಅಕ್ಕಿ ಮತ್ತು ಸೆಜ್ಜೆ. ಮುಂಗಾರಿಗೆ ಇಲ್ಲಿಯ ಜನರು "**ಖರೀಫ ಹಂಗಾಮ**" ಎನ್ನುವರು. ಹಿಂಗಾರಿಯಲ್ಲಿ ಚಿನ್ನಂಗಿ, ಬಟಾಣಿ, ಕಡಲೆ, ಗುರೆಳ್ಳು ಮತ್ತು ಗೋದಿಗಳನ್ನು ಬೆಳೆಯುವರು. ಹಿಂಗಾರಿಯ ಅವಧಿಗೆ '**ರಬ್ಬಿ ಹಂಗಾಮ**' ಎನ್ನುವರು.

ನಿಜವಾಗಿ ನೋಡಿದರೆ ಭೂಮಿಗೆ ತಕ್ಕಂತೆ ಬೆಳೆಯಲ್ಲ. ಬಂದ ಬೆಳೆಯೂ ಸಾಕಷ್ಟಲ್ಲ. ಕೆಲವೆಡೆ **ತೆಂಗು** ಮತ್ತು ಅಡಿಕೆ ಇದೆ; ಆದರೆ ಅದು—ಇಲ್ಲಿಯ ಮುಖ್ಯ ಬೆಳೆಗಳಲ್ಲಿ ಎಣಿಸಲ್ಪಡುವಷ್ಟು ದೊಡ್ಡ ಪ್ರಮಾಣದಲ್ಲಿ ಬರುವುದಿಲ್ಲ. ಪರ್ವತದ ಮೇಲೆ ಮಳೆಯು ಅಪರಿಮಿತವಿರುವುದರಿಂದ, ಮುಂಗಾರಿಯಲ್ಲಿ ಬರಗಾಲ ಬೀಳುವುದೆ ಬಹಳ. ಇದಕ್ಕೆ ಇಲ್ಲಿಯ ಜನರು "**ಹಿಲಸ ಪುಷ್ಕಾಳ**" ಎನ್ನುವರು. ಒಂದೊಂದು ವೇಳೆ ಬೆಳೆ ಸರಿಯಾಗಿ ಬಂದಿದ್ದರೂ ಕೊಯ್ಯುವ ವೇಳೆಗೆ ಒಂದು ತರದ ಚಳಿಯು ಬಿದ್ದು, ಬಂದ ಬೆಳೆಯನ್ನೂ ಸುಟ್ಟುಬಿಡುತ್ತದೆ. ಈ ಚಳಿಯು ಸೂರ್ಯೋದಯದ ಸುಮಾರಿನಲ್ಲಿ ಕೇವಲ ಹತ್ತು ನಿಮಿಷಗಳ ವರೆಗಿದ್ದು, ಆ ವೇಳೆಯಲ್ಲಿ "**ಕಡ-ಕಡ**" ಎಂಬ ಶಬ್ದವಾಗುತ್ತದೆ. ಆ ಗಾಳಿಯಲ್ಲಿ ಸಿಕ್ಕ

ಬೇವು, ಮಾವು, ಜಾಲಿ ಅಥವಾ ಯಾವುದೇ ಗಿಡ-ಮರಗಳೂ— ಎಷ್ಟೇ ಚಿಗಿತುಕೊಂಡಿರಲಿ—ಎರಡೇ ನಿಮಿಷಗಳಲ್ಲಿ ಒಣಗಿ ಉರುವಲಕ್ಕೆ ತಕ್ಕವುಗಳಾಗುವುವು. ಈ ಜಳಿಯಲ್ಲಿ ಸಿಕ್ಕ ಮನುಷ್ಯನು ಕೂಡ ಜೀವಕ್ಕೆ ಎರವಾಗುವನು. ಇಷ್ಟೊಂದು ಪ್ರಖರತರವಾದ ಜಳಿಯಲ್ಲಿ ಸಿಕ್ಕ ಬೆಳೆ ಕೈಗೆ ಬರುವ ಬಗೆ ಹೇಗೆ? ಹೀಗಾಗಿ ಮುಂಗಾರಿಯಲ್ಲಿ ಇಲ್ಲಿಯ ಜನಕ್ಕೆ ಬಹುತರ ಉತ್ಪನ್ನವೇ ಬರುವುದಿಲ್ಲ.

ಇದು ಹಿಂದುಸ್ತಾನದಲ್ಲಿಯ ವಿಸ್ಮೃತ (Forgotten) ಭಾಗವೆಂದು ಹೇಳಬಹುದು. ಸುಧಾರಣೆಯ ಗಾಳಿಯು ನಮ್ಮ ದೇಶದ ಮೂಲೆ-ಮೂಲೆಗಳಲ್ಲಿಯೂ ಸುಳಿದಿದ್ದರೂ, ಇಲ್ಲಿ ಇದುವರೆಗೂ ಅದರ ಸೋಂಕು ಕೂಡ ಇಲ್ಲವೆ ಇಲ್ಲ; ಪರ್ವತಶ್ರೇಣಿಯಿಂದ ತಡೆಯಾಗಿರಬೇಕು. ಈ ಜನರ ವಿಚಾರಗಳು ಹೀನತರದುವಾಗಿ ಇರುವುದಿರಲಿ, ಇವರಲ್ಲಿ ಸ್ವಾಭಿಮಾನದ ಲವಲೇಶವೂ ಇಲ್ಲ. ಮೂಲತಃ ಇವರು ಅಲಸಿಗರು; ತಿನ್ನಲು ಕೂಳಿಲ್ಲದಿರುವಾಗಲೂ 'ಗುರು ಗುರು' ನಿದ್ದೆಹೋಗಲು ಹಿಂಜರಿಯದ ಜನರು. ಈ ಜನರಲ್ಲಿ ಗಂಡುಸರಿಗಿಂತ ಹೆಂಗುಸರೇ ಕಷ್ಟಾಳುಗಳು. ಹೆಂಗುಸರೇ ಮುಂಜಾನೆಯಿಂದ ಸಂಜೆಯವರೆಗೆ ಹಳುವಿನಲ್ಲಿ ಕಟ್ಟಿಗೆಹೊರೆ ಮಾಡಿ, ಮಾರಿಬಂದ ಒಂದೂವರೆ ಆಣೆಗಳಿಂದ ರಾಗಿಯನ್ನೋ ಮತ್ತೇನನ್ನೋ ತಂದು, ಗಂಡನ ಮತ್ತು ಮಕ್ಕಳ ಹೊಟ್ಟೆಗೆ ಹಾಕಬೇಕು; ಗಂಡುಸು ಬಿದ್ದಲ್ಲಿಯೇ ಬಿದ್ದುಕೊಂಡು ತಂಬಾಕು ಸೇದಬೇಕು.

ತಂಬಾಕು ಎಂದರೆ ಈ ಜನರಿಗೆ ಜೀವ. ಅದಿಲ್ಲದೆ ಅರ್ಧ-ಪುಂಟೆಯನ್ನೂ ಕಳೆಯಲಾರರು. ಅದಕ್ಕಾಗಿ ಪ್ರತಿಯೊಬ್ಬನಲ್ಲಿಯೂ ಚಿಲಿಮೆ. ಅಕಸ್ಮಾತ್ತಾಗಿ ಕೆಲಸಕ್ಕೆ ಎಲ್ಲಿಯಾದರೂ ಹೋಗುವುದಾದರೆ, ಕೆಲಸಕ್ಕ ಬೇಕಾಗುವ ಮುಖ್ಯ ಉಪಕರಣವನ್ನೂ ಒಂದುವೇಳೆ ಮರೆಯಬಹುದು; ಆದರೆ ಚಿಲಿಮೆಯನ್ನು ಕಾಲತ್ರಯದಲ್ಲಿಯೂ ಮರೆಯಲಾರರು.

ಉಡಿಗೆ-ತೊಡಿಗೆಯ ವಿಷಯವಾಗಿ ಈ ಜನರ ಜೀವನದಲ್ಲಿ ಯಾವ ಮಹತ್ವವೂ ಇಲ್ಲ. ಎಂತಹ ಶ್ರೀಮಂತನೇ ಇರಲಿ, ದರಿದ್ರನೇ ಇರಲಿ; ಗಂಡುಸಿಗೆ ಬೇಕಾಗುವ ವಸ್ತ್ರಗಳೆಂದರೆ ಒಂದು **ಲಂಡ ಅಂಗಿ**, ಅಂತಹದೇ ಒಂದು **ರುಮಾಲು** ಮತ್ತು ಒಂದು **ಲಂಗೋಟಿ**. ಇವುಗಳಿಂದ ಅವನು ಆರು ತಿಂಗಳುಗಳ ವರೆಗೆ ನಿಶ್ಚಿಂತನಾಗಿಯೂ ಸುರಕ್ಷಿತನಾಗಿಯೂ ಇರಬಲ್ಲನು. ಅದರಂತೆಯೆ ಹೆಂಗುಸರಿಗೆ ಒಂದು **ಕುಪ್ಪುಸ**, ಒಂದೇ ಒಂದು **ಸೀರೆ ಅಥವಾ ಧೋತರ**; ಹೊದೆಯಲು ನಮ್ಮಲ್ಲಿಯ (ಕರ್ನಾಟಕದಲ್ಲಿಯ) ಲಂಬಾಣಿಯರು ಹೊದೆಯುವಂತಹ ಖಾದಿಯ ಕೆಂಪು ವಸ್ತ್ರ. ಇಷ್ಟಾದರೆ ಒಂದು ವರುಷದ ವರೆಗೆ ಮತ್ತೇನೂ ಬೇಕಿಲ್ಲ. ಕುಪ್ಪುಸವು ಈಗಿನ ಎಂದರೆ ೧೯೩೫ನೆಯ ಇಸ್ವಿಯಿಂದ ಈಚೆಗೆ ಜನ್ಮತಾಳಿದ ಹೆಂಗುಸರಿಗೆ ಅವಶ್ಯವೆನಿಸಿ, ಅದನ್ನು ತೊಡಲಾರಂಭಿಸಿದರು. ನಿಜವಾಗಿ ನೋಡಿದರೆ ಯಾವ ಯಾವ ಕಾರಣಗಳ ಮೂಲಕ ಕುಪ್ಪುಸ ತೊಡಬೇಕೆಂಬುದೇ ಈ ಜನರಿಗೆ ತಿಳಿದಿಲ್ಲ. ಯಾಕೆಂದರೆ ತೊಟ್ಟಿದ್ದ ಕುಪ್ಪುಸವು ಅಸ್ತವ್ಯಸ್ತವಾದಲ್ಲಿ— ಹಾಗಿರುವುದೇ ಬಹಳ— ಅವರಿಗೆ ಯಾವ ತರದ ಕಲ್ಪನೆಯೂ ಲಜ್ಜೆಯೂ ಉತ್ಪನ್ನವಾಗುವುದಿಲ್ಲ. ಎಂತಹ ದೊಡ್ಡ ಮನುಷ್ಯನ ಸಮಕ್ಷಮದಲ್ಲಿಯೂ ಕುಪ್ಪುಸವನ್ನು ಬಿಸುಟಿ, ಲಂಗೋಟಿ ಧರಿಸಿ ಮಜ್ಜನಮಾಡುವರು. ಅಪರಿಚಿತರಾದ ಸುಧಾರಿಸಿದ ಜನ ಯಾರಾದರೂ ಬಂದಾಗ, ಎದೆಯ ಭಾಗವನ್ನು ಮುಚ್ಚಿಕೊಳ್ಳದೆ ತಲೆಯನ್ನು ಮಾತ್ರ ಮುಚ್ಚಿಕೊಳ್ಳುವುದು ಇಲ್ಲಿಯ ಹೆಂಗುಸರ ಪದ್ಧತಿಯಾಗಿದೆ. ಗಂಡುಸಾಗಲಿ ಅಥವಾ ಹೆಂಗುಸಾಗಲಿ, ತಿಂಗಳಿಗೊಮ್ಮೆ ಅಥವಾ ಮೂರು ವಾರಕ್ಕೊಮ್ಮೆ ಸ್ನಾನಮಾಡುವರು. ಅಂದೆಯೆ ಒಣಗಿಸಿ ಉಟ್ಟ ಬಟ್ಟೆಗಳನ್ನು, ಮುಂದೆ ಮತ್ತೊಮ್ಮೆ ಸ್ನಾನಮಾಡುವ ದಿವಸದ ವರೆಗೆ ಒಗೆಯುವುದಿಲ್ಲ. ಹೆಂಗುಸರು ಉಟ್ಟದ್ದನ್ನು ಬಿಟ್ಟು, ಅದನ್ನೇ ಹಾಸಿಕೊಂಡು, ರಾತ್ರಿ ನಗ್ನಸ್ಥಿತಿಯಲ್ಲಿಯೆ ನಿದ್ರೆಹೋಗುವರು. ಹೊದೆಯುವುದನ್ನು ಹೊದ್ದುಕೊಳ್ಳುವರು.

ನಿರಕ್ಷರಿಗಳಾದ ಈ ಜನರಿಗೆ ತಮ್ಮ ಸಂಸಾರವೆಂದರೇನು? ಅದರಲ್ಲಿ ಹೆಂಡತಿಗಿರುವ ಸ್ಥಾನವಾವುದು? ಅವಳ ಗೌರವವು ಎಲ್ಲಿದೆ?—ಎಂಬುದು ಇಂತಹ ಸುಧಾರಣೆಯ ಕಾಲದಲ್ಲಿಯೂ ತಿಳಿದಿಲ್ಲ. "ಬಗದಾದದಲ್ಲಿಯ ಪದ್ಧತಿಗಳು (Customs of Bagdad)" ಎಂಬ ಕಟ್ಟುಕಥೆಯಂತೆ ಇಲ್ಲಿಯವರ ನಡೆವಳಿಕೆ ಇದೆ. ಒಮ್ಮೆ ಗಂಡನನ್ನು ಬಿಟ್ಟು ಓಡಿಹೋದ ಹೆಂಡತಿಯು ತಾನಾಗಿಯೇ ತಿರುಗಿಬಂದರೆ, ಅವಳನ್ನು ಪ್ರೇಮಪೂರ್ವಕವಾಗಿ ಮನೆಯಲ್ಲಿಟ್ಟುಕೊಳ್ಳುತ್ತಾರೆ. ಅವಳಿಗೆ 'ಲಕ್ಷ್ಮಿ" ಎಂಬ ಅಭಿಧಾನವಿತ್ತುದರಿಂದ, ಸ್ವೈರವೃತ್ತಿಯವಳಾದ ಆಕೆಯು, ಲಗ್ನದ ಗಂಡನನ್ನು ತಿರಸ್ಕರಿಸಿ ಮತ್ತೊಬ್ಬನೊಡನೆ ಹಲವು ದಿನ ಕಳೆದು ಪುನಃ ಲಗ್ನದ ಗಂಡನಲ್ಲಿಗೆ ಇರಲು ಬಂದರೂ, ಅವಳನ್ನು ಪೂರ್ವದಂತೆಯೇ ಪೂರ್ಣಾನುರಾಗದಿಂದ ಅಂಗೀಕರಿಸಬೇಕು. ಈ ನೈತಿಕ-ನೈಗುಣ್ಯವನ್ನು ಹೋಗಲಾಡಿಸಲು ಈ ವರೆಗೆ ಇಲ್ಲಿ ಯಾರೂ ಪ್ರಯತ್ನಪಟ್ಟಿರಲಿಕ್ಕಿಲ್ಲವೇ? ದೇವರೇ ಬಲ್ಲ!

ಲಗ್ನದ ವೇಳೆಗೆ ವರನು ವಧುವಿಗಾಗಿ ೧೪ ರೂಪಾಯಿಗಳನ್ನು ಭಿಲ್ಲ ಜಾತಿಯವನೂ, ೬೦ ರೂಪಾಯಿಗಳನ್ನು ಕೊಂಕಣಿ ಜಾತಿಯವನೂ ಕೊಡಬೇಕಾಗುವುದು. ಅಷ್ಟೇ ದುಡ್ಡನ್ನು ಸೆರೆ ಮತ್ತು ತಂಬಾಕುಗಳಿಗಾಗಿ ಬರ್ಚುಮಾಡಬೇಕು. ಎಷ್ಟೋ ವರುಷಗಳ ಹಿಂದೆ ಹಾಕಿಕೊಟ್ಟ ಈ ಕಟ್ಟಳೆಯನ್ನು ಮುರಿಯುವುದೆಂದರೆ ಯಾರಿಂದಲೂ ಅಶಕ್ಯ. ಇತರ ಜಾತಿಗಳಂತೆ ಇವರಲ್ಲಿಯೂ ಉಡುಕಿಯ (ಪುನರ್ವಿವಾಹ) ಪದ್ಧತಿ ಇದೆ. 'ಸೋದಜೀಟಿ' ಯಾಗಿ ಲಗ್ನವಾಗುವುದಿದ್ದರೆ, ಬಿಟ್ಟ ಗಂಡನು ಅವಳ ಪುನರ್ವಿವಾಹದ ಖರ್ಚು ಕೊಡಬೇಕು. ಹೆಂಡತಿಯೇ ಲಗ್ನದ ಗಂಡನನ್ನು ಬಿಟ್ಟಿದ್ದರೆ, ಉಡುಕಿಯ ಗಂಡನು ಲಗ್ನದ ಗಂಡನಿಗೆ ಅವನ ಮದುವೆಯ ಖರ್ಚು ತುಂಬಿಕೊಡಬೇಕು. ಇದಾದರೂ ಬುನಾದಿಯ ಕಟ್ಟಳೆಯೆ.

ದಮ್ಮು ನೆಟ್ಟಗೆ
ಆಗಲೇ ಬೇಕು

ಇದು ಅಸಾಧ್ಯವೆಂದು
ಡಾಕ್ಟರರು
ಹೇಳುವುದಿಲ್ಲ

★

ನಿವ.ಗೆ ನಿರಾಶೆಯು ಆದರ ಆದರ ಕಾರಣ ತಪ್ಪು ಔಷಧ ತೆಗೆದುಕೊಂಡದ್ದು ಇರಬಹುದು. ದಮ್ಮು ನೆಟ್ಟಗಾಗಬೇಕೆಂಬ ಹಂಬಲದಿಂದ ಕ್ಷಣಿಕವಾಗಿ ಗುಣವಾಗುವ ಔಷಧ ಉಪಯೋಗಿಸಿ ಅನೇಕರಿಗೆ ದುಃಖವಾಗಿದೆ.

ಪುರೋಹಿತ ಶ್ವಾಸಹಾರಿಯು ಮಾತ್ರ ದಮ್ಮಿಗೆ ಉತ್ಕೃಷ್ಟ ಉಪಾಯವಾಗಿದೆ. ಅದು ದಮ್ಮನ್ನು ಕ್ಷಣಿಕವಾಗಿ ನಿಲ್ಲಿಸದೆ, ಬೇರು ಸಹಿತ ಕಿತ್ತೊಗೆದು ಗುಣಮಾಡುತ್ತದೆ. ಅದನ್ನು ತೆಗೆದುಕೊಳ್ಳಹತ್ತಿದ ಕೂಡಲೇ ಕೆಮ್ಮು ನಿಲ್ಲುವುದು, ತೇಕು ಕಡಿಮೆಯಾಗುವುದು, ಶೌಚದ ತೊಂದರೆ ಉಳಿಯುವುದಿಲ್ಲ, ಪಚನಕ್ರಿಯೆಯು ನೆಟ್ಟಗಾಗುವುದು. ಸಾವಕಾಶವಾಗಿ ಶಕ್ತಿಯು ತುಂಬಿ ಬಂದು ಪುಪ್ಪುಸವು ಗಟ್ಟಿಮುಟ್ಟಾಗಿ, ದಮ್ಮು ಹೆಸರುಳಿಯದೆ ನೆಟ್ಟಗಾಗುವುದು.

ರೂ. ೨-೨-೦, ರೂ. ೩-೧೨-೦, ರೂ. ೬-೮-೦ ಈ ಕ್ರಯಕ್ಕೆ ಸಣ್ಣ ದೊಡ್ಡ ಶಾಟಲಿಗಳಲ್ಲಿ ಎಲ್ಲಾ ಕಡೆಗೆ ಸಿಗುವುದು. ತರಿಸಿ ಕೊಳ್ಳುವ ವಿಳಾಸ :

ಡಾ|| ಪುರೋಹಿತ ಫಾರ್ಮಸಿ, ಕೊಲ್ಲಾಪುರ



ಶಿಶುಗಳ ಸಂಗೋಪನದ ವಿಷಯದಲ್ಲಿ ತೋರಿಸುವ ಇವರ ಅಲಕ್ಷ್ಯಭಾವವು ಕ್ರೌರ್ಯವನ್ನು ನಿದರ್ಶಿಸುತ್ತದೆ. ಕಾಯಿಲೆಯಾಗಿ ಮಲಗಿದ ಶಿಶುಗಳಿಗೆ ಶುಶ್ರೂಷೆಯನ್ನು ಮಾಡುವುದನ್ನು ಬದಿಗೆ ಸರಿಸಿ, ಬರಿಯೆ ದೇವರಿಗೆ ಶರಣುಹೋಗುವರು. ಔಷಧ ಕೊಡಬಯಸಿದವರಿಂದ— ಪುಕ್ಕಟೆಯಾಗಿ ಕೂಡ—ಔಷಧವನ್ನು ತಾರರು. ಗಂಡೇ ಇರಲಿ, ಹೆಣ್ಣೇ ಇರಲಿ; ಮಕ್ಕಳ ಮೈಯಲ್ಲಿ ಬಟ್ಟೆತೊಡಿಸಂವರನ್ನು ಕಾಣುವುದು ಅಪರೂಪ. ಹುಟ್ಟಿದಂದಿನಿಂದ ಐದು ವರುಷಗಳ ವರೆಗೆ ಹೆಣ್ಣು-ಗಂಡುಗಳ ಭೇದವಿಲ್ಲದೆ ತಲೆಗೂದಲನ್ನು ತೆಗೆಯುವರು. ಮುಂದೆ ಗಂಡುಸರು ಕೂಡ ಹಲವರು ಕೂದಲನ್ನು ಕಾಯುವರು.

ಇವರು ವಿಗ್ರಹಗಳ ಪೂಜೆಮಾಡದೆ ಐದು ವರುಷಕ್ಕೊಮ್ಮೆ ಗುಡ್ಡಗಳ ಮೇಲಿನ ದೊಂದು ದೊಡ್ಡ ಬಂಡೆಯನ್ನು ಪೂಜಿಸುವರು. ಹತ್ತುದಿನಗಳ ವರೆಗೆ ಉಪೋಷಣ ಮಾಡಿ, ಹಳ್ಳಿಗಳಲ್ಲಿ ಮನೆ-ಮನೆಗೂ ಭಿಕ್ಷೆ ಬೇಡುವರು. ಬಂದ ವಸ್ತುಗಳಿಂದ ತಮ್ಮ ಜಾತಿಯ ಜನರಿಗೆ ಪ್ರಯೋಜನ (ಊಟ) ಮಾಡಿಸುವರು. ಮುಖ್ಯವಾಗಿ ಇವರ ಆಹಾರವೆಂದರೆ ರಾಗಿಯರೊಟ್ಟಿ, ಪೆಂಣಸಿನ ಕಾಯಿ.

ಮಳೆಗಾಲದಲ್ಲಿ ಈ ಭಾಗವು ಆಂದಮಾನ ದ್ವೀಪವಿದ್ದಂತಿರುವುದು. ಯಾಕೆಂದರೆ ಗುಡ್ಡಗಳ ಮೇಲೆ ಭಯಾನಕವಾದ ಅರಣ್ಯವೂ, ಕೊಳ್ಳಗಳಲ್ಲಿ ಆಳವಾದ ಹೊಳೆ-ಹಳ್ಳಗಳೂ ಇರುವುದರಿಂದ, ಪ್ರವಾಸಕ್ಕೆ ಬಹಳ ತೊಂದರೆಯಾಗುತ್ತದೆ. ಈ ವೇಳೆಯಲ್ಲಿ ಪ್ರವಾಸಮಾಡುವುದೆಂದರೆ ಭಗೀರಥನು ಕೈಲಾಸದಿಂದ ಗಂಗೆಯನ್ನು ತಂದಂತೆ. ಇಲ್ಲಿ ಯಾವ ಕಾರಣದಿಂದಲೊ ತಿಳಿಯದಾಗಿದೆ, ಸರಕಾರವು ರಸ್ತೆಗಳನ್ನೇ ಮಾಡಿಸಿಲ್ಲ. ಎಲ್ಲಿಯಾದರೂ ಬಂಡಿಯ ದಾರಿಗಳಿದ್ದರೆ ಅವು ಮಳೆಗಾಲದಲ್ಲಿ ನಿರುಪಯೋಗಿಗಳಾಗುವುವು. ಯಾಕೆಂದರೆ ಒಮ್ಮೆ ತೊಯ್ದ ಕರಿಯಮಣ್ಣಿನ ಕೆಸರಿನಲ್ಲಿ ಬರಿಯೆ ಗಾಡಿಯನ್ನು ಎಳೆಯಲಿಕ್ಕೂ ೬-೮ ಎತ್ತುಗಳನ್ನು ಹೂಡಬೇಕಾಗುವುದು. ಡಾಂಗ್ ಸ್ಪೇಟಿನಲ್ಲಿ ಇದೀಗ ಜಂಗಲ್ ಖಾತೆಯವರು (Forest Depart.), ಅಲ್ಲಲ್ಲಿ ಕಚ್ಚಾರಸ್ತೆಗಳನ್ನು ತಯಾರಿಸುವುದರಲ್ಲಿದ್ದಾರೆ.

ಇಲ್ಲಿ ಶಾಲೆಗಳಿದ್ದ ಊರುಗಳನ್ನು ಬೆರಳಿನ ಮೇಲೆ ಎಣಿಸಬಹುದು. ಕಾಂಗ್ರೆಸ್ಸು ಅಧಿಕಾರ ಪಡೆದ ಮೇಲೆ ಅಲ್ಲಲ್ಲಿ ಶಾಲೆಗಳು ಸ್ಥಾಪಿತವಾಗಿವೆ.

ಒಟ್ಟಿನ ಮೇಲೆ ಈ ಭಾಗವು, ಹಿಂದುಸ್ತಾನದ ಇನ್ನಿತರ ಭಾಗಗಳಂತೆ ಸುಧಾರಿಸಲು ೫೦ ಅಥವಾ ೧೦೦ ವರುಷಗಳು ಸಹಜವಾಗಿ ಬೇಕು. ಸದ್ಯದ ಇಲ್ಲಿಯ ಸ್ಥಿತಿ-ಗತಿಗಳನ್ನು ನೋಡಿದ ಯಾವನಿಗೂ, ಸಾವಿರಾರು ವರುಷಗಳ ಹಿಂದೆ ಇದ್ದ ಕಾಡು ಜನರ ನೆನಪು ಬಾರದೆ ಇರದು.

'ಛಾದ್ದುಕಾನ'

(ಬಿಸಿಯದೊಂದು ಬರೆಹ)*

ಶ್ರೀರಂಗ

(೫-೧-೧೯೪೧)

★

— ಪಾತ್ರವರ್ಗ —

(ಪ್ರವೇಶದ ಕ್ರಮದಲ್ಲಿ)

ಹಿರಿಯಾಳು ಸಿರಿಯಾಳು ಹುರಿಯಾಳು ಗೆರಿಯಾಳು

★

[ಒಂದು ಊರ ಸಮೀಪದ ಬೀದಿಯ ಬದಿಯಲ್ಲಿರುವ 'ಛಾಕಾ ಪೀ ಪಳಾರದ ವಿಲಾಸ' — ಹೀಗೆ ಬರೆದ ಹಲಗೆ ಚಪ್ಪರದ ಮುಂಬದಿಗೆ ತೂಗು-ಬಿದ್ದಿದೆ. ರಂಗಭೂಮಿಯ ನೇಲೆ ಕಾಣುವುದು 'ದುಕಾನ'ದ ಮುಂಬಾದಿ. ಇಳಜಾರಾದ ಚಪ್ಪರ. ಎದುರಿನ ಗೋಡೆಗೆ (ಪ್ರೇಕ್ಷಕರ) ಎಡಬದಿಗೆ ಬಾಗಿಲು. ಆ ಬಾಗಿಲಿನಿಂದ ಗೋಡೆಗುಂಟ ಒಂದು ಬಾಕು ಇದೆ. ಅದರ ಮುಂದೆ ಎರಡು ಹೊಲಸಾದ, ಮುರುಕಾದ ಸಣ್ಣ ನೇಜು (tea-poy) ಗಳಿವೆ. ಇವುಗಳ ಮತ್ತು ಬೀದಿಯ ನಡುವೆ-ಇದರೂ ಚಪ್ಪರದ ಕೆಳಗೆ—ಒಂದು ದೇವದಾರು ಪೆಟ್ಟಿಗೆ ಇದೆ. ತೆರೆ ನೇಲಕ್ಕೆದ್ದಾಗ ಒಬ್ಬ ಮುದುಕ ('ಹಿರಿಯಾಳು') ಹಳ್ಳಿಗನು ಬಾಕಿನ ನೇಲೆ ಕುಳಿತಿದ್ದು, ಇದೇ ಚಹಾಪಾನವನ್ನು ಮುಗಿಸಿ ಮಿಸೆ ತಿದ್ದುತ್ತಲಿದ್ದಾನೆ; ಮತ್ತು, ಆ ಪೆಟ್ಟಿಗೆಯ ನೇಲೆ ನಿಂತು ಚಪ್ಪರಕ್ಕೆ ಇನ್ನೊಂದು ಹಲಗೆಯನ್ನು ತೂಗಹಾಕಲು ಯತ್ನಿಸುವ ವ್ಯಕ್ತಿಯನ್ನೆ ಕುತೂಹಲದಿಂದ ದಿಟ್ಟಿಸುತ್ತಲಿದ್ದಾನೆ. ಒಂದೆರಡು ಸಲ ಕೈಜಾರಿ ಹಲಗೆ ಕೆಳಗೆ ಬೀಳಲು, ವ್ಯಕ್ತಿ ಅದಕ್ಕೆ ಕಟ್ಟಿದ ದಾರವನ್ನು ಬಾಯಲ್ಲಿಟ್ಟು ಇನ್ನೊಂದು ತುದಿಯನ್ನು ಹಲಗೆಗೆ ಗಟ್ಟಿಯಾಗಿ ಕಟ್ಟುತ್ತ, ಆದು ಬಿದುದಕ್ಕೆ ಸಿಟ್ಟಿನಿಂದ ಗೊಣಗುತ್ತಲಿರುವನು. ವ್ಯಕ್ತಿಯ ಈ ವರ್ತನದಿಂದ ನಗೆ ತಡೆಯದಂತಾಗಿ-]

ಹಿರಿಯಾಳು:— ಏನೈತಿ ಆದು, ಸಿರಿಯಾಳಪಾ?

ಸಿರಿಯಾಳು:— (ಸಿಟ್ಟಿನಿಂದ ಹಲ್ಲುಕಚ್ಚುತ್ತ) ಏನೈತಿ? ನೋಡ್ಸಾರ್ದಿ, ಹ್ಯಾಂಗ ಹೊಡೆದ್ರೂ ಕಾಲ್ಬೀಳೋ ತಕ್ಕ ಹೆಣ್ಣಿನ್ಹಾಂಗ ಜಾರತೈತಿ!

ಹಿರಿಯಾಳು:— ಯಾತರದರೆ ಜಾಯಿರಾತೇನು?

ಸಿರಿಯಾಳು:— (ಮೇಲಿನಂತೆಯೆ) ಜಾಯಿರಾತ ಬಡೀಲಾಕನ್ನ ದುಕಾನೇನು ಗುಡಿ-ದರಮನ್ಸಾಲಿ ಅಂತ ತಿಳಿದಿಯೇನು? (ಎಂದು ಕಸುವಿನಿಂದ ದಾರ ಎಳೆಯಲು, ಹಲ್ಲಿನೊಳಗೆ ಹಿಡಿದದ್ದು ಕತ್ತರಿಸಿ, ಹಲಗೆಯೆ ಕೆಳಗೆ ಬೀಳಲು ಸಿಟ್ಟು ತಡೆಯದೆ) ಥೂ! ಇದರ! ಹೆಣ್ಣಂತುಟಲೆ ಎದ್ದು ಕೆಟ್ಟ ಬೇಗಳಾ ಬಾಯಿಗೆ ತರ್ಬಾರ್ದು ಅಂದ್ರ—

ಹಿರಿಯಾಳು:— (ಎದ್ದು, ಮುಂದೆ ಬಂದು, ನಗೆಯಿಂದ, ಹಿರಿತನದಿಂದ) ಬೇಗಳ ತನಕಾ ಪರಸಂಗ ಬಂತೂ ಅಂದ್ರ, ಅದು ಏತ್ಯಾದರೂ ಏನು? (ಎಂದು ಹಲಗೆಯನ್ನು ಎತ್ತಿಹಿಡಿದು, ಓದಿಕೊಂಡು, ವಿಸ್ಮಯದಿಂದ) ಎಲೆ! ಇದೇನ್ ಮಜೇದರಸೇ ಮಾತು ಬರದೈತ್ಯೊ! (ಓದುತ್ತ) 'ಇಲ್ಲಿ ಎಲ್ಲಾ ತರದ ಜಾತಿ ಮಾರಲೀಕ ಸಿಗ್ತಾಳೆ'! (ಪ್ರೇಕ್ಷಕರಿಗೂ ಕಾಣಿಸುವಂತೆ ಬಲ್ಲಿದಿದೆ ಆ ಹಲಗೆಯ ಮೇಲೆ)

ಸಿರಿಯಾಳು:— (ಅದನ್ನು ತೆಗೆದು ಕೊಂಡು ಮತ್ತೆ ದಾರ ಕಟ್ಟುತ್ತ) ಪರಪಂಚೇ ಮಜೇದರಸೇ ಆಗೇತಿ—

ಹಿರಿಯಾಳು:— ಪರಪಂಚ ಬಿಡೊ, ಸಿರಿಯಾಳಪಾ. ಮಾತಿನ ಮಜೇವು ಹೇಳ್ತೀನಿ. 'ಜಾತಿ ಸಿಗ್ತಾಳೆ' ಅಂತ ಎಲ್ಲೀ ಮಾತಪಾ?

ಸಿರಿಯಾಳು:— (ದಾರಕಟ್ಟಿ ಮುಕ್ತ ಹಲಗೆಯನ್ನು ಚಪ್ಪರಕ್ಕೆ ತೂಗಬಿಡಲು ಯತ್ನಿಸುತ್ತ) ಅರೇ ಮುಂದೀ ಮಾತಾದು!

ಹಿರಿಯಾಳು:— (ಆಶ್ಚರ್ಯದಿಂದ) ಅರೇ ಮುಂದಿ? ನಿನಗೆಂದಿಂದ ಸಮ್ಮಂದಾತು ಅವರ್ದೊಂದಿ?

ಸಿರಿಯಾಳು:— (ಕೊನೆಗೊನ್ಮೆ ಕಟ್ಟಿದ ಆನಂದದಲ್ಲಿ) ಸಮ್ಮಂದ ಏನು? ಎಲ್ಲಾರ ಸಮ್ಮಂದ ಎಲ್ಲಾರಿಗೈತಿ ಈಗಿನ ಧಿನದಾಗ.

ಹಿರಿಯಾಳು:— (ಕೆಲಹೊತ್ತು ಸಿರಿಯಾಳನ್ನು ದಿಟ್ಟಿಸಿ) ಹಂ.. ಇದೇನೋ ಮತ್ತ ನಂ ಸಿರಿಯಾಳಪ್ಪನ ದುಡ್ಡು ಗಳಿಸೋ ಗತ್ತ ಕಾಣ್ತೈತಿ.

ಸಿರಿಯಾಳು:— (ಜೊಗಳಿಕೆಯಿಂದ ಉಬ್ಬಿದುದನ್ನು ತೋರಿಸಬಾರದೆಂದು) ಇರಲಿ ಬಿಡು, ಹಿರಿಯಾಳಪಾ—ನಿನಗ ತಕ್ಕೀಲಾರದ ಮಾತು ಯಾವದೈತಿ? ಆದಕ್ಕೇ ನಿನಗ ಆನಂಬೋಗದ ಹಿರಿಯಾಳು ಅನ್ನೋದು..ಹ ಹ! ನಿಂತಿಯಾಕ? ಕುಂತುಕೋ..ಇನ್ನೊಂದು ಕೋಪು ಛಸೀ ಚಾ ಕೊಡ್ತೀನಿ, ಬಾ..

ಹಿರಿಯಾಳು:— (ನಗೆಯಿಂದ) ನೀನಾಗೇ ಛಾ ಕೊಡ್ತೀನಿ ಅಂದಾಗ, ಮೈತುಂಬ ಕಣ್ಣು ಆಗ್ತಾವ ನೋಡು..'ಇಕ! ಇಲ್ಲಿ ಏನೋ ಬರತೈತಿ ಹೇಜ-ಪರಸಂಗ' ಅಂತ ಹೇಳತೈತಿ ನೋಡು ಒಳಗಿನ ಆತುಮಾ..

ಸಿರಿಯಾಳು:— (ಸಲಿಗೆಯ ದನಿಯಿಂದ) ಬಾ, ಬಾ, ಕುಂತುಗೊ ಬಾ. ಪೇಸಲ ಕೋಪ ಛಾನೂ ಕೊಡ್ತೀನಿ, ಆ ಜಾಯಿರಾತಿನ ಕತೀನೂ ಪೇಳತೀನಿ..

ಹಿರಿಯಾಳು:— (ಕುಳಿತುಕೊಳ್ಳುತ್ತ) 'ಸಿರಿಯಾಳಪ್ಪಾ' ಅಂತ ಹೆಸರಟ್ಟದ್ದು ವಾಜವಿತಾನೇ ಐತಿ ನೋಡು..ನಿನ್ನ ದುಡ್ಡು ಗಳಿಸೋ ಹೊಸ ಬಂಡಿತ್ತೀ ಕತೀನಾದರೂ ಕೇಳೋಣ.. (ಸಿರಿಯಾಳಪ್ಪ ಒಳಗೆ ಹೊರಟುದನ್ನು ನೋಡಿ) ಇಕ! ಛಾ ಕರೇವಂದ್ರೂ ಬಿಸಿ ಇದ್ರು, ಕಾರಾನೂ ಬಂದೀಟು—ಅಲ್ಲ, ಅಂದ್ರ

---

* **ಎಚ್ಚರಿಕೆ:—** ಈ ದೃಶ್ಯದ ಎಲ್ಲ ಒಡೆತನ ಶ್ರೀರಂಗರ ಸ್ವಾಧೀನದಲ್ಲಿದೆ.

ಬಾಯಿಗೂ ರುಚಿ ಬರತೈತಿ, ಛಾದ ರುಚಿನೂ ತಿಳೀತೈತಿ; (ಸಿರಿಯಾಳಪ್ಪ ಮುಗುಳ್ನಗೆಯಿಂದ ತಲೆತೂಗುತ್ತ ಒಳಗೆ ಹೋಗಲು, ತನ್ನಷ್ಟಕ್ಕೆ ಎಂಬಂತೆ) ಛಾ-ಕಾರಾದ ಜೋಡೀ ಅಂದ್ರ ಜಗಳಾಡೋ ಗಂಡ-ಹೆಂಡಿರ ಜೋಡಿ ಇದ್ದಾಂಗ..ಒಗರು ಹೆಚ್ಚಾಛಾಂಗ ಶೆಂ(ಸ)ವಿ ಹೆಚ್ಚು! (ಎಂದು ಬೀದಿಯ ಕಡೆಗೆ ನೋಡುವಷ್ಟರಲ್ಲಿ ಏನನ್ನೋ ಕಂಡವನಂತೆ) ಎಲೆ, ಇವನ! ತಪ್ಪಿಸಬೇಕಂದ್ರ ನಸಕಿನ ಹರೇದಾಗ ಇಲ್ಲೂ ಗಂಟುಬಿತ್ತಲ್ಲ! (ಎಂದು ಏನೂ ಅರಿಯದವನಂತಿ ಕುಳಿತುಕೊಳ್ಳುವನು).

[ಇಷ್ಟರಲ್ಲಿ ಬೀದಿಯ ಬದಿಯಿಂದ ಇನ್ನೊಂದು ವ್ಯಕ್ತಿ ಬರುವುದು; ಬಂದವನೆ ಹಿರಿಯಾಳಪ್ಪನನ್ನು ನೋಡಿ, ಅತ್ಯಂತ ಆನಂದದ ಮುಖಮುದ್ರೆಯನ್ನು ತಾಳುವನು.]

ವ್ಯಕ್ತಿ:— ಎಲೆಲೆ! ಏನಿದು ಹಿರಿಯಾಳಪ್ಪಾ! ಊರ್ತುಂಬಿ ಹುಡುಕಿದರ ನಸಕಿನ ಹರೇದಾಗೇ ಪರಾರಿ ಆಗ್ಬಿಟ್ಟೇಕಽ?

ಹಿರಿಯಾಳು:— (ಸಿಡುಕಿನ ದನಿಯಲ್ಲಿ) ಪರಾರಿ?

ವ್ಯಕ್ತಿ:— (ಹತ್ತಿರ ಬಂದು ಕುಳಿತುಕೊಳ್ಳುತ್ತ) ನಗಚಾಟಕೀ ಮಾತಲ್ಲದು; ಹಿರಿಯಾಳಪಾ..ಅಲ್ಲ-ಈಟೊಂದು ಹರೇದಾಗ ಇಲ್ಲಿ ಬಂದೀದಿ ಅದಕ್ಕ—

ಹಿರಿಯಾಳು:— (ನಡುವೆಯೆ) ಹರೇದಾಗೊ-ಮುಪ್ಪಿನಾಗೊ! ನಾನು ಛಾಕ್ಕ ಬರೋದು ಇಲ್ಲೇ!

ವ್ಯಕ್ತಿ:— (ತವಕದಿಂದ) ಛಾಕ್ಕ? ಛಾ ಹೇಳೋಣಲ್ಲ.. ಸಿರಿಯಾಳಪ್ಪಾ, ಏ—

ಹಿರಿಯಾಳು:— (ನಡುವೆಯೆ) ನಂ ಛಾ ನಾ ಹೇಳೀನಿ—

ವ್ಯಕ್ತಿ:— (ನಗೆಯಿಂದ) ಏನಿದು, ಹಿರಿಯಾಳಪಾ? ನಿಂ ಛಾ ನೀ ಹೇಳೀದಿ ಅಂದ್ರ-ನಂ ಚಾ ಕುಡೀಬಾರ್ದು ಅಂತೀಯೇನು?

ಹಿರಿಯಾಳು:— ಕುಡಿಯೋ ಚಾ ಬಂದೇ-ಬಂದ ಹೇಳಿದ ಮ್ಯಾಗ ನಿಂದೊಂದು ಯಾಕಽ ಅಂದೆ.

ವ್ಯಕ್ತಿ:— ಆ ಹೇಳಿದ್ದೇ ನಂದಂತ ತಿಳೀಯಪಾ, ಹಿರಿಯಾಳಪಾ! ಈ ಟ್ಯಾಕ ಸಂಶೇವು ಅಂತೀನಿ ನನ್ನ ಮ್ಯಾಗ?

ಹಿರಿಯಾಳು:— ಸಂಶೇವಲ್ಲ..ಇಲ್ಲಿ ನೋಡು, ಈ ಒಗಟ ಯಾಕ? ಇವತ್ತ ನಿನ್ನ ಇಲೆಕ್ಷಣೆ ಐತ್ಯೊ ಇಲ್ಲೊ? ನೀ ಆದರಾಗ ಹುರಿಯಾಳು.. ಆದಕ್ಕ ಇವತ್ತ ನಿಂ ಛಾನೂ ಬ್ಯಾಡ, ನಿನ್ನ—

ಹುರಿಯಾಳು:— (ಗಟ್ಟಿಯಾಗಿ ನಕ್ಕು) ಎಲೆ ನಿನ್ನ!..ನಿನಗ ಛಾ ಕುಡಿಸಿ ಕತ್ತರಿ ಹಾಕಿಸ್ತೀನಿ ಅಂತ ತಿಳದೀಯಾ?

ಹಿರಿಯಾಳು:— ನಾಯೇಸೂ ತಿಳಿದಿಲ್ಲಾ, ಇಂಥಾ ಗದ್ಲದಾಗ ತಿಳಕೋದೂ ಇಲ್ಲಾ..

[ಸಿರಿಯಾಳು ಒಂದು ಚಹವನ್ನು ತರುವನು. ಹುರಿಯಾಳನ್ನು ನೋಡಿ-]

ಸಿರಿಯಾಳು:— (ಆಶ್ಚರ್ಯದಿಂದ) ಎಲೆ! .. ಹಂ .. ಅಂದ್ರ..ಎದ್ದಿರಾ-ಅಂತ

ಹುರಿಯಾಳು:— 'ಎದ್ದಿರಾ' ಏನು, ಹುಡುಗೊಟ್ಟೇ! ತಿರುಗಿ ಗುದ್ದಾಟ ನಡೆದೇತಿ ಹಿರಿಯಾಳಪ್ಪನ ಜೋಡಿ!

ಹಿರಿಯಾಳು:— (ಸಿರಿಯಾಳ ತನ್ನನ್ನು ಆಶ್ಚರ್ಯದಿಂದ ನೋಡಲು) ಗುದ್ದಾಟ ಎಲ್ಲೀದು? ಈ ಇಲೆಕ್ಷಣೀ ಮುಂದಿ ನಮಗ ಛಾ ಕುಡಿಸೋದು ಬ್ಯಾಡಾ ಅಂತ ನಮ್ಮ ವಾದಿಸ್ಯಾಟ.

ಸಿರಿಯಾಳು:— (ಚಹವನ್ನು ಹಿರಿಯಾಳನ ಮುಂದಿಡುತ್ತ) ವಾಜವಿಾ ಹಿರಿಯಾಳಪ್ಪನ ಸೂತಕು..

ಹುರಿಯಾಳು:— (ಸಿಡುಕಿನಿಂದ) ಎಲೇ ನಿನ ವಾಜವಿಾ! ನಮ್ಮನ್ನೇನು ಪಿರಂಗೀ ರೋಗಾ ಮಾಡ್ಸಿಟ್ಟೆಲ್ಲ! ಇಲೆಕ್ಷಣೇ ಅಂದ್ರೇನು ನನ್ನ ಮಾವನ ಮನೀ ಮಾಲು ಏತೇ? ಏನ ಮುಚ್ಚಿಟ್ಟ ಗಂಟ ಏತೇ? ಊರಿನೋರು ಯಾರೂ ಒಲ್ಲಂದ್ರು..ಊರಿನ ಆಬ್ಯೂ ಹೋಗೋ ಪರಸಂಗ ಬಂತು, ನಮ್ಮೂರಿಗೂ ಒಂದು ಗಂಡಸ್ಯೆತೀ ಅಂತ ತೋರಿಸಲಾಕ ನಾ ಹುರಿಯಾಳಾದ್ರ—

ಹಿರಿಯಾಳು:— ನಿನಗ ಯಾರೇನಂದ್ರು ಈಗ? ನಮಗ ಅದರ ನಮ್ಮಂದ ಬ್ಯಾಡಾ ಅಂತ—

ಹುರಿಯಾಳು:— (ಸಿರಿಯಾಳು ತಲೆ ತೂಗುವುದನ್ನು ಕಂಡು ಸಿಟ್ಟಿನಿಂದ) ಹೋಗೆಲೆ! ತಲೀ ಏನ ತೂಗ್ತೀ ಕೋಲಿಗೆ ಡಬ್ಬ ಹಾಕಿದ ಮಡಿಕೀ ಹಾಂಗ? ಪುರಿ-ಪಲ್ಲೆ ಇದ್ರ ತಾ ಇಲ್ಲಿ.. (ಅವನು ಹೊರಡಲು) ಇಕಾ! ಇದ್ದಟ ಬಳಕೊಂಡು ಬಾ.. ಜೆಂಜೀಮಟ ಕೈ ಬಾಯಿಗೆ ಬರತಕಬೊ ಇಲ್ಲೊ? .. (ಅವನು ಹೋಗಲು, ತನ್ನಷ್ಟಕ್ಕೆ ಎಂಬಂತೆ) ಇನ್ನ ನಮ್ಮಂದೀನೇ ನಮಗ ಕತ್ತರೀನೇ ಹಾಕಿದರ, ಕೈ ಬಾಯಿಗೆ ಬರೋದು ಬಿಟ್ಟದ್ದಲ್ಲ..

ಹಿರಿಯಾಳು:— (ಚಹ ಕುಡಿಯುತ್ತ, ಸಿಟ್ಟು ತಡೆಯುತ್ತ) ಯಾರ ಮ್ಯಾಗಪಾ ನಿನ್ನ ಮುಣಿಸು?

ಹುರಿಯಾಳು:—(ಸಿಟ್ಟು ತಡೆಯಲಶಕ್ಯವಾಗಿ) ಯಾರ ಮ್ಯಾಗ ಯಾರ ಮ್ಯಾಗ—ಯೂ-ಯಾ-ಯಾರ ಮ್ಯಾಗ ಅಂದ್ರ (ಕ್ರಮೇಣ ಸಿಟ್ಟು ಹೆಚ್ಚುತ್ತ) ಯಾರ ಮ್ಯಾಗ ಅಂದ್ರ ಹವಾದ ಮ್ಯಾಗೇ ಅನ್ನು; —ಯಾಕಂದ್ರ ಹವಾನೇ ಕೆಟ್ಟೇತಿ ನಮ್ಮೂರಾಗ. (ಹಿರಿಯಾಳು ತನ್ನನ್ನು ಕೆಣಕುವ ದೃಷ್ಟಿಯಿಂದ ನೋಡಲು) ಹೊಸದಾಗಿ ಮನೀಗೆ ಬಂದ ಸೊಸೀ ಹಾಂಗ ಕಣ್ಬಿಟ್ಟು ನೋಡಬ್ಯಾಡ ನನ್ನ! ಹುರಿ-ಮನಸ್ಯಾ ನೀನು! ಗೊತ್ತೈತಿ ನಿನಗ, ಕೆಣಕತೀ ನನ್ನ, ಹೇಳೇ ಬಿಡ್ತೀನಿ; ಹವಾನೇ ಕೆಟ್ಟೈತಿ—ಅಂದೆ..ಥೂ! ಇದರ ಇಲೆಕ್ಷಣಿ! ಯಾರಿಗೆ ಬೇಕಾಗೇತಿ ಅಂತೀನಿ! ಮಟಾಮಡಲ ಆ ಕುಲಕರ್ಣಿ ಹೇಳ್ತಾನ—'ನಂ ಜನಾ ಎಲ್ಲಾ ನಿನಗs' ಅಂತ..ಗೌಡನೂ ಹೇಳಿದ, ಏನೋರೂ ಕೇಳಿದ್ರು—ಆಗಲೆಪಾ ಅಂದೆ..ನಿನ್ನೆ ಛೆಂಜೀಸುಟ ರಂಗನೇ ಬದಲಾಗೇತಿ!....ಗೌಡಗ ಮುಳ್ಳನಟ್ಟೇಕಂತ, ಕುಲಕರ್ಣಿನ್ನ ಕುದುರಿ ಕೆಡಿಸಿತಂತ—ಬದಕ್ಕ ನಾ ಕತ್ತೆ ಆಗ್ಬೇಕಽ' (ಗದ್ದರಿಸುತ್ತ) ನಿನಗ ಕೇಳ್ತೀನಿ, ಹಿರಿಯಾಳಪಾ, ನಾ ಯಾಕ ಕತ್ತೆ ಆಗ್ಬೇಕು ಇವರ ದಶಿಂದs- ಅಂತ.. (ಸಣ್ಣ ಮೇಜನ್ನು ಬಲವಾಗಿ ಬಡಿಯುತ್ತಿರಲು ಚಹದ ಕಪ್ಪು ಕುಣಿಯುವುದು) ಎಂದಿಗೂ ಆ-ಗಾ-ಕಿ-ಲ್ಲಾ ಅಂತೀನಿ— (ಎಂದು ಬಲವಾಗಿ ಬಡಿದು ಎದ್ದು ನಿಲ್ಲುವಷ್ಟರಲ್ಲಿ, ಕಪ್ಪು ಕೆಳಗೆ ಬಿದ್ದು ಒಡೆಯುವುದು).

ಹಿರಿಯಾಳು:— (ಒಮ್ಮೆಲೆ) ಏ-ಧೂ— (ಎಂದು ಸಾವರಿಸ ಬೇಕನ್ನುವಷ್ಟರಲ್ಲಿ).

ಹುರಿಯಾಳು:— (ಅವನನ್ನು ತಡೆದು) ಇರಲಿ ಬಿಡಪ್ಪಾ! ಒಂದು ಕೋಪ ಒಡದರ ಒಡಕೊಳೊಲ್ಲದ್ಯಾಕ! ಛೆಂಜಿ ಅಂಬೋದರಾಗ ತೆಲೀಗೆ ತೆಲಿ ಎಟೊಂದು ಒಡೀತಾವೊ, ಕೊಪ್ಪಿನ ಕಿಮ್ಮತ್ತಿಲ್ಲ!

ಹಿರಿಯಾಳು:— ಅದಕೇ ನಾ ಹೇಳಿದ್ನಿಪಾ—ಈ ಇಲೆಕ್ಸಣೇ ಕಲಿತೋರ ಕೆಲಸಾ ಅಂತ—

ಹುರಿಯಾಳು:— (ಕನಲಿ) ಕಲಿತೋರ ಕೆಲಸ ಅಂದ್ರು? ಕತ್ತರಿ ಹಾಕಿದ್ರು ನಡೀತೈತೀ ಅಂತ ಕಾಯಿದೆ ಯಾಕ ಮಾಡಿದ್ರು?

[ಸಿರಿಯಾಳು ಪುರಿ-ಪಲ್ಲೆ ತುಂಬಿಕೊಂಡು ತಂದು ಇಡುವಾಗ, ಒಡೆದ ಕಪ್ಪನ್ನು ನೋಡಿ 'ಎಲೆ' ಎನ್ನಲು] ಅಟೊಂದು ಕಣ್ಣು ಕಿಸಿದು ನೋಡಲಾಕ ಕೋಪೇ ಜಿಗಿದು ಕುಂತಽದ ಅಂತ ತಿಳಿದಿ ಏನು?.. ತಾ ಇಲ್ಲಿ.. ಆ ಕೋಪ ಕೆಳಗ ಬಿದ್ದು ಒಡೆಪೇತಿ..ಜೂರ ತಗದು ಒಗೀ ಮದ್ಲ—

ಸಿರಿಯಾಳು:— (ಹಳಹಳಿಯ ದನಿಯಲ್ಲಿ) ಒಂದು ಕೋಪಿಗೆ ಎಂಟಾಣೆ—

ಹುರಿಯಾಳು:— (ಬಾಯಿ ತುಂಬಿಕೊಂಡು) ಏನಂದಿ?

ಸಿರಿಯಾಳು:— ಎಂಟಾಣೆ ಕೊಟ್ರೂ ಸಿಗಲಾಕಿಲ್ಲ—

ಹುರಿಯಾಳು:— ನಿನಗ ಎಂಟಾಣೆ ಕೊಡೋ ಕುಬೇರ ಆದಾನೆಲ್ಲಿ?..ಒಂದು ತವನಿನ ಪಟ್ಟೀ ಬಡದರಾಯಿತು, ಕುಂತಬಿಡತೀತಿ! ..ನಿನ್ನ ದುಕಾನಕ್ಕ ಕಲೇಕಟ್ಟರು ಬರೋದೂ ಅಟರಾಗೇ ಐತಿ! ..ನೂರ್ನೂರು ರುಪಾಯಿ ಇಲೆಕ್ಸಣೇ ನಡಿಸೀನಿ, ನಿಂದೊಂದು ಕೋಪಿನ ಕಿಮ್ಮತ್ತೀನೊ!..ಎಲೆ ನಿನ!..ಬಚ್ಚಲಾ ಬಳಿಯೋ ಕಸ ಬರಿಗೀ ಹಾಂಗ ನಿಂತಿಯಾಕ? ಬಳಿದು ಒಗೀಬಾರದಽ ಆ ಕೋಪಿನ ಚೂರು? (ತಿನ್ನತೊಡಗುವನು).

ಸಿರಿಯಾಳು:— ಎಂಥಾ ಇಲೆಕ್ಸಣೆಯೊ! (ಎನ್ನುತ್ತ ಕಪ್ಪಿನ ಚೂರುಗಳನ್ನು ಸಾವರಿಸತೊಡಗುವನು).

ಹುರಿಯಾಳು:—(ತುತ್ತನ್ನು ನುಂಗಿ) ನನ್ನ ಇಲೆಕ್ಸಣೇ—ನಿನ್ನ ಪುರಿ—ಎರಡೂ ಅಂಥಾವೇ ನೋಡೊ! ಹರೀಲಾಕಿಲ್ಲ ಹದ ಮಾಡಬೇಕಂದರ! ಧೂ!..ದುಕಾನದವರು ಅಂದ್ರು ಹುಟ್ಟಾ ಕತ್ತರೀ ಹಾಕೋ ಜಾತಿ!

ಹಿರಿಯಾಳು:— (ಕೊನೆಗೆ ನಗೆ ತಡೆಯುವೆ) ನಿಂ ತೆಲೀ ತಾಳೀದ ಮ್ಯಾಗೇ ಇಲ್ಲ ನೋಡು!..ನಿನ್ನಿನ ಪುರೀ ಅದಾವು—

ಸಿರಿಯಾಳು:— (ಒಮ್ಮೆಲೆ ಸೆಟೆದು ನಿಂತು) ಇದೇ ಈಗ—

ಹಿರಿಯಾಳು:— (ನಗೆಯಿಂದ) ಆ ಜಾಯಿರಾತಿನಾಗ ಬರೆದೀಯಲ್ಲ—ಎಲ್ಲಾ ಜಾತಿ ಅಂತ—ಇದೂ ಒಂದು ಜಾತಿ! ಹ ಹ!

ಹುರಿಯಾಳು:— (ಒಮ್ಮೆಲೆ) ಜಾಯಿರಾತ ಯಾವ್ದು?

ಸಿರಿಯಾಳು:— (ನಾಚಿದವನಂತೆ) ಜಾಯಿರಾತ ಅನ್ನಲಾಕ ಮತ್ತೇನ ಸಿಣಿವಾ ಆಲ್ರಿ, ಸರ್ಕಸ್ ಆಲ್ರಿ..ಈವತ್ತ ನಿವ್ ಇಲೆಕ್ಸಣೆ; ಅದಕ ಯಾಪಾರ ಬೆಳದೀತೇನೋ ಅಂತ ನಂದೇ ಒಂದ ಯಿಚಾರಾ ಬರಿಸಿ ಹಚ್ಚೀನಿರಿ—

ಹಿರಿಯಾಳು:— (ಹುರಿಯಾಳು ಕುತೂಹಲದಿಂದ ಹಲಗೆಯನ್ನು ನೋಡುತ್ತಿರಲು) ನಾ ಹೇಳಿದ್ನೆಪಾ ದುಡ್ಡು ಗಳಿಸೋ ಗತ್ತಿದು ನಂ ಸಿರಿಯಾಳಂದಂತ! ನಿನ್ನ ಯಾಪಾರಕ್ಕ ನಾ ಯಾಕ ಇಲ್ಲಿ ಕುಂತು ಅಡ್ಡಬರಲಿ- (ಎನ್ನುತ್ತ ಹೊರಡಲು ಸಿದ್ಧನಾಗುವನು).

ಹುರಿಯಾಳು:— (ಅದನ್ನು ನೋಡಿ ಲಗಬಗೆಯಿಂದ) ಎಲ! ಹಿರಿಯಾಳಪಾ! ನೀ ಯಾಕ ಹೊಂಟಿ?

ಹಿರಿಯಾಳು:— ನಿಂ ಇಲೆಕ್ಸಣೇ ಗೊಂದಲ ಬ್ಯಾಡ ನಮಗ-ಅಂತ ಹೇಳಲಿಲ್ಲ? ನಡೀಲಿ ಆ ಕುಸ್ತಿ.. ಛೆಂಜೀಮಟ ಪರಪೂರಿ ಗೊ೦ಡೀಗಿ ಸಂತೀನಾದರೂ ಮಾಡ್ಕೊಂಡು ಬರಾಣಾ—ಅಂತೀನಿ.

ಸಿರಿಯಾಳು:— (ನಗೆಯಿಂದ) ಭಲೇ ಬೆದರಿಕಿ ಆಪಾ ನಂ ಹಿರಿಯಪ್ಪಂದು..ಇಲೆಕ್ಸಣೇ ಅಂದರ!

ಹುರಿಯಾಳು:— (ಸಿಡುಕಿನಿಂದ) ಬೆದರಲಾಕ ಅದೇನು ದೆವ್ವ ನ್ಹಾಂಗ ಬಡಕೋತೇತಿ?..ಹಿರಿಯಾಳಪಾ, ಒಂತುನಾ ಕುಂಡ್ರು; ..ನಿನ್ನ ಹುಡುಕ್ಯಾಡಿಕೊಂಡು ಬಂದೀನಿ..ಒಂತುನಾಲ ಕುಂಡ್ರು; ಒಂದ್ಮಾತು ಕೇಳೋದೈತಿ..

ಹಿರಿಯಾಳು:— (ತಮಿಗೆ ಕೈಯಿಟ್ಟು ಲಗುಬಗೆಯಿಂದ) ಛೆ-ಛೆ-ಛೆ! ಮಾತ ಬ್ಯಾಡ, ಮುಸಂಟಿ ಬ್ಯಾಡ, ಆ ಗೊಂದಲದ ಉಸಾಬರೀನೇ ಬ್ಯಾಡ.

[ಎಂದು ಹೊರಡುವನು, ಹುರಿಯಾಳು ಅವನನ್ನು ತಡೆಯುವನು.]

ಸಿರಿಯಾಳು:— ಹೋಗಲಿ ಬಿಡಿರಿ; ಮುದಿಮನಸ್ಯಾನ ಯಾಕ ಕಾಡತೀರಿ..? ಏನೋ ಒಂದು ಕತ್ತರಿ—

ಹುರಿಯಾಳು:— (ಸಿಟ್ಟಿನಿಂದ) ಕತ್ತರಿ! ಯಾರು ಕೇಳಿದರೀಗ ಕತ್ತರೀ ಹಾಕಲಾಕ..? ಹಾಂಗ ಕೇಳಿದರ ಆಚೀ ವರಸ ಸತ್ತ ಗಾಣಗೇರ ಗಂಗಪ್ಪನ ಹೆಸರ್ಲೆ ಕತ್ತರಿ ಹಾಕೋ ಕುಳಾ ಅದಾವು—

ಹಿರಿಯಾಳು:— (ನಡುವೆಯೆ) ಶಿವಶಿವ! ಅದಕ್ಕೇ ಹೇಳಿದ್ನಪಾ ನಮಗ ಈ ಗೊಂದಲ ಬ್ಯಾಡಾ ಅಂತ..ನಂ ಯಾಳೇಕ ಇಂಥಾವ್ವೊಂದೂ ಇದ್ದಿದ್ದಿಲ್ಲ—

ಹುರಿಯಾಳು:— (ನಡುವೆಯೆ) ನಿಂ ಯಾಳೇಕ್ಕ ಛಾದ್ದ ದುಕಾನೂ ಇರ್ತಿದ್ದಿಲ್ಲ; ಅಂದ್ರೂ ಬಿಟ್ಟೀ ಇಲ್ಲೊ ನೀ ಛಾದ್ದುಕಾನಕ? (ಹಿರಿಯಾಳು ಚಕಿತನಾಗಿ ತನ್ನನ್ನು ನೋಡಲು) ಅದಕೇ ಒಂತುನಾ ಕುಂತುಕೋ ಅಂತೀನಿ..ಹಿರಿಮನಸ್ಯಾ ಅಂದದ್ದಕ ಒಂದು ಭುದ್ದೀ ಮಾತಾದರೂ ಹೇಳೇ ಇಲ್ಲೊ?.. ಕುಂತುಗೋರಪಾ!..ನೀ ನಡಸೀರಾಗ ಕೈ ಬಿಡಾಂವಲ್ಲಾ ಅಂತ ನನ್ನ ಮನಸಿನ ಖಾತ್ರೀ ಇತ್ತಂತೇ ಹೊಂತುಟಲೆ ನಿನ್ನ ಹುಡುಕತಾ ಹೊಂಟೀನಿ.. (ಹಿರಿಯಾಳು ನಿರುಪಾಯನಾಗಿ ಕುಳಿತುಕೊಳ್ಳುವನು.)

ಸಿರಿಯಾಳು:— (ಉತ್ಸಾಹ ತಡೆಯುತ್ತ) ಬಿಸಿ ಬಿಸಿ ಖಮುಂಗಿನ ಛಾ—ಅಲ್ಲ, ತಾಜಾ ಛಾ ತರ್ಲೇನ್ರಿ? ..ಹಹ! ಅಂದ್ರ, ಒಂದೀಟು ಹುರುಪಾಗತೈತಿ—ಹಹ!

ಹುರಿಯಾಳು:— ನಿಂತಲ್ಲೇ ನಿಂತ್ಕೊಂಡು ಹಲ್ಲು ಯಾಕ ಕಿರೀತೀ ಆದಕ? (ಆಣಕಿಸಿ) 'ಹಹ! ಹಹ!'..ಒಳಗ ಒಲೀ ಮುಂದ ಕುಂತಾದ್ರೂ 'ಹಹ! ಅನ್ನು, ಒಲೀ ಹೊತ್ತಿ ಬಿಸೀ ಆದೀತು ಛಾ!.. ಏನ್ಮಾತಾಡೋದು-ಽ..ಇಂದಿನ ಧಿನಾ ಇಡೀ ಊಗೂರೇ ಝಳಕಾ ಮಾಡೋ ಪಾಂಗ ಛಾ ಮಾಡಿಸ್ದಿದ್ದೆ—ಆದ್ರೇನು?—ನಿಂದೇ ನತೀಜ ಇಲ್ಲ!

ಸಿರಿಯಾಳು:— ಬೇಕಾದಟ ಮುಂದಿಗೆ ಮಾಡ್ತೀನ್ರಿ, ಯಪಾ; ಅದಕ್ಯಾಕ ಚಿಂತಿ?

ಹುರಿಯಾಳು:— ಅದರ ಯಟ ಮುಂದಿಗೆ ಬೇಕಾಗ್ತೇತ್ಯೊ—ಆದೇ ಚಿಂತಿ ಆಗೇದ ನಸಗ! ..ಅದಕ್ಕೇಕಾಗೇತಿ ನಂ ಹಿರಿಯಾಳವ್ವನ ಹಕಮತಿ!

ಹಿರಿಯಾಳು:— ಛಾದ ಮಾತಿನಾಗ ನಂದೇನು ಹಕಮತಿ? (ಸಂಶಯದ ಧನಿಯಲ್ಲಿ)

ಸಿರಿಯಾಳು:— ನನ್ನ ಕೇಳಿದ್ರು ನಾ ಹೇಳ್ತೀನ್ರಿ—

ಹುರಿಯಾಳು:— (ಸಿಟ್ಟಿನಿಂದ) ನಿನಗ ಕೇಳೋದು ಯಾಡ ಕ್ಕೋಪ ಛಾ! ಜಿಗತಾ ಜಿಗೀತ್ಯೋ ಒಳಗ ಗಡಾನೆ—ಏನು—

ಸಿರಿಯಾಳು:— (ಒಳಗೆ ಸರಿಯುತ್ತ)ಎಲೆ ಶಿವನ! ಯಾಡ ಬಿಟ್ಟ ಕೋಟಿ ಕೋಪ ತೊಗೋರಿ ಅಂದ್ರ— (ಗೊಣಗುಟ್ಟುತ್ತ ಒಳಗೆ ಹೋಗುವನು).

ಹುರಿಯಾಳು:— (ಎದ್ದು, ಅವನು ಒಳಗೆ ಹೋದನೆಂದು ನೋಡಿಕೊಂಡು, ಮೆಲುದನಿಯಲ್ಲಿ) ದೊಡ್ಡ ಪಂಚೇತಿಗೆ ಬಿದ್ದೇತಿ ಈ ಇಲೆಕ್ಷನ್ನೇ ಯಾಪಾರ, ಹಿರಿಯಾಳಪಾ!

ಹಿರಿಯಾಳು:—(ಹೆದರಿಕೆಯ ದನಿಯಲ್ಲಿ) ಪಂಚೇತಿ! ಖೂನೀ ಪಾನೀ ಉಸಾಬರಿ ಏಕೇನು ಮತ್ತ?

ಹುರಿಯಾಳು:— (ಉಸುರ್ಗರೆದು) ಅದು ಇದ್ದರ ಹಗರಾ ಗ್ತಿತ್ತು ನಸ್ನ ಕೆಲಸ..ಅದ್ರ ಈಗಿನ ಘಡಾಮುಡೀವಳಗ ಯಾರ ಖೂನೀ ಮಾಡಜೇಕು, ಯಾರದು ಬಿಡಜೇಕು ಅಂತ ಸುತಾಸೋ ಹಾಂಗ ಕೂಡಾ ಇಲ್ಲ!

ಹಿರಿಯಾಳು:— (ನೋಲಿಸಂತೆಯೆ) ಅಂಥಾದೇ ನಪಾ, ಘಡಾಮುಡಿ? (ಚಿಲುಮೆಯನ್ನು ತೆಗೆಯುವನು).

ಹುರಿಯಾಳು:—(ಇನ್ನಿಷ್ಟು ಮೆಲ್ಲಗೆ) ನಂ ನಂ ಪಂಡ್ಯಾಗೇ ಝಗಳ ಬಂದೇತಿ..ಅದು ಒಂದು ಛಾದ್ದಿಂದ!

ಹಿರಿಯಾಳು:— ಮತ್ತ ಇಲೆಕ್ಷನ್ನೇ ಕಟ್ಟಿದ ಮ್ಯಾಗ ಛಾ ಕುಡಿಸ್ಬೇಕು ಬೇಡಿದ್ರು.. (ಚಿಲುಮೆಯನ್ನು ತುಂಬುವನು).

ಹುರಿಯಾಳು:—(ಹುಮ್ಮಸದ ದನಿಯಲ್ಲಿ) ಕುಡಿಸಬೇಕು?.. 'ಒಲ್ಲ' ಅಂದಿದ್ರು ಕೆಂವೀಗೆ ಹಳ್ಳ ಹಚ್ಚು ಅಂದೆ, ಹಿರಿಯಾಳಪಾ!.. ಹಾಂಗ ಕೇಳಿದ್ರು ಊರ ಪಂಚರ ಸಮಕ್ಷಮ ಮಾತ್ಕತೀ ಆಗೇತಿ..

ಹಿರಿಯಾಳು:— (ತಿಳಿಯದೆ) ಅಂದ್ರ್ಯಾಕ ಝಗಳ? (ಕಡ್ಡಿ ಕೊರೆಯುವನು).

ಹುರಿಯಾಳು:— ಯಾರ್ಮಾಡಿದ ಛಾ ಯಾರು ಕುಡೀಬೇಕೂ ಅಂತ..

ಹಿರಿಯಾಳು:— (ತಿಳಿಯದೆ) ಯಾರ್ಮಾಡಿದ ಛಾ—ಅಂದ್ರ? ಇಲೆಕ್ಷನ್ನೇ ಕಟ್ಟಿದ್ದಕ್ಕ ನಿನಗೇ ಛಾ ಮಾಡಂತಾರೇನು? (ಕಡ್ಡಿ ಅರುವುದು)

ಹುರಿಯಾಳು:— (ದೈನ್ಯದ ದನಿಯಲ್ಲಿ) ಅದನೂ ಮಾಡತಿದ್ದೆನೊ, ಹಿರಿಯಾಳಪಾ, 'ಇಲೆಕ್ಷನ್ನೇ ಕಟ್ಟಿ ಹುಡ್ಕಂಗ್ಯಾ ಆದಿ, ಈಗ ಛಾ ಮಾಡು' ಅಂತ ಬಾಯ್ಬಿಚ್ಚಿಟ್ಟು ಹೇಳಿದ್ರ ನಾಚಿಕೀ ಬಿಡ ಲಾಕ ತಯಾರ ಇದ್ನಿ ನಾನೂ..

ಹಿರಿಯಾಳು:— (ತಲೆ ಅಲ್ಲಾಡಿಸುತ್ತ) ನಿನ್ನ ಮಾತಿನ ಸುಕಸ್ಮೇ ತಿಳೀವಲ್ದು ನನ್ಗ. (ಮತ್ತೊಂದು ಕಡ್ಡಿ ಕೊರೆಯುವನು.)

ಹುರಿಯಾಳು:—(ಹತಾಶನಂತೆ) ನೀ ನಡಾಕ ಮಾತಾಡ್ದಿದ್ರ ನಾನೇ ಹೇಳ್ತೀನಲ್ಲ, ಸುಕಸ್ಮ ಏನ್ ಸುಟ್ಟಿತ್ತು!

ಹಿರಿಯಾಳು:— (ಅಪಮಾನಿತನಾಗಿ) ನಡಾಕ ಮಾತಾಡೋ ದಂದ್ರ? ಹೇಳಪಾ ಅಂತ ಕೇಳಬಾರ್ದ? (ಈ ಕಡ್ಡಿಯೂ ಅರಲು ಸಿಟ್ಟಿಗೆ ಬರುವನು.)

ಹುರಿಯಾಳು:—(ಹುಸಿನಗೆಯಿಂದ) ಕೇಳ, ಹಿರಿಯಾಳಪಾ.. ಅಂದ್ರ ಹೀಂಗೈತಿ—ನಂ ಜನಾ ಯಾರ್ಯಾರು ಗೊತ್ತೈತಲಾ ನಿನಗ.. ಈ ಪ್ಯಾಟಿ ಹಿಡಕೊಂಡು ಕುಂಬಾರ ಓಣೀತಕ, ಹಾಂಗೇ ಮುಂದಕ ಹ್ವಾದರ ಪತ್ತಾರ ಕೇರಿ ಸುತಗೊಂಡು ತಿರುಗಿ ಬಂದು ತಳವಾರ ಓಣಿ ಇಡೀಮಟ, ನಡಮದ್ದಿ ಕುಲಕರ್ಣಿ ಅವನ ಹಾರೋರ ಜನ—(ಇಷ್ಟರಲ್ಲಿ ಹಿರಿಯಾಳು ಇನ್ನೊಂದು ಕಡ್ಡಿಯನ್ನು ಕೊರೆದು ಹಿಡಿದಾಗ, ಕೇಳುವ ಭರದಲ್ಲಿ ಅದು ಬೆರಳಿನ ವರೆಗೆ ಸುಡಲು 'ಥೂ!' ಎನ್ನುವನು. ಅದನ್ನು ಕೇಳಿ ಆಶ್ಚರ್ಯಚಕಿತನಾಗಿ) ಎಲ! 'ಹಾರೋರ ಜನ' ಅಂದ್ರ ನೀನೂ ಥೂ ಅಂತೀಯಲ್ಲ?

ಹಿರಿಯಾಳು:— (ಆಶ್ಚರ್ಯದಿಂದ) 'ಹಾರೋರ ಜನಾ'? ಯಾವ ಜನಾ ಅದು, ನಾಯಾಕ ಥೂ ಅನ್ಲಿ? ಕಡ್ಡಿ ಸುಟ್ಟು ಬಳ್ಳಿ (ಬೆರಳಿಗೆ) ಗೆ ತಾಕಿತು—ಕುಸಾ ತಡಿ.. ಈ ಚಿಲಿಮಿಷಿ ಹೊತ್ತಿಸದೆ ನಿನ್ನ ಮಾತಿನಾಗ ಮನಸೇ ಹೋಗಾಕಿಲ್ಲ..(ಎಂದು ಚಿಲುಮೆಯನ್ನು ಹೊತ್ತಿಸುವನು).

ಹುರಿಯಾಳು:—(ದೂರ ನನನ್ನೋ ಕಂಡಂತವನಾಗಿ)ಬಂದ್ನೊ ಏನೋ! ಎಂಥಾ ಸುದ್ದೀ ತರ್ತಾನೊ!

ಹಿರಿಯಾಳು:— (ಒಂದೆರಡು ಸಲ ಹೊಗೆ ಬಿಟ್ಟು, ಸವಾಧಾನದ ದನಿಯಲ್ಲಿ) ಹಂ—ಚಾಲೂ ಆಗಲಿಸ್ನ ನಿನ್ನ ಅಂಬೋಣ!

ಹುರಿಯಾಳು:—(ದೂರ ತೋರಿಸುತ್ತ) ಅಕಾ! ಅಲ್ಲಿ ಬರಾಂವ ನಂ ಗೆರೆಯಾಳೇ ಕಾಣ್ತಾನ! ಓದ-ಬರ್ಯಾಕ ಬಂದಾವ, ಅಂತ

ಅವನ್ನೇ ಬಿಟ್ಟು ಬಂದಿದ್ದೆ ಮಾತ-ಕತೀಗೆ..ಎಂಥಾ ಸುದ್ದೀ ತಂದ್ನೊ ಏನೋ !

ಹಿರಿಯಾಳು :— ಅದೇನು ಘಡಾಮುಡಿ ಹೇಳೇ ಒಲ್ಲೆಲಾ !

ಹುರಿಯಾಳು :— (ಬೇಜಾರದಿಂದ) ಹೇಳಿದರೂ ಅಕಟೇ ಬಿಟ್ಟರೂ ಅಕಟೇ..ಅವನೇ ಬಂದ್ನಲ್ಲ—

[ಗೆರೆಯಾಳು- ವಯಸ್ಸಿನಿಂದ ಚಿಕ್ಕವ-ವೇಷದಿಂದ ತುಸು ಜೊಕ್ಕಟ— ಬರುವನು.]

ಗೆರೆಯಾಳು :— ಮಾತಕತೀ— (ಇಷ್ಟರಲ್ಲಿ ಹಲಗೆಯನ್ನು ನೋಡಿ ಆಶ್ಚರ್ಯದಿಂದ ಹತ್ತಿರ ಹೋಗಿ) ಏ ಏನ್ ಧರಾ ಬರೆ ಸ್ಯಾನೊ ಇದನ್ನ ನಂ ಸಿರಿಯಾಳ?

ಹುರಿಯಾಳು :— (ತವಕದಿಂದ) ಸಿರಿಯಾಳನ್ನ ಸಿದಗೀ ಕಟ್ರು ! ಮಾತ್ಕತೀ ಏನಾಯ್ತ್ರಂದ್ರ—

ಹಿರಿಯಾಳು:— (ಹಿರಿತನದ ದನಿಯಲ್ಲಿ) ಮಾತ್ಕತೀ ಪರಸಂಗ ಯಾವ್ದು, ಅದ್ನ ಹೇಳಕ ಒಲ್ಲೆಲಾ—

ಹುರಿಯಾಳು:— (ಸಿಡುಕಿನಿಂದ) ನಾ ಏನ್ ಹೇಳ್ಲಿ ? ನನಗ ಬ್ಯಾಡಾಗಿತ್ತಪಾ ಈ— (ಗೆ. ನಿಗೆ) ಹೇಳೋ ನಿನ—ಮಾತ್ಕತೀ—

ಗೆರೆಯಾಳು:— (ತಲೆದೂಗುತ್ತ)ಏನೋ ಯಿಚಾರ ಹೊಕ್ಕೇತಿ ನನ್ನ ತಲ್ಯಾಗ ಇದನ್ನೊ ಇದಿ..

ಹಿರಿಯಾಳು:— (ಮೇಲಿನಂತೆ) ಗೆರೆಯಾಳಾ—

ಗೆರೆಯಾಳು:— (ಮುಂದೆಬಂದು) ಹಂ—ಮಾತ್ಕತೀ ಪರಸಂಗ ಕೇಳಿದಿಯಲ್ಲ, ಹಿರಿಯಾಳಪಾ? ಇದು ಹೀಂಗೈತಿ—

ಹುರಿಯಾಳು:— (ತಡೆಯದೆ) ಅದೆಲ್ಲಾ ಗೊತ್ತೈತಿಯೊ, ಮುಂದೇನಾ—

ಹಿರಿಯಾಳು:— (ನಡುವೆ) ಯಾರಿಗ್ಗೊತ್ತೈಯ್ತಿ? ಸಂತಿಗೇ ಅಂತ ಹೊಂಟವ್ನ ಕುಂಡರಿಸಿದಿ ಹೇಳ್ತೀನೇ ಅಂತ, ಇನ್ನೂ ಮಟ—

ಗೆರೆಯಾಳು:— ನಾ ಹೇಳ್ತೀನಿ, ಹಿರಿಯಾಳಪಾ..ಛೆಂಜಿಮಟಾ ಕುಂ ನಮಗ ಹೇಳಾಣಾಗಲಿಕ್ಕಿಲ್ಲ..ಹಾಂಗ ಬಾಯಿ ಬಿಡತಿದ್ರ ಈ ಪರಸಂಗ ಯಾಕ ಬರ್ತಿತ್ತು !

ಹಿರಿಯಾಳು:— (ಅಸಹನೆಯಿಂದ) ಅದೇ ಪರಸಂಗ ಯಾವ್ದು ಅಂದ್ರ—

ಗೆರೆಯಾಳು:— (ಸಮಾಧಾನದಿಂದ) ಹೇಳ್ತೀನಿ, ಹಿರಿಮನಸ್ಯಾ, ನಡಾಕ ಬಾಯಿಹಾಕದಿದ್ರ—

ಹಿರಿಯಾಳು:— (ಸಿಟ್ಟಿನಿಂದ) ನಡಾಕ ಬಾಯಿ— ಅಂದ್ರ? ಹೋದಾಂವ ಬಂದಾಂವ ಅದ್ನ ಅಂತಾನಲ್ಲೊ ? ಬಾಯಿ ನಡಾಕ ಇರ್ದೇ ನೆತ್ತಿಮ್ಯಾಗ ಇರ್ತೈತ್ಯೋ ಏನು ?

ಗೆರೆಯಾಳು:— (ಸಮಾಧಾನದಿಂದ) ಸಿಟ್ಟ ಬ್ಯಾಡ, ಹಿರಿಯಾಳಪಾ.. ನೆತ್ತೀಮ್ಯಾಗ ಬ್ಯಾಡೊ. ಘನ್ಯಾ, ಬಾಯಿ !.. ನೆತ್ತೀಮ್ಯಾಗ ಬಾಯಿ ಇದ್ರಂತೂ ಈ ಪರಸಂಗ ಇನ್ನೂ ಮುಂದ್ಹೋಗ್ತಿತ್ತು—

ಹುರಿಯಾಳು:—(ತವಕದಿಂದ) ಅದೇ, ಏನಾತೂ ಅಂತೀನಿ—

ಹಿರಿಯಾಳು:— (ಅಸಹನೆಯಿಂದ) ಅದೇ ಯಾವ್ದೊ ಅಂತೀನಿ—

ಗೆರೆಯಾಳು:— (ಸಮಾಧಾನದಿಂದ) ಯಾವ್ದು ! ಮತ್ತ ಯಾವ್ದು ? ಛಾ ಆರೆ ಕುಡ್ಯಾಕ ಬೇಕು, ಮಂದಿ ಅರೇ ನೋಡಾಕ ಬ್ಯಾಡ.. ನೋಜು ಕೇಳು, ಹಿರಿಯಾಳಪಾ; ಕುಂಬಾರ ಓಣೀಯವರಮ್ಮು ಕುಂಬಾರ್ಯೇ ಮಾಡಿದ ಛಾ ಇರ್ಬೇಕೂ ಅಂತ; ಪತ್ತಾರ ಓಣಿಯವರು ಅಂದ್ರು..ಪತ್ತಾರ ಹೊರತಾಗಿ ಇನ್ನೊಬ್ಬ ಒಲೀ ಹೊತ್ತಿಸಿದರ ನಡ್ಯಾಕಿಲ್ಲಾ ಅಂತ..ಅದನ್ನ ಕೇಳಿ ತಳವಾರ್ರಿಗೆ ತಳವಾರ ಛಾ ಬೇಕಾತು— ಎಲ್ಲಾರಿಗೀನೂ ತಂತಂ ಜಾತೀ ಛಾನೇ ಬೇಕಾತನ್ನು.. ಇದೇ ಆ ಪರಸಂಗ ಆಂಬೋದು..

ಹಿರಿಯಾಳು:— (ನಿರಾಶಿಕನಾಗಿ ಏಳುತ್ತ) ಎಲೆ ! ಹುಜ್ಜೊಟ್ಟಿ! ಘಾತ ಆತು ಅಂದ್ರ ಘಮಘಮ ನಾತ ಬಂತು ಅಂತಾರಲ್ಲಾ ಹಾಂಗ ! ಇದಕ್ಯಾರರೆ ಪರಸಂಗ ಅಂತಾರ—

ಹುರಿಯಾಳು:— (ಸಂಶಯದಿಂದ) ಅಂದ್ರ? ಅಕಟೊಂದು ಜಾತೀ ಛಾದ್ದುಕಾನ ಎಲ್ಲಿಂದ ತರಬೇಕಂತೀ ?

ಜೀವನವು ಸಾಹಿತ್ಯಕ್ಕೆ ಅಡಿಗಲ್ಲು !
ಸಾಹಿತ್ಯವು ಜೀವಿತಕ್ಕೆ ಮಾರ್ಗದರ್ಶಿ !
ಜೀವನಸಾಹಿತ್ಯವು ಸಾಹಿತ್ಯಜೀವನಕ್ಕೆ ಇನ್ನೂ
ಹೊ ಸ ದು !
ಕನ್ನಡನಾಹಿತಿಗಳ ಮಾಲಿಕೆಯಲ್ಲಿ
ಮೊದಲನೆಯದಾಗಿ ಬರುವುದು
ಶ್ರೀ ರಂ ಗ!
ಬರೆದವರು
' ನೀರಂಗ '
ರಂಗ-ಮಂಗ ಪ್ರಕಾಶನದ ಬಿಡಿಗೊಂಚಲು.
ಕ್ರಾ. ಅ. ಪುಟಗಳು ನೂರೈವತ್ತರ ಮೇಲೆ;
ಬೆಲೆ ಒಂದು ರುಪಾಯಿ ! ಎಂದು ?
ರಂಗಮಂಗ ಪ್ರಕಾಶನದ ಹುಟ್ಟುಹಬ್ಬಕ್ಕೆ !
೧೨-೨-೪೧

ಹಿರಿಯಾಳು:— (ಒರಿತನದಿಂದ) ಏಳೋ ನಿನ ಮಳ್ಳಾ! ಛಾದಾಗ ಜಾತಿ ಏತ್ಯೇ—?

ಇಬ್ಬರೂ:— (ಅತುರರಾಗಿ) ಅಂದ್ರು?

ಹಿರಿಯಾಳು:— ಅಂದ್ರೇನು ಜಾಲೀಹಂದರ! ಛಾ ಕುಡೀಬೇಕೂ ಅಂತ ಯಾ ಜಾತ್ಯಾಗ ಹೇಳೇತಿ— (ತಟ್ಟನೆ ಸುಧಾರಿಸಿಕೊಂಡು) ಅಂದ್ರು— ಜಾತೀ ಏನಾರಿ ನಿಂತೇತಿ ಛಾ ಅಂದೆ!

ಗೆರೆಯಾಳು:— (ಒಮ್ಮೆಲೆ) ಹಂ- ಸಿಕ್ತು ನೋಡು.. ಅದ್ಕೇ ನಾ ಅಂದ್ನೆಪಾ, ಈ ಹಲಗೀ ನೋಡಿ ಯಿಚಾರ ಹೊಕ್ಕೇತಿ ನಂ ತಲ್ಯಾಗಽ ಅಂತ.. ಏ, ಸಿರಿಯಾಳಾ, ಸಿರಿಯಾಳಪಾ—

ಹಿರಿಯಾಳು:— ಇದಕ್ಯಾಕ ಯಿಚಾರ?

ಹುರಿಯಾಳು:— ಯಾ ಯಿಚಾರ ತಂದ್ಯೋ?

['ಬಂದ್ನಿರಿ, ತಂದ್ನಿರಿ' ಎಂದು ಧಾವಿಸುತ್ತ ಸಿರಿಯಾಳು ಬರುವನು]

ಗೆರೆಯಾಳು:— (ಪಲಗೆಯನ್ನು ತೋರಿಸುತ್ತ) ಇದನ್ನ ಬರೆದೋರು ಯಾರು?

ಸಿರಿಯಾಳು:— (ಸಂದರ್ಭ ತಿಳಿಯದೆ) ಬರದೋರು ಯಾರ್ರೆ? ನೀವೂ ಬರ್ತೀರಿ ಧಿನಾ—

ಗೆರೆಯಾಳು:— (ತಿದ್ದುಪಡಿಯನಂತೆ) ಬರೋದ ಲ್ಲೋ, ಬರ್ಯೋದು, ಲೆಕ್ಕಣೀ ಕೆಲ್ಸ.. ಹಂ.. 'ಇಲ್ಲಿ ಎಲ್ಲಾತರದ ಜಾತಿ ಮಾರಲೀಕ ಸಿಗತ್ತಾಳೆ' ಅಂತ ಬರೆದೋರು ಯಾರೂ—ಅಂದೆ!

ಹುರಿಯಾಳು:—(ಸಂಶಯದಿಂದ) ಅಂದ್ರೇನು—ಅವನ್ನೆಲ್ಲಾ ಕೊಂಡ್ಕೊಳ್ಳಾಕ ಹಚ್ಚೋ ಇಚಾರೇನು ನನ್ನ ?

ಸಿರಿಯಾಳು:— ಅದನ್ನ ತೆಪ್ಪಿ ಬರ್ತಾನ್ರಿ, ಗೆರೆಯಾಳಪ್ಪನವರ.. 'ಎಲ್ಲಾತರದ ಛಾಟೀ' ಅಂತ್ಹೇಳಿದಿನ್ರಿ ನಾ- (ಎಲ್ಲರೂ ತನ್ನನ್ನು ಆಶ್ಚರ್ಯದಿಂದ ನೋಡಲು) ಛಾರೀ-ಅಂದ್ರು ಇಂಗ್ರೇಜಿದಾಗ 'ಟೀ' ಅಂತಾರ್ರಿ, ಅದ್ಕು ಛಾಟೀ ಅಂತ್ಹೇಳಿದ್ರು, ತೆಪ್ಪಿ 'ಜಾತಿ' ಅಂತ-ಅಪ್ಪ, ಆರೇ ಮನಸ್ಯಾರಿ ಅಂವ-

ಗೆರೆಯಾಳು:— 'ತೆಪ್ಪು' ಅಂತ ಯಾರಂತಾರ? ಆರೇ ಮನಸ್ಯಾ ಅಂದ್ರು ಮತ್ತೀಟ ಹಗರಾತು ನನ್ನ ಕೆಲ್ಸ..ಅವ್ನೇ ಛಾ ತಂದ್ಕೊಡ್ಲಿ—

ಸಿರಿಯಾಳು:— (ತಿರಸ್ಕಾರದಿಂದ) ಛಾ ಅಂತ ಬರೀಲಾಕ ಬರದ್ದು ಛಾ ಏನ್ಮಾಡೀತರಿ?

ಗೆರೆಯಾಳು:— ಛಾ ಅಂತ ಬರೀಲಾಕ ಬರ್ದವರೇ ಛಾ ಕುಡೀತಾರೊ ಇಲ್ಲೊ?

ಹಿರಿಯಾಳು:— ಅದ್ಕೇ ಹೇಳ್ಲಿಲ್ಲಽ ನಾ ಛಾಕ್ಕ ಜಾತಿ ಇಲ್ಲಾ ಅಂತ—

ಗೆರೆಯಾಳು:— ಹಂಗೇ ಆರೇ ಮನಸ್ಯಾಗೂ ಜಾತಿ ಇಲ್ಲ. (ಎಲ್ಲರೂ ತನ್ನನ್ನು ಆಶ್ಚರ್ಯದಿಂದ ನೋಡಲು) ಅಂವ ಯಾರೂ ಅಂತ ಗೊತ್ತಿದ್ರು ಅವನ ಜಾತಿ.. ಪಾಜಮಿಪಾ.ಮಾತು .. ಅಂವ ಯಾರು ಇವ್ರಿಗೆ ಗೊತ್ತಿಲ್ಲ, ಇವ್ರು ಯಾರು ಅಂವಗ ಗೊತ್ತಿಲ್ಲ.. ಏನ್ರೆಪಾ-ಜಾತಿ ಹೋಗೋದು ಗೊತ್ತಿದ್ದ ಜನಾ ಸುತ್ಮುತ್ತಿದ್ದಾಗ ..(ಒಮ್ಮೆಲೆ ಹುರುಪಿನಿಂದ) ಪರಸಂಗ ಬಿಟ್ರು ಅಂತ ತಿಳೀಲಿಲ್ಲಽ.. (ಸಿ. ನಿಗೆ) ಒಳಗ ಕುಂತು ನೀ ಛಾ ಮಾಡು, ಹೊರಗ ಬಂದು ಅಂವ ಛಾ ನೀಡ್ಲಿ..ಪರಸಂಗ ಬಿಟ್ರೂ ಅಂದೆ—

ಹುರಿಯಾಳು:— (ಸಂಶಯದಿಂದ) ನಂ ಜನಾ ಒಂದ ಕೇಳ ಬೇಕಲ್ಲ—

ಗೆರೆಯಾಳು:—ಆವರ್ನ ಮಾತಾಡ್ಸೇ ಬಂದೀಸಿ, ನನಗ್ಯೊತ್ತಿ ಲ್ಲೇನ್ ಇದರ ಖುಬಿ? ಸಿರಿಯಾಳಪಾ—

ಸಿರಿಯಾಳು:— (ಉತ್ಸಾಹದಿಂದ) ಒಲೀ ಹೊತ್ತಿಸ್ಲೇನ್ರಿ? (ಹೊರಡುವನು)

ಗೆರೆಯಾಳು:— ಒಲೀ ಏನ್ ಸಾಕಾಗ್ಯೈತ್ಯೊ? ನಂ ದುಕಾನಕೇ ಹಚ್ಚು ಕೆಂಡಾ— (ಸಿ. ನು ಹೆದರಿ ತಡೆಯುವನು.)

ಹುರಿಯಾಳು:— (ಹುರುಪಿನಿಂದ) ನಿನ್ನ ನಶೀಬ ಗಟ್ಟಿ, ಸಿರಿಯಾಳಪಾ..(ಸಿ. ನು ಒಳಗೆ ಓಡುವನು.) ಹೊಂಡದ ನೀರು ಸಾಲಲಾಕಿಲ್ಲ, ಊರ ಬಾಂವಿಗೂ ಕಳ್ಸು ಕೊಡಾ..ತಿಳೀತಕ?.. ಊರ್ಮಂದಿಗೆಲ್ಲ ಛಾ—ಒಬ್ಬರಕಿಂತ ಒಬ್ಬರ್ದು ಪೇಸಲ ಆಗ್ಬೇಕು—

ಗೆರೆಯಾಳು:— (ಲಕ್ಷ್ಯಗೊಟ್ಟು ಪಲಗೆಯನ್ನು ಒಂದೆರಡು ಸಲ ಗಟ್ಟಿಯಾಗಿ ಓದುವನು) 'ಇಲ್ಲಿ..ಸಿಗತ್ತಾಳೆ'

ಹುರಿಯಾಳು.— (ಸಂಶಯದಿಂದ) ಆರೇ ಮಾತಿನಾಗ ಜಾತಿ ಹೆಂಗಸ್ಯೈತೇನು?

ಹಿರಿಯಾಳು:— ಹೆಂಗಸರ್ನ ಬಿಟ್ರ ಮತ್ತ ಯಾವ್ದೈತಿ ಮನೆಮುರುಕ ಜಾತಿ? (ಹೊರಡುವನು.)

ಇಬ್ಬರೂ:— ಛಾ ಕುಡಿದ್ಹೋಗು, ಹಿರಿಯಾಳಪಾ—

ಹಿರಿಯಾಳು:— (ತಿರುಗಿ ನಿಂತು) ಇದು ಛಾದ ಜಾತಿ ಅಲ್ಲ, 'ಛೀ'ದ ಜಾತಿ ಕಾಣ್ತೈತಿ! (ಹೋಗುವನು.)

(ಇಬ್ಬರೂ ಚಕಿತರಂತೆ ಒಬ್ಬರನ್ನೊಬ್ಬರು ನೋಡುವರು.)

(ತೆರೆ)

ಕುಮಾರವ್ಯಾಸಕವಿಯ ಸ್ಮಾರಕೋತ್ಸವ

'ಸಾಹಿತ್ಯಸಂಜಯ'

★

ಕಳೆದ ಜನವರಿ ತಿಂಗಳ ಮೊದಲನೆಯ ದಿನ, ಕುಮಾರವ್ಯಾಸನ ಕೋಳಿವಾಡವು ಕನ್ನಡಿಗರ ಉತ್ಸಾಹದ ಬೀಡಾಗಿದ್ದಿತು. 'ಹಲಗೆ-ಬಳಪವ ಹಿಡಿಯದೊಂದು ಅಗ್ಗಳಿಕೆಯ' ಹಳ್ಳಿಗ ಕುಮಾರವ್ಯಾಸ ಅಂದೊಮ್ಮೆ ಭಾರತ ಬರೆದು ಕನ್ನಡಿಗರನ್ನೆಲ್ಲ ಕುಣಿಸಿದ. ಇಂದು ಅದೇ ಹಳ್ಳಿಯ ಹುಡುಗರು, ಕುಮಾರವ್ಯಾಸನ ಪಾತ್ರಗಳಾಗಿ ಆಟವಾಡಿ, ಪಂಡಿತ-ಪಾಮರರ ಮನಸ್ಸು-ಹೃದಯಗಳನ್ನು ಕುಣಿದಾಡಿಸಿದರು.

★

ಇಪ್ಪತ್ತೈದನೆಯ ಕನ್ನಡ ಸಾಹಿತ್ಯಸಮ್ಮೇಳನವು ಅದೇ ಮುಗಿದಿತ್ತು. ಕಾರ್ಯಕರ್ತರು ಇನ್ನು 'ಯಸ್ಯಸ್ಮೃತ್ಯಾ' ಮಾಡುವುದರಲ್ಲಿದ್ದರು. ಮೂರು ದಿವಸದ ಸಮ್ಮೇಳನಕ್ಕಾಗಿ ಮೂರು ತಿಂಗಳು ದುಡಿದು, ತಂದ ಸಾವಿರಾರುಗಳನ್ನು ತಂದಿದ್ದವರಿಗೆ ತಿರುಗಿಕೊಟ್ಟು, ವಿಶ್ರಾಂತಿಪಡೆಯಬೇಕೆಂದು ಹವಣಿಸುತ್ತಿದ್ದರು. ೧೯೪೦ನೆಯ ವರುಷವು ಸವಿನೆನಪಾಯಿತು; ಹೊಸ ವರುಷದ ಹೊಸ ದಿನದ ಹೊಸ ಮುಂಜಾವಿನ ಏಳುಗಂಟೆಗೆ—ಏಳಲಾರದವರನ್ನೂ ಎಬ್ಬಿಸುತ್ತಲಿದ್ದರು ಶ್ರೀ. ರಾಯದುರ್ಗ ಕೃಷ್ಣರಾಯರು. ಅಂತೂ ಎಂಟುವರೆಯೊಳಗೆ ಜನರನ್ನು ಕಲೆಹಾಕುವುದಾಯಿತು. ಮೂರು ಮೋಟರ್ ಕಾರುಗಳು ಭಾರವಾಡದಲ್ಲಿ ಸಿದ್ಧವಾದುವು; ಅವುಗಳಲ್ಲಿ ತುಂಬಿ ಹೊರಜೆಲ್ಲುವಷ್ಟು ಜನರಾದರು. ಈ ಸ್ಥಿತಿಯನ್ನು ನೋಡಿ 'ನಮ್ಮನ್ನು ಬಿಟ್ಟಿದ್ದರೆ ಬರುತ್ತಿತ್ತು; ನಾವು ಒಲ್ಲೆನೆಂದೂ ಹೇಳಿದ್ದೆವು' ಎಂದೆಂದರೂ ಅವರು ಕಂಡುದು ಗಾಡಿಯಲ್ಲಿಯೆ. 'ಮೂವತ್ತು ಮೈಲಿನ ಪ್ರವಾಸ ಮೋಟರ್‌ಕಾರಿನಲ್ಲಿ' ಎಂಬುದನ್ನು ಕೇಳಿಯಂತೂ ಜನ ಮುದುಡಿಕೊಂಡಿತು; ಇದೆ ಸಂಧಿಯೆಂದು ಮತ್ತೊಬ್ಬರು ಮೋಟರಿನಲ್ಲಿ ನುಗ್ಗಿದರು.

ಭಾರವಾಡ ಬಿಟ್ಟಾಗ ಸುಮಾರು ಒಂಬತ್ತುವರೆಯಾಗಿರಬಹುದು. "ಏಳಲು ತಡವಾಯಿತು. ನಮ್ಮ ಮುಂಜಾವಿನ 'ಟೀ'ಸಹ ಆಗಲಿಲ್ಲ" ಎಂದು ಹಿರಿಯರ ಕಣ್ಣುತಪ್ಪಿಸಿ ಜಾರಿದರು ಕೆಲ ಕಿರಿಯರು. ಅವರು ಎಲ್ಲಿಗೆ ಹೋದರೋ ಎಂದು ಹುಡುಕುವ ನೆಪದಿಂದ ಸಂಧಿಸಿದರು ಕೆಲ ಕಿರಿಹಿರಿಯರು. ಅಂತೂ ಹಿರಿಯರ ಕಣ್ಣುತಪ್ಪಿಸಿದರೂ ಮಾತುತಪ್ಪಿಸಿಕೊಳ್ಳಲಾಗಲಿಲ್ಲ. ಹಾಗೂ ಹೀಗೂ ಮಾಡಿ, ಅಲ್ಪಸ್ವಲ್ಪಕಾಫಿ-ತಿಂಡಿ ಹಾಕಿಕೊಂಡು, ಮೋಟರಿನಲ್ಲಿ ನುಗ್ಗಿದರು. ಮೊದಲನೆಯ ಮೋಟರಿನಲ್ಲಿ ಗುಡುಗಿನ ದನಿಯ ಸ್ವಾಮಿಗಳಾದ ಮುದುವೀಡು ಕೃಷ್ಣರಾಯರು; ಅವರ ಸಾನ್ನಿಧ್ಯದಲ್ಲಿಯೆ ಕುಮಾರವ್ಯಾಸ ಭಾರತವನ್ನೆತ್ತಿಹಿಡಿದ ಶ್ರೀ. ಭಾರತ ಬಿಂದೂರಾಯರು, ಹಿರಿಯತನದಲ್ಲಿ ಕಾಲಿಡುತ್ತಿದ್ದ ಶ್ರೀ. ಬಸವನ ಹಾಳ ಅವರು, ಮಾತಿನಿಂದ ಮೈಮರೆಯಿಸುವ ಶ್ರೀ. ಬೀಂದ್ರೆ ಅವರು, ಮೈಸೂರಿನ ಅತಿಥಿಗಳಾದ ಶ್ರೀ. ಡಿ. ಸಿ. ಸುಬ್ಬರಾಯಪ್ಪನವರು, ಶ್ರೀ. ಬಿ. ವೆಂಕೋಬರಾಯರು.

ಎರಡನೆಯ ಮೋಟರಿನಲ್ಲಿ ಕಲೆಗಾರ ಪ್ರೋತದಾರ ಶ್ರೀನಿವಾಸರಾಯರು, ಕಾರ್ಯದರ್ಶಿ ಡಾ. ಕಮಲಾಪೂರರು, ಏಕೀಕರಣ ಧ್ವನಿವಾಹಕ ಶ್ರೀ. ಬುರ್ಲಿ ಬಿಂದುಮಾಧವರು, ತರುಣ ವಕೀಲ ಬಿ. ಎಸ್. ಪಾಟೀಲರು.

ಮೂರನೆಯ ಮೋಟರಿನ ವೈಶಿಷ್ಟ್ಯ ಬೇರೆ. ಅದರಲ್ಲಿಯವರು ಹುಚ್ಚು ಹರಟೆಯ ಹುಡುಗಾಟದವರು. ವಯಸ್ಸಿನಿಂದ ಕೆಲವರು ಹಿರಿಯರಿದ್ದರೂ, ಅವರೂ ಹುಡುಗತನದ ಮೋಹಕ್ಕೆ ಒಳಗಾದವರೆ. ಶಿವರಹಸ್ಯದ ಶಂ. ಬಾ. ಜೋಶಿಯವರು, ಜಯಂತಿಯ ಬೆಟಗೇರಿ ಕೃಷ್ಣಶರ್ಮರು, ಜಯಕರ್ನಾಟಕದ ಬೆಳಗಾಂವಿ ರಾಮಚಂದ್ರರಾಯರು, ಮೋಹನ ಮುದ್ರಣಾಲಯದ ರಾಯದುರ್ಗರು, ಹುಡುಗ ನೆಗಳೂರರು. ಹತ್ತುವರೆಯಾದಾಗ ಹುಬ್ಬಳ್ಳಿಯಲ್ಲಿದ್ದೆವು. 'ಇಲ್ಲಾಸ್ಯಕ ನಿಂತಿರೋ!' ಎಂದೊಬ್ಬರು ಕೂಗಿದರು. 'ಶ್ರೀ. ಮೋಹರೆ ಹಣಮಂತರಾಯರು ಬರುವವರು ಇದ್ದಾರೆ' ಎಂದುತ್ತರ ಬಂತು. 'ಅದಕ್ಕೆ ಗಾಡಿಗಳು ತಾವಾಗಿಯೆ ನಿಂತುವೇನೊ' ಎಂದು ಉಸುರಿದರು ಮತ್ತೊಬ್ಬರು. ಮೊದಲನೆಯ ಮೋಟಾರಿನಲ್ಲಿಯವರು ವಯೋಪ್ರಾಪ್ತದಿಂದ ಜರ್ಜರಿತರಾದವರು ಇದ್ದುದರಿಂದಲೂ, ಮೋಟರು ಹೊಸದು ಇದ್ದುದರಿಂದಲೂ ಅದರ ವೇಗವು ಹೆಚ್ಚಿತ್ತು; ಎರಡನೆಯ ಮೋಟರು ಜರ್—ಜುರ್ ಎಂದು ಸಾಗಿತ್ತು; ಮೂರನೆಯದು ಹರಟೆಯ ಭಾರದ ಮೂಲಕ ಸಾಗಲಾರದೆ ಹಿಂದೆ ಉಳಿದಿತ್ತು.

ಹನ್ನೊಂದು ಹೊಡೆಯುವುದಕ್ಕೆ ಬಂದಿತ್ತು. ಮೋಟರುಗಳು ಒಂದೊಂದಾಗಿ ಕೋಳಿವಾಡದ ಊರ ಮುಂದೆ ನಿಂತುವು ಬಂದು. ಕೂಡಲೆ ಕೇಳಿಸಿತು ಕಹಳೆ. ಪಟಪಟನೆ ಕಳಚಿಬಿದ್ದರು ಜನ ಮೋಟರಿನಿಂದ, ಹರಟೆಯಿಂದ ಹೊಟ್ಟೆ ಹುಣ್ಣಾಗಿತ್ತು; ಮೋಟರಿನ

ವೇಗದಿಂದ ಮೈ ಮಣ್ಣಾಗಿತ್ತು. ಈ ಮನುಷ್ಯಾಕೃತಿಗಳು ಮೋಟರಿನಿಂದ ಹೊಳಬಿದ್ದಕೂಡಲೆ ಊರಿನವರು ಅವರನ್ನು ಸ್ವಾಗತಿಸಿ, ಅವರಿಗಾಗಿ ಏರ್ಪಡಿಸಿದ ಬಿಡಾರಕ್ಕೆ ಕರೆದೊಯ್ದರು. ಅದೊಂದು 'ಹೆಣ್ಣುಹುಡಗರ' ಶಾಲೆ. ಕೋಳಿವಾಡಕ್ಕೆ ಬಂದವರು ಬುದ್ದಿಕಲಿತು ಹೋಗಲಿ ಎಂದು, ನಮ್ಮನ್ನು ಅಲ್ಲಿ ಇಳಿಸಿದಂತೆ ಎನಿಸಿತು. ಉದ್ಧತಸಾಹಿತಿಯೆಂದು ಮೂಗು ಮೇಲಕ್ಕೆ ಮಾಡಿಕೊಂಡು ನಡೆದರೆ, ಬಡಿಯುತ್ತಿತ್ತು ಆ ಶಾಲೆಯ ಚಿಪ್ಪರ. 'ಹುಡುಗಾಟದವರು ನನುಗೇನು' ಎಂದು ಮೈಮರೆತವರಿಗಂತೂ ತಾಳತಪ್ಪಿ ಏಟುಬಿದ್ದಿರಬೇಕು. ಬಂದ ಕೊಂಚ ಕಾಲದಲ್ಲಿಯೆ ಕೋಳಿವಾಡವು ಕಹಳೆಯನ್ನೂದಿತು; 'ಕುಮಾರವ್ಯಾಸನ ವ್ಯಾಸಪೀಠಕ್ಕೆ ಬಂದಿದ್ದೀರಿ— ತಲೆವಾಗಿ!' ಎಂದು.

ದೊಡ್ಡೂರಿನಿಂದ ಬಂದ ಜನಕ್ಕೆ ಒಂದೊಂದು ಕಪ್ಪು ಕಾಫಿಯನ್ನೂ ಸ್ವಲ್ಪ ತಿನಿಸನ್ನೂ ಒದಗಿಸಿಕೊಟ್ಟ ಮೇಲೆ 'ಊರಲ್ಲಿಯ ಮೆರವಣಿಗೆಗೆ ಸಿದ್ಧರಾಗಿರಿ' ಎಂದು ಮತ್ತೊಂದು ಕಹಳೆ ಕೂಗಿತು. 'ತಲೆಬಾಗಿಸಾಗಿರಿ' 'ತಲೆಬಾಗಿ ಸಾಗಿರಿ' ಎಂದು ಸ್ವಯಂಸೇವಕರ ಕೂಗನ್ನು ಕೇಳುತ್ತ, ಕೇಳದಾಗ ಬಡಿಸಿಕೊಳ್ಳುತ್ತ ಜನ ಹೊರಬಿತ್ತು ಶಾಲೆಯಿಂದ; ಮೆರವಣಿಗೆಯನ್ನು ಕೂಡಿಕೊಂಡಿತು.

ಮೆರವಣಿಗೆಯು ಇಕ್ಕಟ್ಟಾದ ಸಾಮುದ್ರಧುನಿಯ ಮಾರ್ಗವಾಗಿ ಸಾಗಿತ್ತು. ಮುಂದೆ ಕಹಳೆ-ಕರಡಿಮಜಲು. ಹಿಂದೆ ಜನ— ಆನೆ—ಸವಾರಿಯ ಮೇಲೆ ಕುಮಾರವ್ಯಾಸನ ಚಿತ್ರ—ಹೊತ್ತಗೆಗಳು ಆನೆಯ ಹಿಂದೆ ಪರಂಪರೆಯನ್ನು ಸೂಚಿಸುವಂತೆ ಕುಮಾರವ್ಯಾಸನ ಭಕ್ತರು.

ಮೆರವಣಿಗೆಯ ಮಾರ್ಗವು ಅರ್ಧಮೈಲಿಗಿಂತ ಕಡಮೆಯಿದ್ದರೂ ಅರು ಮೈಲಿನ ಸೇಳೆ ತಗಲಿತು. ಜನಸಂದಣಿಯನ್ನು ನೋಡಿ 'ಈ ಊರಿನ ವಸತಿ ಎಷ್ಟು?' ಎಂದು ಪ್ರತಿಯೊಬ್ಬರೂ ಕೇಳುವವರೆ—'ಎರಡು ಸಾವಿರ' ಎಂದು ಉತ್ತರ. 'ಆಂ, ಇಲ್ಲಿ ೨೦೦೦ ಕ್ಕಿಂತ ಹೆಚ್ಚು ಜನರು ಕಾಣುತ್ತಾರೆ!' 'ಸುತ್ತಲಿನ ಊರು—ಹಳ್ಳಿಗಳಿಂದಲೂ ಬಂದಿದ್ದಾರೆ!' ಸುತ್ತುಮುತ್ತಲಿನವರಿಗೊಂದು ಹಬ್ಬವಾಗಿತ್ತು.

ಇಷ್ಟರಲ್ಲಿಯೆ ಮೆರವಣಿಗೆಯು ಅಲ್ಲಿಯ ವೀರನಾರಾಯಣನ ಗುಡಿಯ ಹತ್ತಿರ ಬಂತು. ಅದು ಕುಮಾರವ್ಯಾಸನ ಕುಲದೇವತೆಯಂತೆ. ಮೂರ್ತಿ ಕರಿಯ ಕಲ್ಲಿನದು; ಶಿಲ್ಪವು ಲಕ್ಷಣವಾಗಿದೆ, ಸುಂದರವಾಗಿದೆ. ಅಲ್ಲೊಂದು ಶಿಲಾಶಾಸನವೂ ಇದೆ.

ಮೆರವಣಿಗೆಯು ಮುಂದೆ ಸಾಗಿ ಸಾಧಗಟ್ಟೆಗೆ ಬಂದಾಗ, ಒಂದು ಗಂಟೆಯಾಯಿತು. ನಡು-ನಡುವೆ ಸುಮಂಗಲೆಯರ ಆರತಿ ಬೇರೆ.

ದೊಡ್ಡೂರಿನ ದೊಡ್ಡ ರಾಯರುಗಳಿಗೆ ಕಣ್ಣು ಕತ್ತಲೆ ಕವಿಯುವುದರಲ್ಲಿತ್ತು. ಹಸಿವೆಯ ಪುಬ್ಬಿಗೆ ತುತ್ತಾಗಿ ತುತ್ತುಬರುವ ಹೊತ್ತನ್ನು ಸುತ್ತಲಿಂದಲೂ ನೋಡುತ್ತಿದ್ದರು. 'ಈಗ ಎಲೆ ಹಾಕುವುದು' ಎಂದು ಹೇಳಿದ ಒಂದು ಗಂಟೆಗೆ ಎಲೆ ಹಾಕಿದರು. ಆದರೆ ಅದು ಅವರ ದೋಷವಲ್ಲ. ದೊಡ್ಡೂರಿನವರಿಗೆ ತಮ್ಮ ಹಳ್ಳಿಗ ಬಾಂಧವರ ನಡೆ-ನುಡಿಗಳನ್ನು ಒಂದು ದಿನದ ಮಟ್ಟಿಗಾದರೂ ಹೊಂದುಗೂಡಿಸಿಕೊಳ್ಳಲು ಆಗದಿದ್ದದ್ದು ತಪ್ಪು. 'ಅವರದು ತಪ್ಪೊ ಇವರದು ತಪ್ಪೊ' ಎಂದು ವಿಚಾರಿಸುವ ಅವಕಾಶ—ತಾಳ್ಮೆ ಯಾರಲ್ಲಿ ಇತ್ತು. 'ಎಲೆ ಮಂಡಿಸಿದೆ' ಎಂದು ಹೇಳುವನನು ಹೇಳಿದ ಮೇಲೆ ನೋಡುತ್ತೇನೆ; ಬೀಡಾರದಲ್ಲಿ ಯಾರೂ ಇಲ್ಲ. ನಡೆದ ಸಂಗತಿಯನ್ನು ಯಜಮಾನರಿಗೆ ತಿಳಿಸಬೇಕೆಂದು ಹೋಗಿ ನೋಡುತ್ತಾನೆ. 'ಇಲ್ಲ' ಎನ್ನುವರೆಲ್ಲರೂ ಅಲ್ಲಿಯೆ ಇದ್ದಾರೆ. ತನಗೇ ಭ್ರಮೆಯಾಗಿರಬೇಕೆಂದು ತನ್ನ ಕೆಲಸಕ್ಕೆ ಹೋದ.

ಯಜಮಾನರು ಆಸನಗಳನ್ನು ನಿರ್ದೇಶಿಸಬೇಕೆಂಬ ನಿರ್ಬಂಧವೆ ಇದ್ದಿಲ್ಲ. ಎಲ್ಲರೂ 'ಇಡಿ ಹಬ್ಬ ತಮ್ಮದು, ತಾವು ಯಜಮಾನರು!' ಎಂಬ ಭಾವನೆಯಲ್ಲಿಯೆ ಮುಳುಗಿ ಹೋಗಿದ್ದರು. ತಮ-ತಮಗೆ ಬೇಕಾದ ಸ್ಥಳವನ್ನು ಹುಡುಕಿಕೊಂಡು ಕುಳಿತರು. ಅಡುಗೆಯು ಸಾದಾ ಇದ್ದುದೊಂದು ವೈಶಿಷ್ಟ್ಯ. ಸಾದಾ ಅಡುಗೆಯಲ್ಲಿಯೆ ಸೊಗಸು ಇದೆಯೆಂದು ಎಷ್ಟೋ ಜನರು ಮನಗಂಡಿರಬೇಕು. ಕುಟ್ಟಿದ ಗೋದಿಯ ಪಾಯಸ, ಅನ್ನ, ಸಾರು – ಹುಳಿ, ಚಟ್ನಿ, ಕುಂಬಳಕಾಯಿ ಪಲ್ಲೆ ಇವೆಲ್ಲ ಹರವಾದ ಬಾಳೆಯೆಲೆ-ದೊನ್ನೆಗಳನ್ನು ಆಕ್ರಮಿಸಿದ್ದುವು. ಗೋದಿಯ ರೊಟ್ಟಿ—ದಶಮಿಗಳು ಮಧ್ಯೆ ಬಂದುವು; ಅವುಗಳ ಬಂಧುಗಳಾದ ತುಪ್ಪ—ಬೆಣ್ಣೆಗಳೂ ಬಂದುವು ಬೆನ್ನ ಹಿಂದೆ.

ಸ್ನೇಹವು ರೀತಿಯು ತಾಯಿಯ ಅಂತಃಕರಣವನ್ನು ನೆನಪಿಗೆ ತಂದುಕೊಡುತ್ತಿತ್ತು. ಹಳ್ಳಿಗಳಲ್ಲಿ ಅಂತಃಕರಣವಿದೆಯೆಂದೇ ಅವು ದೇಶದ ಒಳಭಾಗಕ್ಕೆ—ಅಂತರಂಗಕ್ಕೆ ಇವೆಯೆಂದು ಕಾಣುತ್ತದೆ. ಬುದ್ಧಿಯೆ ಬಲವೆಂದುಕೊಂಡ ದೊಡ್ಡೂರುಗಳು ಬಯಲಿಗೆ ಬಂದಿವೆ. ಬಯಲಿಗೆ ಬಂದುದರಿಂದ ಅಲ್ಲಿಯ ಅಂತಃಕರಣವು ಒಣಗಿದೆ. ಎಲ್ಲವೂ ಒಣ ಒಣವೆ; ಹಳ್ಳಿಯಲ್ಲಿ ಮಾತ್ರ ಎಲ್ಲ ಹಸಿ! ಹಳ್ಳಿಗರ ಮಾತು-ರೀತಿಗಳಲ್ಲಿ ನಾಗರಿಕತೆಯ ನಯವಿಲ್ಲದಿದ್ದರೂ, ಅವರಲ್ಲಿ ಮಮತೆ ಇದೆ; ಮಾಧುರ್ಯವಿದೆ. ಪಟ್ಟಣಿಗರ ಎದೆಯು ಒಣಗಿರುವುದರಿಂದ ಹೆಚ್ಚು ಹಿಡಿಯಲು ಆಸ್ಪದವೆ ಇಲ್ಲ. ಎದೆಯಂತೆಯ ಅವರ ಹೊಟ್ಟೆ. ಹಳ್ಳಿಯ ಮಾತು ಬೇರೆ, ಅವರದು ವಿಶಾಲ ಹೃದಯ; ಆದರಂತೆಯೆ ವಿಶಾಲವಾದ ಹೊಟ್ಟೆ. ಅಂದು ಹಾಕಿದ ಹರವಾದೆಲೆಯನ್ನು ನೋಡಿಯೆ ಹೆದರಿರಬೇಕು ನಮ್ಮಲ್ಲಿಯ ಕೆಲ ಜನ ದೊಡ್ಡೂರಿನವರು.

ಸ್ನೇಹ (ತುಪ್ಪ-ಬೆಣ್ಣೆ)ಮಯ ಊಟವಾದುದರಿಂದ ಮಬ್ಬು ಬಂತು. ಊರಿಗೆ ಬೇಗನೆ ಮರಳಬೇಕೆನ್ನುವವರು 'ಮುಂದಿನ ಕಾರ್ಯಕ್ರಮ.'ಳು ಮುಂದವಾಗಿಯೆ ಸಾಗಲಿ' ಎಂದು ತಮ್ಮ ಮುಸುಕಿನಿಂದಲೆ ಸೂಚಿಸಿದರು.

* * * *

ನಾಲ್ಕೂವರೆಯಾಗಿತ್ತು; ಸಭಾಮಂದಿರವು ಕಿಕ್ಕಿರಿದಿತ್ತು. ಹಳ್ಳಿಗರ ಉತ್ಸಾಹವು ಉಕ್ಕೇರುತ್ತಿತ್ತು. ಕ್ಷಣಕ್ಷಣಕ್ಕೆ ಜನತೆಯ ಸಂಖ್ಯೆ ಮೇರೆ ಮೀರುತ್ತಿತ್ತು.

—'ಇನ್ನೊಂದು ಗುಡಾರ ಒಗೆಯೊ' ಎಂದು ಕೂಗುವುದು ಕೇಳಬರುತ್ತಿತ್ತು. ಕವ್ವಾಲರ ಕಾಳಪ್ಪನೂ ಅಲ್ಲಿ ಇದ್ದ; ಬಡಿಗರ ಭೀಮಪ್ಪನೂ ಬಂದಿದ್ದ. ಗೊರಿಕೆ ಹೊಡೆಯುವ ಗುಂಡಭಟ್ಟರಂತೂ ಮೊದಲೇ ಸ್ಥಾನಾಪನ್ನರಾಗಿದ್ದರು. ಚಿಕ್ಕವರು ದೊಡ್ಡವರು ಹೆಂಗುಸರು ಗಂಡಸರು ಜಾತಿ-ಧರ್ಮಗಳ ಭೇದವಿಲ್ಲದೆ ಪಂಥ-ಪಂಗಡಗಳ ವಿಚಾರವಿಲ್ಲದೆ, ಒಂದೇ ಒಂದು ಭಾವನೆಯಿಂದ ಬಂದಿದ್ದರು.

ಶ್ರೀ. ಬಸವರಹಾಳ ಅವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದರು. ಹುಡುಗರು ಸ್ವಾಗತಗೀತೆಯನ್ನು ಹಾಡಿದರು. ಸ್ವಾಗತಾಧ್ಯಕ್ಷರಾದ ಶ್ರೀ. ಮೈಲಾರಗೌಡರು ಸ್ವಾಗತ ಭಾಷಣ ಮಾಡಿದರು. ಅನಂತರ ಕಾರ್ಯದರ್ಶಿಗಳಿಂದ ವರದಿಯ ವಾಚನವಾಗಿ, ಕುಮಾರವ್ಯಾಸನ ಪುಸ್ತಕಭಾಂಡಾರದ ಉದ್ಘಾಟನವು ಶ್ರೀ. ಮುದುವೀಡು ಅವರಿಂದ ಜರಿಯಿತು. ಗಮಕವಿದ್ವಾನ್ ಶ್ರೀ. ಬಿಂದೂರಾಯರು, ಭಾರತದ ಕೆಲವು ಭಾಗವನ್ನು ಅರ್ಥಸಹಿತವಾಗಿ ಹಾಡಿತೋರಿಸಿದರು. ಬಿಂದೂರಾಯರ ಸಾನ್ನಿಧ್ಯದಲ್ಲಿ ಅಧ್ಯಯನ ಮಾಡಿದ, ಕೋಳಿವಾಡದ ನಿವಾಸಿಯಾದ ಶ್ರೀ. ಪುರೋಹಿತ ನಾರಾಯಣರು, ಭಾರತದ ಕೆಲವು ಭಾಗವನ್ನು ಗಮಕರೀತಿಯಲ್ಲಿ ಹೇಳಿದರು.

ಆಮೇಲೆ ಕುಮಾರವ್ಯಾಸನ ಗುಣವರ್ಣನೆ, ಅವನ ಕಾಲ, ಕಾವ್ಯ, ಶೈಲಿ, ರೀತಿ, ರಸ, ಭಾವ, ಆವನ ಮೇಲ್ಮೆ ಮುಂತಾದ ವಿಷಯಗಳ ಮೇಲೆ ಶ್ರೀಯುತರುಗಳಾದ ಹುಯಿಲಗೋಳ ನಾರಾಯಣರಾಯರು, ಗಳಗನಾಥರು, ಪದಕಿಯವರು, ಪೊಹರೆ ಹಣಮಂತರಾಯರು, ಸೊಗವೀರ ಶರ್ಮರು, ಬಿ. ಎಸ್. ಪಾಟೀಲರು, ಬುಲ್ಲಿಅವರು, ನೆಗಳೂರ ರಂಗನಾಥರು, ಗಾಂವಕರ ಅವರು, ಬೆಟಗೇರಿ ಕೃಷ್ಣಶರ್ಮರು, ಜೋಶಿ ಶಂಕರರಾಯರು, ಬೆಳಗಾಂವಿ ರಾಮಚಂದ್ರರಾಯರು, ಬೇಂದ್ರೆ ದತ್ತರಾಯರು ಮಾತನಾಡಿದರು.

ಒಂದು ಮಾತನ್ನು ಮಾತ್ರ ಒತ್ತಿ ಒತ್ತಿ ಹೇಳಬೇಕೆಂದು ಎನಿಸುವುದು. ಅಂದು ಅಲ್ಲಿ, ಆ ಹಳ್ಳಿಗರೇ ಆಡಿತೋರಿಸಿದ 'ದ್ರೌಪದೀ ವಸ್ತ್ರಾಪಹರಣ'ವು, ಹಳ್ಳಿಗಳು ಹಿಂದೆ ಬಿದ್ದುವೆಂದು ಹಳಿಯುತ್ತ ಬಂದಿದ್ದ ದೊಡ್ಡೂರವರನ್ನು ದಂಗುಬಡಿಸುವಂತೆ ಇತ್ತು. ಕುಮಾರವ್ಯಾಸನ ಭಾರತದಲ್ಲಿಯ ಭಾಗವನ್ನು, ರಾಗ-ತಾಲ-ಲಯ ಬದ್ಧವಾಗಿ, ಕಾವ್ಯನಾಟಕವೊಂದರಂತೆ ಮಾಡಿತೋರಿಸಿದರು. ಭಾವನೆಗೆ ಜೆಚ್ಚು ಪ್ರಾಶಸ್ತ್ಯವಿದ್ದುದರಿಂದ, ಅಲ್ಲಿ ರಂಗಭೂಮಿಯ ಮಿಕ್ಕ ಆಡಂಬರದ ಕಡೆಗೆ ಮನಸ್ಸು ಹರಿಯುವಂತಿರಲಿಲ್ಲ. ದ್ರೌಪದಿ ಪಾತ್ರವನ್ನು ವಹಿಸಿದ ದೇವಣ್ಣನು ತನ್ನ ಪಾತ್ರಾಭಿನಯದಿಂದ ಸಭಿಕರನ್ನು ಮೆಚ್ಚಿಸಿದನು. ಸೀರೆ ಸೆಳೆಯುವ ಕಾಲದ ಪದ್ಯಗಳನ್ನು ಹೇಳುವಾಗ ಕಣ್ಣೊರಸಿಕೊಂಡವರೆಷ್ಟೋ ಜನ. ಆ ಹುಡುಗನಿಗೆ ವಿದ್ಯಾವರ್ಧಕ ಸಂಘದ ಪರವಾಗಿಯೂ, ಬಿ. ಎಂ. ಶ್ರೀಕಂಠಯ್ಯನವರ ಪರವಾಗಿಯೂ ಪಾರಿತೋಷಕಗಳು ಕೊಡಲ್ಪಟ್ಟವು.

ಅಧ್ಯಕ್ಷರು ತಮ್ಮ ಮುಕ್ತಾಯದ ಭಾಷಣದಲ್ಲಿ ಸ್ಮಾರಕಸಂಸ್ಥೆಯವರನ್ನು ಅಭಿನಂದಿಸಿ, ಕೋಳಿವಾಡ ಗ್ರಾಮವು ತನ್ನ ಸಾಹಿತ್ಯದ ಸೇವೆಯನ್ನು ಇನ್ನೊಮ್ಮೆ ಅಂತಹ ಕುಮಾರವ್ಯಾಸನನ್ನು ಹುಟ್ಟಿಸಿ ಸಲ್ಲಿಸಲೆಂದು ಹಾರೈಸಿದರು.

'ಸ್ಮಾರಕೋತ್ಸವವು ಮುಗಿಯಲಿಲ್ಲ, ಪ್ರಾರಂಭವಾಯಿತು!' ಎನ್ನುತ್ತ ಬಂದಿದ್ದ ಜನರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. 'ಇದೊಂದು ಮರಿಸಾಹಿತ್ಯಸಮ್ಮೇಲನವು' ಎಂದುಸುರಿದವರು ಹಲವರು. 'ಇಂತಹವು ಆಗಾಗ ಆಗಬೇಕು; ಹಳ್ಳಿಗಳಲ್ಲಿ ಆಗಬೇಕು' ಎಂದು ಸೂಚಿಸಿದರು ಕೆಲರು. 'ಹಳ್ಳಿಗಳು ಮುಂದೆ ಬಡುವ್ರವು' ಎಂದು ಜೋಡಿಸಿದರು ಇನ್ನು ಕೆಲವರು. ಊಟದ ನೆನವು ಒಂದು "ಹಳ್ಳಿಗಳು ಒಳಗೆಯೆ ಇರುವುದು ಯೋಗ್ಯ; ಹೊರಕ್ಕೆ ಬಂದರೆ ಆಂತಃಕರಣವು ಬಣಗುವುದು. ಬಣಗಿದರೆ ಏನು ಸೊಗಸು?" ಎಂದೂ ಒಬ್ಬರೆಂದರು.



ತ್ಯಾಗ

★

ಶ್ರೀ. ಎಸ್. ಎನ್. ಹೊಳ್ಳ

ಭೋಗವೆಂದಿದ ಕರೆವ ಜನರು ಸಿಗಬಹುದು,
ಭೋಗದಾಸೆಯು ಇಣಿಕಿ ಕಂಡುದಿರಬಹುದು,
ರಾಗದುನ್ಮತ್ತಖಿಲರಕೇರಿ ನಿನ್ನನು ಹರಸಿ,
ಯೋಗಿಯಂದದಿ ದುಡಿದ ಸರ್ವಶಕ್ತಿಯ ಬೆರಸಿ,
ನಿನಗಿತ್ತೆ ಓ ಹೆಣ್ಣೆ ನನ್ನ ಮನವ!
ನಿನಗಿತ್ತೆ ನಾನೆನ್ನ ಬರಿಯ ತನುವ!

ಭೋಗದಾಸೆಯು ಬಂದರೇನಾಯ್ತು? ಆನು ತಪ್ಪೆ?
ನೀಗಿಸಿಲ್ಲವು ನಿನ್ನ ಕೌಮಾರ್ಯವನು ಅಪ್ಪೆ,
ನಿನ್ನ ಗಲ್ಲವ ತಟ್ಟೆ, ಮೈಯನೆಲ್ಲವ ಮುಟ್ಟೆ;
ಕಾಲೆಂದು ಕೈಯೆಂದು ನೋಡದೆಯು ಮುತ್ತಿಟ್ಟೆ,
ನಿನ್ನೆದೆಗು ನನ್ನೆದೆಗು ನಂಟುಗೈದೆ,
ಜವನಿಂದು ಹರಿಸದಿಹ ಗಂಟುಹೊಯ್ದೆ!



'ನನ್ನ ದೇವರು ಮತ್ತು ಇತರ ಕತೆಗಳು'

ಶ್ರೀ. ಕೆ. ವಿ. ಪುಟ್ಟಪ್ಪನವರ ಕಥಾಸಂಗ್ರಹ.

ಶ್ರೀಮಾನ್ ಕೆ. ವಿ. ಪುಟ್ಟಪ್ಪನವರ 'ಮಲೆನಾಡಿನ ಚಿತ್ರಗಳ'ನ್ನೂ 'ಸಂನ್ಯಾಸಿ ಮತ್ತು ಇತರ ಕತೆಗಳ'ನ್ನೂ ಓದಿದವರು 'ನನ್ನ ದೇವರು ಮತ್ತು ಇತರ ಕತೆಗಳು' ಎಂಬ ಕಥಾಸಂಗ್ರಹವನ್ನೊಮ್ಮೆ ನೋದಿದರೆ, ಒಂದರಲ್ಲಿ ಕೇವಲ ಚಿತ್ರಕಾರರೂ ಒಂದರಲ್ಲಿ ಕೇವಲ ಕವಿಗಳೂ ಆಗಿದ್ದ ಶ್ರೀ. ಪುಟ್ಟಪ್ಪನವರು, ಇಲ್ಲಿ ಕವಿಗಳೂ ಚಿತ್ರಕಾರರೂ ಆಗಿ ಅಯಾ ಕೈಚಳಕಗಳನ್ನು, ಜನಜೀವನದ ವಿಸ್ತಾರವನ್ನು ಅಳವಾಗಿಸೋಡಿ ಮಾರ್ಮಿಕವಾಗಿ ಬಣ್ಣಿಸುವಲ್ಲಿ—ಬಹು ಮಟ್ಟಿಗೆ ಬಳಸಿ ಕೊಂಡಿರುವರೆಂಬದನ್ನು ಸಹಜವಾಗಿ ಕಾಣಬಹುದು.

ಪುಟ್ಟಪ್ಪನವರು ಕತೆಗಳನ್ನೆ ಬರೆಯಲಿ, ಕಾದಂಬರಿಯನ್ನೆ ಬರೆಯಲಿ; ಕೊನೆಗೂ ಅವರು ಕವಿಗಳೆ! ಅವರ ಕಾವ್ಯದ ಅನಂತವಾಹಿನಿ ಪದ್ಯರಚನೆಗೆ ಕಟ್ಟುಬೀಳದೆ, ಸ್ವತಂತ್ರವಾಗಿ ಮನಬಂದಂತೆ ಹರಿದು ಕತೆ-ಕಾದಂಬರಿಗಳ ರೂಪ ತಾಳುತ್ತದೆ ಬಹ್ಮೊಮ್ಮೆ. ಅದರ ಪರಿಣಾಮವಾಗಿ ಇಲ್ಲಿ 'ಸಾಲದ ಮುಗು'ವಿನ ಮಂಳೆಗಾಲ ವರ್ಣನೆಯಾಗಿ 'ಔದಾರ್ಯ'ದಲ್ಲಿ ಹುಣ್ಣಿಮೆಯರಾತ್ರಿಯಾಗಿ ಹರಿದಿದೆ ಅವರ ಕಾವ್ಯಲಹರಿ. ಶ್ರೀಮಾನ್ ಪುಟ್ಟಪ್ಪನವರ ಶೈಲಿಗೆ ಮುಗ್ಧರಾಗದವರು ತೀರ ಕಡಮೆ. ಅಂತೆಯೆ ಸಣ್ಣಕತೆಯಲ್ಲಿ ಆಡಗಿದ ಒಂದೆರಡು ಲೋಪ-ದೋಷಗಳು ಕೂಡ ಎದ್ದು ಕಾಣುವುದಿಲ್ಲ, ಅದರ ಬೆಳಕಿನಲ್ಲಿ.

ಶ್ರೀಮಾನ್ ಪುಟ್ಟಪ್ಪನವರು ಕವಿಗಳಾದುದರಿಂದ, ಕವಿಯ ಕಣ್ಣಿಗೆ ಸರಿಯೆನಿಸುವಂತಹ ಸನ್ನಿವೇಶಗಳನ್ನೆ ಜೀವನವಿಸ್ತಾರದಿಂದ ಆಯ್ದುಕೊಳ್ಳುತ್ತಾರೆ. ಅಂತೆಯೆ ಜನಜೀವನದ ವಾಸ್ತವ ಚಿತ್ರವನ್ನು ಅವರು ಬಣ್ಣಿಸಿದರೂ, ಅದು ಜನಜೀವನವನ್ನು ಬಿಟ್ಟು ಆಕಾಶದ ಕಾವ್ಯಲೋಕಕ್ಕೆ ಕೈ ಚಾಚುವಂತೆ ಕಾಣುತ್ತದೆ. ಉತ್ತಮ ಹಾಗು ಕಾವ್ಯಪೂರ್ಣ ಕಲಾಕೃತಿಯಾಗಬೇಕಾದರೆ ವಾಸ್ತವಜೀವನಕ್ಕಿಂತ ಅದು ಸ್ವಲ್ಪ ದೂರವಾಗಿಯೆ ಇರುವುದು ಒಳಿತಲ್ಲವೆ?

'ವಾಸ್ತವ ಜೀವನವನ್ನೂ ರಸವತ್ತಾಗಿ ಚಿತ್ರಿಸಲು ಬರಬಹುದು' ಎಂದು ಸಾರುವಂತೆ 'ವಿಜ್ಞಾನಾಕ್ಷಿಯ ಮನೇ ಮೇಷ್ಟ್ರು' ತನ್ನ ಸ್ವಾಭಾವಿಕತೆಯಿಂದ ನಮ್ಮ ಮನಸ್ಸಿಗೆ ಹೆಚ್ಚಾಗಿ ಹಿಡಿಯುತ್ತದೆ. 'ಸಾಲದ ಮಗು'ವಿನ ಕೊನೆ ವಾಚಕರ ಹೃದಯವೀಣೆಯನ್ನು ಮಿಡಿಯುವುದಕ್ಕಾಗಿಯೆ ದುರಂತದಲ್ಲಿ ಮುಗಿಸಲಾಗಿದ್ದರೂ, ದೈವುಳ್ಳವರು ಗುಲಾಮರನ್ನು ನಡೆಯಿಸಿಕೊಳ್ಳುವ ಜೀವನದ ರೀತಿಯನ್ನು ಅದರಲ್ಲಿ ವಾಸ್ತವಿಕವಾಗಿಯೆ ಬಣ್ಣಿಸಲಾಗಿದೆ.

'ಔದಾರ್ಯ'ವು ಒಂದು ಅತ್ಯುತ್ತಮವಾದ ಸಣ್ಣಕತೆ. ಡೇವಿಡ್ ಮಾಸ್ತರರ ಆತ್ಮವೃತ್ತಾಂತದ ಆಭಾಸ ಸನ್ನಿವೇಶವನ್ನು ನಿರೂಪಿಸುವಲ್ಲಿ, ಸುತ್ತಲಿನ ವಾತಾವರಣವು ಬಹು ಗಂಭೀರವಾಗಿ ಬಣ್ಣಿಸಲ್ಪಟ್ಟಿದೆ. ಅದಕ್ಕೆ ತಕ್ಕಂತೆ ಶೈಲಿಯೂ ಗಂಭೀರವಾಗಿ, ವಾಚಕರ ಭಯಭೀತಚಿತ್ತವನ್ನು ಸೂರೆಗೊಂಡು, ಕುತೂಹಲದಿಂದ ಕೊನೆಯಕಡೆಗೆ ಸೆಳೆಯುತ್ತದೆ. ವಾಸ್ತವತೆಯಿಂದ ಆರಂಭವಾಗಿ ಆದರ್ಶತೆಯಲ್ಲಿ ಮುಗಿಯುವ 'ನನ್ನ ದೇವರು' ಎಂಬ ಕತೆಯಲ್ಲಿಯ ಭಾವದೇವರ ವಜ್ರಕಾಂತಿ ಸ್ವಭಾವವು, ನಮ್ಮ ಚಿತ್ತದಲ್ಲಿ ಚಿರಕಾಲ ನೆಲಸುತ್ತದೆ; ಎಂದಿಗೂ ಮರೆಯಾಗುವುದಿಲ್ಲ. 'ಧನ್ವಂತರಿಯ ಚಿಕಿತ್ಸೆ'ಯು ಒಂದು ವಿಡಂಬನಾತ್ಮಕ ಕಥೆಯು. ವಾಸ್ತವಿಕ ವಿಡಂಬನೆಯಲ್ಲಿ ಕವಿಯ ಲೇಖನಿ ಕೈಯಾಡಿದರೆ ಅದಕ್ಕೆ ಎಂತಹ ಒಪ್ಪ ಬರಬಹುದೆಂಬುದನ್ನು ಇಲ್ಲಿ ಕಂಡುಕೊಳ್ಳಬಹುದು. ಇಲ್ಲಿ ಕಂಡುಬರುವ ಅಪೂರ್ವಕಲ್ಪನೆ, ಕೊನೆಯ ಹಿಡಿತಗಳು ಕತೆಯ ಮೂಲಗುಣಗಳು. 'ಆದರ್ಶಸಾಧನೆ'ಯು ವಾಸ್ತವಲೋಕವನ್ನು ವಿಹಾರ ನಿರತ ದರಿಂದ ತಾತ್ವಿಕತೆಯಿಂದ ಅಲ್ಲಿ ಪ್ರಧಾನವಾಗಿದೆ. ಅದಕ್ಕಾಗಿಯೆ ಕತೆಯನ್ನು ಕಲ್ಪಿಸಿಕೊಂಡಂತಾಗಿದ್ದರೂ, ಕೊನೆಯು ಮಾತ್ರ ಇತರ ಕತೆಗಳಲ್ಲಿಯಂತೆ ನಮ್ಮ ಅಂತಃಕರಣವನ್ನು ಮುಟ್ಟುತ್ತದೆ.

ಎಲ್ಲ ಕಥೆಗಳಲ್ಲಿಯೂ ನಮ್ಮ ಮನಸ್ಸನ್ನು ಸಮಗ್ರವಾಗಿ ಆಕರ್ಷಿಸುವುದು ಶ್ರೀ. ಕೆ. ವಿ. ಪುಟ್ಟಪ್ಪನವರ ಬಿಗುಹಿನ ಶೈಲಿ.

—ಎನ್ಕೆ.

ದ್ವಿತೀಯ ಮಹಾಯುದ್ಧ

ಶ್ರೀಮಾನ್ 'ಹರಿದಾಸ' ಅವರಿಂದ ರಚಿತವಾದುದನ್ನು, ನುಂಗಳೂರಿನ ತ್ರಿವೇಣಿ ಪ್ರಕಟನಾಲಯದವರು ಪ್ರಕಟಿಸಿದ್ದಾರೆ.

ಪ್ರಸ್ತುತ ನಡೆದ ಯುದ್ಧದ ಕತೆಯನ್ನು ಹೇಳುವುದಕ್ಕೆ ಹೊರಟ ಹೊಸಮಾದರಿಯ ಗ್ರಂಥವಿದು. ಪಾಶ್ಚಾತ್ಯರಾಷ್ಟ್ರಗಳ ಬೇರೆ ಬೇರೆ ಭಾಷೆಗಳಲ್ಲಿ, ವರ್ತಮಾನ ಚಳವಳಿಯನ್ನು ಕುರಿತ ಹಲವು ಪುಸ್ತಕಗಳು ದಿನದಿನ ಹೊರಡುತ್ತಿರುತ್ತವೆ. ಈ ಗ್ರಂಥವು ಕನ್ನಡದಲ್ಲಿಯೂ ಅಂತಹ ಪ್ರಯತ್ನದ ಪ್ರಥಮಫಲವೊಂದು. ನಡೆದಿರುವ ಯುದ್ಧದ ಮೂಲದಿಂದ ಮೊದಲುಮಾಡಿ, ಫ್ರಾನ್ಸಿನ ಪತನದ ವರಗಿನ ಯುದ್ಧವಾರ್ತೆಯನ್ನೆಲ್ಲ ಇದೊಂದೇ ಪುಸ್ತಕದಿಂದ ಕೂಲಂಕಷವಾಗಿ ತಿಳಿದುಕೊಳ್ಳಬಹುದಾಗಿದೆ. ಯುದ್ಧದ ವಾರ್ತೆಯೆಂದರೆ ರಮ್ಯವಾದ ಸಂಗತಿ, ಕುತೂಹಲವನ್ನು ಹುಟ್ಟಿಸುವಂತಹ ವಿಷಯ. ವರ್ತಮಾನ ಪತ್ರವನ್ನು ನಿತ್ಯನಿತ್ಯವೂ ಓದದಿರುವವರಿಗೆ ಸದ್ಯದ ಯುದ್ಧದ ಇತ್ತೀಚಿನ ಭೂತ ಸಂಗತಿ ಗೊತ್ತಾಗುವುದು ಅನಾಧ್ಯವಿಷಯವೆ; ಆದರೆ ಈಗ ಯುದ್ಧದ ಸಂಪೂರ್ಣವಾದ ವಿವರಿಯನ್ನು ಅರಿತುಕೊಳಬೇಕೆಂದು ಅಪೇಕ್ಷಿಸುವವರು ಅನೇಕರು. ಅಂತಹ ಜನರ ಅಪೇಕ್ಷೆಯನ್ನು ಈ ಪುಸ್ತಕ ಎಷ್ಟೋ ಮಟ್ಟಿಗೆ ಪೂರಯಿಸಬಹುದಾಗಿದೆ.

ಸಂ. ಕ.

ಸಾ ದ ರ ಸ್ವೀ ಕಾ ರ

ಅಲ. ಸೆರೆಯ ಮು ರೆ ಯ ಲ್ಲಿ:— (ಸತ್ಯಕಥೆ). ಶ್ರೀಮಾನ್ ರಂಗನಾಥ ರಾಮಚಂದ್ರದಿವಾಕರ ಅವರು ಬರೆದುದು. ಶ್ರೀ. ಬೋಧರಾವ್ ರಾಮಚಂದ್ರದಿವಾಕರ ಅಧ್ಯಾತ್ಮಕಾರ್ಯಾಲಯ, ಹುಬ್ಬಳ್ಳಿ ಅವರು ಪ್ರಕಾಶಕರು. ಕ್ರೌ. ಆ. ೧೨+೨೦೪ ಪುಟಗಳು. ಬೆಲೆ ೧-೦-೦.

ಅಕ. ಮಧುರವಾಣೀ:— (ಮಾಸಪತ್ರಿಕೆಯ ಸಂಸ್ಕೃತ ಸಾಹಿತ್ಯಸಮ್ಮೇಳನದ ವಿಶೇಷಸಂಚಿಕೆ). ಇದರ ಸಂಪಾದಕರು 'ಸಂಸ್ಕೃತ ಸಾಹಿತ್ಯರತ್ನ' ಶ್ರೀ: ಗಲಗಲಿ ರಾಮಾಚಾರ್ಯರು; ಉಪಸಂಪಾದಕರು 'ಸಂಸ್ಕೃತ ಸಾಹಿತ್ಯಭೂಷಣ' ಶ್ರೀ.ಬುಲ್ಲಿ ಶ್ರೀನಿವಾಸಾಚಾರ್ಯರು. ಪ್ರಕಾಶನ ಸ್ಥಳ ಬೆಳಗಾಂವಿ. ಡೆ. ಆ. ೧೬೪ ಪುಟಗಳು.

ಮೊನ್ನೆ ಮೊನ್ನೆಯೆ ಬೆಳಗಾಂವಿಯಲ್ಲಿ ಸೇರಿದ ಪ್ರಥಮ ಸಂಸ್ಕೃತ ಸಾಹಿತ್ಯ ಸಮ್ಮೇಳನದ ವಿಶದವರದಿಗಳಿಂದಲೂ, ಅಧ್ಯಕ್ಷ-ಸ್ವಾಗತಾಧ್ಯಕ್ಷರ ಭಾಷಣಗಳಿಂದಲೂ ಬೇರೆ ವಿದ್ವಾಂಸರ ಸಂಸ್ಕೃತ ಲೇಖನಗಳಿಂದಲೂ ಕೂಡಿಕೊಂಡು, ಈ ಸಂಚಿಕೆ ಅಂದವಾಗಿ ಹೊರಟಿದೆ. ಸಂಪಾದಕರ ಪರಿಶ್ರಮ ಸಾರ್ಥವಾದುದು.

೯೦. ಪ್ರಭಾತ:— (ವಾರಪತ್ರಿಕೆಯ ವಾಣಿಜ್ಯಸಂಚಿಕೆ). ಸಂಪಾದಕರು ಶ್ರೀಮಾನ್ ಕುಡ್ಪಿ ವಾಸುದೇವ ಶೆಣೈ, ಮಂಗಳೂರು. ಪ್ರಕಾಶಕರು ಶ್ರೀಮಾನ್ ಎಂ. ಬಾಬೂರಾಯ ಪ್ರಭು ಬಿ. ಎ. ಮಂಗಳೂರು ಪ್ರೆಸ್, ರಥಬೀದಿ-ಮಂಗಳೂರು. ಕ್ರೌನ್ ಫೋಲಿಯೋ ೧೬೪ ಪುಟಗಳು; ಬೆಲೆ ೦-೮-೦.

ವಾಣಿಜ್ಯಕ್ಕೆ ಸಂಬಂಧಿಸಿದ ಹಲವು ಉಪಯುಕ್ತವಾದ ಸಚಿತ್ರ ಲೇಖನಗಳೂ ಬೇರೆ ಲಲಿತ ಲೇಖನಗಳೂ ಇದರಲ್ಲಿ ಪ್ರಕಟವಾಗಿವೆ. ವಾಣಿಜ್ಯಕ್ಕೆ ಸಂಬಂಧಿಸಿದ ಲೇಖನಗಳೆಲ್ಲವೂ ಆಯಾ ವಿಷಯದಲ್ಲಿ ತಜ್ಞರಾದವರಿಂದಲೆ ಬರೆದುವಾಗಿವೆ. ಎಲ್ಲರೂ ಸಂಗ್ರಹದಲ್ಲಿರಿಸಬೇಕಾದ ಸಂಚಿಕೆಯಿದು.

ದಕ್ಕನ್ ಪ್ರಭಾತ:— (ವಾರಪತ್ರಿಕೆ) ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಪಿ. ರಾ ಚೋ ಟಯ್ಯ, ರಾಯಚೂರು (ನೈಝಾಮ್ಸ್ ಸ್ಟೇಟ್). ಫುಲ್ಸ್‌ಕ್ಯಾಪ್ ಅರ್ಧಹಾಳೆಯಳತೆಯ ಹತ್ತು ಪುಟಗಳು. ವಾರ್ಷಿಕ ವರ್ಗಣಿ ಬ್ರಿಟಿಷ್ ನಾಣ್ಯ ೩-೦-೦; ನೈಝಾಮ್ ನಾಣ್ಯ ೩-೮-೦. ಬಿಡಿಸಂಚಿಕೆಗೆ ೦-೧-೦.

ಅಂತೂ ಕೊನೆಗೊಮ್ಮೆ ರಾಯಚೂರಿನಲ್ಲಿ ಕನ್ನಡ ಪತ್ರಿಕೆ ಹೊರಟಿತು. ಆದರೆ ನಮಗೀಗ ಕನ್ನಡ ಪತ್ರಿಕೆ ಹೊರಡುವುದಷ್ಟೆ ಮುಖ್ಯವಲ್ಲ; ಕನ್ನಡಿಗರಲ್ಲಿ ಮನುಷ್ಯತ್ವವನ್ನೂ ಕರ್ನಾಟಕತ್ವವನ್ನೂ ಹುಟ್ಟಿಸಬೇಕಾದುದು ಬಹು ಮುಖ್ಯವಾಗಿದೆ. ಬರಿಯೆ ಹಿಟ್ಲರ್, ಮುಸೊಲಿನಿ, ಸ್ಟಾಲಿನರ ಕತೆಗಳನ್ನು ಹೇಳುವ ಪತ್ರಿಕೆಗಳು ಕನ್ನಡದಲ್ಲಿ ಬೇಕಾದಷ್ಟಿವೆ. ರಾಯಚೂರಿನ 'ದಕ್ಖನ್ ಪ್ರಭಾತ'ವೂ ಅದನ್ನೇ ಹೇಳಲು ಹೊರಟರೆ, ಅದೊಂದು ವಿಶೇಷ ಕಾರ್ಯವನ್ನು ನಿರ್ವಾಡಿದಂತೆನಿಸದು. 'ದಕ್ಖನ್ ಪ್ರಭಾತ'ವು ನೈಝಾಮ್ ಕನ್ನಡಿಗರ ಕತ್ತಲ ಬಾಳಿಗೆ ನಿಜವಾದ ಪ್ರಭಾತವನ್ನೊದಗಿಸಬೇಕು. ಅದರ ವಾಣಿ ಅಲ್ಲಿಯ ಜನತೆಯ ಹೃದಯಾಂತರ್ವಾಣಿಯಾಗಿರಬೇಕು. ಅದರ ದೃಷ್ಟಿ ಜಾತಿ-ಮತ-ಹುಚ್ಚುರಾಜನಿಷ್ಠತನ ಮೊದಲಾದ ಸಂಕುಚಿತ ವರ್ತುಲಗಳನ್ನು ವಿಸ್ತರಿಸುವಂತಾಗಿರಬೇಕು. ಅದರ ಟೀಕೆ ಸತ್ಯದ ಸಂಶೋಧನೆಗಾಗಿಯೊ ಸಂಸ್ಥಾಪನೆಗಾಗಿಯೊ ಇರಬೇಕಲ್ಲದೆ, ಯಾವುದೊಂದು ವ್ಯಕ್ತಿಯ ಇಲ್ಲವೆ ಪಕ್ಷದ ಮಾತನ್ನು ಪುರಸ್ಕರಿಸುವುದು ಇರಲಾಗದು. 'ದಕ್ಖನ್ ಪ್ರಭಾತ'ಈ ಗುರಿಯಿಂದ ಮುಂದು ವರಿದರೆ ನೈಝಾಮ್ ಕನ್ನಡಿಗರ ಸೇವೆಯನ್ನದು ಚೆನ್ನಾಗಿ ಮಾಡೀತು.

೯೨. ಜೇನು:— (ರವೀಂದ್ರರ ಐದು ಕಥೆಗಳು). ಅನುವಾದಕರು ಶ್ರೀಯುತ 'ರಮಾನಂದ' ಅವರು. ಧಾರವಾಡದ ರಂಗ-ಮಂಗ ರಂಜನೋದ್ಯಾನದ ಶನೆಯ ಗೊಂಚಲು. ಫೂ. ಕ್ಯಾ. ಆ. ೬೬ ಪುಟಗಳು. ಬೆಲೆ ೦-೪-೦.

೯೩. ಮೊಗವೀರ (ತ್ರೈಮಾಸಿಕ ಪತ್ರಿಕೆ). ಮುಂಬಯಿಯ ಮೊಗವೀರ ವ್ಯವಸ್ಥಾಪಕ ಮಂಡಲಿಯ ಮುಖಪತ್ರಿಕೆ. ಪ್ರಕಾಶಕರು ಶ್ರೀ. ಎಚ್. ಕೆ. ಕುಂದರನ್, ಮೊಗವೀರ ವ್ಯವಸ್ಥಾಪಕ ಮಂಡಲಿ, ೫೮ ನಾನಾಭಾಯಿಲೇನ್, ಕೋಟೆ, ಮುಂಬಯಿ. ಕ್ರೌ. ೧೮ ಪುಟಗಳು. ವಾರ್ಷಿಕ ಚಂದಾ ೧-೦-೦.

ನಮ್ಮ ಕೆಡೆಗೆ ಬಂದುದಿದು ಇದೇ ಜನವರಿಯ ಸಂಚಿಕೆ; ಎಂದರೆ ಎರಡನೆಯ ವರ್ಷದ ಮೂರನೆಯ ಸಂಚಿಕೆ; ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೆ ವಿಶೇಷವಾಗಿ ವಾಸಿಸುತ್ತಿರುವ 'ಮೊಗವೀರ' ಜಾತಿಯ ಜನರು, ತಮ್ಮ ಜನರಲ್ಲಿ ಜ್ಞಾನಪ್ರಸಾರವಾಗುವುದಕ್ಕೂ ತಮ್ಮ ಸಂಘದ ಚಟುವಟಿಕೆಗಳನ್ನು ಎಲ್ಲರಿಗೂ ತಿಳುಹಲಿಕ್ಕೂ ಈ ಪತ್ರಿಕೆ ಹೊರಡಿಸಿದ್ದಾರೆ. ಈ ಪತ್ರಿಕೆಯು ಮುಂಬಯಿ ನಿವಾಸಿಗಳಾದ ಮೊಗವೀರರೆಲ್ಲರಿಗೆ ಕನ್ನಡದ ಸಂಬಂಧವು ಎಂದೂ ತಪ್ಪದಂತೆ ಮಾಡಲು ಸೊಂಟಬಿಗಿದು ನಿಂತಿದೆ. ಮೊಗವೀರ ಸಮಾಜದ ಸೋದರ-ಸೋದರಿಯರಿಂದಲೆ ಬರೆಯಲಾದ ವಿವಿಧ ವಿಚಾರದ ಲೇಖನಗಳು ಇದರಲ್ಲಿ ಪ್ರಕಟವಾಗಿವೆ. ಯಶಸ್ವಿಯಾಗಿ ಬಹುಕಾಲ ಬಾಳಲಿ!



ಲಕ್ಷ್ಯ ಇರತಕದ !

" ಏನ್ರೀ, ನಿಮ್ಮ ಹೆಂಡತಿ ನಿಮ್ಮ ಅರಿವೀ ಆಂಚಡೀ ಬಗ್ಗೆ ಸಾಕಷ್ಟು ಲಕ್ಷ್ಯ ಕೊಡತಿರ ಬೇಕು—ಅಲ್ಲ?"

" ಅರಿವೀ ಆಂಚಡೀ ಮ್ಯಾಲೆ ಅಷ್ಟಕ ಯಾಕರೀ! ಇಡೀ ನನ್ನ ಇರುವಿಕೀ ಮ್ಯಾಲಕ ಯಾವಾಗಲೂ ಅಕೀ ಲಕ್ಷ್ಯ ಇರತಕದ!"

* * *

ಬಗೀ ಹರಿಯದ ಚಿಂತಿ

" ನಮ್ಮ ಹುಡುಗನ ವಿಷಯಂದರ ಒಂದು ದೊಡ್ಡ ಸಮಸ್ಯನೇ ಆಗಿ ಕೂತಕದ ನೋಡ್ರೆಪಾ! ನನ್ನ ಮನಿಯಾಕೀ ಮನಸು, ಮಗಾ ಡಾಕ್ಟರಾಗಬೇಕೂಂತ. ನಾ ಅಂತೀನಿ, ಸುಮ್ಮನೇ ನಮ್ಮ ಕೈವಕೀಲೀ ಉದ್ಯೋಗದೊಳಗಕ ತೊಡಕಿಸಿಕೊಂಡು ಬಿಡೂಣಾ ಅಂತ. ನಾಳೆ ಆ ರಾಜಮೋನ್ಯ ರಾ ಜೇ ಶ್ರೀ ಅನ್ನ ಬಹುದು: ತಾನೊಬ್ಬ ವೈದ್ಯಾನಿಕ ಆಗುವವಾ ಅಂತ. ನನಗಂತೂಳು ಒಗಟಿನಕ ಹಿಡೀದ್ಹಾಂಗ ಆಗೇದ ನೋಡ್ರೆಪಾ!"

" ಸರಿ, ಸರಿ! ನಿಮ್ಮ ಹುಡುಗನ ವಯಸ್ಸು ಎಷ್ಟು ಹೇಳ್ರಿ ಈಗ!"

" ಏಲ್ಲೀ ವಯಸರೀ; ಬರೂ ಏಪ್ರೆಲ್ ತಿಂಗಳೊಳಗ ಇನ್ನೂ ಹುಟ್ಟಾಂವ ಇದ್ದಾನ! ಹೆಂಡತಿ ಬಸಿರಿದ್ದಾಳಲ್ರೆಪಾ! ಆಕಿ ಗಂಡೇ ಹಡಿಯುತಾಳಂತ ಜೋಯಿಸರು ಭವಿಷ್ಯಾ ಹೇಳ್ಯಾರ! ಅದಕಕ ನನಗೊಂದು ದೊಡ್ಡ ಚಿಂತಿ ಬಿದ್ದಾದರೀ!

* * *

ಹಾಂಗಿದ್ದರ ಚಿಂತಿಬ್ಯಾಡ!

ಆಕೆ:— ನಮ್ಮ ಗಂಡ್ಯಾನ ಮದಿವಿ ಈ ಜನ್ಮದಾಗೇನೂ ಆಗತಕದಂತ ಅನಸವೊಲ್ಲದು ನನಗ. ತೀರಾ ಮೂರ್ಖತನದ ಹಾದೀನಕ ಹಿಡೀಲಿಕ್ಕೆ ಹತ್ತ್ಯಾನೆ.... ಸುಲ್ಲಿ ಬಯ್ದು!

ಅತ:— ಹಾಂಗಿದ್ದರ ಏನೂ ಚಿಂತೀ ಮಾಡಬ್ಯಾಡ;ನ್ನಿಅವನ ಮದಿವ್ಹಿಯಾತ್ರಿಯಿಂದ ಆಗತಕದ!

ಆಕೆ:— ಅದ ಹ್ಯಾಂಗದೂ?

ಅತ:— ಅಧ್ಯಾಂಗಂದರ? ಮುದಿವೀ ಮಾಡಿಕೊಳ್ಳೂದಂದರ ಮೂರ್ಖತನದ ಹಾದೀ ಹಿಡಿದವರದೇ ಕೆಲಸ ಅದ!

* * *

ಜಗಳಾಟಾ ಕಪ್ಪಿಸಬೇಕಾಗೇದ!

" ಏನ್ರೀ ರಾಯರs! ಹೀಂಗ್ಯಾಕ ಓಡಿ ಹೋಗಲಿಕ್ಕೆ ಹತ್ತೀರಿ? ಏನಾಗೇದ ಯಾರಿಗೆ?

" ಇನ್ನೇನೂ ಇಲ್ಲರಿ! ಬೇಗನೇ ಓಡಿ ಹೋಗಿ, ಗಂಡಾ ಹೆಂಡತೀ ನಡುವಿನ ಜಗಳಾಟಾ ಒಂದು ತಪ್ಪಿಸಬೇಕಾಗೇದ!"

" ಯಾರ್ರೀ ಅವರು....ಗಂಡಾ-ಹೆಂಡತಿ ಅಂದರ?"

" ನಾನು ಮತ್ತು ನನ್ನ ಹೆಂಡತಿ; ಇನ್ನಾರು ಇರಬೇಕು?"

* * *

ಸ್ವಂತದ ಅನುಭವ

ಡಾಕ್ಟರ್:— ಇದು ನಾನೇ ನನ್ನ ಶೋಧಕ ಬುದ್ಧಿಯಿಂದ ಕಂಡು ಹಿಡಿದ ಪೇಟೆಂಟ್ ಔಷಧ. ಇದಕ್ಕ ಹೆಸರು ' ಸ್ವರ್ಗ ಸುಖದಾಯಿನಿ ' ಅಂತ ಇಟ್ಟೀನಿ. ಇದರ ದೊಂದು ಬಾಟ್ಲೀ ತೊಗೊಂಡು ಹೋಗ್ರಿ; ನಿಮ್ಮ ಇರೂ ಬ್ಯಾನಿಗಳೆಲ್ಲಾ ಏಕದಂ ಓಡಿ ಹೋದೂ ಅಂತಕ ತಿಳಿದುಬಿಡ್ರಿ!

ರೋಗಿ:— ಯಾತರ ಮ್ಯಾಲಿಂದs ಹೇಳತೀರೀ ಡಾಕ್ಟರ್ ಇಷ್ಟೊಂದು ಗಟ್ಟಿಯಾಗಿ?

ಡಾಕ್ಟರ್:— ನನ್ನ ಸ್ವಂತ ಅನುಭವದ ಮ್ಯಾಲಿಂದನs ಹೇಳತೀನಿ. ಒಮ್ಮೆ ಒಂದು ಬಾಟ್ಲೀ ತೊಗೊಂಡು ಹೋದವರು ಮತ್ತೊಂದು ಸಲ ನನ್ನದವಾಖಾನೆಗೆ ಮಾರೀ ಸುದ್ದಾ ತೋರಿಸಿಲ್ಲ! ಇದಕೇನಂತೀರಿ ನೀವು?

* * *

ಕಲ್ಪನಾ ಇರಬೇಕಾಗಿತ್ತು!

ಖಾನಾವಳಿಯ ಮಾಲಕನಾದ ವೆಂಕಟರಮಣಾಚಾರಿ ಅಡಿಗೆಯ ಶೇನಪ್ಪನನ್ನು ಕುರಿತು ಹೇಳಿದ:

" ಶೇನಪ್ಪಾ, ಇನ್ನ ನಿನ್ನ ನೌಕರೀ ಸಾಕು ನಮಗ! ನಿನ್ನ ಪೂರ್ತೀ ಪಗಾರಾ ತೊಗೋ! ಹಾದೀ ಹಿಡದು ಬಿಡು!"

" ಆದ್ಯಾಕರೀ ಹೀಂಗ ಅಂತೀರಿ? ನನ್ನಿಂದ ಆಗಿರೂ ತಪ್ಪಾದರೂ ಏನು? ಊಟಕ್ಕ ಬರುವವರನ್ನ ಕೇಳ್ರಿ ಬೇಕಾದರ; ಅಡಿಗಿ ಕೆಟ್ಟಾ ಅಂತ ಒಬ್ಬನೇ ಒಬ್ಬ ಹೇಳಲಿ; ನನಗ ಬರಬೇಕಾದ ಸಂಬಳಾ ಎಲ್ಲಾ ಬಿಟ್ಟು ಹೋಗತೀನಿ!"

" ಅದಕಕ ಅಪಾನಾ ಹೇಳಿದ್ದು ನಿನಗ! ಇಲ್ಲಿ ಬೀಗರಿಗೆ ಕೊಡೂ ಔತಣದೂಟದ ಅಡಗೀ ಮಾಡಲಿಕ್ಕೆ ಇಲ್ಲ; ಖಾನಾವಳೀ ಒಳಗ ಅಡಿಗೀ ಮಾಡಲಿಕ್ಕೆ ಇದ್ದೀದೀ ಅಂಬೂದರ ಕಲ್ಪನಾ ಇರಬೇಕಾಗಿತ್ತು ನಿನಗ! ತಿಳೀತೇನು?

ನ. ನ.

* * *

ಸೇಫ್ಟಿ ರೇಝರ್ ೨ ಬ್ಲೇಡು ಸಮೇತ, ೬ ಆಣೆಗೆ ಒಂದು ಸೆಟ್ಟು.

೧ ಬ್ಲೇಡಿಗೆ ೬ ಉತ್ತಮ ಶೇವ್!
೫ ಬ್ಲೇಡಿಗೆ ೬ ಆಣೆಗಳು.

ನಾಲ್ಕೂ ನಿಟ್ಟಿನ ನೋಟ

ಅಮೇರಿಕೆಯ ನಿರ್ಧಾರ

ಕಳೆದ ತಿಂಗಳು ಕಾಂಗ್ರೆಸಿಗೆ ಕಳುಹಿಸಿದ ಸಂದೇಶದಲ್ಲಿ, ಅಧ್ಯಕ್ಷ ರೂಜವೆಲ್ಟರು ಅಮೇರಿಕೆಯ ಯುದ್ಧಘೋರಣವನ್ನು ಸ್ಪಷ್ಟವಾದ ಮಾತುಗಳಲ್ಲಿ ಡಂಗುರಿಸಿದ್ದಾರೆ. ಇನ್ನು ಮುಂದೆ 'ಅಮೇರಿಕೆಯು ತಟಸ್ಥ' ಎಂದು ತಿಳಿಯಲು ಕೇವಲ ಕಾಯಿದೆ ಪಂಡಿತರಿಗಷ್ಟೆ ಶಕ್ಯ ವಿದೆ ಎನಬಹುದು. "ನಾಝೀವಾದಕ್ಕೆ ಜಯವಾದರೆ ಜಗತ್ತಿಗೆ ಕಷ್ಟ ತಪ್ಪಿದ್ದಲ್ಲ .. ಮಾನವನು ತನ್ನ ಪ್ರಗತಿಯ ಇತಿಹಾಸದಲ್ಲಿ ಮಾಡಿದ ಸತ್ಕಾರ್ಯ-ಸಾಹಸಗಳು ಎಂದಿಗೂ ನಿರರ್ಥಕವಾಗುವವು..ಇಂಗ್ಲಂಡಿನ ಶಕ್ತಿಯ ಮೇಲೆ ಜಗತ್ತಿನ ಸ್ವಾತಂತ್ರ್ಯ ಅವಲಂಬಿಸಿದೆ..ನಾವು ಸ್ವಾತಂತ್ರ್ಯವನ್ನು ಉಳಿಸುವುದಾದರೆ ಇಂಗ್ಲಂಡನ್ನೂ ಉಳಿಸಲೇ ಬೇಕು..ಆದಕಾಗಿ ನಿರಾತಂಕವಾಗಿ, ಮುಕ್ತಹಸ್ತರಾಗಿ ಇಂಗ್ಲಂಡಿಗೆ ಸಹಾಯವನ್ನೊದಗಿಸುವುದು ನಮ್ಮ ಕರ್ತವ್ಯ..ಸರ್ವಾಧಿಕಾರಿತ್ವ ಉಳಿಪವರೆಗೆ ಜಗತ್ತಿನಲ್ಲಿ ಶಾಂತಿ-ನ್ಯಾಯ-ಧರ್ಮಗಳು ಶಕ್ಯವಿಲ್ಲ .. ಆದಕಾಗಿ ಹಿಟ್ಲರ್-ಮುಸೋಲಿನಿಯವರ ರಾಜಕೀಯ ತತ್ತ್ವಗಳನ್ನು ಹೊಡೆದೋಡಿಸಿ, ಸಾಮಶೇಷ ಮಾಡುವವರೆಗೆ ಹೋರಾಡಲು ನಮ್ಮ ನಿರ್ಧಾರ ಬೇಕು; ಆದಕಾಗಿ ಸಿದ್ಧತೆಗಳನ್ನೂ ನಾವು ತಡೆ ಇಲ್ಲದೆ ಒದಗಿಸಿಕೊಳ್ಳಲು ತೊಡಗಬೇಕು." ಈ ಆಶಯದ ಸಂದೇಶವನ್ನಲ್ಲದೆ, ಬೇರೆ ಭಾಷಣಗಳಲ್ಲಿ, ಅಧ್ಯಕ್ಷ ಪದವಿಯ ಅಧಿಕಾರಾರೂಢರಾಗುವ ಅಭಿಷೇಕೋತ್ಸವದ ಸಮಯದಲ್ಲಿ, ರೂಜವೆಲ್ಟರು ತಮ್ಮ ಘೋರಣವನ್ನು ನಿಃಸಂದಿಗ್ಧವಾದ ಶೈಲಿಯಲ್ಲಿ ಸಾರಿದ್ದಾರೆ.

ಘೋರಣದ ವೈಶಿಷ್ಟ್ಯ

ಅಧ್ಯಕ್ಷರ ಈ ಎಲ್ಲ ಭಾಷಣಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದವರು, ಈ ಘೋರಣದಲ್ಲಿ ತೀರ ಮಹತ್ತ್ವದ್ದಾದ ವೈಶಿಷ್ಟ್ಯಗಳನ್ನು ಕಾಣದಿರಲಾರರು. ಆ ವೈಶಿಷ್ಟ್ಯಗಳನ್ನು ಮೂರು ವಿಧವಾಗಿ ಕಾಣಬಹುದು. (೧) ಒಂದು, ಇಂಗ್ಲಂಡವು ಈಗ ನಡೆಯಿಸಿದ ಹೋರಾಟವು ಜಗತ್ತಿನ ಸ್ವಾತಂತ್ರ್ಯವನ್ನು ಉಳಿಸುವುದಕ್ಕೆ ಎಂದು ರೂಜವೆಲ್ಟರು ಅಧಿಕೃತವಾಗಿ ಒಪ್ಪಿಕೊಂಡಿದ್ದಾರೆ. ಈ ಮಾತಿನ ಮಹತ್ತ್ವ ನಮ್ಮ ದೇಶಕ್ಕೆ ನಿಕಟವಾಗಿದೆ. 'ಇಂಗ್ಲಂಡವು ತನ್ನ ಯುದ್ಧಘೋರಣವನ್ನು ಸಾರಲಿಲ್ಲ' ಎಂಬುದೂ ಕಾಂಗ್ರೆಸಿನ ಅಸಹಕಾರ ಘೋಷಣೆಗೆ ಕಾರಣವಾಗಿದೆ. ಹೀಗಿರುವಾಗ, ರೂಜವೆಲ್ಟರ ಅಭಿಪ್ರಾಯದಲ್ಲಿ ತಥ್ಯತೆ ಇದೆಯೆ ಇಲ್ಲವೆ—ಎಂಬುದನ್ನು ನಾವು ತಿಳಿಯಲು ಯತ್ನಿಸೋಣ. ರೂಜವೆಲ್ಟರು ಕೇವಲ ತಮ್ಮ ಅಭಿಪ್ರಾಯವನ್ನು ಸಾರಿದ್ದಾರೆಯೆ, ಇಲ್ಲವೆ ಇಂಗ್ಲಂಡಿನ ಮಂತ್ರಿಮಂಡಳವು ಅಧಿಕೃತವಾಗಿ ಅವರಿಗೆ ತನ್ನ ಘೋರಣವನ್ನು ಒಪ್ಪಿಕೊಂಡಿದೆಯೆ? ಇದು ಕೇವಲ ರೂಜವೆಲ್ಟರ ವೈಯಕ್ತಿಕ ಅಭಿಪ್ರಾಯವಾಗಿದ್ದರೆ ನಮಗೆ ಆದರ ಮಹತ್ತ್ವವೆ ಇಲ್ಲ. ಆದರೆ ಇದು ವೈಯಕ್ತಿಕ ಅಭಿಪ್ರಾಯವಾಗಲಾರದು ಎಂಬುದಕ್ಕೆ ಕಾರಣಗಳಿವೆ. ಇಂಗ್ಲಂಡಿಗೆ ಎಲ್ಲರೀತಿಯಿಂದ ಸಹಾಯ-ಸೌಕರ್ಯಗಳನ್ನು ಒದಗಿಸಿಕೊಡಲು ರೂಜವೆಲ್ಟರು ನಿರ್ಧರಿಸಿದ್ದಾರೆ. ಕೇವಲ ತಮ್ಮ ಅಭಿಪ್ರಾಯದಿಂದಲೂ ಇಷ್ಟೊಂದು ಧನ-ಶಸ್ತ್ರಸಂಗ್ರಹಗಳನ್ನು ಕಳುಹಿಸಿಕೊಡುವ ಹೊಣೆಯನ್ನು ಅವರು ಹೊತ್ತಿರಲಾರರು. ಕಳೆದ ಯುದ್ಧದಲ್ಲಿ ಅಮೇರಿಕೆಯಿಂದ ತಂದ ಸಾಲವನ್ನು ಇಂಗ್ಲಂಡವು ಕೊಡಲೊಪ್ಪಲಿಲ್ಲ; ಹೀಗಿದ್ದರೂ ಈಗ ಮತ್ತೊಮ್ಮೆ ಅಂತಹ ಹೊಣೆಯನ್ನೇ ಹೊರಲು ಅಧ್ಯಕ್ಷರು ಸಿದ್ಧರಿರಬೇಕಾದರೆ, ಅವರಿಗೆ ಅಧಿಕೃತವಾದ ಆಶ್ವಾಸನೆ ಸಿಕ್ಕಿರಲೇ ಬೇಕು.

ಒಂದು ಸಂದೇಹ

'ಅಮೇರಿಕೆಗೆ ಕೊಟ್ಟ ಆಶ್ವಾಸನವನ್ನು ಜಗತ್ತಿಗೆಯೆ ಪ್ರಕಟವಾಗಿ ಇಂಗ್ಲಂಡವು ಸಾರಬಾರದೇಕೆ?—ಈ ಸ್ವಾತಂತ್ರ್ಯ ತತ್ತ್ವವು 'ಬಿಳಿಬಣ್ಣ'ದವರಿಗೆ ಮಾತ್ರವಾಗಿದೆಯೆ, ಭಾರತಕ್ಕಾದರೂ ಅನ್ವಯಿಸುವುದೆ?—ಹೀಗಿದ್ದರೆ ರೂಜವೆಲ್ಟರ ಭಾಷಣದ ತರುವಾಯದಲ್ಲಿ ಕೂಡ ಯುದ್ಧಘೋರಣವನ್ನು ಸಾರಲು ಚರ್ಚಿಲ್‌ರು ಪಾರ್ಲಮೆಂಟಿನಲ್ಲಿ ನಿರಾಕರಿಸಿದರೇಕೆ?' ಇಂತಹ ಸಂದೇಹಗಳು ತಲೆದೋರುವುದು ಸಮಂಜಸವೆ ಆಗಿದೆ. ಇಂಗ್ಲಂಡಿನ ಯುದ್ಧಘೋರಣವೇನು—ಎಂಬ ಪ್ರಶ್ನೆಗೆ ಉತ್ತರಕೊಡಲು ಚರ್ಚಿಲ್‌ರು ಅನೇಕಸಲ ನಿರಾಕರಿಸಿದ್ದಾರೆ; ನಿಜ. ಆದರೆ ಅಷ್ಟುಮಾತ್ರಕ್ಕೆ ಅವರ ಉದ್ದಿಶ್ಯಕ್ಕಾಗಿ ಸಂಶಯಗೊಳ್ಳುವುದು ಸಮಂಜಸವೆನಿಸಬಹುದೆ? 'ಘೋರಣವನ್ನು ಸಾರಿದರೆ ಸಹಾಯಕಾರಕವಾಗುವುದು' ಎಂದು ಪಾರ್ಲಮೆಂಟಿನ ಸದಸ್ಯರೊಬ್ಬರು ಕೇಳಿದಾಗ—'ನಾಝಿಗಳ ವಿರುದ್ಧ ಯುದ್ಧ ಹೂಡಿದ್ದಕ್ಕೆ ಅದು ಸ್ಪಷ್ಟವೆ ಆಗಿದೆ' ಎಂದರು ಚರ್ಚಿಲ್‌ರು! ಇಷ್ಟೊಂದು ಹಟದಿಂದ ಬಾಯ್ಮಾತಿನಲ್ಲಿ ಕೂಡ ಘೋರಣವನ್ನು ಸಾರಲು ನಿರಾಕರಿಸುವುದರ ಗೂಢವೇನಿದೆ? 'ಅಷ್ಟೊಂದು ಗೂಢವಿಲ್ಲ, ವ್ಯಾವಹಾರಿಕ ತೊಡಕು ಒಂದಿದೆ, ಅದಕಾಗಿ ಚರ್ಚಿಲ್‌ರು ಹಟ ಹಿಡಿದಿದ್ದಾರೆ. ಎಂದು ನಮ್ಮ ಅಭಿಪ್ರಾಯ' ಆ ವ್ಯಾವಹಾರಿಕ ತೊಡಕು ಎಂದರೆ ಹೀಗೆ? (೧) ದಿನಾಲು ಸಾವಿರಾರು ಬಾಂಬುಗಳಿಂದ ಸಂಕಟಗಳಿಗೂ ಸಾವಿಗೂ ಇಂಗ್ಲಂಡಿನ ಜನರು ತುತ್ತಾಗುತ್ತಿದ್ದಾರೆ; ಆ ಅನುಭವದಿಂದ ಉದ್ದೀಪಿತರಾಗಿಯೆ ಅವರು ಯುದ್ಧಸಹಾಯಕ್ಕಾಗಿ ಎಲ್ಲ ರೀತಿಯ ನಿರ್ಘೃಣತ್ಯಾಗಕ್ಕೆ ಸಿದ್ಧರಾಗಿದ್ದಾರೆ. ಇಂತಹ ಜನತೆಗೆ 'ಈ ನಮ್ಮ ಯುದ್ಧವು ಜಗತ್ತಿನ ಸ್ವಾತಂತ್ರ್ಯವನ್ನು ಉಳಿಸುವುದಕ್ಕೆ' ಎಂಬ ತತ್ತ್ವವನ್ನು ಹೇಳಿದರೆ? ಬಾಂಬುಗಳು ಬೀಳುವುದು ತಮ್ಮ

ತಲೆಯ ಮೇಲೆ! ಯುದ್ಧಸಹಾಯಕ್ಕಾಗಿ ಕಷ್ಟ-ನಷ್ಟಗಳನ್ನು ಸಹಿಸುವವರು ತಾವು! ಈ ಯಾತನೆಗೆ ಮಿತಿಯೂವುದು ಎಂದರೆ· ಜಗತ್ತಿನಲ್ಲಿ ಸ್ವಾತಂತ್ರ್ಯವು ಭದ್ರವಾಗಿ ಸಿಂಹಾಸನಾರೂಢವಾಗುವ ವರೆಗೆ! ಸಾವಿನೆದುರು ಅಸಹಾಯವಾಗಿ ನಿಂತ ಸಾಮಾನ್ಯ ಮನುಷ್ಯನಿಗೆ ಈ ಮಾತು **ಖಂಡಿತವಾಗಿಯೂ ಉತ್ಸಾಹ ವನ್ನುಂಟು ಮಾಡದು.** ತಮ್ಮ ದೇಶದಲ್ಲಿ ಏನೇ ಅನರ್ಥವಾದರೂ ಜನತೆಯ ಉತ್ಸಾಹಭಂಗವಾಗಬಾರದು ಎಂದು ಚರ್ಚಿಲ್‌ರ ದೃಢ ನಿಶ್ಚಯ. (೨) ಇದಲ್ಲದೆ, ಹೊರಗಿನ ವ್ಯವಹಾರ ತೊಂದರೆಯನ್ನು ತಪ್ಪಿಸಲೂ ಚರ್ಚಿಲ್‌ರು ಹೀಗೆ ಹಟ ಹಿಡಿದಿದ್ದಾರೆನಿಸಬಹುದು· 'ಜಗತ್ತಿನ ಎಲ್ಲ ರಾಷ್ಟ್ರಗಳ ಸ್ವಾತಂತ್ರ್ಯವೆ ನಮ್ಮ ಗುರಿ' ಎಂದು ಅಧಿಕೃತವಾಗಿ ಸಾರಿದರೆ,ಮರುಗಳಿಗೆ ನಾರ್ವೆಯಿಂದ ಗ್ರೀಸದವರೆಗೆ ಎಲ್ಲ ಯುರೋಪೀಯ ರಾಷ್ಟ್ರಗಳು ಇಂಗ್ಲಂಡಿನಿಂದ ಯುದ್ಧ-ಸಹಾಯವನ್ನು ನಿರೀಕ್ಷಿಸುವುವು, ಅದನ್ನು ಒದಗಿಸುವುದೂ ಇಂಗ್ಲಂಡಿನ ಕರ್ತವ್ಯವೆನಿಸುವುದು;ಆದರೆ ಸದ್ಯದ ಸ್ಥಿತಿಯಲ್ಲಿ ಪಾಗೆ ಸಹಾಯವನ್ನು ಒದಗಿಸುವುದು ಶಕ್ಯವಿಲ್ಲ, ಅನುಕೂಲವೂ ಎನಿಸುವಂತಿಲ್ಲ. ಕೈತಿಯಲ್ಲಿ ತಾರದ್ದನ್ನು ಮಾತಿನಲ್ಲಿ ಹೇಳಿದರೆ ಶತ್ರುವು ಅದರ ಲಾಭವನ್ನು ಪಡೆಯಬಹುದು. ಹೀಗಾಗಿ 'ಅಧಿಕೃತವಾದ ಯುದ್ಧಘೋರಣದ ಘೋಷಣೆಗೆ ಇದು ಸಮಯವೆ ಅಲ್ಲ' ಎಂದು ಚರ್ಚಿಲ್‌ರು ಅಭಿಪ್ರಾಯಪಟ್ಟಿರಬಹುದು.

ಒಂದು ಭೀತಿ

ಮೇಲಿನ ಮಾತನ್ನು ಒಪ್ಪಿಕೊಂಡರೂ, ಬೇರೊಂದು ಕಾರಣ ಕ್ಕಾಗಿ ವಿಂಕ್ಷರ ಮನಸಿನಲ್ಲಿ ಸಯುಕ್ತಿಕವಾದ ಒಂದು ಭೀತಿ ಹುಟ್ಟಬಹುದಾಗಿದೆ. ಯುದ್ಧದ ನಿರ್ಣಯವು ಅತಕ್ಯವೆಂದಾಗಲಿ, ಬೇರೆ ಇನ್ನೊಂದು ಕಾರಣಕ್ಕಾಗಲಿ ಇಂಗ್ಲಂಡವು ಒಂದು ವೇಳೆ ಜರ್ಮನಿಯೊಡನೆ ಒಪ್ಪಂದಮಾಡಿಕೊಂಡರೆ ಹೇಗೆ? ಮಾಡಿ-ಕೊಳ್ಳಲು ಆಡ್ಡಿ ಯಾವುದಿದೆ? 'ಇನ್ನೊಬ್ಬರ ಸ್ವಾತಂತ್ರ್ಯವೂ ತಮ್ಮ ಗುರಿ' ಎಂದು ಇಂಗ್ಲಂಡವು ಅಧಿಕೃತವಾಗಿ ಸಾರಿಲ್ಲ, ಇನ್ನೊಬ್ಬರ ಸುಖ-ದುಃಖಕ್ಕಾಗಿ ಇಂಗ್ಲಂಡವು ಪಜಸಬದ್ಧವಾಗಿಲ್ಲ. ಆದಕಾಗಿಯೆ ಚರ್ಚಿಲ್‌ರು ಹೀಗೆ ಯುಕ್ತಿಯನ್ನು ಹೂಡಿದ್ದಾರೆ. ಇಂಗ್ಲಂಡಿನವರಿಗೇ ಯುದ್ಧ ಬೇಡವಾದರೆ ಬೇರೆ ಯಾರು ಅವರನ್ನು ಒತ್ತಾಯದಿಂದ ಹೋರಾಡಿಸಬಲ್ಲರು—ಎಂಬ ಭೀತಿ ಸಮಂಜಸವಾದುದು. ಆದರೆ ಇಂಗ್ಲಂಡಿನ ಘೋರಣ, ರಾಷ್ಟ್ರೀಯ ಅವಶ್ಯಕತೆ, ಮಂತ್ರಿಮಂಡಳದ ನಿರ್ಧಾರ— ಇವು ಗಳನ್ನು ತಿಳಿದುಕೊಂಡವರಿಗೆ ಇಂತಹ ಭೀತಿಯೆ ಬಾಧಿಸುವಂತಿಲ್ಲ. ಒಂದು ವೇಳೆ— ಎಲ್ಲರಿಗೂ ಇಂತಹ ಭೀತಿ ಒದಗುವುದೆಂಬ ಅಸಂಭವನೀಯ ಪರಿಸ್ಥಿತಿಯನ್ನು ಕಲ್ಪಿಸಿದರೆ, ರೂಜವೆಲ್ಟರ ಮಾತಿನ ಎರವಣಿಯ ವೈಶಿಷ್ಟ್ಯವು ಆ ಭೀತಿಯನ್ನು ಹೊಡೆದೋಡಿ ಸುವುದು. ರೂಜವೆಲ್ಟರು ಸ್ಪಷ್ಟವಾಗಿ ಹೇಳಿದ್ದಾರೆ: 'ನಾಗರಿಕ-ನಾಡವನು ನಾಮಶೇಷವಾಗುವುದೆ ನಮ್ಮ ಗುರಿ.... ಇಂದಿನ ದುರ್ಧರ ಪ್ರಸಂಗದಲ್ಲಿ ಅನ್ಯಾಯವಾಗಿ, ಅನಿವಾರ್ಯವಾಗಿ, **ಹೆದರಿಕೆ-ಬೆದರಿಕೆಗಳನ್ನು ತೋರಿಸಿ, ಯಾರಾದರೂ ಒಪ್ಪಂದ ವನ್ನು ತಾತ್ಪೂರ್ತಿಕ ಹತವೀರ್ಯವಾದ ರಾಷ್ಟ್ರದ ಮೇಲೆ ಹೇರಿದರೆ, ಅದನ್ನು ಅಮೇರಿಕೆಯು ಎಂದಿಗೂ ಒಪ್ಪುವುದಿಲ್ಲ.** ಯುದ್ಧದ ನಿಜವಾದ ಉದ್ದೇಶ, ಎಂದರೆ 'ಸರ್ವಾಧಿಕಾರಿತ್ವದ ನಿರ್ಮೂಲವಾಗುವವರೆಗೆ ಯಾವ ಒಪ್ಪಂದವನ್ನೂ ಅಮೇರಿಕೆಯು ಒಪ್ಪುವುದಿಲ್ಲ!' ಇದರರ್ಥವೇನು? ಒಂದುವೇಳೆ ಇಂಗ್ಲಂಡವು ಒಪ್ಪಂದವನ್ನು ಹೂಡಿದರೂ ಯುದ್ಧವನ್ನು ಕೊನೆಯವರೆಗೆ ಸಾಗಿಸಲು ಅಮೇರಿಕೆಯ ನಿರ್ಧಾರವಿದೆ! ಇದು ತಟಸ್ಥತೆಯ ಲಕ್ಷಣವೆ? ಇಷ್ಟೊಂದು ಧೈರ್ಯದಿಂದ ರೂಜವೆಲ್ಟರು ಘೋಷಿಸುವುದಾದರೆ, ಅವರಿಗಾದರೂ ವಿಶ್ವಾಸವಾಗುವಂತಹ ಮಾತನ್ನೆ ಇಂಗ್ಲಂಡ್ ಸರಕಾರವು ಒಪ್ಪಿರಲು ಸಾಕು.

ಅಮೇರಿಕೆಯು ಸಂಪೂರ್ಣಸಹಾಯ

ಸದ್ಯ ಯುದ್ಧದಲ್ಲಿ ತೊಡಗಿದ ಮಿತ್ರರಾಷ್ಟ್ರಗಳಿಗೆ ಅಮೇರಿ-ಕೆಯು ಯಾವ ರೀತಿಯಲ್ಲಿ ನೆರವನ್ನು ಕೊಡಬಹುದೆಂಬ ವಿಷಯವನ್ನೂ ಅಧ್ಯಕ್ಷ ರೂಜ್‌ವೆಲ್ಟರು ಉಗ್ಗಡಿಸಿದ್ದಾರೆ. ಈ ಉಗ್ಗಡಣೆಯಲ್ಲಿಯೂ ಅವರ ಮುನ್ನೋಟತನವು ವ್ಯಕ್ತವಾಗುತ್ತ ಲಿದೆ. ಯುದ್ಧದಲ್ಲಿ ಬಿದ್ದ ಹೊರಗಿನ ರಾಷ್ಟ್ರಗಳು ಈಗ ಎಂತಹ ಆರ್ಥಿಕಸಂಕಟದಲ್ಲಿವೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಇಂದಿಯೆ ಯುದ್ಧವುಗಿದರೂ ಆರ್ಥಿಕದೃಷ್ಟಿಯಿಂದ ಚೇತರಿಸಿ ನಿಲ್ಲಲಿಕ್ಕೆ ಯುದ್ಧ್ಯಮಾನ ರಾಷ್ಟ್ರಗಳು ಅದೆಷ್ಟೋ ದಶಮಾನ ಗಳನ್ನು ಕಳೆಯಬೇಕಾಗುವುದು. ಈಗ ಸಾಲವಾಗಿ ಕೊಟ್ಟ ಹಣವನ್ನಾಗಲಿ, ಯುದ್ಧಸಲಕರಣೆಯ ಬೆಲೆಯನ್ನಾಗಲಿ ನಗದು-ಹಣದ ಮೂಲಕವಾಗಿಯೆ ಪಡೆಯಬಹುದೆಂಬ ನಂಬುಗೆ ಅಮೇರಿ ಕೆಗೆ ಇಂದು ಇಲ್ಲವಾದರೂ-ತನ್ನ ಭವಿಷ್ಯತ್ ಸಂರಕ್ಷಣೆಗಾಗಿಯೂ ಇರಬಹುದು—ಈಗ ಆದು ಮಿತ್ರರಾಷ್ಟ್ರದವರಿಗೆ ಸಾಲಕೊಡಲು ಸಿದ್ಧವಾಗಿದೆ. ಈ ವಿಷಯ ಮಾತನಾಡುವಾಗ ಮಂತ್ರಿ ರೂಜ್-ವೆಲ್ಟರು · ಕೇವಲ ಹಣವಿಲ್ಲದುದಕ್ಕಾಗಿ ಹೊರಗಿನ ರಾಷ್ಟ್ರಗಳು ಶತ್ರುಗಳಿಗೆ ಶರಣಾಗತರಾಗದಂತೆ ನಾವು ನೋಡಿಕೊಳ್ಳಬೇಕು. ನಗದು ಹಣವನ್ನು ಕೂಡುವ ಕರಾರನ್ನು ಹಾಕದೆ,ಇನ್ನೇನಾದರೂ ವಸ್ತುಗಳನ್ನು ಪೂರಯಿಸಿ ಮುಟ್ಟಿಸಬಹುದಾದ ಕರಾರಿನಿಂದ ಕೂಡ ಅವರಿಗೆ ನಾವು ಸಾಲಕೊಡಬೇಕು; ಯುದ್ಧೋಪಕರಣ ಪೂರಯಿಸಬೇಕು' ಎಂದಿರುವರು. ಇಷ್ಟೊಂದು ಒಳಹೊಕ್ಕು ಕಾರ್ಯಮಾಡಲು ಸಿದ್ಧವಾದ ಅಮೇರಿಕೆ, ಇನ್ನೂ ತಟಸ್ಥರಾಷ್ಟ್ರ ವಾಗಿಯೆ ಇದೆ ಎಂದರೆ ಯಾರು ಒಪ್ಪಿಕೊಳ್ಳಬೇಕು? ಒಟ್ಟಿನಲ್ಲಿ ನೋಡಿದರೆ ಮಹಾಯುದ್ಧ ದಿನದಿನಕ್ಕೆ ಜಗತ್ತಿನ ಮೂಲೆ ಮೂಲೆ ಗಳಲ್ಲಿಯೂ ಕಾಲುಚಾಚುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಈ ಮಹಾಪ್ರಳಯದಿಂದ ಉಳಿಸುವ ಮತ್ಸ್ಯಾವತಾರದ ಹೊಣೆ-ಗಾರಿಕೆ ಯಾವ ಮಹಾಪುರುಷನ ತಲೆಯಮೇಲಿದೆಯೋ ಏನೋ! ರೂಜ್‌ವೆಲ್ಟರಂತೂ ಸಮರಕ್ಕೆ ಸಡ್ಡುಹೊಡೆದಂತಾಗಿದೆ.

ಕನ್ನಡ ಸಾಹಿತ್ಯಪ್ರಚಾರದ ಸತ್ಕಾರ್ಯದೊಂದಿಗೆ ಕೈತುಂಬ

★ ಹಣ ದೊರೆಯುವ ಸಂದರ್ಭ! ★

ಜಯಂತಿಗೆ ಏಜಂಟರು ಬೇಕಾಗಿದ್ದಾರೆ!

★

ಮೈಸೂರು, ಬೆಂಗಳೂರು, ಡಾವಣಗೆರೆ, ಮುಡಿಕೇರಿ, ಬೆಳಗಾಂವಿ, ರಾಣೆಬೆನ್ನೂರು,
ತುಮಕೂರು, ಕೋಲಾರ, ಹರಿಹರ, ಕಡೂರು, ಅರಸಿಕೆರೆ, ಭದ್ರಾವತಿ,
ಮಂಡ್ಯ, ತೀರ್ಥಹಳ್ಳಿ, ಇಳಕಲ್, ಜಮಖಂಡಿ, ಗುಲಬುರ್ಗಾ,
ಚಿತ್ರದುರ್ಗ, ಹೈದ್ರಾಬಾದ, ಉಡಿಪಿ, ಗೋಕರ್ಣ, ಬಿಜಾಪೂರ,
ಬಾಗೇವಾಡಿ, ಸವಣೂರು, ಹಾನಗಲ್

☼ ಮೊದಲಾದ ಊರುಗಳಲ್ಲಿ ☼

ಜಯಂತಿಯ ಬಿಡಿಸಂಚಿಕೆಗಳನ್ನು
ಮಾರಾಟಮಾಡಲಿಕ್ಕೂ ವರ್ಗಣಿದಾರರನ್ನು ಕೂಡಿಸ
ಲಿಕ್ಕೂ, ವಿಶ್ವಾಸಾರ್ಹರೂ ಉತ್ಸಾಹಿಗಳೂ ಆದ ಏಜಂಟರನ್ನು
ನಿಯಮಿಸಬೇಕಾಗಿದೆ. ಏಜಂಟರಾಗಲು ಇಷ್ಟಪಡುವವರು ಪತ್ರವ್ಯವಹಾರ
ವನ್ನು ಮಾಡಿ ಕೂಡಲೆ ಏಜನ್ಸಿಯ ನಿಯಮ ಮೊದಲಾದುವುಗಳನ್ನು ಅರಿತುಕೊಳ್ಳ
ಬೇಕು. ಈ ಮೊದಲು ಏಜನ್ಸಿಯಿಲ್ಲದ ಪಟ್ಟಣ-ನಗರಗಳಲ್ಲಿ ಜಯಂತಿಯ ಏಜನ್ಸಿ
ಯನ್ನು ಪ್ರಾರಂಭಿಸಬೇಕೆನ್ನುವವರೂ ಪತ್ರ ಬರೆದು ಎಲ್ಲ ಮಾಹಿತಿ ತರಿಸಿಕೊಳ್ಳಬೇಕು.

★

ವ್ಯವಸ್ಥಾಪಕ 'ಜಯಂತಿ' ಧಾರವಾಡ

ದಿ ಯುನಾಯಿಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್

ಹೆಡ್ ಆಫೀಸ್ ಧಾ ರ ವಾ ಡ.

★ ನಿಮ್ಮ ಮೂಡುವ ಅನುಕೂಲವುಳ್ಳ ಕರ್ನಾಟಕಸ್ಥರು, ಈ ಭರದಿಂದ ಬೆಳೆಯುತ್ತಿರುವ ಕನ್ನಡ ಕಂಪನಿಯ ಪಾಲಿಸಿಯನ್ನೇ ಪಡೆಯಬೇಕು!

★ ಮೊದಲನೆಯ ಪೌಲ್ಯಮಾಪನದಲ್ಲಿ (Valuation) ಲಾಭವನ್ನು ಹಂಚುವುದಲ್ಲದೆ, ಹೊಸ ವಿಮಾಕಾಯಿದೆಯ ನಿರ್ಬಂಧಗಳಿಗೆ ತಕ್ಕಂತೆ ನಡೆದು, ಎಲ್ಲ ಪಾಲಿಸಿದಾರರ ಪ್ರೋತ್ಸಾಹಕ್ಕೂ ಪಾತ್ರವಾಗಿದೆ.

★ ಮರಣಹೊಂದಿದ ಪಾಲಿಸಿದಾರರ ವಾರಸದಾರರಿಗೆ ವಿಳಂಬವಿಲ್ಲದೆ ಹಕ್ಕಿನ ಹಣ (Claim) ವನ್ನು ಸಲ್ಲಿಸಿರುವುದರಿಂದ, ಎಲ್ಲರ ನಂಬಿಗೆಗೂ ತಕ್ಕುದಾಗಿದೆ.

★ ಕರ್ನಾಟಕದ ಏಳ್ಗೆಗಾಗಿ ಹಂಬಲಿಸುವವರೂ ಕನ್ನಡಸಾಡಿನ ಹಿತಚಿಂತಕರೂ, ಇದೇ ಕಂಪನಿಯ ಪಾಲಿಸಿಗಳನ್ನೂ ಪಾಲುಗಳನ್ನೂ ಕೊಂಡುಕೊಳ್ಳಲಿ ಬೇಕು.

ಏಜಂಟರಿಗೆ ಧಾರಾಳವಾದ ಕಮಿಶನ್ ಕೊಡಲಾಗುವುದು.

ವಿಶೇಷವಿವರಕ್ಕೆ ಬರೆಯಬೇಕು:— ಎಮ್. ಗೋವರ್ಧನರಾವ್, ಮ್ಯಾನೇಜರ್

The United Karnatak Insurance Co. Ltd., DHARWAR.

TRADE MARK

ಬೋಧಚಿಪ್ಸ

ಧೂತಪಾಪೇಶ್ವರ ★ ★ ಅರವಿಂದಾಸವ



ಚಿಕ್ಕನುಕ್ಕಳ ವಿಕಾರಗಳ ಮೇಲೆ ರತ್ನದಂತಹ ಔಷಧ!

ಕಿಡಿಗೇಡಿ ಮಕ್ಕಳಿಂದ ತಾಯಿತಂದೆಗಳ ಆನಂದ ಪೆಚ್ಚುವುದು.
ಮನೆಯಲ್ಲಿ ಸುಖ-ಶೃಂಗಾರ ನೆಲೆಗೊಳ್ಳುವುದು.
ಮಕ್ಕಳ ತುಂಟತನ ಅವರ ಆರೋಗ್ಯವ ಸ್ಪಷ್ಟಚಿಹ್ನ;
ಆದುದರಿಂದ
ನಿಮ್ಮ ಮಕ್ಕಳ ಆರೋಗ್ಯ ಚೆನ್ನಾಗಿರಬೇಕಾದಲ್ಲಿ
ಅರವಿಂದಾಸವವನ್ನು ಕೊಡಿರಿ!

ಶ್ರೀಧೂತಪಾಪೇಶ್ವರ ಪನವೇಲ, ಲಿಮಿಟೆಡ್
ಪನವೇಲ—ಕುಲಾಬಾ.

ಎಲ್ಲಾ ಏಜಂಟರಲ್ಲಿಯೂ ಸ್ಟಾಕಿಸ್ಟರಲ್ಲಿಯೂ ದೊರೆಯುವುದು.

Printed by V. V. Jather B. Sc. Karnatak Printing Works, Dwr. Edited and published by M. G. Patil at Jayanti Office Dharwar

ಕರ್ಮವೀರ



ಮಾರ್ಚ್ ೧೯೫೦